
ಭಾರತೀಯ ಸಾಹಿತ್ಯ ನಿರ್ಮಾಪಕರು

ಎಸ್.ವಿ. ಪರಮೇಶ್ವರ ಭಟ್ಟ

ಆರ್. ಲಕ್ಷ್ಮೀನಾರಾಯಣ



ಎಸ್.ವಿ. ಪರಮೇಶ್ವರ ಭಟ್ಟ

ಈ ಪುಸ್ತಕದ ರಕ್ಷಾಕವಚದ ಒಳಬದಿಯ ಹಾಳೆಯ ಮೇಲಿರುವುದು ಭಗವಾನ್ ಬುದ್ಧನ ತಾಯಿ ರಾಣಿ ಮಾಯಾದೇವಿ ಕಂಡ ಕನಸನ್ನು ಮೂವರು ಭವಿಷ್ಯವಾದಿಗಳು ಶುದ್ಧೋಧನ ಮಹಾರಾಜನಿಗೆ ವಿವರಿಸಿ ಹೇಳುತ್ತಿರುವ ದೃಶ್ಯವನ್ನು ನಿರೂಪಿಸುವ ಶಿಲಾಫಲಕದ ಮುದ್ರೆ. ಅವುಗಳ ಕೆಳಗೆ ಈ ವಿವರಣೆಯನ್ನು ಬರೆದುಕೊಳ್ಳುತ್ತಿರುವ ಬರಹಗಾರ ಕುಳಿತಿದ್ದಾನೆ. ಬಹುಶಃ ಇದುವೇ ಭಾರತದ ಬರವಣಿಗೆಯನ್ನು ಕುರಿತ ಪ್ರಥಮ ಚಾರಿತ್ರಿಕ ದಾಖಲೆಯಾಗಿದೆ.

ಸ್ಥಳ : ನಾಗಾರ್ಜುನಕೊಂಡ, ಕ್ರಿ.ಶ. 2ನೇ ಶತಮಾನ
ಕೃಪೆ: ರಾಷ್ಟ್ರೀಯ ವಸ್ತು ಸಂಗ್ರಹಾಲಯ, ನವದೆಹಲಿ.

ಭಾರತೀಯ ಸಾಹಿತ್ಯ ನಿರ್ಮಾಪಕರು

ಎಸ್.ವಿ. ಪರಮೇಶ್ವರ ಭಟ್ಟ

ಆರ್. ಲಕ್ಷ್ಮೀನಾರಾಯಣ

ಸಾಹಿತ್ಯ ಅಕಾದೆಮಿ

S.V. Parameshwara Bhatta : A monograph in Kannada by R. Lakshminarayana, Sahitya Akademi, 2014, Rs. 50/-

ಪ್ರಥಮ ಮುದ್ರಣ: 2014

ಸಾಹಿತ್ಯ ಅಕಾದೆಮಿ

ರವೀಂದ್ರ ಭವನ, 35, ಫಿರೋಜಶಾಹ ರಸ್ತೆ, ನವದೆಹಲಿ 110 001
ಸ್ವಾತಿ ಮಂದಿರ ಮಾರ್ಗ, ನವದೆಹಲಿ 110 001
172, ಮುಂಬೈ, ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್, ಮುಂಬೈ 400 014
4, ಡಿ.ಎಲ್.ಖಾನ್ ರಸ್ತೆ, ಕೋಲ್ಕತ್ತಾ 710 025
ಸೆಂಟ್ರಲ್ ಕಾಲೇಜು ಆವರಣ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು 560 001
443, ಗುಣ ಕಾಂಪ್ಲೆಕ್ಸ್, ಅಣ್ಣಾಸಾಲೈ, ತೇನಾಂಪೇಟ್ಟೈ, ಚೆನ್ನೈ 600 018

ISBN : 978-81-260-4665-1

ಬೆಲೆ: ಐವತ್ತು ರೂಪಾಯಿಗಳು

ವಿನ್ಯಾಸ ಮತ್ತು ಮುದ್ರಣ: ಅಕ್ಷರೋಗ್ರಾಫಿಕ್ಸ್, ಬೆಂಗಳೂರು

ಲೇಖಕನ ಮಾತು

ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಕನ್ನಡದ ಆಚಾರ್ಯಪರಂಪರೆಯ ಕೊನೆಯ ಕೊಂಡಿ. ಪಾಂಡಿತ್ಯ ಪ್ರತಿಭೆಗಳು ಸಮಸಮವಾಗಿ ಮೇಳೈಸಿದ್ದ ಈ ವಿನಯವ್ರತಿ ಕನ್ನಡ ನವೋದಯದ ಎರಡನೇ ಪೀಳಿಗೆಯ ಕವಿ ವಿಮರ್ಶಕ, ಪ್ರಾಧ್ಯಾಪಕ. ಅನುವಾದಕರಾಗಿ ಸೇವೆಗೈದು "ಆಧುನಿಕ ಕನ್ನಡದ ದೀಪ ಹೊತ್ತಿಸಿದ ಹಿರಿಯರಲ್ಲೊಬ್ಬರೆಂದು" ಖ್ಯಾತರಾದವರು. ಭಾವಗೀತೆ, ಕಥನಕವನ, ಮುಕ್ತಕ, ವಚನ, ವಿಮರ್ಶೆ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ವಿಪುಲವಾಗಿ ಸತ್ವಪೂರ್ಣವಾದ ಕೃತಿಗಳನ್ನು ರಚಿಸಿದ್ದೇ ಅಲ್ಲದೆ ಸಂಸ್ಕೃತದ ಉದ್ಧ ಕವಿಗಳಾದ ಕಾಳಿದಾಸ ಭಾಸ, ಭವಭೂತಿ, ಹರ್ಷ ಇವರುಗಳ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ತಂದವರು. ಇವುಗಳ ಜೊತೆಗೆ ಹಾಲ, ಅಮರುಕ, ಜಯದೇವ ಭರ್ತೃಹರಿ, ಅಶ್ವಘೋಷನೇ ಮೊದಲಾದ ಖ್ಯಾತನಾಮರ ಪ್ರಮುಖ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಕನ್ನಡದ ಕಣಜವನ್ನು ತುಂಬಿಕೊಟ್ಟವರು. ಈ ನಿಟ್ಟಿನಲ್ಲಿ ಅವರದು ಇಡೀ ಭಾರತೀಯ ಸಂದರ್ಭದಲ್ಲೇ ಒಂದು ಸಾರ್ವಕಾಲಿಕ ದಾಖಲೆ ಎನ್ನಬಹುದು. ಎಂದೇ ಕೇಂದ್ರ ಸಾಹಿತ್ಯ ಅಕಾದೆಮಿಯ ಮೊದಲ ಅನುವಾದ ಪುರಸ್ಕಾರ ಕನ್ನಡದಲ್ಲಿ 1990 ರಲ್ಲಿ ಅವರಿಗೆ ಸಂದದ್ದು ಅತ್ಯಂತ ಔಚಿತ್ಯಪೂರ್ಣವೇ ಸರಿ. ಇನ್ನು ಒಬ್ಬ ಅಪ್ರತಿಮ ವಾಗ್ಮಿಯಾಗಿ ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ನಾಡಿನೆಲ್ಲೆಡೆ ಬಿತ್ತರಿಸಿದ ನುಡಿಸೇವಕರು.

ಇಂಥ ಹಿರಿಯ ಸಾಹಿತಿಗಳು ನನ್ನ ಅತ್ಯಂತ ಗೌರವದ ಮತ್ತು ಪ್ರೀತಿಯ ಗುರುಗಳಾಗಿದ್ದುದು ನನ್ನ ಪುಣ್ಯವಿಶೇಷ. ನಾನು ಮತ್ತು ನನ್ನ ಸಹಪಾಠಿಗಳು ಅವರ ಜ್ಞಾನದ ತೇರಿನಲ್ಲಿ ಕುಳಿತು ಅವರ ಪ್ರೀತಿಯ ಕಣ್ಗಾಪಿನಲ್ಲಿ ಕನ್ನಡ ಸಾಹಿತ್ಯ ಯಾತ್ರೆಯನ್ನು ಕೈಗೊಂಡದ್ದು ಒಂದು ರೋಚಕ ಅನುಭವ. ಅವರು ಹುಟ್ಟಿ ಒಂದು ಶತಮಾನ ಕಳೆದಿರುವ ಈ ಸಂದರ್ಭದಲ್ಲಿ ಅವರ ಜಿವನ ಮತ್ತು ಸಾಹಿತ್ಯ ಕುರಿತಂತೆ "ಭಾರತೀಯ ಸಾಹಿತ್ಯ ನಿರ್ಮಾಪಕರು" ಮಾಲೆಯಲ್ಲಿ ಈ ಗ್ರಂಥ ಬರೆದು ಕೊಡಲು ಅವಕಾಶ ದೊರೆತಿರುವುದು ನನಗೆ ಅಪಾರ ಸಂತಸ ತಂದಿದೆ. ಈ ಹಿಂದೆ ಅಕಾದೆಮಿಯ ಕನ್ನಡ ಸಲಹಾಸಮಿತಿಯ ಸಂಚಾಲಕರಾಗಿದ್ದ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿಯವರು 2013 ರಲ್ಲಿ ಈ ಹೊಣೆಗಾರಿಕೆಯನ್ನು ನನಗೆ ವಹಿಸಿಕೊಟ್ಟರು. ಅದಕ್ಕಾಗಿ ನಾನು ಅವರಿಗೆ ಅತ್ಯಂತ ಆಭಾರಿಯಾಗಿದ್ದೇನೆ. ಪರಮೇಶ್ವರ ಭಟ್ಟರ ಶತಮಾನೋತ್ಸವ ವರ್ಷವಾದ ಈ ವರ್ಷದಲ್ಲೇ ಇದು ಪ್ರಕಟವಾಗಲು ಕಾರಣರಾಗಿರುವ ಈಗಿನ ಕನ್ನಡ ಸಲಹಾಸಮಿತಿಯ ಸಂಚಾಲಕರೂ ಪ್ರಸಿದ್ಧ ಸಾಹಿತಿಗಳೂ ಆದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರಿಗೆ ಹಾಗೂ ಪ್ರಾದೇಶಿಕ ಕಾರ್ಯದರ್ಶಿಯಾಗಿ

ಕಾರ್ಯ ನಿರ್ವಹಿಸುತ್ತಿರುವ ಶ್ರೀ ಮಹಲಿಂಗೇಶ್ವರ ಭಟ್ ಅವರಿಗೆ ನಾನು ಅತ್ಯಂತ ಕೃತಜ್ಞ. ಇದು ಇಷ್ಟು ಅಂದವಾಗಿ ಪ್ರಕಟವಾಗಲು ಕಾರಣರಾದ ಸಂಪಾದನ ವಿಭಾಗದ ಶ್ರೀ ಷಣ್ಮುಖಾನಂದ ಹಾಗೂ ಶ್ರೀ ಸುರೇಶ್ ಅವರಿಗೆ ನಾನು ಋಣಿ.

ಮುಖ್ಯವಾಗಿ ನನಗೆ ಅಗತ್ಯವಿದ್ದ ಎಸ್.ವಿ.ಪಿ. ಅವರ ಕೃತಿಗಳನ್ನು ದೊರಕಿಸಿಕೊಟ್ಟು ಈ ಪುಸ್ತಕದ ಸಿದ್ಧತೆಗೆ ನೆರವಾದ ಎಸ್.ವಿ.ಪಿ. ಅವರ ಹಿರಿಯ ಪುತ್ರ ಶ್ರೀ ಎಸ್.ಪಿ. ರಾಮಚಂದ್ರ, ನನ್ನ ಸಹಪಾಠಿ ಡಾ.ಎಚ್.ಎಸ್. ಸುಜಾತ ಮತ್ತು ಮಿತ್ರ ಡಾ.ಎಸ್.ಎಲ್. ಶ್ರೀನಿವಾಸಮೂರ್ತಿ ಇವರುಗಳಿಗೆ ನಾನು ಕೃತಜ್ಞನಾಗಿದ್ದೇನೆ.

– ಆರ್. ಲಕ್ಷ್ಮೀನಾರಾಯಣ

ಪರಿವಿಡಿ

ಜೀವನ ಮತ್ತು ವ್ಯಕ್ತಿತ್ವ

ಎಸ್.ವಿ.ಪಿ. ಅವರ ಜೀವನ

ಕನ್ನಡದ ಕಾಳಿದಾಸ ಎಂದೇ ಹೆಸರಾದ ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರು ಹುಟ್ಟಿ ಈಗ ಒಂದು ಶತಮಾನ ಕಳೆದಿದೆ. ಖ್ಯಾತ ಕವಿ, ವಿದ್ವಾಂಸ, ಪ್ರಾಧ್ಯಾಪಕ, ಅನುವಾದಕ, ವಾಗ್ಮಿ, ಎಲ್ಲಕ್ಕಿಂತ ಹೆಚ್ಚಾಗಿ ಸರಸ ಸಜ್ಜನಿಕೆ, ವಿನಯಗಳ ಪ್ರತಿಮೂರ್ತಿಯಾಗಿ, ತಮ್ಮ ಸಹಜ ಸ್ಫೂರ್ತವಾದ wit ನಿಂದ, ಆಕರ್ಷಕ ಬೋಧನೆಯಿಂದ, ಹಾಸ್ಯಭರಿತ ಮಾತುಗಳಿಂದ, ಸಹಸ್ರಾರು ಶಿಷ್ಯರ ನೆಚ್ಚಿನ ಗುರುಗಳಾಗಿದ್ದವರು.

ಪರಮೇಶ್ವರ ಭಟ್ಟರ ಹಿರಿಯರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದರೂ, ಅವರುಗಳು ಬಾಳಿ ಬದುಕಿದ್ದು ಮಲೆನಾಡಿನ ಹಸಿರ ಸಮೃದ್ಧಿಗೆ ಹೆಸರಾದ, ಅದ್ವೈತಪೀಠದ ಆಚಾರ್ಯ ಶಂಕರರ ತಪೋಭೂಮಿಯೆನಿಸಿದ ಶೃಂಗೇರಿಯಲ್ಲಿ. ಅಲ್ಲಿಯ ವಿದ್ಯಾರಣ್ಯಪುರದಲ್ಲಿ ಕೆಳದಿಯ ಅರಸರು ಕಟ್ಟಿಸಿದ ಸದಾಶಿವ ದೇವಾಲಯದ ಅರ್ಚಕರಾಗಿ ಅವರು ಅಲ್ಲಿಗೆ ಬಂದರು. ಆ ಪೀಳಿಗೆಯಲ್ಲಿ ಬಂದವರು ಭಟ್ಟರ ತಂದೆ ಸದಾಶಿವರಾಯರು. ಇವರು ಇಂಗ್ಲಿಷು, ಕನ್ನಡಗಳಲ್ಲಿ ವಿದ್ಯಾವಂತರಾಗಿದ್ದರಿಂದ ತಮ್ಮ ಪಾಲಿನ ತೋಟವನ್ನು ಅಣ್ಣನ ಸಂಸಾರಕ್ಕೆ ಬಿಟ್ಟುಕೊಟ್ಟು, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮಾಳೂರಿನಲ್ಲಿ ಶಾಲಾಶಿಕ್ಷಕನ ವೃತ್ತಿಯಲ್ಲಿ ತೊಡಗಿಸಿಕೊಂಡರು. ಈ ಸದಾಶಿವರಾಯರು ಮತ್ತು ಅವರ ಪತ್ನಿ ಲಕ್ಷ್ಮಮ್ಮನವರ ಪುತ್ರರಾಗಿ ಭಟ್ಟರು 1914ರ ಫೆಬ್ರವರಿ 8 ರಂದು ಜನಿಸಿದರು. ಇಬ್ಬರು ಹೆಣ್ಣುಮಕ್ಕಳಾದ ಮೇಲೆ ಹುಟ್ಟಿದ ಮಗ ಇವರು. ಇವರು ಹುಟ್ಟಿದ ಒಂದು ವರ್ಷಕ್ಕೇ ತಾಯಿ ತೀರಿಕೊಂಡರು. ಆದರೆ ತಾಯಿಯ ವಾತ್ಸಲ್ಯದಿಂದ ವಂಚಿತರಾದೆವು ಎಂಬ ಭಾವ ಬಾರದ ಹಾಗೆ ತಂದೆಯೇ ಮಕ್ಕಳನ್ನು ಅಕ್ಕರೆಯಿಂದ ಸಾಕಿ ಬೆಳೆಸಿದರು. ನಯ, ವಿನಯ, ಸೌಜನ್ಯಗಳ ಸಾಕಾರ ಮೂರ್ತಿಯಂತಿದ್ದ ಸದಾಶಿವರಾಯರು ಹರಿಕಥೆ, ಸಂಗೀತ, ಯಕ್ಷಗಾನ, ತಾಳಮದ್ದಲೆ, ಮಣ್ಣಿನಿಂದ ಮೂರ್ತಿಗಳನ್ನು ಮತ್ತು ಆಟಿಕೆಗಳನ್ನು ಮಾಡುವುದು, ಹೀಗೆ ಹತ್ತು ಹಲವು ಜನಪದ ಕಲೆಗಳಲ್ಲಿ ಸಿದ್ಧಹಸ್ತರಾಗಿದ್ದರು. ತಾವೇ ಮಗನಿಗೆ ಈ ವಿಷಯಗಳಲ್ಲಿ ಗುರುವಾದರು. ಹೆಣ್ಣುಮಕ್ಕಳಿಗೆ ಮದುವೆ ಮಾಡಿಕೊಟ್ಟ ಮೇಲಂತೂ, ತಾವೇ ಮನೆಯಲ್ಲಿ ಮಗನಿಗೆ ಪಾಠ ಹೇಳಿ ಎಲ್.ಎಸ್.ಪರೀಕ್ಷೆಗೆ ಕಟ್ಟಿಸಿದರು. ಪ್ರೌಢಶಾಲೆಗೆ ಸೇರುವುದಕ್ಕೆ ಮುನ್ನವೇ ಕನ್ನಡದ ಅನೇಕ ಪ್ರಸಿದ್ಧ ಕೃತಿಗಳನ್ನು ಭಟ್ಟರು ಓದಿ ಮುಗಿಸಿದ್ದರು. ಅವುಗಳೆಂದರೆ **ಬಿ. ವೆಂಕಟಾಚಾರ್ಯರು** ಅನುವಾದಿಸಿದ ಬಂಕಿಮರ ದೇವಿ ಚೌಧುರಾಣಿ, ಕುವೆಂಪು ಅವರ ಬೊಮ್ಮನಹಳ್ಳಿಯ ಕಿಂದರಿ ಜೋಗಿ, ಗೋವಿನ ಹಾಡು ಮೊದಲಾದುವು. ಯಕ್ಷಗಾನದ ವೇಷ ಕಟ್ಟಿ ಬಣ್ಣ ಹಚ್ಚಿದರು. ತೀರ್ಥಹಳ್ಳಿಯ

ಪ್ರೌಢಶಾಲೆಯಲ್ಲಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಸೇರಿದಾಗ, ಕಮಕೋಡು ನರಸಿಂಹಶಾಸ್ತ್ರಿಗಳೆಂಬ ಬಹುದೊಡ್ಡ ಸಹೃದಯಿ ವಿದ್ವಾಂಸರು ಅವರಿಗೆ ಗುರುಗಳಾಗಿ ದೊರೆತರು. ಕುವೆಂಪು ಅವರ ಸಹಪಾಠಿಯಾಗಿದ್ದ ಆಧುನಿಕ ದೃಷ್ಟಿಯ ಈ ಪಂಡಿತರು ಭಟ್ಟರ ಕಾವ್ಯ ಪ್ರತಿಭೆಗೆ ನೀರೆರೆದರು. ಭಟ್ಟರ ಪ್ರಬಂಧವನ್ನು ತರಗತಿಯಲ್ಲಿ ಓದಿಸಿ ಕೇಳಿ ಪ್ರಶಂಸಿಸಿ, ಬರೆಯಲು ಹುರಿದುಂಬಿಸಿದರು. ಜೊತೆಗೆ ತೀರ್ಥಹಳ್ಳಿಯ ಮಲೆನಾಡಿನ ಸಾಂಸ್ಕೃತಿಕ ಪರಿಸರ ಮತ್ತು ನಿಸರ್ಗ ಸೌಂದರ್ಯ ಬಾಲಕನ ಕಲಾಭಿರುಚಿ ಮತ್ತು ಸಾಹಿತ್ಯಾಭಿರುಚಿ ಸಂವರ್ಧನೆಯಲ್ಲಿ ಹಾಗೂ ಅವರ ಕವಿ ಮನ ರೂಪಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದುವು. ಅಲ್ಲಿದ್ದಾಗ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದರು. ಆದರೆ ಅದರಲ್ಲಿ ಅರೆಬರೆ ತೇರ್ಗಡೆಯಾಗಿದ್ದರು. ಅಂದರೆ ಇ.ಪಿ.ಎಸ್. ಆಗಿದ್ದರು. ಹಿರಿಯ ಮಗಳ ಸಾವು ಮತ್ತು ಇನ್ನಿತರೆ ಸಂಕಷ್ಟಗಳಿಂದ ಕಂಗೆಟ್ಟು ಅದುವರೆಗಾಗಲೇ ಆರೋಗ್ಯ ಕೆಟ್ಟಿದ್ದ ತಂದೆಯವರಿಗೆ ಇದರಿಂದ ನಿರಾಶೆಯಾಯಿತು. ಆದರೆ ಅದೇ ಸಮಯಕ್ಕೆ ಅವರನ್ನು ನೋಡಿಕೊಂಡು ಹೋಗಲು ಬಂದಿದ್ದ ದೂರದ ಬಂಧುವೂ ಆಗಿದ್ದ ಸುಬ್ಬರಾಯರೆಂಬುವರು ಇವರನ್ನು ಓದಿಸುವ ಜವಾಬ್ದಾರಿ ಹೊತ್ತು ಬೆಂಗಳೂರಿನ ಕೋಟೆ ಹೈಸ್ಕೂಲಿಗೆ ಸೇರಿಸಿದರು. ಅಲ್ಲಿ ಅಭ್ಯಾಸ ಮಾಡಿ ಮತ್ತೆ ಪರೀಕ್ಷೆಗೆ ಕುಳಿತು ಉತ್ತೀರ್ಣರಾದರು. ಆದರೆ ಪರೀಕ್ಷೆಯ ಫಲಿತಾಂಶ ಬರುವ ಹೊತ್ತಿಗೆ ತಂದೆ ಇರಲಿಲ್ಲ. ತಂದೆಯವರ ಮರಣಾನಂತರದಲ್ಲಿ ಮುಂದೇನು ಎಂದು ಯೋಚಿಸುತ್ತಿದ್ದಾಗ, ಅವರ ದೊಡ್ಡಪ್ಪ ಚಿಕ್ಕಪ್ಪಂದಿರು ತಮ್ಮಲ್ಲೇ ಆಲೋಚಿಸಿ, ಬೆಂಗಳೂರಿನಲ್ಲೇ ಮುಂದಿನ ವಿದ್ಯಾಭ್ಯಾಸ ನಡೆಸಲು ತೀರ್ಮಾನಿಸಿದರು. ತಂದೆಯವರ ಮರಣಾನಂತರ ಬಂದಿದ್ದ ಇನ್‌ಶೂರೆನ್ಸ್ ಮತ್ತು ಗ್ರಾಚ್ಯುಟಿ ಹಣ ಇದಕ್ಕೆ ನೆರವಾಯಿತು. ಬೆಂಗಳೂರಿನ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಿದರು.

ಕಾಲೇಜು ವ್ಯಾಸಂಗ

ಬೆಂಗಳೂರಿನಲ್ಲಿ ಅವರ ಭಾಗ್ಯದ ಬಾಗಿಲು ತೆರೆಯಿತೋ ಎಂಬಂತೆ ಅವರಿಗೆ ಎ.ಆರ್.ಕೃ, ವಿ.ಸೀ. ಕೆ.ವೆಂಕಟರಾಮಪ್ಪ, ಡಿ.ವಿ.ಶೇಷಗಿರಿರಾಯರಂಥ ಶ್ರೇಷ್ಠ ಕನ್ನಡ ಗುರುಗಳು ದೊರೆತು ಅವರ ಸಾಹಿತ್ಯಾಭಿರುಚಿಗೆ ಎಲ್ಲಿಲ್ಲದ ಪೋಷಣೆ ದೊರಕಿತು. ಅದರಲ್ಲೂ ವಿ.ಸೀ. ಅವರು ಆಂಗ್ಲ ಕಾವ್ಯವನ್ನು ಓದಿ, ಅಲ್ಲಿಯ ಕವಿತೆಯ ಸ್ವಾರಸ್ಯ, ಛಂದಸ್ಸು, ಇತ್ಯಾದಿಗಳ ಮಹತ್ವ, ಮಾಸ್ತಿಯವರ ಗದ್ಯ ಪದ್ಯಗಳ ವೈಭವವನ್ನು ಶ್ರೀಯವರ ಇಂಗ್ಲಿಷ್ ಗೀತೆಗಳ ಮಹತ್ವವನ್ನು, ಛಂದೋ ಪ್ರಯೋಗಗಳ ಸ್ವಾರಸ್ಯವನ್ನು ಮನಗಾಣಿಸಿಕೊಟ್ಟರು. ಅದರಿಂದ ಅವರ ಕಾವ್ಯರಚನೆಗೆ ಪುಟ ದೊರಕಿತು. ವಿವಿಧ ಪತ್ರಿಕೆಗಳಲ್ಲಿ ಅವರ ಕವಿತೆಗಳು ಪ್ರಕಟವಾಗತೊಡಗಿದವು. ತಮ್ಮ 12 ಕವನಗಳನ್ನು "ದ್ವಾದಶ ಕನ್ನಡ ಕಾವ್ಯ ಕುಸುಮಾಂಜಲಿ" ಎಂದು ಹೆಸರಿಟ್ಟು, ಶ್ರೀಯವರ ಗಮನಕ್ಕೆ ತಂದು, ಅವರ ಮಾರ್ಗದರ್ಶನವನ್ನು ಪಡೆದುಕೊಂಡರು. ಅದೇ ರೀತಿ ತಿಳಿಹಾಸ್ಯದ ಮಾತುಗಾರಿಕೆಯ ವೆಂಕಟರಾಮಪ್ಪನವರ ಪಾಠದಿಂದ ಸ್ಫೂರ್ತಿಹೊಂದಿ, ತಮ್ಮ ಭಾಷಣ ಮತ್ತು ಬೋಧನೆಯಲ್ಲಿ, ಹಾಸ್ಯ ವಿನೋದಗಳನ್ನು ರೂಢಿಸಿಕೊಂಡರು. ವಿದ್ಯಾರ್ಥಿ ದೆಸೆಯಲ್ಲೇ ಕುವೆಂಪು ಅವರ ಕಾವ್ಯವಾಚನ ಕೇಳಿ ರೋಮಾಂಚಿತರಾಗಿ ಅವರನ್ನು ತಮ್ಮ ಕಾವ್ಯಗುರುವಾಗಿ ಸ್ವೀಕರಿಸಿದರು. ಕನ್ನಡ ಬಿ.ಎ. ಆನರ್ಸ್ ಮತ್ತು ಎಂ.ಎ. ಓದಿ ನಿಮ್ಮ ಕನ್ನಡ ಜ್ಞಾನ ಹೆಚ್ಚಿಸಿಕೊಳ್ಳಿ ಎಂಬ ಶ್ರೀಯವರ ಮಾತು ಇವರಿಗೆ ಮುಂದೆ ವ್ಯಾಸಂಗ ಮುಂದುವರಿಸಲು ಪ್ರೇರಣೆ ನೀಡಿತೆನಿಸುತ್ತದೆ. ಬೆಂಗಳೂರಿನಲ್ಲಿದ್ದ ಸಮಯದಲ್ಲಿ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದ

ಬಿ.ಎಂ.ಶ್ರೀ., ಟಿ.ಎಸ್.ವೆಂ., ಡಿ.ವಿ.ಜಿ., ಎಂ.ಆರ್.ಶ್ರೀ., ಮಾಸ್ತಿ, ವಿ.ಸೀ., ಸಿ.ಕೆ.ವೆಂ. ಮುಂತಾದ ಕನ್ನಡ ವಿದ್ವನ್ಮಣಿಗಳ ಭಾಷಣಗಳನ್ನು ತಪ್ಪದೆ ಕೇಳಿ, ತಮ್ಮ ತಿಳಿವು ವಿಸ್ತರಿಸಿಕೊಂಡರು. ಇಂಟರ್ ಮುಗಿಸಿ 1934ರಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಆನರ್ಸ್‌ಗೆ ಸೇರಿಕೊಂಡರು. ಅವರ ತರಗತಿಗೆಲ್ಲಾ ಅವರೊಬ್ಬರೇ ವಿದ್ಯಾರ್ಥಿ, ಅವರ ಮುಂದಿನ ತರಗತಿಯಲ್ಲಿದ್ದ ಜಿ.ವೆಂಕಟಸುಬ್ಬಯ್ಯ ಮತ್ತು ಎಚ್.ಎಂ. ಶಂಕರನಾರಾಯಣರಾಯರು ಇವರಿಗೆ ಆತ್ಮೀಯರೂ ಜೀವದ ಗೆಳೆಯರೂ ಆದರು. ವಿದ್ವನ್ಮಣಿಗಳಾದ ಬಿ.ಎಂ.ಶ್ರೀ, ಟಿ.ಎಸ್.ವೆಂ, ತೀ.ನಂ.ಶ್ರೀ, ಡಿ.ಎಲ್.ಎನ್ ಅವರ ಕನ್ನಡದ ಗರಡಿಯಲ್ಲಿ ಪಳಗಿ ಸಾಹಿತ್ಯದ ಎಲ್ಲ ವರಸೆಗಳನ್ನು, ಪಟ್ಟುಗಳನ್ನು ಆಮೂಲಾಗ್ರವಾಗಿ ಕರಗತಮಾಡಿಕೊಂಡರು. ವೆಂಕಣ್ಣಯ್ಯನವರ ವಾತ್ಸಲ್ಯ ಪೂರ್ಣ ಪೋಷಣೆ ಅವರನ್ನು ಪೊರೆಯಿತು. ಇವರುಗಳಲ್ಲದೆ ಇತಿಹಾಸತಜ್ಞ ಡಾ.ಎಸ್.ಶ್ರೀಕಂಠಶಾಸ್ತ್ರಿ, ಡಾ.ಎಂ.ಎಚ್.ಕೃಷ್ಣ, ತೆಲುಗು ವಿದ್ವಾಂಸ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ, ಸಂಸ್ಕೃತದ ಸಹೃದಯಿ ವಿದ್ವಾಂಸ ಸಿ.ಆರ್.ನರಸಿಂಹಶಾಸ್ತ್ರಿ, ಎಸ್.ರಾಮಚಂದ್ರ ರಾವ್, ಇಂಗ್ಲಿಷ್ ಕನ್ನಡದ ವಿದ್ವಾಂಸ ಎಸ್.ವಿ. ರಂಗಣ್ಣ ಇವರುಗಳ ಛತ್ರ ಛಾಯೆಯಲ್ಲಿ ಸಾಹಿತ್ಯದ ಅಧ್ಯಯನಕ್ಕೆ ಸುಭದ್ರ ಅಸ್ತಿವಾರ ಬಿತ್ತು. ಕುವೆಂಪು, ತರಗತಿಯಲ್ಲಿ ಪಾಠ ಹೇಳಿದ ಗುರುಗಳಾಗದೆ ಇದ್ದರೂ ಅವರಿಂದ ಅಪಾರವಾದ ಸ್ಫೂರ್ತಿ, ಪ್ರೇರಣೆ ಪ್ರೋತ್ಸಾಹ ಪಡೆದುದಾಗಿ ಹೇಳಿಕೊಂಡಿದ್ದಾರೆ. ಆವರ 'ರಾಮಾಯಣ ದರ್ಶನಂ' ಮಹಾಕಾವ್ಯ ರಚನೆಯಾಗುತ್ತಿದ್ದಾಗಲೇ ರಾಮಕೃಷ್ಣಾಶ್ರಮದ ಅವರ ಕೊಠಡಿಯಲ್ಲಿ ವಾರವಾರವೂ ಅವರ ಬಾಯಿಂದಲೇ ಕೇಳುತ್ತಿದ್ದರಂತೆ. ವಿದ್ಯಾರ್ಥಿ ಜೀವನದಲ್ಲಿ ಇವರ ಮೇಲೆ ಪ್ರಭಾವ ಬೀರಿದ ಮತ್ತೊಬ್ಬರು ಖ್ಯಾತ ಹಾಸ್ಯ ಲೇಖಕ ನಾ.ಕಸ್ತೂರಿ ಅವರು. ಅವರ ಪ್ರಭಾವದಿಂದ ಭಟ್ಟರ ಜುಟ್ಟಿನ ಜಾಗದಲ್ಲಿ ಕ್ರಾಪ್ ಬಂತು.

ಪ್ರೊ, ವೆಂಕಣ್ಣಯ್ಯ, ಮಂಜುನಾಥ್, ವೆಂಕಟೇಶಯ್ಯ ಮುಂತಾದ ಅಧ್ಯಾಪಕರ ಮನೆಗಳಲ್ಲಿ ವಾರಾನ್ನ ಮಾಡಿಕೊಂಡು ಕಷ್ಟದಿಂದ ವಿದ್ಯಾರ್ಥಿ ಜೀವನ ನಿಭಾಯಿಸಿದರು. ಬಡತನದ ಹಲವು ಬಗೆಯ ಸಂಕಷ್ಟಗಳನ್ನು ಎದುರಿಸಿದರು.

ಅವರ ಕಾಲೇಜು ವ್ಯಾಸಂಗ, ಬರವಣಿಗೆ ಅವ್ಯಾಹತವಾಗಿ ನಡೆಯಿತು. ಭಾಷಣಸ್ಪರ್ಧೆ, ಚರ್ಚಾಸ್ಪರ್ಧೆ, ಅಂತ್ಯಾಕ್ಷರಿ ಸ್ಪರ್ಧೆಗಳಲ್ಲಿ ಸದಾ ಮುಂದು. ಬಿ.ಎ. ಆನರ್ಸ್‌ನಲ್ಲಿ ದ್ವಿತೀಯದರ್ಜೆ ಮತ್ತು ಎಂ.ಎ. ಯಲ್ಲಿ ಪ್ರಥಮದರ್ಜೆಯಲ್ಲಿ ತೇರ್ಗಡೆ ಹೊಂದಿದರು. ಎಂ.ಎ. ಓದುತ್ತಿರುವಾಗಲೇ ವರ್ಡ್ಸ್‌ವರ್ತ್‌ನ ಮೈಕೇಲ್ ಕವನವನ್ನು "ಮಾಚಯ್ಯ" ಎಂಬ ಹೆಸರಿನಲ್ಲಿ ಸರಳರಗಳೆಯಲ್ಲಿ ಅನುವಾದಿಸಿ ಶ್ರೀಯವರ ಸ್ವರ್ಣಪದಕ ಗಳಿಸಿದರು. ಆದರೆ ಒಂದೇ ಒಂದು ಕೊರತೆ ಎಂದರೆ ಈ ಸಂತಸವನ್ನು ಹಂಚಿಕೊಳ್ಳುವ ಸಮಯಕ್ಕೆ ಅವರನ್ನು ಸಾಕಿ ಸಲವಿದ ದೊಡ್ಡಪ್ಪ ಇರಲಿಲ್ಲ. ಅದೇ ಸಮಯಕ್ಕೆ ಅವರ ಹಿರಿಯಕ್ಕ ತುಂಗಕ್ಕನವರ ಯಜಮಾನರು ತೀರಿಕೊಂಡ ಘೋರ ವಾರ್ತೆ ಅವರನ್ನು ಕಂಗೆಡಿಸಿತು. ಅವರ ಬದುಕಿನುದ್ದಕ್ಕೂ ಸಂತಸದ ಬೆನ್ನ ಹಿಂದೆಯೇ ದುಃಖ ನೆರಳಿನಂತೆ ಹಿಂಬಾಲಿಸಿ ಬರುವುದನ್ನು, ಅದರಲ್ಲಿ ದುಃಖದ ಹಿಡಿತವೇ ಹೆಚ್ಚಾಗಿರುವುದನ್ನು ನೋಡುತ್ತೇವೆ. ಎಂ.ಎ. ಮುಗಿದ ನಂತರದಲ್ಲಿ ಕೆಲಕಾಲ ಡಾ.ಎ.ಎನ್. ನರಸಿಂಹಯ್ಯನವರ ಮಾರ್ಗದರ್ಶನದಲ್ಲಿ ಕನ್ನಡದ ಆಡುನುಡಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಿದರೂ ಯಶಸ್ವಿಯಾಗಲಿಲ್ಲ.

ವೃತ್ತಿ ಜೀವನ ಮತ್ತು ಸಾಹಿತ್ಯ ಕೃಷಿ

ಇಲ್ಲಿಗೆ ಅವರ ಬದುಕಿನ ಒಂದು ಪ್ರಮುಖ ಘಟ್ಟ ಮುಗಿದು ಮತ್ತೊಂದು ಮಜಲಿನ ಪ್ರಾರಂಭ. ಅವರ ಬಡತನದ ಕಾರ್ಪಣ್ಯದ ಕಾಲ ಮುಗಿದು 1939ರ ಜುಲೈನಲ್ಲಿ ಅವರ

ವೃತ್ತಿ ಬದುಕು, ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ತರಗತಿಯ ಅಧ್ಯಾಪಕನಾಗಿ ನೇಮಕ ಹೊಂದುವುದರೊಂದಿಗೆ ಪ್ರಾರಂಭವಾಯಿತು. ಮರುವರ್ಷವೇ ಅಂದರೆ 1940ರಲ್ಲಿ ಶ್ರೀಮತಿ ರಾಜಲಕ್ಷ್ಮಿಯವರ ಕೈಹಿಡಿದು ಗೃಹಸ್ಥರಾದರು. ಅವರು ಆಕಾಶವಾಣಿ, ನಾಟಕರಂಗಗಳಲ್ಲಿ ವಿಖ್ಯಾತರಾದ ಡಾ.ಎಚ್.ಕೆ.ರಂಗನಾಥ್ ಅವರ ಸೋದರಿ. ಎಲ್ಲ ಅರ್ಥಗಳಲ್ಲೂ ಅನುರೂಪರೆನಿಸುವ ಮಡದಿ ಅವರ ಬಾಳಿಗೆ ಬೆಳಕಾದರು. ಮದುವೆಯ ಹೊಸತರಲ್ಲೇ ತುಮಕೂರಿಗೆ ವರ್ಗವಾಯಿತು. ನವ ಉತ್ಸಾಹದೊಂದಿಗೆ ಹೊಸ ಊರಿನಲ್ಲಿ ಸಂಸಾರ ಹೂಡಿದರು. ಅಧ್ಯಯನ, ಅಧ್ಯಾಪನ ಬರವಣಿಗೆಗಳು ಎಡೆಬಿಡದೆ ಸಾಗಿದವು. ಅವರ ಮೊದಲ ಕವನಸಂಕಲನ ರಾಗಿಣಿ ಕುವೆಂಪು ಅವರ ಕವನ ರೂಪದ ಮುನ್ನುಡಿ ಹೊತ್ತು ಹೊರಬಂದಿತು. ಅದೇ ಕಾಲದಲ್ಲಿ ಅವರ ಅನುವಾದ ಸಾಹಿತ್ಯ ಕೃಷಿಗೂ ಬೀಜಾವಾಪನೆಯಾಯಿತು. ಮಾಸ್ತಿಯವರ 'ವಿಮರ್ಶೆ' ಪಾಠ ಮಾಡುವಾಗ ಮೇಘದೂತದ ಮೇಲಿನ ಅವರ ಪ್ರಬಂಧದಲ್ಲಿದ್ದ ಕೆಲವು ಪದ್ಯಗಳ ಸುಂದರವಾದ ಅನುವಾದಗಳಿಂದ ಸ್ಫೂರ್ತಿಹೊಂದಿದರು. ಕಾಳಿದಾಸನ ಮೇಘದೂತವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ ಮೇಲೆ ಕನ್ನಡಕ್ಕೆ ಏಕೆ ಇದನ್ನು ಅನುವಾದಿಸಬಾರದೆಂದು ಆಲೋಚಿಸಿ ಇಡೀ ಕಾವ್ಯವನ್ನು ಕನ್ನಡಿಸಿದರು. ಇಲ್ಲಿಂದ ಪ್ರಾರಂಭವಾದ ಅವರ ಅನುವಾದ ಕೃಷಿ ಬದುಕಿನ ಕೊನೆಯವರೆಗೂ ನಿರಂತರವಾಗಿ ಸಾಗಿ ಸಂಸ್ಕೃತದ ಇಡೀ ಕಾವ್ಯ ಭಂಡಾರ ಕನ್ನಡಕ್ಕೆ ಕೊಡುಗೆಯಾಗಿ ದೊರೆಯಿತು.

ತುಮಕೂರಿನ ದಿನಗಳು, ಭಾರತ ಸ್ವಾತಂತ್ರ್ಯ ಚಳುವಳಿಯ ಏರು ದಿನಗಳು. ತರಗತಿಯಲ್ಲಿ ಪಾಠಮಾಡುತ್ತಿದ್ದಾಗ ಯಾರೋ ಮೇಜಿನ ಡ್ರಾನಲ್ಲಿಟ್ಟಿದ್ದ ಟೈಂ ಬಾಂಬ್ ಸಿಡಿದರೂ ಭಟ್ಟರು ಅದೃಷ್ಟವಶಾತ್ ಏನೊಂದೂ ಅಪಾಯವಾಗದೆ ಬಚಾವಾದರು. ಅಲ್ಲಿಂದ 1943ರಲ್ಲಿ ಶಿವಮೊಗ್ಗಕ್ಕೆ ವರ್ಗವಾಯಿತು. ಶಿವಮೊಗ್ಗದಲ್ಲಿದ್ದಾಗ ಆರಂಭದ ವರ್ಷಗಳು ಅತ್ಯಂತ ಹರ್ಷೋಲ್ಲಾಸದ ದಿನಗಳು. 1950ರ ತನಕ ಸುಮಾರು 8 ವರ್ಷಗಳ ಕಾಲ ಮಲೆನಾಡಿನ ಸುಂದರ ಸಾಂಸ್ಕೃತಿಕ, ಪರಿಸರದಲ್ಲಿ ಭಟ್ಟರ ಅಧ್ಯಾಪನ, ಉಪನ್ಯಾಸ, ಬರವಣಿಗೆಗಳು ಭರದಿಂದ ಸಾಗಿದುವು. ವಿದ್ಯಾರ್ಥಿಗಳ ಅತ್ಯಂತ ಅಚ್ಚುಮೆಚ್ಚಿನ ಅಧ್ಯಾಪಕರೆನಿಸಿದರು. ಶಿವಮೊಗ್ಗದಲ್ಲಿದ್ದಾಗಲೇ ಕಾಳಿದಾಸನ 'ಋತು ಸಂಹಾರ'ದ ಅನುವಾದ, 'ಕೆಲವು ಇಂಗ್ಲಿಷ್ ಪ್ರಬಂಧಗಳು' ಎಂಬ ಖ್ಯಾತ ನಾಮರ ಅನುವಾದಿತ ಪ್ರಬಂಧಗಳ ಪುಸ್ತಕ ಪ್ರಕಟವಾಯಿತು. ಹಿರಿಯ ಮಗಳು ನಾಗರತ್ನ ಮತ್ತು ಮತ್ತಿನ ಮಗ ರಾಮಚಂದ್ರ ಹುಟ್ಟಿದ್ದು ಶಿವಮೊಗ್ಗದಲ್ಲೇ. ವಿದ್ಯಾರ್ಥಿಗಳ ಪ್ರೀತಿ, ಮಿತ್ರರ ಸ್ನೇಹ; ಮಕ್ಕಳ ಲಾಲನೆ, ಬರಹ, ಭಾಷಣ ಇವುಗಳಲ್ಲಿ ಮುಳುಗಿ ಅವರ ಸುಂದರ ಸಂಸಾರ ನೌಕೆ ಸಾಗಿದ್ದಾಗ, ವಿಧಿಗೂ ಕರುಬುಂಟಾಗಿ ಅದು ಸಂಕಷ್ಟದ ದೊಡ್ಡ ಬಂಡೆಗೆ ಡಿಕ್ಕಿ ಹೊಡೆದು, ಮುಂದಿನ ಬದುಕಿನ ದಾರಿಯೆಲ್ಲವೂ ಸಂಕಷ್ಟಗಳ ಸರಮಾಲೆಯೇ ಆಗಿಹೋಯಿತು. ಇದ್ದಕ್ಕಿದ್ದಂತೆ ಅವರ ಶ್ರೀಮತಿಯವರ ಆರೋಗ್ಯ ಕೆಟ್ಟಿತು. ಏನೋ ನೋವು, ಉದ್ವೇಗ, ಸಂಕಟ ಅವರ ಮನಸ್ಸನ್ನು ಹೊಕ್ಕಿತು. ಆರೋಗ್ಯ ಸುಧಾರಣೆಗಾಗಿ ಮೈಸೂರಿಗೆ ವರ್ಗಮಾಡಿಸಿಕೊಂಡು 1950ರಿಂದ 1968ರವರೆಗೂ ಅಲ್ಲೇ ಉಳಿದರು. ಆದರೆ ಅವರ ಆರೋಗ್ಯ ಮಧ್ಯೆ ಮಧ್ಯೆ ಕೆಲವು ತಿಂಗಳುಗಳ ಮಟ್ಟಿಗೆ ಸುಧಾರಿಸಿದಂತೆ ಕಂಡರೂ ಅದು ಪೂರ್ತಿ ಸರಿಹೋಗಲೇ ಇಲ್ಲ. ಸ್ವತಃ ತಾವೇ ತಂದೆ ತಾಯಿ ಎರಡೂ ಆಗಿ ಮಕ್ಕಳನ್ನು ಸಾಕಿ ಸಲಹಿ, ವಿದ್ಯಾಬುದ್ಧಿಗಳನ್ನೆರೆದು ದೊಡ್ಡವರನ್ನಾಗಿ ಮಾಡಿದರು. ತಮ್ಮ ಶ್ರೀಮತಿಯವರನ್ನು ಕೂಡ ಒಂದು ಮಗುವಿನಂತೆಯೇ ನೋಡಿಕೊಂಡು, ಸಾಹಿತ್ಯ ರಚನೆ ವ್ಯಾಸಂಗ, ಅಧ್ಯಾಪನಗಳಲ್ಲಿ

ಮುಳುಗಿಬಿಟ್ಟರು. ಈ ಮಧ್ಯದಲ್ಲೇ ಕೃಷ್ಣಮೂರ್ತಿಪುರದ ರಾಮಯ್ಯರ್ ರಸ್ತೆಯಲ್ಲಿ ನಿವೇಶನ ಕೊಂಡು ತಮ್ಮ ಆಪ್ತ ಮಿತ್ರ ಶಂಕರನಾರಾಯಣರಾಯರ ಮನೆಯ ಪಕ್ಕದಲ್ಲೇ 'ಕಲ್ಪನ'- ಮನೆ ಕಟ್ಟಿಸಿದರು. ಪುಸ್ತಕಗಳ ಗೌರವಧನದಿಂದಲೇ ಮನೆ ಸಾಲ ತೀರಿಸಿದ ಹೆಗ್ಗಳಿಕೆ. ಅವರ ಹಿರಿಯ ಮಗ ಎಸ್.ಪಿ. ರಾಮಚಂದ್ರ ದಾಖಲಿಸಿರುವಂತೆ– "ದಿನನಿತ್ಯದ ಕೆಲಸಗಳನ್ನು ಮಾಡುವಾಗಲೂ, ಯಾವುದಾದರೂ ಕವನದ ಬಗ್ಗೆ ಇಲ್ಲವೆ ಅವರು ಕೈಗೊಂಡಿದ್ದ ಸಂಸ್ಕೃತಕಾವ್ಯದ ಯಾವುದಾದರೂ ಅನುವಾದದ ಬಗ್ಗೆ ಅವರ ಮನಸ್ಸು ತೊಡಗಿರುತ್ತಿತ್ತೆಂದು ಅನಿಸುತ್ತದೆ. ಕೆಲವು ಬಾರಿ ಅವರು ಅದನ್ನು ಬಾಯಲ್ಲಿ ಹೇಳಿಕೊಳ್ಳುತ್ತಾ ಹೊಸ ರೂಪ ತೊಡಗಿಸುತ್ತಿರುವುದು ಗಮನಕ್ಕೆ ಬರುತ್ತಿತ್ತು." ಮೈಸೂರಿಗೆ ಬಂದ ಹೊಸತರಲ್ಲೇ ಮುದ್ದಣನ ಅದ್ಭುತ ರಾಮಾಯಣ ಮತ್ತು 'ರಾಮಪಟ್ಟಾಭಿಷೇಕ'ಗಳನ್ನು ವಿಸ್ತಾರವಾದ ಪೀಠಿಕೆ ಅರ್ಥಕೋಶಗಳೊಂದಿಗೆ ಸಂಪಾದಿಸಿದರು. ಬದುಕಿನ ನೋವು ಬವಣೆಗಳನ್ನು ಸಾಹಿತ್ಯಿಕ ಕಾರ್ಯಗಳಲ್ಲಿ ತೊಡಗುವ ಮೂಲಕ ಮರೆಯಲೆತ್ನಿಸಿದರು. ಇಂದ್ರಚಾಪದಲ್ಲಿ ಇದನ್ನು ಹೇಳಿಕೊಂಡಿದ್ದಾರೆ:

ಒಲೆಯ ಮುಂದಿರುವಾಗ ತಲೆಯೊಳು ಸುಳಿವುದು
ಪಂಪನ ಪದ್ಯವದೊಂದು
ಮಕ್ಕಳಿಗೆರೆವಾಗ ಮನ ಮಡಿಗೊಳುವುದು
ಕಾವ್ಯಗಂಗೆಯ ಬಿಂದುವಿಳಿದು

ಹಾಗೆಯೇ,

ಅಕ್ಕಿಯ ಕೈ ಕರ್ಚುತಿರುವಾಗ ಬಗೆಕರ್ಚು
ವುದು ಕಾಳಿದಾಸನ ಅಡಿಯ
ದುಡಿದು ಮೈಸೋತಿತೆನುವಾಗ ಮನಪೆರ್ಚು
ವುದು ನೆನೆದಾತನ ನುಡಿಯ–

ಕಾಳಿದಾಸನ ಸಮಗ್ರ ಕೃತಿಗಳನ್ನು ಒಂದೊಂದಾಗಿ ಅನುವಾದಿಸುತ್ತ ಮಧ್ಯೆ ಮಧ್ಯೆ ತ್ರಿಪದಿ, ಸಾಂಗತ್ಯ, ಏಳೆ ಮುಂತಾದ ಕನ್ನಡದ ಪ್ರಾಚೀನ ಛಂದೋರೂಪಗಳಲ್ಲಿ ಸ್ವತಂತ್ರ ಕೃತಿಗಳನ್ನು ರಚಿಸುತ್ತ ವಿಧಿ ತಂದೊಡ್ಡಿದ ಬಿರುಗಾಳಿಗೆ ಬಂಡೆಯಂತೆ ಅಚಲವಾಗಿ ನಿಂತರು. ಕುವೆಂಪು ಅವರ ಮಹಾಸಂಕಲ್ಪದ ಫಲವಾಗಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ ಮಾನಸ ಗಂಗೋತ್ರಿಯಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ತಮ್ಮ ಕೊನೆಯ ಮಗ ಪ್ರಕಾಶನನ್ನು ತರಗತಿಯಲ್ಲಿ ತಮ್ಮ ಪಕ್ಕದಲ್ಲೇ ಕುರ್ಚಿಹಾಕಿ ಕೂಡಿಸಿಕೊಂಡು ಪಾಠ ಹೇಳಬೇಕಾದ ಅನಿವಾರ್ಯತೆಗೆ ಒಳಗಾದರು. ಇಂದ್ರಚಾಪದಲ್ಲಿ ಈ ಸ್ಥಿತಿಯನ್ನು ಹೀಗೆ ಅಭಿವ್ಯಕ್ತಿಸಿದ್ದಾರೆ.

ಸಾಹಿತ್ಯವನು ಕಂಡೆ ಸಂಸಾರದೊಳು ಹೀಗೆ
ಸಾಂಗತ್ಯವಾಗಿಸಿ ಕೊನೆಗೆ
ಇಲ್ಲದೆ ಹೋದರೆ ಉಸಿರಾಡುವುದು ಹೇಗೆ
ಹೊಗೆಗಟ್ಟಿದೀ ಗೂಡಿನೊಳಗೆ

ಅವರ ಸ್ವಭಾವಸಹಜವಾದ ಹಾಸ್ಯಪ್ರವೃತ್ತಿ ಅವರ ಈ ಸಂಸಾರಯಾನದಲ್ಲಿ ಹುಟ್ಟುಗೋಲಾಗಿ ಒದಗಿ ಬಂತು. 1964ರಲ್ಲಿ ಗಂಗೋತ್ರಿಯಲ್ಲಿ ಪ್ರವಾಚಕರಾದರು. ಸರಸಸಾಹಿತ್ಯ ಪ್ರಕಾಶನ ಎಂಬ ಪ್ರಕಾಶನ ಸಂಸ್ಥೆ ಸ್ಥಾಪಿಸಿ, ಸ್ವಂತ ಕೃತಿಗಳು ಮತ್ತು ತಮ್ಮ ವಿದ್ಯಾರ್ಥಿಗಳು ಮತ್ತು ಮಿತ್ರರ ಕೃತಿಗಳನ್ನು ಪ್ರಕಟಿಸಿದರು.

ಮಂಗಳೂರಿನ ದಿನಗಳು

1968ರಲ್ಲಿ ಇದ್ದಕ್ಕಿದ್ದಂತೆ ಅವರ ಸೇವಾ ಜೀವನದಲ್ಲಿ ಅನಿರೀಕ್ಷಿತವಾದೊಂದು ತಿರುವು ದೊರೆತು, ಮೈಸೂರು ವಿಶ್ವವಿದ್ಯಾನಿಲಯ ಮಂಗಳೂರಿನಲ್ಲಿ ಸ್ಥಾಪಿಸಿದ ಸ್ನಾತಕೋತ್ತರಕೇಂದ್ರದ ಪ್ರಾಧ್ಯಾಪಕರು ಮತ್ತು ನಿರ್ದೇಶಕರಾಗಿ ನೇಮಕಗೊಂಡರು. ಮಂಗಳೂರಿನ ಅವರ ದಿನಗಳೆಂದರೆ ಬದುಕಿನ ಬಂಗಾರದ ದಿನಗಳು. ಅವರ ಸೃಜನಶೀಲ ಚಟುವಟಿಕೆಗಳು ದ್ವಿಗುಣಗೊಂಡು ಅವರ ಸಾಹಿತ್ಯ ರಚನೆಗೆ ಎಲ್ಲಿಲ್ಲದ ಉಕ್ಕಂದ ಬಂದಿತು. ಮಂಗಳೂರಿನ ಜನ ಅಪಾರ ಗೌರವ ಅಕ್ಕರೆ ತೋರಿದರು. ತಮ್ಮ ಬದುಕಿನ ಬವಣೆಗಳನ್ನೆಲ್ಲ ಮರೆತು ಭಾವೀ ವಿಶ್ವವಿದ್ಯಾನಿಲಯಕ್ಕೆ ಸುಭದ್ರ ಅಡಿಪಾಯ ಹಾಕುವ ಮಹತ್ಕಾರ್ಯದಲ್ಲಿ ತೊಡಗಿಸಿಕೊಂಡರು. ಅಷ್ಟೇನೂ ಹೇಳಿಕೊಳ್ಳುವಂಥ ಕನ್ನಡದ ವಾತಾವರಣವಿರದಿದ್ದ ಮಂಗಳೂರಿಗೆ ಭಟ್ಟರು ಹೋದದ್ದೇ ತಡ, ಇಡೀ ಜಿಲ್ಲೆಯಲ್ಲಿ ನವೋಲ್ಲಾಸವುಂಟಾಗಿ ಕನ್ನಡದ ವಾತಾವರಣ ಎಲ್ಲೆಡೆ ಉಂಟಾಯಿತು. ಶಿಶುವಿಹಾರದಿಂದ ಹಿಡಿದು ಸ್ನಾತಕೋತ್ತರದವರೆಗೆ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ, ಇದೊಂದು ಸಾಂಸ್ಕೃತಿಕ ಜವಾಬ್ದಾರಿ ಎಂದು ತಿಳಿದು ಉತ್ಸಾಹದಿಂದ ಭಾಗವಹಿಸಿ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ತಮ್ಮ ಅಪೂರ್ವ ವಾಗ್ಝರಿ ಹರಿಸಿ, ಕನ್ನಡ ಜಾಗೃತಿಯನ್ನುಂಟು ಮಾಡಿದರು. ತಮ್ಮ ಉತ್ಸಾಹಶಾಲಿ ಅಧ್ಯಾಪಕರ ಪಡೆಯೊಂದಿಗೆ ಪ್ರಕಾಶನ ಸಂಸ್ಥೆಗಳನ್ನು ಹುಟ್ಟು ಹಾಕಿ ಪುಸ್ತಕ ಪ್ರಕಟಣೆಗೆ ತೊಡಗಿದರು. ಭಾಸನ ಸಮಗ್ರ ಕೃತಿಗಳ ಅನುವಾದ, ಬುದ್ಧ ಚರಿತೆಯ ಅನುವಾದ, ಶ್ರೇಷ್ಠ ಕೃತಿಯಾದ 'ಉಪ್ಪು ಕಡಲು' ವಚನ ಸಂಕಲನ, ಸ್ವತಂತ್ರಗಾದೆ ಒಗಟುಗಳ ಸಂಕಲನ, ಗದ್ಯ ಬರಹಗಳು, ಇಂದ್ರಗೋಪ, ಕೃಷ್ಣಮೇಘ ಕವನ ಸಂಗ್ರಹಗಳೆಲ್ಲ ರಚಿತವಾದದ್ದು ಮಂಗಳೂರಿನಲ್ಲೇ. ಇದಕ್ಕಿಂತ ಹೆಚ್ಚಾಗಿ ಕಾಳಿದಾಸ ಮಹಾ ಸಂಪುಟ ಮೂಲ ಮತ್ತು ಅನುವಾದದೊಂದಿಗೆ ಎಲ್ಲ ಸಾಹಿತ್ಯಾಸಕ್ತರ ಮನೆಸೇರಿತು. ಮುಂದಾಗಿಯೇ ಬ್ಯಾಂಕ್ ಸಾಲ ತೀರಿಸಿದರು. ಮನೆಮನೆಗೆ ಸರಸ್ವತಿಯಂಥ ಕಾರ್ಯಕ್ರಮ ಹಮ್ಮಿಕೊಂಡು ಜನರಲ್ಲಿ ಪುಸ್ತಕಪ್ರೀತಿ ಬೆಳೆಯಲು ಕಾರಣರಾದರು. ವಿದ್ಯಾರ್ಥಿಗಳಿಗೆ ಮತ್ತು ಸಾಹಿತ್ಯ ಪ್ರಿಯರಿಗೆ ಬೇಂದ್ರೆ, ಅಡಿಗ, ಕಾರಂತ, ಪು.ತಿ.ನ., ಜಿ.ಎಸ್.ಎಸ್., ಡಾ.ಎ.ಎನ್. ಉಪಾಧ್ಯೆ, ಎಲ್.ಎಸ್.ಎಸ್., ಪ್ರೊ.ಎಂ.ರಾಮರಾವ್, ಮರಿಯಪ್ಪಭಟ್ಟ – ಒಂದೇ ಎರಡೇ, ಕನ್ನಡದ ಬಹುತೇಕ ಖ್ಯಾತ ಸಾಹಿತಿಗಳ ಉಪನ್ಯಾಸಗಳನ್ನು ಕೇಳುವ ಭಾಗ್ಯ ಒದಗಿಸಿದರು. ಅಲ್ಲಿಯ ಸ್ನಾತಕೋತ್ತರ ಕೇಂದ್ರಕ್ಕೆ 'ಮಂಗಳ ಗಂಗೋತ್ರಿ' ಎಂದು ನಾಮಕರಣ ಮಾಡಿದರು. ಇಲ್ಲಿದ್ದಾಗಲೇ ಅವರ ಮೊದಲ ಮಗಳ ಮದುವೆ ನೆರವೇರಿ, ಹಿರಿಯ ಮಗ ರಾಮಚಂದ್ರ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನೆಲೆ ನಿಂತು ಭಟ್ಟರಿಗೆ ಬದುಕಿನಲ್ಲಿ ಸಂತೃಪ್ತಿ ಕಾಣಲು ಸಾಧ್ಯವಾಯಿತು. ಇಲ್ಲಿಯೇ ಅವರ ಶಿಷ್ಯರೂ ಮಿತ್ರರೂ ಸೇರಿ 'ಪೂರ್ಣಕುಂಭ'ವೆಂಬ ಅಭಿನಂದನ ಗ್ರಂಥ ಸಲ್ಲಿಸಿದರು.

1974ರಲ್ಲಿ ನಿವೃತ್ತರಾದ ನಂತರದಲ್ಲಿ ಮಂಗಳೂರಿನ ಭಾರತೀಯ ವಿದ್ಯಾಭವನದ ರಿಜಿಸ್ಟ್ರಾರ್ ಆಗಿಯೂ ಸ್ವಲ್ಪ ಕಾಲ ಕಾರ್ಯ ನಿರ್ವಹಿಸಿದರು. ಅಲ್ಲಿಂದ ಮೈಸೂರಿಗೆ ಮರಳಿದ ಮೇಲೆ ಮಾನಸಗಂಗೋತ್ರಿಯಲ್ಲಿ ಯುಜಿಸಿ ಪ್ರಾಧ್ಯಾಪಕರಾಗಿ, ಕೆಲಸ ಮಾಡಿದ ಅವಧಿಯಲ್ಲಿ ಕುವೆಂಪು ಅವರ ಕೃತಿಗಳ ಸಮಗ್ರ ಅಧ್ಯಯನವನ್ನೊಳಗೊಂಡ 'ರಸಋಷಿ' ಎಂಬ ಐದು ಸಂಪುಟಗಳ ಗ್ರಂಥ ರಚಿಸಿದರು. ಕಲ್ಯ ಲಕ್ಷ್ಮೀನರಸಿಂಹ ಕವಿಯ 'ಕವಿಕೌಮುದಿ', 'ಹರ್ಷ ಮಹಾಸಂಪುಟ', 'ಭವಭೂತಿ ಸಂಪುಟ' ಹೀಗೆ ಒಂದಾದ ಮೇಲೊಂದು

ಕೃತಿಗಳ ರಚನೆಯಲ್ಲಿ ಅವಿಶ್ರಾಂತವಾಗಿ ತೊಡಗಿಸಿಕೊಂಡು ಸೃಜನಶೀಲತೆಯ ಸೆಲೆ ಬತ್ತದಂತೆ ಬದುಕಿದರು. ಕೊನೆಕೊನೆಗೆ ಆರೋಗ್ಯ ತುಂಬ ಕ್ಷೀಣಿಸಿತು. ಲಘು ಪಾರ್ಶ್ವವಾಯುವಿಗೂ ಗುರಿಯಾದರು. ಆದರೂ ಅವರ ಮಾತುಗಾರಿಕೆಗೇನೂ ಅಡ್ಡಿಯಾಗಲಿಲ್ಲ. ಹೀಗೆ ಕೊನೆಯವರೆಗೂ ಸೃಜನಶೀಲರಾಗಿಯೇ ಇದ್ದು, ಆಸ್ಪತ್ರೆಯಲ್ಲಿದ್ದಾಗಲೂ ತಾವು ರಚಿಸಿದ 'ರಸಋಷಿ'ಯ ಅಚ್ಚಾದ ಪುಸ್ತಕ ನೋಡಿ, ಮಗ ಸೊಸೆಯ ಆರೈಕೆಯಲ್ಲಿ ನೆಮ್ಮದಿಯಾಗಿ ಬಾಳಿ ತಮ್ಮ 87ನೆಯ ವಯಸ್ಸಿನಲ್ಲಿ ಇಹಲೋಕದ ಬದುಕಿಗೆ ಮಂಗಳ ಹಾಡಿದರು. ಅವರ ಹಿರಿಯ ಶಿಷ್ಯರೂ ಖ್ಯಾತ ವಿದ್ವಾಂಸರೂ ಆದ ಡಾ.ಎಚ್.ಜೆ. ಲಕ್ಕಪ್ಪಗೌಡರು ಹೇಳಿರುವಂತೆ ಅವರು "ನೋವುಂಡು ನಗೆ ಚೆಲ್ಲಿದ ಅಜಾತಶತ್ರು".[೧]

ಎಸ್.ವಿ.ಪಿ. ಅವರ ವ್ಯಕ್ತಿತ್ವ

ಎಸ್.ವಿ.ಪಿ. ಅವರದು ಅತ್ಯಂತ ಆಕರ್ಷಕ ವ್ಯಕ್ತಿತ್ವ. ಎತ್ತರವೂ ಅಲ್ಲದ ಕುಳ್ಳೂ ಅಲ್ಲದ ಮಟ್ಟಸವಾದ ಆಕೃತಿ. ಮಾಟವಾದ ಮೂಗು, ತುಂಬಿಕೊಂಡ ಕೆನ್ನೆಗಳು, ಸೊಗಸಾದ ಕೆಂಪು ಮೈಬಣ್ಣ, ತುಸು ಕೆಂಪಡರಿದ ಕಣ್ಣುಗಳು. ಕ್ರಾಪು ತೆಗೆದ ಬೆಳ್ಳಿ ಕೂದಲು. ಸದಾ ಹಸನ್ಮುಖಿ, ನಕ್ಕಾಗ ಎರಡೂ ಕೆನ್ನೆಗಳಲ್ಲಿ ಆಳವಾಗಿ ಗುಳಿ ಬೀಳುತ್ತಿತ್ತು. ಇದು ನಾನು ಅವರನ್ನು ಐವತ್ತೈದನೆಯ ವಯಸ್ಸಿನಲ್ಲಿ ಮೊದಲು ಕಂಡಾಗಿನ ಚಿತ್ರ. ಭಟ್ಟರ ಬಹಿರಂಗ ವ್ಯಕ್ತಿತ್ವ ಹೇಗೆ ಜನರನ್ನು ಸೂಜಿಗಲ್ಲಿನಂತೆ ಸೆಳೆಯುವಂಥದೋ ಅವರ ಅಂತರಂಗ ವ್ಯಕ್ತಿತ್ವ ಕೂಡ ಅದಕ್ಕೆ ತಕ್ಕಂತೆ ಅತ್ಯಂತ ಸ್ನೇಹಪರ; ಪ್ರೀತಿ, ಸೌಜನ್ಯ ದಾಕ್ಷಿಣ್ಯ, ಕರುಣೆ ನಯವಿನಯಗಳಿಂದ ಕೂಡಿದ್ದು ಎಂಥವರಿಗಾದರೂ ಮೋಡಿ ಮಾಡಿಬಿಡುವಂಥದು. ಅವರ ಸ್ವಭಾವ ಅತ್ಯಂತ ಮೃದು, ಮಧುರ. ನಿರಾಡಂಬರ ನಿರಹಂಕಾರ, ತಾಳ್ಮೆಗಳ ಪ್ರತಿಮೂರ್ತಿ[2]. ಎಂದಿಗೂ ಯಾರಿಗೂ ಮರೆತು ಕೂಡ ನೋವುಂಟು ಮಾಡುವಂಥವರಲ್ಲ. ಮನಸ್ಸು ಎಷ್ಟೇ ಅಸ್ತವ್ಯಸ್ತಗೊಂಡಿರಲಿ, ಪರಿಸ್ಥಿತಿ ಎಷ್ಟೇ ಗಂಭೀರವಾಗಿರಲಿ ಎಂದೂ ಯಾರ ಮೇಲೂ ಯಾವ ವಿಚಾರಕ್ಕೂ ಕೋಪಗೊಂಡ ವ್ಯಕ್ತಿಯಲ್ಲ. "ವೈಯಕ್ತಿಕವಾಗಿ ಎಷ್ಟೇ ನೋವುಂಡಿದ್ದರೂ ಅದನ್ನು ತೋರ್ಪಡಿಸಿಕೊಳ್ಳದೆ, ತಮ್ಮ ಬಳಿಗೆ ಸಹಾಯ ಕೇಳಿ ಬಂದವರಿಗೆ ನೆರವಿನ ಹಸ್ತ ಚಾಚಲು ಸದಾ ತುದಿಗಾಲಲ್ಲಿ ನಿಂತಿರುತ್ತಿದ್ದಂಥ ವ್ಯಕ್ತಿ. ಹಾಗೊಂದು ವೇಳೆ ಯಾರಿಗಾದರೂ ಸಹಾಯ ಮಾಡಲು ಸಾಧ್ಯವಾಗದಂಥ ಸಂದರ್ಭವಿದ್ದಾಗ ಅವರು ಪಡುತ್ತಿದ್ದ ಮುಜುಗರ ಸಂಕೋಚಗಳು ಅವರನ್ನು ಬಲ್ಲವರಿಗೆಲ್ಲಾ ಚೆನ್ನಾಗಿ ಗೊತ್ತು. ಅವರದು ಕೃತ್ರಿಮ, ಮೋಸಗಳನ್ನರಿಯದ ಮುಚ್ಚು ಮರೆಯಿಲ್ಲದ ಮಾತುಗಾರಿಕೆಯ, ಮಗುವಿನಂಥ ಸ್ವಭಾವ. 'ಸರಳತೆ ಒಂದೇ ಸಾಲದು, ವಕ್ರತೆ ಸಹಬೇಕು' ಎಂದು ಇಂದ್ರಚಾಪದ ಒಂದು ಪದ್ಯದಲ್ಲಿ ಹೇಳಿದ್ದರೂ ಅದು ಅವರಿಗೆ ಎಂದೂ ಒಗ್ಗಲಿಲ್ಲ. ವಿನಯ ಮತ್ತು ಸಜ್ಜನಿಕೆಗಳು ಅವರಿಗೆ ಸ್ವಭಾವ ಸಹಜವಾಗಿ ಬಂದ ಗುಣಗಳಾಗಿದ್ದುವು. ಎಸ್.ವಿ.ಪಿ. ಎಂದರೆ ಸಜ್ಜನಿಕೆ ಮತ್ತು ವಿನಯಗಳ ಪರಮೇಶ್ವರ ಭಟ್ಟರು ಎಂದು ಅವರ ಶಿಷ್ಯರು ಅಭಿಮಾನದಿಂದ ಹೇಳುತ್ತಿದ್ದುದು ಅವರ ವಿಷಯದಲ್ಲಿ ಅನ್ವರ್ಥವೇ ಆಗಿತ್ತು. ತಾವು ಕೇಂದ್ರದ ನಿರ್ದೇಶಕರಾಗಿದ್ದರೂ ಅನೇಕ ಸಲ ತಾವೇ ಎದ್ದು ಕಛೇರಿಯ ಸಿಬ್ಬಂದಿಯವರ ಹತ್ತಿರ ಹೋಗುವುದಾಗಲಿ, ಒಂದು ವೇಳೆ ಜವಾನ ಇಲ್ಲ ಎಂದಾದರೆ ಅಪರೂಪಕ್ಕೆ ಪೀರಿಯಡ್ ಬೆಲ್ ಮಾಡಲು ತಾನೇ ಧಾವಿಸುವುದಾಗಲಿ ಅವರಿಗೆ ಮುಜುಗರದ ವಿಷಯವಾಗಿರಲಿಲ್ಲ. ಅಷ್ಟೊಂದು ಸರಳರು. ಹಾಗಿದ್ದರೂ ಆ ಸೌಜನ್ಯ ಮೂರ್ತಿಯನ್ನು ಎಲ್ಲರೂ ಅತ್ಯಂತ ಗೌರವಾದರಗಳಿಂದಲೇ ಕಾಣುತ್ತಿದ್ದರು.

ಹಾಸ್ಯ ಪ್ರವೃತ್ತಿ

ವೈಯಕ್ತಿಕ ಬದುಕಿನಲ್ಲಿ ಅಪಾರವಾದ ನೋವುಂಡಿದ್ದರೂ ಆ ನೋವನ್ನು ಮರೆಯಲೋ ಎಂಬಂತೆ ಅವರು ತಮ್ಮ ವ್ಯಕ್ತಿತ್ವದ ಭಾಗವೇ ಆಗಿ ರೂಢಿಸಿಕೊಂಡಿದ್ದ ವಿನೋದ, ಹಾಸ್ಯ ಪ್ರವೃತ್ತಿ ಅವರ ವ್ಯಕ್ತಿತ್ವಕ್ಕೆ ಎಲ್ಲಿಲ್ಲದ ಮೆರುಗು ನೀಡಿತ್ತು. ಅವರೊಬ್ಬ ಅತ್ಯಂತ ಸರಸ ಮಾತುಗಾರರು. ಅವರ ಆತ್ಮೀಯ ಬಂಧುವೂ ಖ್ಯಾತ ರಂಗತಜ್ಞರೂ ಆದ ಡಾ.ಎಚ್.ಕೆ.ರಂಗನಾಥ್ ಹೇಳುವಂತೆ "ಏನೆಂಥ ಹಾಲಾಹಲವನ್ನು ತಾವು ಮಾತ್ರ ಗುಟುಕರಿಸಿ ಕುಡಿದು ಜಗತ್ತಿಗೆ ಅಮೃತಾನಂದವನ್ನೇ ಕೊಡುವ ಸಂಸ್ಕಾರ ಅವರದು... ಅವರ ಆ ತಾಳ್ಮೆ ಸಂಯಮ, ಅದಮ್ಯವಾದ ವಿನೋದ ಪ್ರವೃತ್ತಿಯಿಂದಾಗಿ ಜೀವನದಲ್ಲಿ ಬಂದೊದಗಿದ ಮಹಾ ಆಘಾತಗಳನ್ನು ಮೆಟ್ಟಿನಿಂತರು".[2ಐ] ಎಂದೂ ಎಂಥ ಸಂದರ್ಭದಲ್ಲೂ ಮುಖ ಸೊಗಡು ಮಾಡಿಕೊಂಡವರಲ್ಲ. ಸದಾ ಮಂದಹಾಸ ಸೂಸುತ್ತಿದ್ದ ಮುಖ. ಅವರ ಹಿರಿಯ ಮಗಳು ಎಸ್.ಪಿ. ನಾಗರತ್ನ ಅವರು ದಾಖಲಿಸಿರುವಂತೆ– "ಅವರ ಅನುಭವಗಳನ್ನು ಯಾವುಯಾವುದೋ ದೃಷ್ಟಾಂತಗಳನ್ನು... ಘಟನೆಗಳನ್ನು ತೆಗೆದುಕೊಂಡು ಬಹು ಸ್ವಾರಸ್ಯಪೂರ್ವವಾಗಿ ಹಾವ ಭಾವ ಸಹಿತವಾಗಿ ಕೇಳುವವರ ಕಣ್ಣಿಗೆ ಕಟ್ಟುವಂತೆ, ಹಾಸ್ಯ ಲೇಪನವನ್ನು ಹಚ್ಚಿ ಹೇಳುವಾಗ ಕೇಳುತ್ತಾ ಕುಳಿತವರು ಪಕಪಕನೆ ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದೆವು... ಮನೆಯಲ್ಲಿ ನಗುವಿಗೆ ಕೊರತೆ ಎಂಬುದೇ ಇರಲಿಲ್ಲ. ನನಗೆ ನೆನಪಿರುವಂತೆ ನಾವು ಮಕ್ಕಳು ನಕ್ಕಿದ್ದೇ ಹೊರತು ಅತ್ತಿದ್ದಿಲ್ಲ" [2ಜ]. ಅವರ 'ಇಂದ್ರಚಾಪ', 'ಚಂದ್ರವೀಧಿ'ಗಳಲ್ಲಿ ಅವರ ಹಾಸ್ಯಭರಿತ ಮುಕ್ತಕಗಳಿದ್ದರೂ, ಪೂರ್ತಿ, ಹಾಸ್ಯಭರಿತ 700 ಮುಕ್ತಕಗಳಿಂದಲೇ ಕೂಡಿದ 'ಚಿತ್ರಪಥೆ' ಇದಕ್ಕೆ ಸಾಕ್ಷಿ ನುಡಿಯುತ್ತದೆ. ತಮ್ಮ ಸರಸವಾದ, ನಗೆಯುಕ್ಕಿಸುವ ಜೋಕುಗಳಿಗೆ, ನಗೆಮಾತುಗಳಿಗೆ ಅವರು ಇನ್ನೊಂದು ಹೆಸರಾಗಿದ್ದರೆಂದರೆ ಅದು ಅತಿಶಯೋಕ್ತಿಯಲ್ಲ. ಅದರಿಂದಲೇ ಅವರ ತರಗತಿಯಲ್ಲಿ ನಗೆಯ ಅಲೆ ಉಕ್ಕಿ ಹರಿಯುತ್ತಿತ್ತು. ಸ್ವತಃ ಅವರ ಗುರುಗಳಾದ ತೀನಂಶ್ರೀಯವರೇ "ಅದೇನು ಹುಡುಗರನ್ನು ಹಾಗೆ ನಗಿಸುತ್ತೀರಿ. ನನಗೂ ನಿಮ್ಮ ತರಗತಿಗೆ ಬಂದು ಕುಳಿತುಕೊಳ್ಳಬೇಕೆಂಬ ಆಸೆಯಾಗುತ್ತಿದೆ"[3] ಎಂದು ಮೆಚ್ಚಿಗೆ ವ್ಯಕ್ತಪಡಿಸುತ್ತಿದ್ದರಂತೆ. ಅವರ ಬಾಯಿಂದ ಆ ಹಾಸ್ಯದ ಮಾತುಗಳನ್ನು ಕೇಳುವುದೇ ಒಂದು ಸೊಗಸು. ಭಟ್ಟರ ಕಣ್ಣು, ಮುಖ, ಕೈಕಾಲು, ಅಷ್ಟೇಕೆ ಇಡೀ ಶರೀರವೇ ಮಾತಾಡುತ್ತಿತ್ತು. ಹಾಗಾಗಿ ಅವುಗಳಿಗೆ ಎಲ್ಲಿಲ್ಲದ ಸ್ವಾರಸ್ಯ. ಹೊಳಪು ಉಂಟಾಗುತ್ತಿತ್ತು. ಆದರೆ ಅವರದು ಅತ್ಯಂತ ನವುರಾದ, ಆರೋಗ್ಯಕರವಾದ, ಸದಭಿರುಚಿಯ ಹಾಸ್ಯ. ಯಾವುದೋ ಕಾಲದ ದೇಶದ ವಿಚಾರಗಳನ್ನು ಸಮಕಾಲೀನ ವಿಚಾರವೊಂದಕ್ಕೆ ತಳುಕು ಹಾಕಿ ನಗೆ ಬುಗ್ಗೆಯೆಬ್ಬಿಸುತ್ತಿದ್ದರು. ಹಾಸ್ಯಕ್ಕೀಡಾದ ವ್ಯಕ್ತಿಗೂ ನೋವಾಗದಂತೆ, ಮುಜುಗರವಾಗದಂತೆ, "ಎಂತಹ ವಾತಾವರಣವನ್ನೇ ಆದರೂ ಹಾಸ್ಯದ ಮಡುವಿನಲ್ಲಿ ಮುಳುಗಿಸಿ ಅಲ್ಲೊಂದು ನವಿರಾದ ಹಾಸ್ಯದ ತೆರೆಯನ್ನು ಎಬ್ಬಿಸಿಬಿಡುತ್ತಿದ್ದರು."[4] ಹಾಸ್ಯಕ್ಕೀಢಾದವರೂ ಕೇಳಿ ನಗಬಹುದಾದಂಥ ವಿನೋದದ ಮಾತುಗಳು ಅವರವು. ಅಂಥ ಒಂದೆರಡು ಪ್ರಸಂಗಗಳು ಇವು.

ವಿದ್ಯಾರ್ಥಿ ಸಂಘದ ಚುನಾವಣೆ. ಒಮ್ಮೆ ಭಟ್ಟರ ವಿದ್ಯಾರ್ಥಿಯೊಬ್ಬ ಬಂದು "ಎಲ್ಲರೂ ಬಲವಂತ ಮಾಡ್ತಾ ಇದ್ದಾರೆ, ಪ್ರೆಸಿಡೆಂಟು, ಸೆಕ್ರೆಟರಿ, ಎರಡಕ್ಕೂ election ಗೆ ನಿಂತುಕೋ ಅಂತ. ಏನು ಮಾಡಲಿ ಸರ್. ನೀವೇನು ಹೇಳ್ತೀರಿ ಒಂದಕ್ಕೆ ನಿಲ್ಲಲೋ ಎರಡಕ್ಕೂ ನಿಲ್ಲಲೋ" ಅಂತ ಕೇಳಿದ. ಅದಕ್ಕೆ ಭಟ್ಟರ ಉವಾಚ:

"ಯಾವತ್ತೂ ಅಷ್ಟೇ ಒಂದಕ್ಕೆ ನಿಂತುಕೋ ಎರಡಕ್ಕೆ ಕೂತುಕೋ."

ಭಟ್ಟರು ತರಗತಿಯಲ್ಲಿದ್ದಾಗ ಪ್ರಿನ್ಸಿಪಾಲರಿಂದ ಒಂದು ಮೆಮೋ ಬಂತು. ಆ ವರ್ಷ ವಿದ್ಯಾರ್ಥಿ ಮುಷ್ಕರಗಳು ಹೆಚ್ಚು ನಡೆದು ಎರಡನೇ ಟರ್ಮು ತಡವಾಗಿ ಪ್ರಾರಂಭವಾಗಿ ಪಾಠ ಪ್ರವಚನಗಳು ಸರಿಯಾಗಿ ನಡೆದಿರಲಿಲ್ಲ. ಆ ಹಿನ್ನೆಲೆಯಲ್ಲಿ "Teachers are requested to cover their portions at the earliest" ಎಂದು ಮೆಮೋ. ಭಟ್ಟರು ಇದನ್ನು ತರಗತಿಯಲ್ಲಿ ಓದುವ ಅಗತ್ಯವೇನಿರಲಿಲ್ಲ. ಆದರೂ ಅದನ್ನು ಓದಿ ಅದಕ್ಕೆ ತೋರಿದ ಪ್ರತಿಕ್ರಿಯೆ– "ಇವರು ಏನಂತ ತಿಳಿದಿದ್ದಾರೆ? ನಮ್ಮ portions ಅನ್ನು ಕವರ್ ಮಾಡಬೇಕಂತೆ. ನಾವೇನು ಕಾಡುಮನುಷ್ಯರೆ? ನಾನೂ ಲಕ್ಷಣವಾಗಿ ಪ್ಯಾಂಟ್ ತೊಟ್ಟೇ ಕ್ಲಾಸಿಗೆ ಬರುತ್ತೇನೆ. portion ಅನ್ನು ಕವರ್ ಮಾಡಿಕೊಂಡೇ ಬರುತ್ತೇನೆ."[5] ಇಂಥವು ಎಷ್ಟೋ. ನಗೆ ಅವರ ವ್ಯಕ್ತಿತ್ವದಲ್ಲೇ ಬಂದ ಗುಣ. ತಮ್ಮನ್ನು ತಾವೇ ಹಾಸ್ಯ ಮಾಡಿಕೊಳ್ಳುತ್ತಿದ್ದರು. ಹೊಸದಾಗಿ ಮದುವೆಯಾದೆನೆಂದು ಹೇಳಿದವರನ್ನು "ಏನು ಪರಕಾಯ ಪ್ರವೇಶವಾಯಿತೋ" ಎಂದು ಕೇಳುತ್ತಿದ್ದುದು ಅವರ ಇನ್ನೊಂದು ಅಂಥ ಜೋಕ್. ಶ್ರೀಮತಿಯವರ ಆರೋಗ್ಯ ಸರಿ ಇಲ್ಲದ್ದರಿಂದ ತರಗತಿಯಲ್ಲೊಮ್ಮೆ ಅವರ ಕೊನೇ ಮಗನನ್ನೂ ಕರೆದುಕೊಂಡು ಬಂದು ಮೇಜಿನ ಮೇಲೆ ಕೂಡಿಸಿಕೊಂಡು ಭಟ್ಟರು ಎಂದಿನಂತೆ ನಿರರ್ಗಳ ಉಪನ್ಯಾಸ ಪ್ರಾರಂಭಿಸಿ ಮುಂದುವರೆಸಿದ್ದರಂತೆ. ನಡುವೆ "ಅಣ್ಣಾ ನಿನ್ನ ಪಾಠ ಸಾಕು, ತಲೆನೋಯುತ್ತೆ" ಎಂದ ಹುಡುಗನ ಮಾತಿನಿಂದ ತರಗತಿಯಲ್ಲಿ ನಗೆಯ ಹೊನಲು. ಭಟ್ಟರೂ ನಕ್ಕು "ನೋಡಿದಿರಾ ನನ್ನ ಪಾಠದ ವೈಖರಿ" ಎಂದು ಹಾಸ್ಯದ ಚಟಾಕಿ ಹಾರಿಸುತ್ತಿದ್ದರಂತೆ."[6] ಒಮ್ಮೆ ಮಹಾರಾಜಾ ಕಾಲೇಜಿನಲ್ಲಿ ತರಗತಿ ನಡೆಯುತ್ತಿದ್ದ ವೇಳೆ ಭಟ್ಟರನ್ನು ಹುಡುಕಿಕೊಂಡು ಬಂದವರು, ಅವರ ತರಗತಿ ಎಲ್ಲಿದೆ ಎಂದು ಅಟೆಂಡರ್‌ನನ್ನು ಕೇಳಿದರಂತೆ. ಅದಕ್ಕೆ ಆತ ಹೇಳಿದ್ದು, ಯಾವ ರೂಮಿನ ಹತ್ತಿರ ಹುಡುಗರು ಜೋರಾಗಿ ನಗುತ್ತಾ ಇರುವ ಶಬ್ದ ಕೇಳಿಸುತ್ತೋ ಅಲ್ಲೇ ಭಟ್ಟರ ತರಗತಿ ಎಂದು ಹೇಳಿದನಂತೆ.

ಇಂಥ ಹಾಸ್ಯ ಪ್ರವೃತ್ತಿ, ರಸಿಕತೆ ಇದ್ದವರಾದದ್ದರಿಂದಲೇ, ಅಷ್ಟೆಲ್ಲ ಕಷ್ಟಗಳ ನಡುವೆಯೂ, ಸದಾ ಉತ್ಸಾಹ ಶೀಲರಾಗಿ, ಬರವಣಿಗೆ ಭಾಷಣ ಅಧ್ಯಾಪನಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ವಿದ್ಯಾರ್ಥಿನಿಯೊಬ್ಬರು ದಾಖಲು ಮಾಡಿರುವಂತೆ ಅವರದು ಸದಾ ಕ್ರಿಯಾಶೀಲ ಮನೋಧರ್ಮ. "ಬದುಕಿನಲ್ಲಿ ನಾವು ಮಾಡಬೇಕಾದ ಕರ್ತವ್ಯ ಮುಗಿಯಿತೆಂದು ಕೊಂಡಾಗ ಸಾವು ಬರುತ್ತದೆ. ಆದ್ದರಿಂದ ಸಾವನ್ನು ದೂರ ಅಟ್ಟಲು ಮಾಡಬೇಕಾದ ಕೆಲಸವೆಂದರೆ ಇನ್ನೂ ಮಾಡುತ್ತಿರಲು ಬೇಕಾದ ಒಳ್ಳೆಯ ಕೆಲಸ ಕಾರ್ಯಗಳ ಸಂಕಲ್ಪ ಹಾಗೂ ಸಾಧನೆ"[7].

ನೀವು ಬರೆಯದೆ ಇದ್ದರೆ ಪ್ರಪಂಚವೇನು ಮುಳುಗಿ ಹೋಹುದೆ?
ಹೀಗೆಂದರೊಬ್ಬರೆನಗೊಮ್ಮೆ, ಕೊಂಕು ನುಡಿಚುಚ್ಚಿ
'ನಾನು ಬರೆಯದಿದ್ದರೆ ಪ್ರಪಂಚವೇನು ಮುಳುಗಿ ಹೋಹುದಿಲ್ಲ
ನಾನೇ ಮುಳುಗಿ ಹೋಹೆನು' ಎಂದೆನು ನನ್ನ ಮನ ಬಿಚ್ಚಿ
ಸರಿ ತಾನೆ ಆ ಪ್ರಶ್ನೆಗೆ ಈ ಉತ್ತರ ಸದಾಶಿವ ಗುರು–

ಎಂಬ ಅವರ ಈ ವಚನವೇ ಅವರ ಸೃಜನಶೀಲತೆ ಮತ್ತು ಕ್ರಿಯಾಶೀಲತೆಯ ಗಾಯತ್ರಿ.

ವಾಗ್ಮಿತೆ

ಭಟ್ಟರು ಒಬ್ಬ ಅಸದೃಶ ವಾಗ್ಮಿ. ವೇದಿಕೆಯ ಮೇಲೆ ನಿಂತರೆಂದರೆ ಅವರ ಬಾಯಿಂದ ಅಸ್ಖಲಿತವಾದ ವಾಗ್ ಝರಿ ನಿರರ್ಗಳವಾಗಿ, ನಿರಂತರವಾಗಿ ಹರಿಯುತ್ತಿತ್ತು. ಶ್ರೋತೃಗಳನ್ನು ತಮ್ಮ ಅದ್ಭುತ ಮಾತುಗಾರಿಕೆಯಿಂದ ಸೂಜಿಗಲ್ಲಿನಂತೆ ಸೆಳೆಯುವ ಶಕ್ತಿ ಅವರಲ್ಲಿತ್ತು. ಸಂದರ್ಭಕ್ಕೆ ತಕ್ಕ ದೃಷ್ಟಾಂತಗಳು ಸಾಮತಿಗಳು, ಉಪಮೆಗಳು ಪುಂಖಾನುಪುಂಖವಾಗಿ ಹೊರಹೊಮ್ಮುತ್ತಿದ್ದುವು. ಪ್ರೊ. ಅ.ರಾ.ಮಿತ್ರ ಅವರು ಹೇಳುವಂತೆ "ಶಬ್ದಗಳನ್ನು, ವಾಕ್ಯವೃಂದಗಳನ್ನು, ಕೊನೆಗೆ ವಾಕ್ಯಗಳನ್ನು ಎಷ್ಟು ಲೀಲಾಜಾಲವಾಗಿ, ದೃಶ್ಯವತ್ತಾಗಿ ನಿರೂಪಿಸಬಲ್ಲರೆಂದರೆ, ನಮಗೆ ಅವರು ಕಾಣಿಸುವ ಭಾವಲೋಕ ಸುಪರಿಚಿತವಾಗಿ ಬಿಡುತ್ತಿತ್ತು."[೮] ಶಬ್ದಗಳನ್ನು ಕುಣಿಸುವ ಕಲೆ ಅವರಿಗೆ ಕರಗತ. "ಅವರ ಅಂಗಭಂಗಿ, ಶಬ್ದ ಭಂಗಿಗಳೆರಡಕ್ಕೂ ಆರೋಗ್ಯವಾದ ಪೈಪೋಟಿ ಭಾಷಣದುದ್ದಕ್ಕೂ ಇರುತ್ತಿತ್ತು. ಜೊತೆಗೆ ನಗೆಯ ರಸಬುಗ್ಗೆ"[೮ಎ]. ಒಳ್ಳೆಯ ಪ್ರತ್ಯುತ್ಪನ್ನ ಮತಿ ಮತ್ತು ಪ್ರಸಂಗಾವಧಾನತೆ ಅವರ ಮಾತಿನಲ್ಲಿರುತ್ತಿತ್ತು. ತಮ್ಮ ಮಾತಿನ ಮೋಡಿಯಿಂದ ವಾಗ್‌ವೈಭವದ ವಿಲಾಸದಿಂದ ಅದು ಹತ್ತು ಜನರ ಸಣ್ಣ ಸಭೆಯಾದರೂ ಸರಿ, ಸಾವಿರ ಜನರ ಬೃಹತ್ ಸಭೆಯಾದರೂ ಸರಿ, ಜನಮನವನ್ನು ಸೂರೆಗೊಂಡು ಬಿಡುತ್ತಿದ್ದರು. ಕನ್ನಡದ ಹರಿಕಾರರಾಗಿ ಮಂಗಳೂರಿಗೆ ಪ್ರೊ. ಭಟ್ಟರು ಹೋದದ್ದೇ ತಡ, ಇಡೀ ಜಿಲ್ಲೆಯಾದ್ಯಂತ ಎಲ್ಲೆಂದರಲ್ಲಿ ಸಂಚರಿಸಿ ತಮ್ಮ ಅಪೂರ್ವ ಭಾಷಣಗಳಿಂದ ಎಲ್ಲೆಲ್ಲೂ ಕನ್ನಡದ ವಾತಾವರಣ ತಾನೇತಾನಾಗಿ ಉಂಟಾಗುವಂತೆ ಮಾಡಿದರು. ಅಪಾರವಾದ ಲೋಕಾನುಭವ ಮತ್ತು ಅಗಾಧವಾದ ವಿದ್ವತ್ತೆಯಿಂದ ಹಾಗೂ ನವುರಾದ ಹಾಸ್ಯದಿಂದ ಕೂಡಿದ ಅವರ ಮಾತುಗಾರಿಕೆಯಿಂದ ಜನ ಮಂತ್ರಮುಗ್ಧರಾಗಿಬಿಡುತ್ತಿದ್ದರು. ಕನ್ನಡ ಸಾಹಿತ್ಯದ ಪ್ರಸಾರಕ್ಕಾಗಿ, ಕನ್ನಡದ ಪ್ರಚಾರಕ್ಕಾಗಿ ಅವರು ವಸ್ತುಶಃ ಅಸಂಖ್ಯಾತವಾದ ಭಾಷಣಗಳನ್ನು ಮಾಡಿದರು. ಯಾರು ಕರೆದರೂ ಇಲ್ಲವೆನ್ನುತ್ತಿರಲಿಲ್ಲ. ಶಿಶುವಿಹಾರದಿಂದ ಹಿಡಿದು ಸ್ನಾತಕೋತ್ತರದವರೆಗೆ, ತಾಳಮದ್ದಲೆಯ ಉದ್ಘಾಟನೆಯಿಂದ ಹಿಡಿದು, ಧರ್ಮ ಸಮ್ಮೇಳನದವರೆಗೆ ಅವರಿಗೆ ಭಾಷಣಕ್ಕಾಗಿ ಆಹ್ವಾನವಿರುತ್ತಿತ್ತು. ಭಟ್ಟರು ತಮ್ಮ ದೇಹಾಯಾಸವನ್ನು ಲೆಕ್ಕಿಸದೆ ಬೇಸರಿಸದೆ ಹೋಗುತ್ತಿದ್ದರು. ಅದು ತಮ್ಮ ಸಾಂಸ್ಕೃತಿಕ ಜವಾಬ್ದಾರಿ, ಕರ್ತವ್ಯ ಎಂದು ತಿಳಿಯುತ್ತಿದ್ದರು. ಇದರಿಂದ ಅವರು ಗಳಿಸಿದ ಜನರ ಪ್ರೀತಿ, ಜನ ಪ್ರಿಯತೆ ಅಪಾರ.

ಅವರೊಬ್ಬ ಅನನ್ಯ ಸಾಧಾರಣ ಪ್ರಾಧ್ಯಾಪಕರು. ಅವರ ಹಿರಿಯ ಶಿಷ್ಯರಾದ ಡಾ. ಲಕ್ಕಪ್ಪಗೌಡರು ನೆನಪಿಸಿಕೊಂಡಿರುವಂತೆ "ಸಾಹಿತ್ಯ ಚರಿತ್ರೆಯಾಗಲಿ, ಕಾವ್ಯಮೀಮಾಂಸೆಯಾಗಲಿ, ಛಂದಸ್ಸಾಗಲಿ, ಭಾವಗೀತೆಯಾಗಲಿ, ರಗಳೆಯಾಗಲಿ, ಮಹಾಕಾವ್ಯವಾಗಲಿ, ಏಕ ನಿಷ್ಠೆಯಿಂದ ರಸಭರಿತವಾಗಿ, ಹೃದಯಗಮ್ಯವಾಗಿ ಪಾಠಹೇಳುವ ಕಲೆ ಅವರಿಗೆ ಸಿದ್ಧಿಸಿದೆ. ಅವರ ಪಾಠ, ಪುಸ್ತಕದ ಬದನೆಕಾಯಿಯಾಗದೆ, ಕೇವಲ ವಿಷಯಗಳ ಉಗ್ರಾಣವಾಗದೆ, ಮೈಮನಗಳನ್ನು ಪುಳಕಗೊಳಿಸುವ ಸ್ವೋಪಜ್ಞಶೀಲ ವಿಚಾರ ಲಹರಿಗಳ ಜೀವಂತ ಮಧುರ ನರ್ತನವಾಗುತ್ತದೆ."[೯] ಅವರ ಅಂಗಭಂಗಿ, ಕರವಿನ್ಯಾಸ, ಧ್ವನಿಯ ಏರಿಳಿತ ಶಬ್ದಗಳ ಪೋಂಭಾವಣೆ ಒಂದರಮೇಲೊಂದರಂತೆ ತಂದು ಸೇರಿಸುತ್ತಿದ್ದ ಸಾದೃಶ್ಯಗಳು ಹಾಗೂ ಅವುಗಳಿಗೆ ಅವರು ಮಾಡುತ್ತಿದ್ದ ಅರ್ಥಪೂರ್ಣ ವ್ಯಾಖ್ಯಾನ, ಜೊತೆಗೆ ಮಾತುಮಾತಿಗೂ ಹಾರಿಸುವ ಹಾಸ್ಯ ಚಟಾಕಿಗಳು ಇವುಗಳಿಂದ ಅವರ ಪಾಠ ಯಾವತ್ತೂ ರಸಘಟ್ಟಿಯೇ. ಎಂಥ ನೀರಸವಾದ ವಿಷಯವನ್ನೂ ತೀರಾ ಸಾಮಾನ್ಯವಾದ ಸಂಗತಿಯನ್ನೂ ಅವರು ಹೇಳುತ್ತಿದ್ದ ರೀತಿಯಲ್ಲೇ ಅದಕ್ಕೊಂದು ವಿಶಿಷ್ಟತೆ ಪ್ರಾಪ್ತವಾಗಿ

ಬಿಡುತ್ತಿತ್ತು. An ordinary teacher teaches whereas the best teacher inspires ಎಂಬ ಮಾತು ಅವರಿಗೆ ಸಾರ್ಥಕವಾಗಿ ಅನ್ವಯಿಸುತ್ತದೆ. ಅವರ ಇನ್ನೊಬ್ಬ ಶಿಷ್ಯರಾದ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ನೆನಪಿಸಿಕೊಂಡಿರುವಂತೆ "ಮಹಾರಾಜಾ ಕಾಲೇಜಿನ ಜೂನಿಯರ್ ಬಿ.ಎ. ಹಾಲಿನ ಗ್ಯಾಲರಿಯಲ್ಲಿ ಆನರ್ಸ್ ಮತ್ತು ಬಿ.ಎ. ವಿದ್ಯಾರ್ಥಿಗಳ ಕಿಕ್ಕಿರಿದ ತರಗತಿಗೆ ಪ್ರೊ. ಭಟ್ಟರು ಅಂಬಿಕಾತನಯದತ್ತರ "ಗಂಗಾವತರಣ"ವನ್ನು ಕಲಿಸುತ್ತಾರೆ. ಎಂದರೆ, ಸೂಜಿಯ ಮನೆಯೂರುವಷ್ಟು ಜಾಗವಿಲ್ಲದೆ ಆ ಹಾಲು ಕಿಕ್ಕಿರಿಯುತ್ತಿದ್ದಿತು. ಅವರ ಕಾವ್ಯವಾಚನದ ವಿಶಿಷ್ಟ ಗಮಕ, ಕವಿ ಸಹಜವಾದ ಕಾವ್ಯಾರ್ಥ ನಿವೇದನೆ ಮಧ್ಯೆ ಮಲೆನಾಡಿನ ಕೋಲ್ಮಿಂಚಿನ ಮಾಲೆಯಂತೆ ಹೊಳೆದಾಡುವ ಹಾಸ್ಯ ಇಂದಿಗೂ ವಿದ್ಯಾರ್ಥಿ ಸಮುದಾಯದ ನೆನಪಿನಲ್ಲಿ ಹಸಿರಾಗಿರುವ ಐತಿಹಾಸಿಕ ಮಹತ್ವ ಪಡೆದ ಸಂಗತಿಗಳು."[10] ಅವರ ಪಾಠವೆಂದರೆ, ಒಂದು ಸುಂದರ ಕಾವ್ಯವನ್ನು ಕೇಳಿದಂಥ ಅನುಭವ ಸಂತಸ ಆಗುತ್ತಿತ್ತು. ಅವರು ಒಂದು ಗದ್ಯಭಾಗವನ್ನೋ, ಪದ್ಯವನ್ನೋ ಓದುತ್ತಿದ್ದ ರೀತಿಯೇ ಅನನುಕರಣೀಯ, ತೀ.ನಂ.ಶ್ರೀಯವರ ಭಾರತೀಯ ಕಾವ್ಯಮೀಮಾಂಸೆಯನ್ನೋ ಎ.ಆರ್.ಕೃ. ಅವರ ಸಂಸ್ಕೃತ ನಾಟಕವನ್ನೋ ಅವರು ಓದುವ ಧಾಟಿಯಿಂದಲೇ [ನಾವೇ ಓದಿಕೊಂಡಾಗ ಏನೂ ಅನ್ನಿಸದೇ ಇದ್ದುದ್ದು] ಅದೆಂಥ ಅದ್ಭುತ ಬರವಣಿಗೆ ಎನಿಸಿಬಿಡುತ್ತಿತ್ತು.

ಅವರೊಬ್ಬ ಅನನ್ಯ **ಶಿಷ್ಯವತ್ಸಲ**. ಅವರಷ್ಟು ಶಿಷ್ಯ ವಾತ್ಸಲ್ಯ ಪ್ರಪೂರ್ಣರಾದ ಗುರುಗಳ ಸಂಖ್ಯೆ ಯಾವ ಕಾಲಕ್ಕೂ ವಿರಳವೇ. ಅಲ್ಲಿಯೂ ತಾವು ಪ್ರಾಧ್ಯಾಪಕರೆಂಬ, ನಿರ್ದೇಶಕರೆಂಬ ಗತ್ತನ್ನು ಕಿಂಚಿತ್ತೂ ತೋರದೆ, ತಮ್ಮ ಬಳಿಗೆ ಹೋದವರಿಗೆ, ಅವರ ಕಷ್ಟ ಸುಖಗಳನ್ನು ವಿಚಾರಿಸಿ ನೆರವಾಗುತ್ತಿದ್ದರು. ಮಂಗಳೂರಿನಲ್ಲಿ ಸ್ನಾತಕೋತ್ತರ ಕೇಂದ್ರ ಪ್ರಾರಂಭವಾದ ಮೊದಲ ವರ್ಷ, ಇರಲು ಎಲ್ಲಿಯೂ ನೆಲೆ ಸಿಕ್ಕದ ಇಬ್ಬರು ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲೇ ತಮ್ಮ ಜೊತೆಯಲ್ಲೇ ಇರಲು ಆಶ್ರಯ ಕೊಟ್ಟಿದ್ದರು. ವಿದ್ಯಾರ್ಥಿಗಳ ಸಾಸಿವೆ ಕಾಳಿನಷ್ಟು ಗುಣವನ್ನು ಕುಂಬಳಕಾಯಿ ಮಾಡಿ, ಹೊಗಳಿ ಮೆಚ್ಚುವುದೇ, ಬೆನ್ನು ತಟ್ಟುವುದೇ ಅವರ ರೀತಿ. ಅವರ ಬರವಣಿಗೆಯನ್ನು, ಭಾಷಣವನ್ನು ಮುಕ್ತಕಂಠದಿಂದ ಮೆಚ್ಚಿ ಪ್ರೋತ್ಸಾಹಿಸುತ್ತಿದ್ದರು. ಅದರಿಂದ ವಿದ್ಯಾರ್ಥಿಗಳಿಗೆ ಉಂಟಾಗುತ್ತಿದ್ದ ಸಂತಸ ಆತ್ಮವಿಶ್ವಾಸ, ಅಸದೃಶ. ವಿದ್ಯಾರ್ಥಿಗಳಿಗೆ ಹಣಕೊಟ್ಟದ್ದಕ್ಕೆ ಲೆಕ್ಕವಿಲ್ಲ. ಒಂದು ವೇಳೆ ಯಾರಾದರೂ ವಾಪಸ್ ಕೊಡಲು ಹೋದರೆ ಎಂದೂ ತೆಗೆದುಕೊಳ್ಳುತ್ತಿರಲಿಲ್ಲ. ಬದಲಿಗೆ ನೀವು ಕೆಲಸಕ್ಕೆ ಸೇರಿ ಸಂಪಾದಿಸಲು ಪ್ರಾರಂಭಿಸಿದ ಮೇಲೆ ಯಾರಾದರೂ ಕಷ್ಟದಲ್ಲಿರುವ ವಿದ್ಯಾರ್ಥಿಗೆ ಕೊಟ್ಟು ಬಿಡಿ ಎನ್ನುತ್ತಿದ್ದರು. ಇನ್ನು ತಮ್ಮ ಸ್ವಂತ ಪುಸ್ತಕ ಭಂಡಾರದಿಂದ ಪುಸ್ತಕಗಳನ್ನು ಕೊಟ್ಟು ಕಳೆದುಕೊಂಡದ್ದಕ್ಕೆ ಲೆಕ್ಕವಿಲ್ಲ. ತಾವೇ ಸ್ಥಾಪಿಸಿದ ಸರಸ ಸಾಹಿತ್ಯ ಪ್ರಕಾಶನದ ಮೂಲಕ ತಮ್ಮ ವಿದ್ಯಾರ್ಥಿಗಳ ಬರಹಗಳನ್ನು ಪ್ರೋತ್ಸಾಹಿಸಿದ ಶ್ರೇಯಸ್ಸು ಭಟ್ಟರಿಗೆ ಸೇರಬೇಕು. ಡಾ.ಸಾ.ಶಿ.ಮರುಳಯ್ಯ ಅವರ, ಡಾ. ಚಿದಾನಂದಮೂರ್ತಿಗಳು, ಡಾ.ಸುಜನಾ ಅವರ ಪುಸ್ತಕಗಳನ್ನು ಪ್ರಕಟಿಸಿ ಅವರ ಸಾಹಿತ್ಯಕ ಕೃಷಿಗೆ ನೀರೆರೆದರು. ಇದರ ಜೊತೆಗೆ ಕನ್ನಡದ ಎಲ್ಲ ಹಿರಿಯ ಬರಹಗಾರರಂತೆ, ಕಿರಿಯರ, ಮಿತ್ರರ ಕೃತಿಗಳಿಗೆ, ಅದರಲ್ಲಿನ ಗುಣಗಳನ್ನು ಹೆಕ್ಕಿ ತೋರಿಸಿ ಪ್ರೋತ್ಸಾಹದಾಯಕವಾದ ಮುನ್ನುಡಿಗಳನ್ನು ಬರೆದು ಬೆನ್ನುತಟ್ಟಿ ಹರಸಿದ್ದಾರೆ. ಅಂಥ ಮುನ್ನುಡಿಗಳದೇ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ. ಅವರ ಶಿಷ್ಯರಾದ ಡಾ.ಎಚ್. ಶಾಂತಾರಾಂ ನೆನಪಿಸಿಕೊಂಡಿರುವಂತೆ – "ಇತರರ ಪ್ರತಿಭೆಯನ್ನು ಬೆಳಕಿಗೆ ತರುವಲ್ಲಿ ಜಿ.ಪಿ. ರಾಜರತ್ನಂ ಅವರ ಅನಂತರದ ಸ್ಥಾನ ಎಸ್.ವಿ.ಪಿ. ಅವರದು"[11]

ಅಧಿಕಾರ, ಬಡ್ತಿ ಇತ್ಯಾದಿಗಳ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳದೆ ಸದ್ದಿಲ್ಲದೆ ತಮ್ಮ

ಪಾಡಿಗೆ ತಾವು ಸಾಹಿತ್ಯ ರಚನೆ ಮಾಡುತ್ತ ಬಂದವರು. "ಯದೃಚ್ಛಾಲಾಭ ಸಂತುಷ್ಟೋ" ಎಂಬ ಗೀತೆಯ ಮಾತಿಗೆ ಹೇಳಿ ಮಾಡಿಸಿದಂತಿದ್ದರು. ತಮಗಿಂತ ಎಷ್ಟೋ ವರ್ಷ ಕಿರಿಯರಾದವರು ಅವರನ್ನು ದಾಟಿಕೊಂಡು ಮುನ್ನಡೆದ ಕಾರಣ, ವೃತ್ತಿಜೀವನದಲ್ಲಿ ಸಾಕಷ್ಟು ಕಹಿ ಉಂಡಿದ್ದರೂ ಅದನ್ನು ಮನಸ್ಸಿಗೆ ತಂದುಕೊಳ್ಳದೆ– "ನಾನೇ ಅದೃಷ್ಟವಂತ. ಪ್ರಾಧ್ಯಾಪಕನಾದೆ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕನಾದೆ. ಆದರೆ ನನಗಿಂತ ಹಿಂದಿನ ಎಷ್ಟೋ ಜನ ಪ್ರಾಧ್ಯಾಪಕರುಗಳಿಗೆ ಆ ಅದೃಷ್ಟವಿರಲಿಲ್ಲ" ಎನ್ನುತ್ತಿದ್ದರು.

ಭಟ್ಟರದು ತೆರೆದ ಪುಸ್ತಕದಂಥ ಬದುಕು. [ಹಾಗೆಂದು ಯಾರಾದರೂ ಹೇಳಿದರೆ, ಭಟ್ಟರು ಕೂಡಲೇ– "ಹೌದು; ಆದರೆ ಅದರಲ್ಲಿ ನಾನು ಕೆಲವು ಹಾಳೆ ಹರಿದಿಟ್ಟುಕೊಂಡು ಬಿಟ್ಟದ್ದೇನೆ–" ಎಂದು ಹೇಳುವ ಪ್ರಾಂಜಲತೆ ತೋರುತ್ತಿದ್ದರು.] ಯಾವುದನ್ನೂ ಅವರು ಮುಚ್ಚಿಟ್ಟುಕೊಳ್ಳುವಂಥವರಲ್ಲ. ಸಂಸ್ಕೃತದ ಹೆಸರಾಂತ ಕವಿಗಳಾದ ಕಾಳಿದಾಸ, ಭಾಸ, ಭವಭೂತಿ, ಅಮರು, ಭರ್ತೃಹರಿ ಮೊದಲಾದವರ ಉದ್ಘಕೃತಿಗಳನ್ನು ಕನ್ನಡಕ್ಕೆ ತಂದವರಾದರೂ ತಮಗೆ ಗೊತ್ತಿರುವ ಸಂಸ್ಕೃತ ತೀರಾ ಅಲ್ಪವೆಂದೇ ಅವರು ಹೇಳಿಕೊಳ್ಳುತ್ತಿದ್ದರು. ಒಮ್ಮೆ ಭಟ್ಟರು ಶೃಂಗೇರಿ ಸ್ವಾಮಿಗಳನ್ನು ತಾವು ಭೇಟಿಯಾದ ಪ್ರಸಂಗವನ್ನು ವಿವರಿಸಿದರು. ಸ್ವಾಮಿಗಳು ಭಟ್ಟರನ್ನು ಕರೆಸಿಕೊಂಡು ಸನ್ಮಾನಮಾಡಿ ಶಾಲು ಹೊದಿಸಿದರಂತೆ. ಸ್ವಾಮಿಗಳು ಇವರನ್ನು ಸಂಸ್ಕೃತದಲ್ಲಿ ಮಾತನಾಡಿಸಲು ತೊಡಗಿದರಂತೆ. ಭಟ್ಟರು ಹೇಳಿದ್ದು – "ನನಗೆಲ್ಲಪ್ಪ ಗೊತ್ತು ಅಷ್ಟೊಂದು ಸಂಸ್ಕೃತ. ತಾವು ಸಂಸ್ಕೃದಲ್ಲಿ ಕೇಳಿ. ನಾನು ಕನ್ನಡದಲ್ಲಿ ಉತ್ತರ ಕೊಡುತ್ತೇನೆ–ಎಂದು ಹೇಳಿದೆ" ಎಂದರು. ಇದು ಭಟ್ಟರ ರೀತಿ. ತಮ್ಮ ಅಲ್ಪ ಸ್ವಲ್ಪ ಜ್ಞಾನವನ್ನೇ ಬಂಡವಾಳಮಾಡಿಕೊಂಡು ಬೀಗುವ ಜನರೆಲ್ಲಿ, ಎಲ್ಲ ಇದ್ದೂ ತಮಗೇನೂ ಗೊತ್ತಿಲ್ಲವೆಂದು ಹೇಳುವ ಭಟ್ಟರೆಲ್ಲಿ?[12]

ಅವರ ಆದರ್ಶವಾದರೋ 'ಗಗನ ಚುಕ್ಕಿ'ಯದು–

ಬೆಳಗಲೆಂದೆ ಹುಟ್ಟಿದಂದು
ಬೆಳಗದಿರುವುದೆ?
ಕೋಟಿ ಚುಕ್ಕಿಗಳಲ್ಲಿ ತನ್ನ–
ದೊಂದು ಬೆಳಕಿರೆ
ಗಗನಚುಕ್ಕಿ ತಾನೆ ಧನ್ಯ
ಳೆಂದು ಬೆಳಗದೆ !

ಲೋಕದ ಉಪೇಕ್ಷೆಯಾಗಲಿ ಅಪೇಕ್ಷೆಯಾಗಲಿ ಅದಕ್ಕೆ ಅವಾಂಛಿತ.

ಎಸ್.ವಿ.ಪಿ. ಕೃತಿಗಳ ಅಧ್ಯಯನ

ಸ್ವತಂತ್ರ ಕೃತಿಗಳು: ಕಾವ್ಯ

1. ಭಾವಗೀತೆಗಳು

ಹೊಸಗನ್ನಡ ಸಾಹಿತ್ಯವನ್ನು ಬಹುವಿಧವಾಗಿ ಶ್ರೀಮಂತಗೊಳಿಸಿದ ಪ್ರಮುಖ ಹಿರಿಯ ಸಾಹಿತಿಗಳಲ್ಲಿ ಪ್ರೊ. ಪರಮೇಶ್ವರ ಭಟ್ಟರು ಕೂಡಾ ಒಬ್ಬರು. ಮುಖ್ಯವಾಗಿ ಅನುವಾದಕರೆಂದೇ ಹೆಸರಾದರೂ ವೈವಿಧ್ಯಪೂರ್ಣವಾದ ಸ್ವತಂತ್ರ ಕೃತಿಗಳನ್ನು ಕೂಡಾ ವಿಪುಲ ಪ್ರಮಾಣದಲ್ಲಿ ರಚಿಸಿದವರು. ಭಾವಗೀತೆಗಳು, ಕಥನ ಕವನಗಳು, ಮುಕ್ತಕಗಳು, ವಚನಗಳು, ವಿಮರ್ಶೆ ಹೀಗೆ ಅವರ ಸ್ವತಂತ್ರ ಕೃತಿಗಳೇ ಸುಮಾರು ಇಪ್ಪತ್ತೈದರಷ್ಟಿವೆ.

ಸಾಮಾನ್ಯವಾಗಿ ಎಲ್ಲ ಬರಹಗಾರರೂ ಮಾಡುವಂತೆ ಭಟ್ಟರು ಕೂಡ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದ್ದೇ ಕಾವ್ಯ ರಚನೆಯಿಂದ. ಭಟ್ಟರು ಕಾವ್ಯ ರಚನೆಗೆ ತೊಡಗಿದ್ದು ನವೋದಯದ ಉತ್ಕರ್ಷದ ಕಾಲದಲ್ಲಿ. ಕುವೆಂಪು, ಬೇಂದ್ರೆ, ಪು.ತಿ.ನ, ವಿ.ಸೀ ಮೊದಲಾದ ನವೋದಯದ ಪ್ರಮುಖ ಕವಿಗಳೆಲ್ಲರೂ ಪ್ರಕೃತಿ ಗೀತೆಗಳನ್ನು ವಿಪುಲವಾಗಿ ರಚಿಸಿದವರೇ. ಭಟ್ಟರ ಕಾವ್ಯ ಪ್ರಪಂಚದಲ್ಲಿ ಪ್ರಕೃತಿ ವರ್ಣನೆಗೆ ಮೀಸಲಾದ ಕವನಗಳು ಅತ್ಯಧಿಕ ಸ್ಥಾನವನ್ನು ಪಡೆದಿದ್ದರೆ, ವ್ಯಕ್ತಿ ಚಿತ್ರಗಳನ್ನು ಕುರಿತಾದ ಕವಿತೆಗಳು ಅನಂತರದ ಸ್ಥಾನ ಪಡೆದಿವೆ. ರಾಗಿಣಿ, ಗಗನ ಚುಕ್ಕಿ, ಇಂದ್ರ ಗೋಪ, ಕವನ ಸಂಕಲನಗಳಲ್ಲಿನ ಬಹುಪಾಲು ಕವನಗಳು ಪ್ರಕೃತಿಯ ಸುಂದರ ಚಿತ್ರಗಳನ್ನೊಳಗೊಂಡ ಕವನಗಳಾಗಿವೆ. ಮಲೆನಾಡಿನ ನಿಸರ್ಗದ ಭಾಗವೇ ಆಗಿರುವ ನದಿ, ಮೋಡ, ಮಳೆ, ಬೆಟ್ಟ, ಹೂವು, ಹಕ್ಕಿ, ಕಡಲು ಮೊದಲಾದುವುಗಳ ನಿತಾಂತ ಸುಂದರವಾದ ವರ್ಣನೆ ಈ ಎಲ್ಲ ಕವನ ಸಂಕಲನಗಳ ಕವಿತೆಗಳ ವಸ್ತು.

ರಾಷ್ಟ್ರಕವಿ ಕುವೆಂಪು ಅವರ ಕವನ ರೂಪದ ಮುನ್ನುಡಿಯನ್ನು ಹೊತ್ತು ಹೊರ ಬಂದ ಇಪ್ಪತ್ತೇಳು ಭಾವಗೀತೆಗಳ ಪ್ರಥಮ ಸಂಕಲನ 'ರಾಗಿಣಿ'. ಭಟ್ಟರು ಭಾವಗೀತೆಗಳನ್ನು ರಚಿಸುವ ಹೊತ್ತಿಗಾಗಲೇ ಈ ಹಿಂದೆ ತಿಳಿಸಿದಂತೆ, ಹೊಸಗನ್ನಡದಲ್ಲಿ ಭಾವಗೀತೆಯ ಒಂದು ರಾಜಮಾರ್ಗ ಸುಸ್ಥಿರವಾಗಿ ನೆಲೆಗೊಂಡು ಸಮೃದ್ಧವಾಗಿ ಭಾವಗೀತೆಗಳು ರಚಿತವಾಗಿದ್ದುವು. ಭಟ್ಟರು ಅದೇ ರಾಜಮಾರ್ಗದಲ್ಲಿ ಹೆಜ್ಜೆಯಿಟ್ಟು ನಡೆದಿರುವುದು ಅವರ ಈ ಮೊದಲ ಕವನ ಸಂಕಲನದಲ್ಲಿ ನಿಚ್ಚಳವಾಗಿ ಗೋಚರಿಸುತ್ತದೆ. 'ರಾಗಿಣಿ'ಯಲ್ಲಿ ಪ್ರಧಾನವಾಗಿ ಕೇಳಿ ಬರುವುದು ಗಂಡು ಹೆಣ್ಣಿನ ಉತ್ಕಟ ಒಲವಿನ, ತಾರುಣ್ಯದ ವಿವಿಧ ಭಾವ ವಿಲಾಸಗಳ ಇನಿದನಿ. ರಮ್ಯ ಪ್ರಕೃತಿಯ ಸುಂದರ ವರ್ಣನೆ ಇಲ್ಲಿಯ ಕವನಗಳಲ್ಲಿ

ಕಂಡು ಬರುತ್ತದೆಯಾದರೂ ಅದು ಗಂಡು ಹೆಣ್ಣಿನ ಒಲವಿನ ಭಾವನೆಗೆ ಪ್ರೇರಕವಾಗಿಯೋ ಪೋಷಕವಾಗಿಯೋ ಬರುವುದೇ ಹೆಚ್ಚು. "ಮಲೆನಾಡಿನ ಮಳೆಯು ಮೋಡಿ ಪ್ರಣಯೀಜನಮನದ ಜೋಡಿಯಾಗುತ್ತದೆ. ಮೋಡ ಬಿಸಿಲು ಮುನಿದ ಇನಿಯಳ ನೆನಪು ತರುತ್ತದೆ. ಮಳೆಬಿಲ್ಲು ಮನದನ್ನೆಯ ಪವಳದುಟಿಯ ಚೆಂಗೆನ್ನೆಯ ಬಣ್ಣವಾಗಿ ಕಾಣುತ್ತದೆ".[13] ಮಿಂಚು, ಗುಡುಗು ಪ್ರಣಯ ಕುಪಿತೆಯ ಆರ್ಭಟವನ್ನೋ, ಮಾತಿನ ವ್ಯಂಗ್ಯವನ್ನೋ ನೆನಪಿಸುತ್ತದೆ. ಉದಾಹರಣೆಗೆ:

ಬಿರುಗಾಳಿಯು ಬೀಸುತ್ತಿತ್ತು
ಆಲಿಕಲ್ಲು ಸೂಸುತ್ತಿತ್ತು
ಸ್ಮೃತಿಗೆ ಬಂದುದಳುವ ಮುಂದು
ಬಿಸುಸುಯ್ಲಿನ ಅಳಲದೊಂದು
ನೊಂದು ನಲ್ಲೆಯಿತ್ತುದು. **['ಮಳೆಯ ಮೋಡಿ']**

ಸ್ತ್ರೀ ಸೌಂದರ್ಯ ಮತ್ತು ಪ್ರಕೃತಿ ಸೌಂದರ್ಯಗಳನ್ನು ಪರಸ್ಪರ ತುಲನೆ ಮಾಡುತ್ತ ಸಾಗುವ 'ಕಲ್ಪನಾ ವಿಲಾಸಿ' ಕವನದಲ್ಲಿ ಸಂಧ್ಯಾದೇವಿಯ ಚೆಲುವಿನ ಬಣ್ಣನೆಯಿದೆ. ಡಾ.ಎಚ್.ಜೆ. ಲಕ್ಕಪ್ಪಗೌಡರು ಹೇಳುವಂತೆ 'ಅದೊಂದು ರೂಪಕಗಳ ಮಾಲೆಯೇ ಆಗಿದೆ'[14]. ಪ್ರಿಯನಿಗಾಗಿ ಕಾದು ಕುಳಿತ ಪ್ರೇಯಸಿಯ ಒಂದು ಚಿತ್ರ ಈ ಕವನದಲ್ಲಿ ಮೂಡಿರುವ ಬಗೆ ಹೀಗಿದೆ:

ಹೂಜಿಯೊಳಗಿರಿಸಿರುವ ರೋಜ ಬಾಡುತ ಬಂತು
ಬೆಳ್ಳಿ ಬಟ್ಟಲ ಹಾಲು ಕೆನೆಗಟ್ಟಿತು.

ಸುಂದರಿಯೊಬ್ಬಳು ಹಾಡಲೆಂದು ಕುಳಿತದ್ದನ್ನು ಭಾವುಕ ಕವಿ ವರ್ಣಿಸುವುದು ಈ ಸುಂದರ ಸಾಲುಗಳಲ್ಲಿ:

ಮೋಡಗಳ ಮರೆಯಿಂದಲಿಣುಕಿದನು ಚಂದಿರನು
ಹಾಡುವವಳಿವಳಾರೊ ನೋಡಲೆಂದು
ಹತ್ತು ದಿಕ್ಕಿನ ತಾರೆ ಬಂದಲ್ಲಿ ಕಿಟಕಿಯಲಿ
ಮೂಡಿದವು ಗಾನವನು ಕೇಳಲೆಂದು **[ರಾಗಿಣಿ – ಪು.39]**

ಸುಂದರ ಪ್ರಕೃತಿಯ ಸಾಕ್ಷಿಯಲ್ಲಿ ಪ್ರೇಮಿಗಳ ಮಿಲನವನ್ನು ವರ್ಣಿಸುವ 'ಭಾವಗೀತೆ' ಈ ಸಂಕಲನದ ಒಂದು ಸುಂದರ ಕವಿತೆ. ಈ ಕವನದಲ್ಲೂ ಒಲಿದ ಹೃದಯಗಳ ಭಾವನೆಗಳು ಸುಕುಮಾರವಾದ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ. ನೂತನ ಉಪಮೆ, ರೂಪಕಗಳು. ಇಲ್ಲಿ ಕಾಣಿಸಿಕೊಂಡಿವೆ. ತುಂಬ ಸಲೀಲವಾಗಿ ಸಾಗುವ ಲಲಿತ ಪದವಿನ್ಯಾಸ ಇಲ್ಲಿಯ ಕವನಗಳ ರೀತಿ:

ಪ್ರೇಮಿನಿಯ ಬರವಿಗಾಗಿ ನಿರೀಕ್ಷಣೆಯ ಮೊನೆಯ ಮೇಲೆ ಕಾದು ಕುಳಿತಿರುವ ವಿರಹ ಕಾತರನಾದ ತರುಣನ ಉತ್ಕಟ ಪ್ರೇಮ ಭಾವಗಳ ಅಭಿವ್ಯಕ್ತಿಯೇ ಇಲ್ಲಿನ ಬಹುಪಾಲು ಕವನಗಳಲ್ಲಿ ಕಂಡು ಬರುವುದು. 'ನಿನಗಾಗಿ' 'ಕಣಸಿನ ಕಡಲು', 'ಕಲ್ಪನಾ ವಿಲಾಸಿ', 'ಗೆ' ಹಾಗೂ 'ಚೆಂಗುಲಾಬಿ' ಒಲಿದ ತರುಣ ತರುಣಿಯರು ತಮ್ಮನ್ನು ಪ್ರಕೃತಿಯ ವಿವಿಧ ಜೋಡಿಗಳಾಗಿ ಕಂಡುಕೊಂಡು ನಲಿವ "ನಾವುನಲಿದ", ನಲ್ಲೆಯನ್ನು ಸಂಧಿಸಲು ಹೊರಟ ತನ್ನನ್ನು ಮಲ್ಲಿಗೆ, ಚಂಪಕ, ಕೋಗಿಲೆ ಮೊದಲಾದುವು ಮಾತಾಡಿಸಿದಂತಿರುವ 'ಒಂದು ಹಾಡು' – ಇವುಗಳು ಸುಕುಮಾರವಾದ ಕಲ್ಪನೆ ಹಾಗೂ ಕೋಮಲ ಪದಗಳಿಂದ ಕೂಡಿದ್ದು ಸಲೀಲವಾಗಿ ಸಾಗುವ ಸಹಜ ಕವಿತೆಗಳಾಗಿ ನಮ್ಮ ಮನಸೆಳೆಯುತ್ತವೆ. 'ಚೆಂಗುಲಾಬಿ' ಕವನದ

ನೆಲದ ಸಾರಸತ್ವ ರಸವೆ
ಹೂವೊಳರಳಿನಿಂದುದೆ
ಒಲುಮೆವೆರೆದ ಚೆಲುವೆ ಬಿರಿದ
ಕೆಂಪು ಕುಸುಮವಾದುದೆ

ಎಂಬ ಸಾಲುಗಳಲ್ಲಿ ಕಂಡು ಬರುವಂಥ ಹಿತವಾದ ಅಂತ್ಯಪ್ರಾಸ, ಅನುಪ್ರಾಸಗಳಿಂದಾಗಿ ಇವು ಇನಿದೆನಿಸುತ್ತವೆ.

ಕವನ ಸಂಕಲನದ ಶೀರ್ಷಿಕೆಯಾಗಿರುವ 'ರಾಗಿಣಿ' ಒಂದು ಶ್ರೇಷ್ಠ ಕವನ. ಇದು ಇನಿಯನ ಒಲವಿಗಾಗಿ ಕಾದು ಕುಳಿತ ವಿರಹಿಣಿಯೊಬ್ಬಳು 'ಅಭಿಸಾರಿಕೆಯ' ರೂಪದಲ್ಲಿ ಚಿತ್ರಿತಗೊಂಡಿರುವ ಸುಂದರ ಕವನವಾಗಿದೆ. ಅವಳ ನಿರೀಕ್ಷೆ ಯಾವ ರೀತಿಯದು ಎಂಬುದನ್ನು ಈ ಮಾತುಗಳಲ್ಲಿ ಚಿತ್ರಿಸಲಾಗಿದೆ.

ನಲ್ಲೆ ಜಡೆಯಲಿ ಮುಡಿದ ಮೊಲ್ಲೆ ಮಲ್ಲಿಗೆ ಗಂಪು
ದೂರಗಾಳಿಯಲೆಲ್ಲೊ ಕರಗಿ ಹೋಯ್ತು
ಅಲ್ಲೆ ಧೂಪಾರತಿಯ ಸುರುಳಿ ಹೊಗೆ ಸುಳಿಸುಳಿದು
ಬಾರದಿನಿಯನನರಸಿ ಮಾಯವಾಯ್ತು [ರಾಗಿಣಿ]

ರಾಧಾಕೃಷ್ಣರ ಪ್ರೀತಿ ಅನಾದಿಕಾಲದಿಂದ ಭಾರತೀಯ ಪ್ರೇಮ ಕಾವ್ಯದ ಉತ್ಕಟ ಪ್ರೇಮದ ಆರ್ಕಿಟೈಪ್ (archetype). ಅದನ್ನು ವರ್ಣಿಸದಿರುವ ಕವಿ ಇಲ್ಲ. 'ರಾಗಿಣಿ'ಯ 'ರಾಧಾಕೃಷ್ಣ' ಒಂದು ಸುಂದರ ಕವಿತೆ. 'ತಿಂಗಳ' ಪೂಜೆಗೆ ಬರಲಿಲ್ಲವೆಂಬ ರಾಧೆಯ 'ಮೌನ'ದ ಮುನಿಸು ಕೃಷ್ಣನ ಉತ್ಕಟ ಪ್ರೇಮದೆದುರು ಹೆಚ್ಚು ಹೊತ್ತು ನಿಲ್ಲಲಿಲ್ಲ. ಕೃಷ್ಣನು ರಾಧೆಯನ್ನು ಗೆದ್ದನು; ರಾಧೆಯ ಪ್ರೇಮವನ್ನು ಗೆದ್ದನು.

ರಾಧಾಕೃಷ್ಣರ ಪ್ರೇಮೋತ್ಸವದಿ
ಬ್ರಹ್ಮಾನಂದದ ದಿವ್ಯನದಿ
ಇದು ಎಲ್ಲ ಕಾಲದ ಪ್ರೇಮಗಾಥೆ.

ಕವನ ಸಂಕಲನ ಪ್ರಕಟಗೊಂಡು ಏಳು ದಶಕಗಳೇ ಕಳೆದುಹೋಗಿದ್ದರೂ ಇಂದಿಗೂ ತನ್ನ ಅರ್ಥವಂತಿಕೆ ಮತ್ತು ಗೇಯ ಗುಣದಿಂದಾಗಿ ಜನಪ್ರಿಯತೆಯನ್ನು ಉಳಿಸಿಕೊಂಡಿರುವ 'ದೀಪ ಹಚ್ಚಾ' ಎಂಬ ಹಾಡಿನಲ್ಲಿ ಪ್ರೇಮಕಾಂಕ್ಷೆ ಮತ್ತು ಪ್ರೇಮಭಿಕ್ಷೆಗಳ ಜೊತೆಜೊತೆಗೇ ಜ್ಞಾನಸ್ವರೂಪನು ಬೆಳಗುತ್ತಿರಬೇಕೆಂಬ ಪ್ರಾರ್ಥನೆ ಇದೆ. ಇದರಲ್ಲಿ 'ಪ್ರೇಮಕಾಂಕ್ಷೆ'ಯೊಂದಿಗೆ ಜ್ಞಾನಭಿಕ್ಷೆಯೂ ಸಮನ್ವಯವಾಗಿ ಕವನ ಎರಡು ಆಯಾಮಗಳಲ್ಲಿ ಕೆಲಸ ಮಾಡುತ್ತದೆ. "ಮೋಹದ ಮಾತಿಗೆ ನೀ ಸುಟ್ಟು ತೋರುವ ದೀಪ."

ಸುಜ್ಞಾನ ಪ್ರದೀಪ
ದೀಪ ಹಚ್ಚಾ [ದೀಪ ಹಚ್ಚಾ]

ಮುನ್ನುಡಿ ಬರೆದು ಹರಸಿದ ಕುವೆಂಪು ಹೇಳಿರುವಂತೆ 'ರಾಗಿಣಿ'ಯಲ್ಲಿ ಆಡುತ್ತಿರುವುದು 'ಬಾಳುವೆದೆಯುಸಿರು'.

ಭಟ್ಟರ ಕಾವ್ಯ ಜೀವನದಲ್ಲೊಂದು ಮೈಲಿಗಲ್ಲೆನ್ನಬಹುದಾದ ಎರಡನೆಯ ಕವನ ಸಂಕಲನ 'ಗಗನಚುಕ್ಕಿ'ಯ ಬಹುಪಾಲು ಕವನಗಳು ಪ್ರಕೃತಿಗೀತೆಗಳೇ ಆಗಿದ್ದು, ಕವಿಯ ಅದ್ಭುತರಮ್ಯ ಕಲ್ಪನೆಗಳಿಗೆ ಅವು ಉತ್ತಮ ನಿದರ್ಶನಗಳಾಗಿವೆ. 'ರಂಜದ ಹೂ', 'ಸುರಹೊನ್ನೆ', 'ಮುತ್ತುಗದ ಮರ' ಮುಂತಾದ ಕವನಗಳಲ್ಲಿ ಕವಿಯ ಪುಷ್ಪಪ್ರೀತಿ ಸುಂದರವಾದ ನುಡಿ

ಚಿತ್ರಗಳ ಆಕಾರವನ್ನು ತಾಳಿದ್ದರೆ, 'ಬೈಗು ಭೈರವಿ', 'ದಿನಾವಸಾನ' ಕವನಗಳು ಸಂಜೆಯ ವಿನೂತನ ವರ್ಣನೆಗಳಾಗಿವೆ.

'ಚೈತ್ರದ ಹರಿಕಾರನಾದ', 'ಮುತ್ತುಗದ ಮರ'ವನ್ನು ಕುರಿತ ಈ 'ಸಾನೆಟ್'ನಲ್ಲಿ

ಹಸಿದ ದಾವಾನಲಂ ಮರಮರಕೆ ಹಾರಾಡಿ
ತನ್ನ ಕೆನ್ನಾಲಿಗೆಯ ದೆಸೆದೆಸೆಗೆ ನೀಳ್ದಂತೆ
ವನಕಾಳಿಯೋಲಗಕೆ ಕೆಂಜೊಡರ್ ಮಾಲೆಯಂ
ಪಿಡಿದೆತ್ತಿ ಪೊತ್ತಿಸಿದ ಕೆಂಪಿನಾರತಿಯವೊಲ್
ಕಣ್ಣೆರಿವ ರಕ್ತಿಮ ವಿಭೂತಿಯಾಧಿಕ್ಯದಲಿ
ರುದ್ರರಮಣೀಯಮೆನೆ ಹೂತಿಹುದು ಮುತ್ತುಗಂ

ಎಂಬಂಥ ವಿನೂತನವಾದ ಉಪಮೆಗಳು ಮಾಲೆಮಾಲೆಯಾಗಿ ಬರುತ್ತವೆ. ಕಾಡಿನ ಹೂವಾದ 'ರಂಜ' ಹೆಸರಾಂತ ಹೂಗಳಿಗೇನೂ ಕಡಿಮೆಯಿಲ್ಲ. ಎಲ್ಲೆಡೆ ಅದರದೇ ಸಾಮ್ರಾಜ್ಯ ಎಂದು ಅದರ ಬಗ್ಗೆ ಕವಿಗೆ ಅಭಿಮಾನ.

ಹಳ್ಳದಲಿ ಹೊಲದಲ್ಲಿ ಕಾಡು ಕಣಿವೆಗಳಲ್ಲಿ
ಮನೆ ಮೇಲೆ ಮನೆಮುಂದೆ ಎಲ್ಲೆಡೆಗಳಲ್ಲಿ
ರಂಜದರಳನು ಸುರಿದ ರಂಜದೆಸಳಿನ ಮರವೆ
ರಂಜಿಸುವುದೆಮ್ಮೂರ ಮಲೆನಾಡಿನಲ್ಲಿ

ಕವಿಯ ವರ್ಣನಾಶಕ್ತಿ ಮತ್ತು ಸೂಕ್ಷ್ಮ ನಿರೀಕ್ಷಣಾಶಕ್ತಿಗಳು ಉನ್ನತ ಮಟ್ಟಕ್ಕೇರಿರುವುದರ ಕುರುಹಾಗಿ

ಮುಗಿಲಿನ ಮರಿಗಳ ಮೊಲೆಯೂಡಿ ಸಲಹುವ
ಮಹತಾಯಿ ಸಹ್ಯಾದ್ರಿ ಹರಕೆಯಿರೆ ಹಾಗೂ
ಬೋರಲಿಟ್ಟಿಹ ಬಾನ ಬಟ್ಟಲಿನ ಕೆಳಗೆ ಬುವಿ
ಅವಿತುಕೊಂಡಿತು ಮುದುರಿ ಬೆದರಿದನು ನೋಡಿ ಕವಿ

– ಎಂಬಂಥ ನೂತನ ಕಲ್ಪನೆಗಳು ಅಲ್ಲಲ್ಲಿ ಕಂಡು ಬರುತ್ತವೆ.

ಹೇಮಂತದ ವರ್ಣನೆಯಾದರೂ ಪಾರಂಪರಿಕ ರೀತಿಗಿಂತ ಭಿನ್ನವಾಗಿದೆ.

ಮಂಜು ಮುಸುಕನು ಹೊದ್ದು ಹೊಲಗದ್ದೆಗಳು ಮಲಗಿ
ಸುಯ್ಯಲರ ಸೂಸುತಿದೆ ನಿನ್ನಹಳಿದು
ಮೆಲ್ಲು ಮೆಲ್ಲನೆ ಸರಿದು ಮೊಗದ ಜವನಿಕೆಯೆಳೆದು
ತುಂಗೆ ತೊರೆ ಹರಿಯುತಿದೆ ನಡುಗೆ ಮೈನೆನೆದು

['ಹೇಮಂತ'– ಗಗನಚುಕ್ಕಿ – ಪು. 16]

ಸಾಯಂಕಾಲದ ವರ್ಣ ವೈಭವವನ್ನು ನಮ್ಮ ಎಲ್ಲ ಪ್ರಾಚೀನ ಮತ್ತು ನವೀನ ಕವಿಗಳಿಗಿಂತ ತೀರ ವಿಭಿನ್ನವಾದ ರೀತಿಯಲ್ಲಿ "ಬೈಗು ಭೈರವಿ"ಯಲ್ಲಿ ಎಸ್.ವಿ.ಪಿ. ವರ್ಣಿಸುತ್ತಾರೆ. ಪ್ರಾರಂಭದ ಸಾಲೆ ಸಾಂಪ್ರದಾಯಿಕ ವರ್ಣನೆಗಿಂತ ಬೇರೆಯೇ ಆದ, ವಿಶಿಷ್ಟ ರೀತಿಯದಾಗಿದೆ. ಯಜ್ಞ ಕ್ರಿಯೆಯ ರೂಪಕದಲ್ಲಿ ಅದನ್ನು ಹಿಡಿದಿರಿಸಿದ್ದಾರೆ.

ಅಸ್ತಗಿರಿಯೊಳಿನನ ಬೇಳ್ವ
ಮಹಾಯಜ್ಞನಡೆದಿದೆ
....
....

ಅಗ್ನಿಕುಂಡದಂತೆ ಕ್ಷಿತಿಜ
ಭುಗಿಭುಗಿಲೆನೆ ಉರಿದಿದೆ
ನಗ್ನ ವಿಸ್ಫುಲಿಂಗ ತೇಜ
ನಿಗಿನಿಗಿ ಮೆರೆದಿದೆ.

ಅದೇ ದಿನಾವಸಾನದಲ್ಲಿ ಅದು ಈ ಕವಿಗೆ ಇನ್ನೊಂದೇ ಬಗೆಯಾಗಿ ಕಂಡಿದೆ. ಸೂರ್ಯಾಸ್ತವನ್ನು ಸಾವಿನೊಂದಿಗೆ ಸಮೀಕರಿಸುವ ಬಗೆಬಗೆಯ ಸಾದೃಶ್ಯಗಳನ್ನು ನೀಡುತ್ತ ಕಡೆಯಲ್ಲಿ ಕೊಡುವ ಈ ಚಿತ್ರ ಸೂರ್ಯಾಸ್ತಕ್ಕೊಡ್ಡಿದ ವಿನೂತನ ಪ್ರತಿಮೆಯಾಗಿದೆ.

ನೀಲಿಮ ನಭೋಂಗಣದ ಮಂಗಳದ ಕುರುಹಂತೆ
ಬೋರಲಿಟ್ಟಿಹ ಬಾನ ಬಟ್ಟಲಿನ ಕೆಳಗೆ, ಬುವಿ
ಅವಿತು ಕೊಂಡಿತು ಮುದುರಿ ಬೆದರಿದನು ನೋಡಿ ಕವಿ

[ದಿನಾವಸಾನ: ಗಗನಚುಕ್ಕಿ ಪು. 38]

ದೀರ್ಘ ಕವನಗಳಾದ 'ಕಾಜಾಣ', 'ಶರದೃತುವಿನ ಆಗಮನ', 'ಭಟ್ಕಳ' ಕವನಗಳು ಒಂದೊಂದೂ ಗುಣವಿಶೇಷದಿಂದ ನಮ್ಮ ಮನಸೆಳೆಯುವ ಕವನಗಳು. ಹಕ್ಕಿಯ ಹಾರಾಟದ ಏರಿಳಿತಗಳನ್ನು ಭಾವುಕವಾಗಿ ವರ್ಣಿಸುವ ಕಾಜಾಣ, ಶ್ರೀಯವರ 'ಬಾನಾಡಿ'ಗೆ ಸರಿದೊರೆಯಾಗಿದೆ. ನರ್ತನದ ಲಯಕ್ಕೆ ಹೊಂದಿಕೊಂಡಂತೆ ಸಾಗುವ ಈ ಕವನದ್ದು ಅತ್ಯಂತ ಉತ್ಸಾಹ ಪೂರ್ಣವಾದ ಲಯ. ಎಲ್ಲ ಹಕ್ಕಿಗಳ ದನಿಯನ್ನು ಮೇಳೈಸಿಕೊಂಡು ಎಲ್ಲ ತರುಮರಗಳಲ್ಲಿ ನಲಿದಾಡುವ ಹಕ್ಕಿಯನ್ನು ಎಷ್ಟೆಲ್ಲ ಬಗೆಯಲ್ಲಿ ಬಣ್ಣಿಸಿದರೂ ಕವಿಯ ಬಗೆ ತಣಿಯದು:

ಗಿಳಿ ಲಾವುಗೆ ಕಾಮಳ್ಳಿಯು
ಅಳಿಲಾವುಗೆ ತೇನೆ
ಎಲ್ಲವುಗಳನೊಡಗೂಡಿ
ನಿನ್ನೊಡಲಲಿ ನೀನೆ

....

ಸೃಷ್ಟಿಯೆ ಕುಣಿದಾಡುತ್ತಿದೆ
ಚೈತ್ರೋತ್ಸವದಂತೆ
ಮೇಣೊಮ್ಮೆಗೆ ನೀ ಹಾಡಲು
ಮನಸಿಗೆ ಬಂದಂತೆ

ವಿನೂತನವಾದ ಕಲ್ಪನೆ, ಉಪಮೆಗಳಿಂದ ಕೂಡಿದ್ದು ಹಕ್ಕಿಯ ಹಾರಾಟದ ಸಕೃದ್ದರ್ಶನ ಮಾಡಿಸುವ ಸಾರ್ಥಕ ಕವಿತೆ. "ಇದು ಶ್ರೀಭಟ್ಟರ ಸ್ವೋಪಜ್ಞಶೀಲ. ಸಾರ್ಥಕ ದ್ಯೋತಕ. ಕನ್ನಡದ skylark"[14ಅ] ಎಲ್ಲೆಲ್ಲಿಯೂ ವ್ಯಾಪಿಸಿರುವ ಕಾಜಾಣದ ಇನಿದನಿ ಕೇಳಿ ಕವಿ ಅದರ 'ನುಡಿಗೀತಿಕೆ ಕೇಳುವ ಅರ್ಜುನ ನಾನಾಗುತ್ತೇನೆ' ಎಂದು ಕಾಜಾಣವನ್ನು ನಾರಾಯಣನ ಹಂತಕ್ಕೇರಿಸುತ್ತಾರೆ. ಇದೊಂದು ಉತ್ಕೃಷ್ಟ ಸಹಜ ಕವಿತೆ.

'ಶರದೃತುವಿನ ಆಗಮನ' ಸೊಗಸಾದ ಋತುವರ್ಣನೆಯಾಗಿದೆ. ಕನ್ನಡ ನಾಡಿನ ಕಡಲ ತೀರದ ಪಟ್ಟಣವಾದ 'ಭಟ್ಕಳ'ವನ್ನು ಅತ್ಯುತ್ಸಾಹದಿಂದ ವರ್ಣಿಸುವ 'ಭಟ್ಕಳ' ಅತ್ಯಂತ ಚೇತೋಹಾರಿ ಕವನವಾಗಿದೆ. ಕಡಲನ್ನು ಅದರ ನಯನ ಮನೋಹರವಾದ ತೆರೆಗಳ ಲಾಸ್ಯವನ್ನು ಬಗೆಗೆಯಾಗಿ ಬಣ್ಣಿಸುವ ಸಾಲುಗಳು ಭಟ್ಟರ ಪ್ರಕೃತಿ ಪ್ರೇಮ ಮತ್ತು ಕಾವ್ಯೋತ್ಸಾಹಕ್ಕೆ ನಿದರ್ಶನವಾಗಿದೆ:

ಕಣ್ದಿಟ್ಟಿ ಹೊರಳಿಸಿ ಕಡಲತ್ತ ಹಾಯಿಸು
ನೀಲಿಮ ವಾರಿಧಿ ಏನು ಸೊಗಸು
ತೆರೆಯನು ತೆರೆಯಟ್ಟಿ ಉಬ್ಬುಬ್ಬಿ ಮೇಲೆದ್ದು
ಎದೆಯುದ್ದ ಕೊರಳುದ್ದ ಆಳುದ್ದವಾಗಿ
ಬಾಗಿ ಮೈ ಬಳುಕಿಸಿ ತೂಗಿ ತಲೆದಿರುಗಿಸಿ
ಹೊಡೆ ಮುರಿಯುತಪ್ಪಳಿಸಿ ಉರುಳುರುಳುತೆ
ಜುಳುಜುಳನೆ ನೊರೆಗರೆದು ಗುಳುಗುಳನೆ ಸುಳಿಸುಳಿದು
ದಡಕೆ ಕಚಕುಳಿಯಿಡುವ ಕಡಲನೋಡು" [ಭಟ್ಕಳ – ಗಗನಚುಕ್ಕಿ ಪು:41]

ಈ ಸಂಕಲನದ ಬಹುಮಟ್ಟಿನ ಕವಿತೆಗಳು ಪ್ರಕೃತಿ ಗೀತೆಗಳೇ ಆದರೂ ಗತ ಇತಿಹಾಸವನ್ನು ಮೆಲುಕು ಹಾಕುವ 'ದೇವರಾಯನ ದುರ್ಗ', 'ಹಂಪೆಯಲ್ಲಿ', 'ವಿಜಯನಗರದ ಗಿಣಿಗಳು' ಮುಂತಾದ ಕವನಗಳು ಕೂಡ ತಮ್ಮದೇ ಆದ ಸೊಗಸಿನಿಂದ ಸಹೃದಯರನ್ನು ಸೆಳೆಯುತ್ತವೆ. ಗಿಳಿಗಳನ್ನು ಮಾತನಾಡಿಸುವ ವ್ಯಾಜದಲ್ಲಿ ವಿಜಯನಗರದ ಗತ ವೈಭವವನ್ನು ನೆನಪಿಸುವ ವಿಶಿಷ್ಟ ಕವನವಾಗಿ 'ವಿಜಯನಗರದ ಗಿಣಿಗಳು', "ತಿಳಿಮುಗಿಲ ತೊಟ್ಟಿಲಲಿ ಮಲಗಿದ್ದ ಚಂದಿರನ ಗಾಳಿ ಜೋಗುಳ ಹಾಡಿ ತೂಗುತ್ತಿತ್ತು" ಎಂದು ಆರಂಭವಾಗುವ 'ಒಂದು ರಾತ್ರಿ' ಕವನ, ತನ್ನ ಸುಂದರ ನುಡಿ ಚಿತ್ರಗಳಿಂದಾಗಿ ಹಾಗೂ ಗೇಯಗುಣದಿಂದ ಸಹೃದಯರ ಹೃದಯವನ್ನು ಇಂದಿಗೂ ಸೆರೆಹಿಡಿದಿಟ್ಟಿರುವ ಕವನವಾಗಿದೆ. ಒಟ್ಟಾರೆ 'ಗಗನಚುಕ್ಕಿ' ಉತ್ತಮ ಕವನಸಂಕಲನವಾಗಿ. ಕವಿಯಾಗಿ ಭಟ್ಟರ ಬೆಳವಣಿಗೆಯನ್ನು ನಿಚ್ಚಳವಾಗಿ ಎತ್ತಿ ತೋರುವ ಸಂಕಲನವಾಗಿದೆ.

'ಗಗನ ಚುಕ್ಕಿ' ಪ್ರಕಟವಾದ ಮೇಲೆ 19 ವರ್ಷಗಳ ಸುದೀರ್ಘಕಾಲದ ಬಿಡುವಿನ ನಂತರ [1965] ಪ್ರಕಟವಾದ ಕವಿತಾ ಸಂಕಲನ 'ಅಂಚೆಯ ಪೆಟ್ಟಿಗೆ'. ಬಹುಶಃ ಅನುವಾದ ಮತ್ತು ವಿಮರ್ಶಾ ಲೇಖನಗಳನ್ನು ಬರೆಯುವುದರಲ್ಲಿ ಪೂರ್ಣವಾಗಿ ತೊಡಗಿಸಿಕೊಂಡ ಕಾರಣದಿಂದ ಸ್ವಂತ ಕಾವ್ಯ ರಚನೆಗೆ ಬಿಡುವು ಸಿಕ್ಕಿರಲಾರದು. ಆದರೆ ಕಾವ್ಯವಸ್ತುವಿನಲ್ಲಿ ಒಂದು ಮಹತ್ವದ ತಿರುವು ಇದರಲ್ಲಿ ಕಂಡುಬರುತ್ತದೆ. "ಅದೆಂದರೆ – ಹಿಂದಿನ ಸಂಕಲನಗಳಲ್ಲಿ ಪ್ರೇಮ ಪ್ರಕೃತಿಗಳಿಗೆ ಸೀಮಿತವಾಗಿದ್ದ ಕವಿ ದೃಷ್ಟಿ ಇಲ್ಲಿ ದೇಶ ಸಮಾಜಗಳತ್ತ ಹರಿದಿದೆ. ಆಗಸ್ಟ್ 15, ಜನವರಿ 26, ಧ್ವಜವಂದನೆ ಇದಕ್ಕೆ ಸಾಕ್ಷಿಯಾಗಿವೆ".[15] 'ಕವಿಗೆ' ಎಂಬ ದೀರ್ಘ ಕವಿತೆಯಲ್ಲಿ–

ಏಳು ಕವಿಯೇ ಏಳು ಮೌನವನು ಒಡೆದೇಳು
ಭಾವ ಚಿಂತಾರತ್ನವದನು ಹೂಳು
....
ನೋಡೀ ಪ್ರಪಂಚವನು ಏನೆಂಥ ಬಾಳು
ಕಣ್ಣೀರ ಮಳೆಸುರಿಸು ಸುಯ್ಯೆಲರನುರೆಸೂಸು
ಎದೆತೆರೆದು ಕನಿಕರಿಸಿ ಈ ಜಗವ ನೋಡು
ಮಾನವರ ಬಾಳೆಂತು ಹಾಳಾಗಿ ಹೊಲಸಾಗಿ
ನಾರುತಿಹುದೆಂಬುದ ನೋಡಿ ನೀಂ ಹಾಡು

[ಕವಿಗೆ – ಅಂಚೆಯ ಪೆಟ್ಟಿಗೆ. ಪು. 23]

ಎಂದು ಹೇಳಿ

ಶೃಂಗಾರ, ಗಾನ, ಸುಖ, ರಾಜ ಮಹಾರಾಜರುಗಳ ವೈಭೋಗವನ್ನು ವರ್ಣಿಸುವುದರಲ್ಲೇ ಇದುವರೆಗೆ ಮುಳುಗಿ ಹೋಗಿದ್ದ ನೀನು ಅದನ್ನು ತೊರೆದು, ನೋಯುತ್ತಿರುವ ಜನತೆಯತ್ತ,

ದೇಶ, ಸಮಾಜಗಳ ಸಂಕಷ್ಟಗಳ ಕಡೆಗೆ ನಿನ್ನ ದೃಷ್ಟಿಯನ್ನು ತಿರುಗಿಸಬೇಕೆಂದು ಕರೆಕೊಡುವಲ್ಲಿ ಆ ದೃಷ್ಟಿ ನಿಚ್ಚಳವಾಗಿ ವ್ಯಕ್ತವಾಗಿರುವುದನ್ನು ಕಾಣಬಹುದು.

ಸಮಾಜದ, ದೇಶದ ಒಳಿತಿಗೆ ಕಾರಣರಾದ, ಭಾಷಾ ಸಾಹಿತ್ಯಗಳಿಗೆ ಅನುಪಮವಾದ ಸೇವೆ ಸಲ್ಲಿಸಿದ ಮಹನೀಯರನ್ನು ಕುರಿತು ಚೆಲುವಾದ ಸಾನೆಟ್‌ಗಳನ್ನು ಈ ಸಂಕಲನದಲ್ಲಿ ಅವರು ನೀಡಿದ್ದಾರೆ. 'ಅಂಚೆಯ ಪೆಟ್ಟಿಗೆ'ಯ ಬಹುಪಾಲು ಕವಿತೆಗಳು ಗಾಂಧಿ, ಬುದ್ಧ, ವೇದವ್ಯಾಸ, ವೈಜ್ಞಾನಿಕ, ವೈಮಾನಿಕ, ವೆಂಕಟಾಚಾರ್, ಆರ್.ನರಸಿಂಹಾಚಾರ್, ವೆಂಕಣ್ಣಯ್ಯ ಮುಂತಾದ ದೇಶದ, ಸಮಾಜದ ಸರ್ವೋನ್ನತಿಗೆ ಕಾರಣರಾದ ಮಹನೀಯರಿಗೆ ಕಾವ್ಯನಮನ ಸಲ್ಲಿಕೆಯ ರೂಪದಲ್ಲಿ ಮೂಡಿ ಬಂದಿವೆ.

ಸೂರ್ಯನಂತಗ್ನಿಯಂತಾ ವಿದ್ಯುತೆಂತಂತೆ
ಹೊನಲಂತೆ ಅಲರಂತೆ ಎಲರಂತೆ ಅರಿಲಂತೆ
ಜೇನಂತೆ ಹಾಲಂತೆ ಪೀಯೂಷವೆಂತಂತೆ
ನಿನ್ನ ನುಡಿ ನಿನ್ನ ನಡೆ ಮಂಗಳ ಮನೋಹರಂ
ಸಾನಂದ ಸುಂದರಂ ಸಂಪೂರ್ಣ ಶಂಕರಂ

[ಮಹಾತ್ಮಗಾಂಧಿಗೆ ಪು.13]

ಎಂದು ಗಾಂಧೀಜಿಯವರ ವ್ಯಕ್ತಿತ್ವದ ವರ್ಣನೆ ಸಾಗಿದರೆ, ಅದೇ ಅಣುಬಾಂಬ್ ಹೊತ್ತ ಅಮೆರಿಕದ ವೈಮಾನಿಕನನ್ನು ಕುರಿತ ಈ ಸಾಲುಗಳಲ್ಲಿ ಜಗತ್ತಿನ ಕ್ಷೇಮ ಕುರಿತಾದ ಕಾತರತೆ ವ್ಯಕ್ತವಾಗಿದೆ ಕವಿಯ 'ಜೀವಪರ' ದೃಷ್ಟಿ ಸ್ಪಷ್ಟ.

ಅಮೆರಿಕಾ ದೇಶದಮಳ ವೈಮಾನಿಕನೆ
ಯಂತ್ರ ವಿಜ್ಞಾನ ಕಲೆ ಕರತಳಾಮಲಕಮೆನೆ
ಪರಮಾಣು ಸಿಡಿ ಮದ್ದಿನೊಡನೆ ನೀನೈ ತಂದೆ
ಸುಂದರ ವಸುಂಧರೆಯ ಜೀವ ಜಾಲವ ಕೊಂದೆ
ನವಯುಗದ ಸಂಸ್ಕೃತಿಯ ನಾಗರಿಕ ಅವತಾರ!
ನಿನಗಿದೋ ಧಿಕ್ಕಾರ ಸಾವಿರ ತಿರಸ್ಕಾರ!

[ಅಮೇರಿಕಾದ ವೈಮಾನಿಕನಿಗೆ ಪುಟ.27]

ಇನ್ನುಳಿದ ಸಾನೆಟ್‌ಗಳಲ್ಲಿ 'ವಿಜ್ಞಾನಿಗೆ' ಮತ್ತು 'ವೈಜ್ಞಾನಿಕನಿಗೆ' ಎಂಬುವು ಅವುಗಳ ವಾಸ್ತವದ, ಆರೋಗ್ಯಕರವಾದ ಧೋರಣೆಯಿಂದ ನಮ್ಮ ಮನಸ್ಸನ್ನು ಸೆಳೆಯುತ್ತವೆ.

ಅವನ ಸಾಧನೆಗಾಗಿ ವಿಜ್ಞಾನಿಯನ್ನು ಮೆಚ್ಚುವ ದೃಷ್ಟಿ ಕವಿಯದಾದರೂ ವಿಜ್ಞಾನವು ಮನುಕುಲದ ಒಳಿತಿಗಿಂತ ವಿನಾಶಕ್ಕೇ ಬಳಕೆಯಾಗುವ ಬಗ್ಗೆ ಅವರಿಗೆ ಆತಂಕವಿದೆ.

'ಅಮೆರಿಕಾ' ಜಪಾನಿನ ಮೇಲೆ ಅಣುಬಾಂಬ್ ಹಾಕಿದ್ದು ಕವಿಯ ಮನಸ್ಸನ್ನು ಕಲಕಿದೆ. ಅದಕ್ಕಾಗಿಯೇ ಅಮೆರಿಕಾದ ವೈಮಾನಿಕನನ್ನು ಕುರಿತ ಸಾನೆಟ್‌ನಲ್ಲಿ "ವೈಮಾನಿಕನ ಧೀಶಕ್ತಿ, ಅಕ್ಷಿಪಟುತ್ವವನ್ನು ಕೊಂಡಾಡಿ" ಅವನ್ನು ಯುದ್ಧೋದ್ಯಮಕ್ಕೆ ಹೂಡಿದ್ದನ್ನು" ಕಟಕಿಯಾಡಿ 'ಪರಮಾಣು ಸಿಡಿಮದ್ದಿನೊಡನೆ ಬಂದು ಸುಂದರ ವಸುಂಧರೆಯ ಜೀವ ಜಾಲವನ್ನು ಕೊಂದದ್ದಕ್ಕಾಗಿ ಧಿಕ್ಕಾರ, ತಿರಸ್ಕಾರ ಸೂಚಿಸುವಲ್ಲಿ ಅವರ ಜೀವಪರವಾದ ಹಾಗೂ ವಿಶ್ವ ಹಿತದ ದೃಷ್ಟಿ ಗೋಚರವಾಗುತ್ತದೆ.

ಅರವತ್ತು ಕವಿತೆಗಳ ಈ ಸಂಕಲನದಲ್ಲಿ ಹದಿನೇಳು, ಸಾನೆಟ್‌ಗಳು. ಇಪ್ಪತ್ತನೇ ಶತಮಾನದಲ್ಲಿ ಇಂಗ್ಲಿಷ್ ಕಾವ್ಯದ ಪ್ರಭಾವದಿಂದ ಬಂದ ಛಂದೋರೂಪಗಳಲ್ಲಿ 'ಸಾನೆಟ್' ಅತ್ಯಂತ ಜನಪ್ರಿಯವಾದ ರೂಪ. ಕನ್ನಡದ ಪ್ರಮುಖ ಕವಿಗಳೆಲ್ಲರೂ ಸಾನೆಟ್‌ಗಳನ್ನು

ರಚಿಸಿರುವುದೇ ಅದರ ಜನಪ್ರಿಯತೆಯ ಕುರುಹು. ಸಾನೆಟ್‌ನ ವಿವಿಧ ಮಾದರಿಗಳಲ್ಲಿ ಎಸ್.ವಿ.ಪಿ. ಅವರು ಷೇಕ್ಸ್‌ಪಿಯರ್ ಹಾಗೂ ವರ್ಡ್ಸ್‌ವರ್ತ್ ಈ ಎರಡೂ ಮಾದರಿಯ ಸಾನೆಟ್‌ಗಳನ್ನು ಬಳಸಿದ್ದಾರೆ. ವ್ಯಕ್ತಿ ಚಿತ್ರಗಳನ್ನು ಕಡೆದು ನಿಲ್ಲಿಸಲು ಸಾನೆಟ್ ಒಳ್ಳೆಯ ಬಿಕ್ಕಟ್ಟಾದ ಛಂದೋಬಂಧ. ವಿಧವಿಧವಾದ ಅಂತ್ಯಪ್ರಾಸಗಳಿಂದ ನಿಬದ್ಧವಾದ ಐದು ಮಾತ್ರೆಗಳ ಗಣದಿಂದ ಕೂಡಿದ ಹದಿನಾಲ್ಕು ಸಾಲುಗಳಲ್ಲಿ ಎರಕ ಹೊಯ್ದಂತೆ ಮೂರ್ತಿಮತ್ತಾದ ರೀತಿಯಲ್ಲಿ ವ್ಯಕ್ತಿಚಿತ್ರಗಳನ್ನು ಅಥವಾ ಪ್ರಕೃತಿ ಚಿತ್ರಗಳನ್ನು ರಚಿಸಲು ತುಂಬ ಅನುಕೂಲಕರವಾದ ಬಂಧ ಈ ಸಾನೆಟ್. "ಗಗನಚುಕ್ಕಿ"ಯಲ್ಲಿ ಸುರಹೊನ್ನೆ, ಮುತ್ತುಗದ ಮರ, 'ದಿನಾವಸಾನ'ವೇ ಮೊದಲಾದ ಕೆಲವು ಸಾನೆಟ್‌ಗಳನ್ನು ಬರೆದು ಕೈಪಳಗಿಸಿ ಕೊಂಡ ಎಸ್.ವಿ.ಪಿ. ಪ್ರಸ್ತುತ ಸಂಕಲನದಲ್ಲಿ ಹೆಚ್ಚಿನ ಸಂಖ್ಯೆಯ ಸಾನೆಟ್‌ಗಳನ್ನು ನೀಡಿದ್ದಾರೆ. ಆದರೆ ಅವರ ಸಾನೆಟ್‌ಗಳ ನಡೆ ಸಲೀಲವಾಗಿ ಸಾಗಿದರೂ ಅವುಗಳ ಶೈಲಿ ಸಂಸ್ಕೃತ ಭೂಯಿಷ್ಠ. ಜೊತೆಗೆ ಹಳಗನ್ನಡ ರೀತಿಯ ರಚನೆಗಳು ಹೆಚ್ಚು ಕಂಡುಬರುತ್ತವೆ. ಇದರಿಂದ ಸಾನೆಟ್‌ನ ಸೊಗಸು ಕೆಲಮಟ್ಟಿಗೆ ಮುಕ್ಕಾದಂತೆ ಕಾಣಿಸುತ್ತದೆ.

'ಅಂಚೆಪೆಟ್ಟಿಗೆ'ಯ ಇನ್ನಿತರ ಕವನಗಳಲ್ಲಿ ಕವನ ಸಂಕಲನದ ಶೀರ್ಷಿಕೆಯ ಪದ್ಯವಾದ 'ಅಂಚೆಯ ಪೆಟ್ಟಿಗೆ.' 'ಶ್ರೀಯವರಿಗೆ ಬಾಷ್ಪಾಂಜಲಿ', 'ನಿನ್ನ–ನನ್ನ ಆನಂದ' ಇವು ಮುಖ್ಯವಾದವು.

ಸೇವಾಧರ್ಮದ ಸಂಕೇತರೂಪದಲ್ಲಿ ಅಂಚೆಯ ಪೆಟ್ಟಿಗೆಯನ್ನು ಪರಿಭಾವಿಸಿದ ಕವಿಗೆ ಅದು ಜನರುಪಕಾರಕ್ಕೆ ಇಳೆಗವತರಿಸಿದ ಲೋಕೋದ್ಧಾರಕನ ಪ್ರತಿರೂಪವೆಂಬಂತೆ ಕಂಡಿದೆ. ಜೊತೆಗೆ–

ಮೇಲಿನ ಕೀಳಿನ ಜಾತಿ ವಿಭೇದದ
ಕೋಮಿನ ಭಾವನೆ ನನಗಿಲ್ಲ
ಭಾಷಾ ಭೇದದ ಪ್ರಾಂತ ವಿಭೇದದ
ಗಡಿಬಂಧನವೂ ಇದಕಿಲ್ಲ.

ಎಂದು ಕೊಂಡಾಡುವಷ್ಟು ಉದಾರವಾದಿಯಂತೆ ಅದನ್ನು ಭಾವಿಸುತ್ತಾರೆ.

ಆದರೆ ಕವಿಯ ವಾಚಾಳತನದಿಂದಾಗಿ ಅದು ಧ್ವನಿಪೂರ್ಣತೆಯನ್ನು ನೀಗಿಕೊಂಡಿದೆ. ಶ್ರೀಯವರನ್ನು ಕುರಿತ ಬಾಷ್ಪಾಂಜಲಿಯಲ್ಲಿ ಶ್ರೀಯವರು ಇಂಗ್ಲಿಷ್, ಕನ್ನಡ, ಸಂಸ್ಕೃತ ಕಾವ್ಯ ಸಾಗರದಲ್ಲಿ ಈಸಾಡಿ ನಿಷ್ಣಾತಿಯನ್ನು ಹೊಂದಿದ್ದನ್ನು ಹೇಳುತ್ತಲೇ ಸಾಹಿತ್ಯ ಸೃಷ್ಟಿ ಮತ್ತು ಆಸ್ವಾದನೆಯ ಮೂಲಕ ಬದುಕಿನ ದುರಂತದ ಕಡಲನ್ನು ದಾಟಿದ ಬಗೆಯನ್ನು ಹೃದ್ಯವಾಗಿ ನಿರೂಪಿಸಿದ್ದಾರೆ.

ಹೊನ್ನ ಹರಿವಾಣದಲಿ ಹಾಲಾಹಲಂ ತುಂಬಿ
ಬಳಿ ಬಂದ ವಿಧಿಯ ನೀಂ ಸ್ವಾಗತಿಸಿದೆ
ಕಾವ್ಯಶಾರದೆಯೊಲಿದು ರುದ್ರವೀಣೆಯ ಮಿಡಿದು
ಸಿಡಿಲದನಿಯಲಿ ಹಾಡಿ ಮಿಂಚನೆಸೆದು
ಕೂರ್ಪಾಗಿ ಬೆಳಗಿ ತಾನಿಳೆಗಿಳಿದು ಬಳಿಗೆ ಬರೆ
ಅವಳನಾರಾಧಿಸಿದೆ ಆದರಿಸಿದೆ.

'ನಿನ್ನ–ನನ್ನ ಆನಂದ'ದಲ್ಲಿ ಸೃಷ್ಟಿಸುವುದು ಸೃಷ್ಟಿಕರ್ತನ ಆನಂದವಾದರೆ ಸೃಷ್ಟಿಕರ್ತನ ಸೃಷ್ಟಿಯ ಆನಂದವನ್ನು ಸವಿಯುವುದು ತನ್ನ ಆನಂದವಾಗಲಿ ಎಂಬ ಹಾರೈಕೆಯಲ್ಲಿ ಸದಭಿರುಚಿಗಾಗಿ ಹಾತೊರೆವ ಮನುಜನ ಸದಿಚ್ಛೆ ವ್ಯಕ್ತವಾಗಿದೆ. 'ಬೆಳಕು ಬಾಳಿನೊಳಿಳಿಯೆ

ಬಿಡುವಿಲ್ಲವೊ' ಹಾಗೂ 'ಮೊರೆ' – ಎರಡೂ ಕವಿಯ ನೊಂದ ಬದುಕಿನ ಚಿತ್ರಗಳನ್ನು ನಮ್ಮ ಮುಂದಿರಿಸುತ್ತ ಕರುಳಿರಿಯುವಂತಿವೆ.

ಮನದ ಬಾನಂಗಳದೆ ಚಿಂತೆಗಳ ಕಾರ್ಮುಗಿಲು
ಜ್ಞಾನ ಸೂರ್ಯನ ಮುಚ್ಚಿ ಮಂಕು ಕವಿಸಿರಲು
ಭಯದ ಶಂಕೆಯ ಗುಡುಗು ಕಿವಿಬಿರಿಯುವಂತಿರಲು
ಬೆಳಕು ಬಾಳಿನೊಳಿಳಿಯೆ ಬಿಡುವಿಲ್ಲವೊ

ಒಟ್ಟಾರೆ ಹೇಳಬೇಕೆಂದರೆ, ಭಟ್ಟರ ಆರ್ಷದೃಷ್ಟಿ, ದೈವಭಕ್ತಿ, ಸಂಪ್ರದಾಯಶ್ರದ್ಧೆಗಳು ಇಲ್ಲಿಯ ಕವಿತೆಗಳಲ್ಲಿ ಉಚಿತ ಅಭಿವ್ಯಕ್ತಿಯನ್ನು ಪಡೆದುಕೊಂಡಿರುವಂತೆಯೆ ತನ್ನ ನಾಡು ನುಡಿಗಳನ್ನು ಕುರಿತಾದ ಪ್ರೀತಿ ಮತ್ತು ಸುತ್ತಣ ಸಮಾಜದ ಬಗೆಗಿನ ಕಾಳಜಿಗಳು ಇಲ್ಲಿ ಕವನರೂಪದಲ್ಲಿ ಆಕಾರ ಪಡೆದುಕೊಂಡಿವೆ.

ಭಟ್ಟರ ಅನಂತರದ ಕವನ ಸಂಗ್ರಹಗಳೆಂದರೆ 'ಇಂದ್ರಗೋಪ' 'ಕೃಷ್ಣಮೇಘ' ಮತ್ತು 'ಸಂಜೆಮಲ್ಲಿಗೆ'. 'ಇಂದ್ರಗೋಪ' ಮತ್ತು 'ಕೃಷ್ಣಮೇಘ'ಗಳು ಪ್ರಕಟವಾದುದು ನವ್ಯಕಾವ್ಯದ ಉತ್ಕರ್ಷದ ಕಾಲದಲ್ಲಿ. ಕೆ.ಸ್.ನ ಅವರನ್ನು ಹೊರತುಪಡಿಸಿದರೆ ಉಳಿದ ಹಳೆಯ ತಲೆಮಾರಿನ ಕವಿಗಳು ತಮ್ಮ ಕಾವ್ಯಮಾರ್ಗದಲ್ಲೇ ಮುಂದುವರಿದು ಕವನಗಳನ್ನು ರಚಿಸಿದರಾದರೂ ನವ್ಯಕಾವ್ಯದ ಭೋರ್ಗರೆತದಲ್ಲಿ ಈ ಕವಿಗಳ ದನಿ ಕುಗ್ಗಿತೆಂದೇ ಹೇಳಬೇಕು. ಜೊತೆಗೆ ವಿಮರ್ಶಕರ ಅಲಕ್ಷ್ಯಕ್ಕೂ ಇವರು ಗುರಿಯಾದರು. ಆದರೆ ಸಂತಸದ ಸಂಗತಿಯೆಂದರೆ, ಭಟ್ಟರ ಈ ಕಾವ್ಯದಲ್ಲಿ ಹಿಂದಿನ ಕಾವ್ಯಗಳಲ್ಲಿ ಹೆಚ್ಚಾಗಿ ಕಂಡು ಬರುವ ಕೇವಲ ವರ್ಣನೀಯತೆ ಚಿತ್ರಕತೆಗಳಿಗಿಂತ ಬೇರೆಯೇ ಆದ ಒಳದನಿಯೊಂದು ಕಿವಿಗಳಿಗೆ ಕೇಳಿಬರುತ್ತದೆಂಬುದು. 'ಇಂದ್ರಗೋಪ' ಎಂಬ ಹೆಸರೇ ಅತ್ಯಂತ ಸುಂದರ ಮತ್ತು ಧ್ವನಿಪೂರ್ಣ. ಐವತ್ತಮೂರು ಹಾಡುಗಳ ಸಂಕಲನವಾದ ಇದರಲ್ಲಿ ಕೂಡ ನಿಸರ್ಗವನ್ನು ಕುರಿತಾದ ಕವನಗಳೇ ಮೇಲುಗೈ ಸಾಧಿಸಿವೆ. ಕತ್ತಲೆಯ ಕೋಟೆಗೆ ಲಗ್ಗೆ ಹಾಕುವುದೇ ಕಾರ್ಯವಾದ 'ಇಂದ್ರಗೋಪ'ದ ಶೀರ್ಷಿಗೆ ತಕ್ಕಂತೆ ಬೆಳಕಿಗೆ ಸಂಬಂಧಪಟ್ಟ ಕವನಗಳೇ ಹೆಚ್ಚಿವೆ. ಸುಪ್ರಭಾತ, 'ಈ ಬೆಳಗು', 'ಉದಯವಾದಾಗ', 'ಬಾರಬಾರ ಭಾಸ್ಕರ', 'ಬಾ ಸಾವಿರ ಕರಧರ,' 'ಬಂದನು ರವಿ', 'ನೇಸರು ಮೂಡಿದನು', ಇವೆಲ್ಲ ಅಂಥ ಕವಿತೆಗಳಾಗಿವೆ. ಸೂರ್ಯನು ಲೋಕದ ಅಂಧಕಾರವನ್ನು ತೊಲಗಿಸಿದರಷ್ಟೇ ಸಾಲದು, ಜನಮನದ ಕತ್ತಲೆಯನ್ನು ತೊಡೆದುಹಾಕಬೇಕು ಎಂಬುದು ಕವಿಯ ಆಶಯ.

ದಿನದಿನದ ದೈನಿಕದಲ್ಲಿ ಹೊಸ ಅರ್ಥವಂತಿಕೆಯನ್ನು, ನೂತನ ಕಾಣ್ಕೆಗಳನ್ನು ಕವಿ ಕಾಣುತ್ತಾನೆ ಮತ್ತು ಸಹೃದಯರಿಗೂ ಕಾಣಿಸುತ್ತಾನೆ. 'ಬಾರ ಬಾರ ಭಾಸ್ಕರ'ದಲ್ಲಿ ಬರುವ

ನಿನ್ನೆಯಂತೆ ಈ ದಿನ
ನೋಡು ಚಿರವಿನೂತನ
ನಾಳೆಯಂತೆ ನೂತನ

ಸಾಲುಗಳು ಕವನಕ್ಕೆ ಅರ್ಥಪೂರ್ಣವಾದ ಮುಗಿವನ್ನು ತಂದುಕೊಟ್ಟು ಕವನವನ್ನು ಚಿರಂತನ ಕವನ ಎನ್ನಿಸಿವೆ. ಅವರ ಕಲ್ಪನಾಶಕ್ತಿಗೆ 'ಇಂದ್ರಚಾಪ' ಸಾಕ್ಷಿಯಾಗಿದೆ.

ನೋಡಿ ಇಹವನು ಪರವು ನಗುವವೊ–
ಲಿಂದ್ರ ಚಾಪವು ಮೂಡಿದೆ
....
ನಾಕಲೋಕಕೆ ಕಿಟಕಿ ತೆರೆದವೊ–

ಲಿಂದ್ರ ಚಾಪವು ಮೂಡಿದೆ
ನಾವು ಮೇಲಕೆ ಏರುವೇಣಿವೋ–
ಲಿಂದ್ರ ಚಾಪವು ಮೂಡಿದೆ

ಮಳೆಯನ್ನು ಕುರಿತು ಕೆಲವು ಕವನಗಳಿವೆ. 'ಮಳೆಗೆ ಮೊದಲು' 'ಕೆಲವು ದಿನ ಮಳೆನಿಂತಾಗ', 'ಮಳೆ ಮತ್ತು ಮುದ್ದಣ' ಅಂಥವು. ಮಂಗಳೂರಿನ ಮುಸಲಧಾರೆಯ ವರ್ಷವನ್ನು ಕಂಡ ಕವಿ, ಅದರ ಚಿತ್ರವನ್ನು ಇಲ್ಲಿ ನೀಡಿದ್ದಾರೆ. 'ಯಾವ ಗಳಿಗೆಯಲಿ ಆಕಾಶವೆಂಬ ಕೊಳಾಯಿ ಒಡೆದು ನೀರು ಒಳಸುರಿವುದೋ' ಎಂದು ಜನರ ಆತಂಕವನ್ನು ಬಯಲು ಮಾಡಿದ್ದಾರೆ.

'ಸೋಲೊಪ್ಪಿಗೆ'ಯಲ್ಲಿ – "ಮನವು ಮಂಕಾಗುತಿದೆ, ತನವು ಕೊಂಕಾಗುತಿದೆ, ಕೊನೆಮುಟ್ಟಲಾರೆನೆಲೆ ದೇವ" ಎಂಬಂಥ ನೈರಾಶ್ಯ ಕಂಡರೂ, ಎಂಥದೇ ನೈರಾಶ್ಯದಲ್ಲೂ ಕೈ ಚೆಲ್ಲದೆ ಜೀವನ ಪಥದಲ್ಲಿ ಹೋರುತ್ತ ಸಾಗುವೆನೆಂಬ ಅಚಲ ಆಶಾವಾದ, ಇಲ್ಲಿಯ ಕವನಗಳಲ್ಲಿ ಎದ್ದು ಕಾಣುತ್ತದೆ. "ತುಸು ಕಸುವು ಅಸುವಿನೊಳಗಿರುವನಕ ಹೋರುವೆನು, ಅಷ್ಟರೊಳು ಬಂದೀತು ಹೆಲಿಕಾಪ್ಟರೊಂದು" ಎಂದು ಭರವಸೆ ತಾಳುತ್ತಾನೆ. ಇದೇ ರೀತಿಯ ಆಶಾವಾದ 'ಹಾರಾಟದ ಹಾಡು', 'ಹೋರಾಟದ ಹಾಡು', 'ನನ್ನ ಗುರು ಕಲ್ಪತರು' – ಕವನಗಳಲ್ಲಿಯೂ ಕಂಡು ಬರುತ್ತದೆ. ಈ 'ಹಾಡು'ಗಳಲ್ಲಿ – "ಆಕಾಶದ ಉದ್ದಗಲಕೆ ನಿಶೆ ಮುಗಿಲಿನ ಕಂಬಳಿ ಹೊಚ್ಚುತಿದೆ" ಎಂಬಂಥ ರೂಪಕಾತ್ಮಕ ಸಾಲುಗಳಿವೆ. ಆಧ್ಯಾತ್ಮ, ಅನುಭಾವದ ಕಡೆಗಿನ ತುಯ್ತ ಹೆಚ್ಚಿದೆ. ಅನುಭಾವವನ್ನು ಎಲ್ಲೆಲ್ಲೋ ಅರಸಿ ಸಾಕಾಗಿ ಅಂತಿಮವಾಗಿ ಮನೆಯ ಮಗುವಿನ ಮುಗ್ಧನಗೆಯಲ್ಲಿ ಅದು ಕಂಡಿತೆಂದು ಹೇಳುವ ಈ ಕಿರುಗವನ ಒಂದು ಸಾರ್ಥಕ ಕವನ.

ಮರಳಿ ಬಂದೆನು ಮನೆಗೆ
ಬೈಗಿನಲ್ಲಿ
ಮಗುವೊಂದು ಮುಗುಳುನಗೆ
ಸೂಸಿತಲ್ಲಿ
ನೀನೆ ನಕ್ಕಂತಾಗಿ
ಪಕ್ಕನಿಂತೆ
ನಾನು ಸಹ ನಗುತೆ ಮೈಯ ಮರೆತೆ

ಭಟ್ಟರ ಮಾಗಿದ ದೃಷ್ಟಿ ಇಲ್ಲಿಯ ಕವನಗಳಲ್ಲಿ ಎದ್ದು ಕಾಣುತ್ತದೆ. ಸಹಬಾಳ್ವೆ ಜೀವನ ಮಂತ್ರವಾಗಬೇಕೆಂದು ಕವಿ ಘೋಷಿಸುತ್ತಾನೆ.

ನೀ ಬದುಕೆ ನಾ ಬದುಕೆ ನಾವಿಬ್ಬರೂ ಕೂಡಿ
ಸುಖವಾಗಿ ಬಾಳುವುದೆ ನಮ್ಮ ಗುರಿ ಕೇಳು
ಕಡಿ ಕೊಚ್ಚು ಸುಡು ಎಂಬ ಮಾತನಾಡದಿರಿ
ನೀವೆಲ್ಲ ಬದುಕಿರ್ದು ನಮ್ಮ ಬದುಕಿಸಿರಿ

['ಶಾಂತಿಮಂತ್ರ' – ಇಂದ್ರಗೋಪ]

ಕವಿಯ ಪ್ರಕೃತಿಪ್ರೇಮ ಮತ್ತು ದೈವದ ಬಗೆಗಿನ ಅಚಲ ನಂಬಿಕೆಗಳಿಗೆ ಇಲ್ಲಿಯ ಅನೇಕ ಕವನಗಳಲ್ಲಿ ಎಡೆದೊರಕಿದೆ. ಈಗಾಗಲೇ ಹೆಸರಿಸಲಾದ 'ಬಾರ ಬಾರಭಾಸ್ಕರ', 'ನೇಸರು ಮೂಡಿದನು', 'ಉದಯವಾದಾಗ' ಗಳಲ್ಲದೆ 'ಬಾನಿಗೆ ಬೇನೆ', 'ಇಂದ್ರ ಚಾಪ', 'ಮಳೆಗೆ ಮೊದಲು' ಮೊದಲಾದುವು ನಿಸರ್ಗ ವರ್ಣನೆಯ ಕವಿತೆಗಳಾದರೆ, 'ಭಾಗ್ಯೋದಯ',

'ಪರದೈವದ ನಿಲುವು', 'ಆಸೆ– ಆಗ ಈಗ', 'ನಿನ್ನದಯೆಯೊಂದಿಲ್ಲದಿದ್ದರೆ' ಇವೆಲ್ಲ ಅವರ ದೈವ ಶ್ರದ್ಧೆಯ ಕವನಗಳು. 'ಹೂವೊಂದರ ಕಥೆ', 'ಅನುಭಾವ', 'ಅತಿಥಿಗೆ' ಈ ಸಂಕಲನದ ಅತ್ಯುತ್ತಮ ಕವಿತೆಗಳು. ಕಥನ ಕವನದ ಧಾಟಿಯಲ್ಲಿ ಸಾಗುವ 'ಹೂವೊಂದರ ಕಥೆ' ಅತ್ಯಂತ ಹೃದಯಂಗಮ ಕವನ. ಭಟ್ಟರ ಹಾಸ್ಯಮನೋಧರ್ಮದ ಹಿನ್ನೆಲೆಯಲ್ಲಿ ಬಡಮೂಡಿರುವ, 'ಅತಿಥಿಗೆ' ಈ ಸಂಕಲನದ ಉತ್ತಮ ಕವನಗಳಲ್ಲೊಂದು. ನಗರಜೀವನದ ಕೆಳ ಮಧ್ಯಮ ವರ್ಗದ ದಂಪತಿಗಳು ಅನಿರೀಕ್ಷಿತವಾಗಿ ಅತಿಥಿಯೊಬ್ಬ ಬಂದಾಗ ಸಾಂಸಾರಿಕ ಅನನುಕೂಲತೆಗಳಿಂದ ಪೇಚಿಗೆ ಸಿಕ್ಕುವುದನ್ನು ಸಮರ್ಥವಾಗಿ ಬಿಂಬಿಸುವ ಕವನ ಇದು.

ಅರ್ಥಪೂರ್ಣಶೀರ್ಷಿಕೆ ಹೊತ್ತಿರುವ ಈ ಸಂಕಲನ ಇಂದ್ರಗೋಪಗಳ, ಮಿನುಗು, ಮಿಣುಕು, ಹೊಳಪು–ಹೊಗರುಗಳಿಂದ ಕೂಡಿದೆ. ಸ್ವತಂತ್ರ ಕೃತಿಗಳಲ್ಲಿ ಮತ್ತು ಅನುವಾದ ಕೃತಿಗಳಲ್ಲಿ ಛಂದಸ್ಸಿಗೆ ಸಂಬಂಧಪಟ್ಟಂತೆ ಭಟ್ಟರು ಮಾಡಿರುವ ವೈವಿಧ್ಯ ಪೂರ್ಣ ಪ್ರಯೋಗಗಳನ್ನು ಕುರಿತು ಪ್ರತ್ಯೇಕವಾಗಿಯೇ ಹೇಳಬೇಕು. ಸದ್ಯದಲ್ಲಿ 'ಇಂದ್ರಗೋಪ'ದ ಜೊತೆ ಜೊತೆಯಲ್ಲೇ ಪ್ರಕಟವಾದ 'ಕೃಷ್ಣಮೇಘ' ಕಾವ್ಯದಲ್ಲಿ 'ಸಾಂಗತ್ಯ' ಛಂದಸ್ಸಿಗೆ ಸಂಬಂಧಪಟ್ಟಂತೆ ಮಾಡಿರುವ ಪ್ರಯೋಗದ ಹೊರತಾಗಿ ಕಾವ್ಯ ವಸ್ತುವಿಗೆ ಸಂಬಂಧಿಸಿದಂತೆ ಅಲ್ಲಿ ಅವರು ಮಾಡಿರುವ ಪ್ರಯೋಗ ಕೂಡ ವಿಶಿಷ್ಟವಾದುದು. ತನ್ನ ಕಣ್ಣೆದುರಿನ ಲೋಕದಲ್ಲಿ ಸುತ್ತಣ ಪರಿಸರದಲ್ಲಿ ಘಟಿಸುವ ಮಹತ್ವದ ಘಟನೆಗಳಿಗೆ, ಸಂಗತಿಗಳಿಗೆ ಸಂವೇದನಾಶೀಲನಾದ ಕವಿಯೊಬ್ಬ ಪ್ರತಿಕ್ರಿಯೆಗಳನ್ನು ತೋರಿಸದೆ ಇರಲಾರ. ಪ್ರಸ್ತುತ 'ಕೃಷ್ಣ ಮೇಘ', ಕವಿಯ ಬಗೆಯ ಬಾನಿನಲ್ಲಿ ಮಂದೈಸಿದ ಮಹತ್ವದ ಸಂಗತಿಗಳ ಸ್ಮರಣೆಯೇ ಆಗಿದೆ. ಕವಿಯ ಮಾತಿನಲ್ಲೇ ಹೇಳುವುದಾದರೆ, ಅವು – "ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಹಬ್ಬ, 'ವೀರವಾಹಿನಿಯ ಗಡಿಸಂರಕ್ಷಣೆಯ ಕಾಳಗ, ಕಾರಣ ಪುರುಷರಾದ ಬಸವೇಶ್ವರರ ಅವತಾರಲೀಲೆ, ರಾಷ್ಟ್ರಪಿತ ಗಾಂಧೀಜಿಯವರ ಜನ್ಮಶತಾಬ್ದಿ, ಚಂದ್ರಲೋಕಕ್ಕೆ ಮಾನವನ ಉಡ್ಡಾಣ, ಇವು ಭವದ ತಾಪದಲ್ಲಿ ಸೊರಗಿ ಸೊಪ್ಪಾದ ಜೀವ ಸಸ್ಯಾವಳಿಗೆ ಅಮೃತಾಂಬುಧರಗಳಂತೆ ಒದಗಿ ಬಂದ ಘಟನೆಗಳು".

ನಾಡಿನೆಲ್ಲೆಡೆ ಸಂಸ್ಕೃತಿ ಸ್ಪಂದನವನ್ನುಂಟು ಮಾಡಿ, ಅರಿವಿನ ಸ್ಫೋಟಕ್ಕೆ ಕಾರಣವಾದ ಮೈಸೂರು ವಿಶ್ವವಿದ್ಯಾಲಯ, ಜನ್ಮತಾಳಿ ಐವತ್ತು ವರ್ಷವಾದ ಸಂದರ್ಭದಲ್ಲಿ ಅದರ ಬೆಳವಣಿಗೆ ಕವಿಗೆ ಇನ್ನಿಲ್ಲದ ಸಂತಸ ಉಂಟುಮಾಡಿದೆ. ಅದನ್ನು ಕುರಿತು ಸಂಭ್ರಮ ಸಂತಸಗಳನ್ನು ವ್ಯಕ್ತಪಡಿಸುವಾಗ ಅದಕ್ಕೆ ಹಿನ್ನೆಲೆಯಾಗಿ ಕನ್ನಡನಾಡಿನ ಹಿರಿಮೆಗರಿಮೆಗಳನ್ನು ಕುರಿತು ಹಾಡಿದ್ದಾರೆ. ಮಾನಸಗಂಗೋತ್ರಿ ರಾಷ್ಟ್ರಕವಿ ಕುವೆಂಪು ಅವರ ಮನೋರಂಗದಲ್ಲಿ ಮೂಡಿ ನಮ್ಮೆದುರು ಆಕಾರ ತಳೆದದ್ದು ಇದನ್ನೆಲ್ಲ ಹೇಳಿ,

ಶೋಧನವೆನಿಸುವ ಶಿಲಾತಲ ತಲದೊಳು
ತಿಳಿವಿನ ಶೀತಲ ಜಲವು
ಸೆಲೆಯೊಡೆದುಗುತಂದು ಮನವೆಂಬ ಕೊಳದೊಳು
ತುಂಬುವುದಿದು ಪುಣ್ಯಫಲವು

ಎಂದು ಮನತುಂಬಿ ಅದರ ಗರಿಮೆಯನ್ನು ಕೊಂಡಾಡುತ್ತಾರೆ.

ದೇಶ ರಕ್ಷಣೆಗಾಗಿ ಜೀವದ ಹಂಗು ತೊರೆದು ಹೋರಾಡಿ ಪ್ರಾಣಾರ್ಪಣೆ ಮಾಡಿದ ಯೋಧರ ಚಿತ್ರವನ್ನು ಕಟ್ಟಿ ಕೊಡುವ ಕವನ "ನಮ್ಮ ಯೋಧರ ಸಾಹಸಗಳನ್ನು ನೆನೆದು" ಎಂಬುದು. "ಭಾರತ ಯೋಧರ ವೀರಪರಂಪರೆಗೂಣೆಯ ಬರದಂತೆ" "ಗೆದ್ದರು ಬಿದ್ದರೂ ಯಶವು ನಿಶ್ಚಯವೆಂದು" ತಿಳಿದು ದೃಢತೆಯಿಂದ ಹೋರಾಡಿದ ಯೋಧರಿಗೆ –

ಶತಶತಮಾನಗಳಾಚೆಗೆ ಸಹ ಹಸಿ
ರಾಗಿರುವುದು ನಿಮ್ಮ ಹೆಸರು
ಶತಶತ ಭೀರುಗಳೆದೆಯನು ಸಹ ಬಿಸಿ
ಗೊಳಿಸುವುದೀ ನಿಮ್ಮ ಉಸಿರು – ಎಂದು

ಕವಿ ಅವರಿಗೆ ಭರವಸೆ ಕೊಡುತ್ತಾನೆ.

ಬಸವೇಶ್ವರರ ಎಂಟು ನೂರನೇ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಿದ ಸಂದರ್ಭ ಕಾರಣವಾಗಿ ಬಸವೇಶ್ವರರು ಮಾಡಿದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕ್ರಾಂತಿಯನ್ನು ಅವರು ಮಹತ್ಸಾಧನೆಯನ್ನು ನೆನಪಿಸಿಕೊಂಡು ಬಸವೇಶ್ವರರನ್ನು ಕುರಿತ ಕಾವ್ಯ ಭಾಗದಲ್ಲಿ ಕಾವ್ಯ ಕಾಣಿಕೆ ಸಲ್ಲಿಸಿದ್ದಾರೆ. ಬಸವೇಶ್ವರರೆಂದರೆ,

ಲೋಕ ಕಲ್ಯಾಣವನಾತ್ಮಕಲ್ಯಾಣವ–
ನೇಕ ಕಾಲದೆ ಸಾಧಿಸಿದನು
ಮುಕುತಿಯ ಮಹಮನೆಗಿಕ್ಕಿದ ಚಿಲುಕವ
ತೆಗೆದು ಎಲ್ಲರ ಹೊಗಿಸಿದವರು

ಅದಕ್ಕಿಂತ ಹೆಚ್ಚಾಗಿ ಕನ್ನಡ ಭಾಷೆಯಲ್ಲಿ ಶಿವಾನುಭವವನ್ನು ಹೇಳುತ್ತ ಲೋಕದ ಡೊಂಕನು ತಿದ್ದಲು ಯತ್ನಿಸಿದ ಮಹಾನುಭಾವಿಯೆಂದು ಅವರ ಬಗ್ಗೆ ಎಲ್ಲಿಲ್ಲದ ಪೂಜ್ಯಭಾವ. ಈ ಕಾರಣದಿಂದಲೇ ಅವರಿಗೆ ಈ ಕಾವ್ಯ ಕಾಣಿಕೆ.

ಇನ್ನು 'ಗಾಂಧೀಜಿಯವರನ್ನು ಕುರಿತು' ಬರೆದ ಕಾವ್ಯಕ್ಕೆ ಕಾರಣವಾದ ಸಂದರ್ಭವೂ 1969ರ ಅಕ್ಟೋಬರ್‌ನಲ್ಲಿ ಬಂದ 'ಗಾಂಧೀ ಶತಮಾನೋತ್ಸವ'ವೇ ಆಗಿದೆ. ಐವತ್ತು ಸಾಂಗತ್ಯಗಳಲ್ಲಿ ಭಾರತ ಸ್ವಾತಂತ್ರ್ಯದ ಸುದೀರ್ಘ ಹೋರಾಟದ ಜೊತೆ ಜೊತೆಯಲ್ಲೇ ಭಾರತೀಯರಲ್ಲಿನ ಜಾತೀಯ ಅಸಮಾನತೆಗಳನ್ನು ಹೋಗಲಾಡಿಸಲು, ಹಿಂದೂ ಮುಸ್ಲಿಮರ ಐಕ್ಯ ಸಾಧಿಸಲು ಹೆಣಗಿ ಹೈರಾಣಾದ, ಮಾನವೀಯತೆಯ ಉತ್ತುಂಗ ಶಿಖರವೇರಿದ, ಸತ್ಯ, ಅಹಿಂಸೆಗಳ ತ್ಯಾಗಮೂರ್ತಿ, ಗಾಂಧಿಯವರ–ವ್ಯಕ್ತಿತ್ವ ಉನ್ನತಿಯತ್ತ ಏರಿಹೋದ ಹೆಜ್ಜೆ ಗುರುತುಗಳನ್ನು ರೂಪಕಗಳ ಮೂಲಕ ಅಂಕಿಸುವ ಕೆಲಸವನ್ನು ಇದರಲ್ಲಿ ಮಾಡಿದ್ದಾರೆ.

ಹೃದಯದೌದಾರ್ಯದ ಸ್ನೇಹದ ಸದ್ಭಾವನೆ
ಗಾಂಧಿಯೆಂದಾಯಿತು ಕೊನೆಗೆ
ಎಲ್ಲ ಎಲ್ಲೆಯ ಮೀರಿದೊಲವಿನ ಸ್ನೇಹವೆ
ಗಾಂಧಿಯ ರೂಪಾಯಿತೆಮಗೆ

ಗಾಂಧಿಯೆಂದರೆ,

ಭಾರತೀಯರ ಮನದಾಕಾಶದಗಲಕೆ
ಹಬ್ಬಿದ ಹೇ ಕೃಷ್ಣ ಮೇಘ
ಅಂದಿನ ನಿನ್ನ ಬೋಧಾಮೃತವರ್ಷಕೆ
ಕರಗಿತು ದಾಸ್ಯದ ನಿದಾಘ– ಎಂದು ಕೊಂಡಾಡಿ

ಗಾಂಧಿಯ ಪುನರವತಾರಕ್ಕೆ ಜಗ ಕಾದು ಕೂತಿದೆ ಎಂದು ಹೇಳುತ್ತ "ಸಿಡಿಲಾಗಿ, ಗುಡುಗಾಗಿ, ಮಿಂಚಿ ಮಳೆಗರೆಯ ಬೇಕೆಂದು" ಕೋರುತ್ತಾರೆ.

ಮಾನವ ಚಂದ್ರನಲ್ಲಿ ಪಾದಾರ್ಪಣೆ ಮಾಡಿದ್ದು ಮನುಷ್ಯ ಚರಿತ್ರೆಯಲ್ಲೇ ಒಂದು ಅಪೂರ್ವ ಘಟನೆ. ಅದು ಅವನ ವೈಜ್ಞಾನಿಕ ಅನ್ವೇಷಣೆಯ ಉತ್ತುಂಗ ಸಾಧನೆಯ

ಮೈಲಿಗಲ್ಲು. ಕವಿ ಭಟ್ಟರು ಈ ಅಪೂರ್ವ ಘಟನೆಗೆ ಪ್ರತಿಕ್ರಿಯೆ ತೋರದೆ ಇರಲಾಗಲಿಲ್ಲ. ಅದಕ್ಕಾಗಿ ಈ ಅಪೂರ್ವ ಸಾಧನೆಯ ಸಾಹಸ ಗಾಥೆಯನ್ನು 'ಅಪೋಲೋ ಹನ್ನೊಂದು' ಕಾವ್ಯ ಖಂಡದ 103 ಪದ್ಯಗಳಲ್ಲಿ ಅದರೆಲ್ಲ ವಿವರಗಳಲ್ಲಿ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

ಶತಶತವರ್ಷಗಳದ್ಭುತ ಶೋಧಕೆ
ಮಕುಟವನಿಟ್ಟವೊಲಂದು
ಹಾರಿದನೀತನು ಬಾಹ್ಯಾಂತರಿಕ್ಷಕೆ
ಇಳಿದನು ಚಂದ್ರನೊಳಿಂದು

ಎಂದು ರೋಮಾಂಚಿತರಾಗುತ್ತಾರೆ.

ಪ್ರಾರಂಭದಲ್ಲೇ ಸೂರ್ಯನ ಬಾಯಿಂದಲೇ ಮಾನವನ ವಿಜಯವನ್ನು ಮೆಚ್ಚಿ ಹೊಗಳಿಸುವ ರೀತಿಯಲ್ಲಿ ಕಲ್ಪಿಸಿರುವುದು ಉಜ್ವಲವಾಗಿದೆ.

ಇವರು ಅಮೆರಿಕೆಯವರು ನಾಚಿಸಿದರು
ಖಂಡಖಂಡದ ಎಲ್ಲ ಜನರ
ಭೂಚರರಿವರು ನಭೋಚರರಾದರು
ಇವರ ಸಾಹಸವಿದು ಅಮರ

ಕವಿ ಎಸ್.ವಿ.ಪಿ. ಕೇವಲ ನಿಸರ್ಗ, ಬದುಕಿನ ಕಷ್ಟ ಸುಖಗಳನ್ನಷ್ಟೇ ಕುರಿತು ಬರೆವ ಕವಿಯಾಗಿರದೆ, ಮನುಷ್ಯನ ವೈಜ್ಞಾನಿಕ ಸಾಹಸಕ್ಕೂ ಸ್ಪಂದಿಸುವ ಕವಿ ಎಂದು ಈ ಕಾವ್ಯ ಖಂಡ ಸಾರುತ್ತದೆ. ಅಷ್ಟೇ ಅಲ್ಲ ವೈಜ್ಞಾನಿಕ ಸಂಗತಿಯೊಂದನ್ನು ಕಾವ್ಯದ ವಸ್ತುವಾಗಿ ಮಾಡಿಕೊಂಡು ಇಂಥ ಸುಂದರ ಸುದೀರ್ಘವಾದ ಕಾವ್ಯ ಬರೆದವರಲ್ಲಿ ಭಟ್ಟರೇ ಮೊದಲನೆಯವರು.

"ಸಾವಿರ ಸೋಲಿನ ಸೋಪಾನವನ್ನೇರಿಯೆ ಈ ಸಿದ್ಧಿ ಆಗಿರುವುದು" ಎಂಬುದರ ಅರಿವಿಟ್ಟುಕೊಂಡು ಕ್ರಾಂತದರ್ಶಿಯಂತೆ

ವಿದ್ಯೆಗೆ ತುದಿಯೆಂಬುದುಂಟೆ
ತುದಿಮುಟ್ಟಿ ಹೋದೆವೆ ನಾವು
ನಾಳೆಗೆ ಆ ಶುಕ್ರ ದೂರವಾಗಿಹುದುಂಟೆ
ಇಲ್ಲಿಗೆ ಮುಗಿಯಿತೆ ಗೆಲುವು

ಎಂದು ಹೇಳಿದ್ದು ನಿಜವಾಗಿದೆ ಎನ್ನಲು ಮಾನವ ಈಗ ಮಂಗಳಯಾನ ಮಾಡಿ ಅಲ್ಲೂ ನೆಲಸುವ ಹಂಚಿಕೆ ಹಾಕುತ್ತಿರುವುದೇ ಅದಕ್ಕೆ ಸಾಕ್ಷಿ.

'ಸಂಜೆ ಮಲ್ಲಿಗೆ' ಭಟ್ಟರ ಕೊನೆಯ ಕಿರು ಭಾವಗೀತ ಗುಚ್ಛ, ಬಾಳಿನ ಏಳು ಬೀಳುಗಳಲ್ಲಿ, ಕಷ್ಟ ಪರಂಪರೆಗಳ ಸೋಪಾನವೇರಿ ಬಂದ ಬಗೆಯ ಜೊತೆ ಜೊತೆಗೇ ತಮ್ಮ ದೈವಶ್ರದ್ಧೆಯನ್ನು ಹನ್ನೆರಡು ಕವನಗಳಲ್ಲಿ ಹಾಡಾಗಿ ಹರಿಸಿದ್ದಾರೆ. 'ನೆಹರೂ', 'ತಗಡೂರು ಗಾಂಧಿ' ಮೊದಲಾದ ಕವನಗಳಲ್ಲಿ ಆ ದೇಶ ಭಕ್ತರ, ರಾಷ್ಟ್ರ ನಾಯಕರ, ರಚನಾತ್ಮಕ ಕಾರ್ಯಗಳನ್ನು ಸ್ಮರಿಸುವ ಮೂಲಕ ಅವರ ವ್ಯಕ್ತಿತ್ವ ಚಿತ್ರಣ ಮಾಡಿದ್ದರೆ, 'ಈ ಯುಗಾದಿ' ಯಲ್ಲಿ ಬಾಳಿನಲ್ಲಿ ನವ ಉತ್ಸಾಹ, ಉಲ್ಲಾಸ, ಸಂತಸಗಳನ್ನು ಎಲ್ಲರಲ್ಲಿ ಉಕ್ಕಿಸುವ ಹಬ್ಬವೆಂದು ಯುಗಾದಿಯ ಹಿರಿಮೆಯನ್ನು ಕೈವಾರಿಸಿದ್ದಾರೆ.

ಒಟ್ಟಾರೆ ಭಟ್ಟರ ಭಾವಗೀತ ಕಾವ್ಯಪ್ರಪಂಚದ ಚೆಹರೆಗಳನ್ನು ಗಮನಿಸಿದಾಗ, ಎದ್ದುಕಾಣುವ ಅಂಶವೆಂದರೆ ಅದೊಂದು ಶುದ್ಧ ಸೌಂದರ್ಯಲೋಕವೆಂಬುದು ಮತ್ತು ಈ ಕವಿತೆಗಳನ್ನು

ರಚಿಸಿದ ಕವಿಯ ಮನೋಧರ್ಮ ಪ್ರಧಾನವಾಗಿ ಒಬ್ಬ ರಸೇಪ್ಸುವಿನದು ಹಾಗೂ ಸೌಂದರ್ಯೋಪಾಸಕನದು ಎಂಬುದು. ಪ್ರಕೃತಿಯ, ಸುಂದರ, ರಮ್ಯ, ಚಿತ್ರಗಳನ್ನು ತುಂಬ ಚಿತ್ರವತ್ತಾಗಿ, ಗಾಢವಾಗಿ, ವಿಪುಲವಾಗಿ ನೀಡುವ ಹಾಗೆಯೇ ಹೆಣ್ಣು ಗಂಡಿನ ಸ್ನೇಹ, ಪ್ರೇಮಗಳ ಉತ್ಕಟ ಚಿತ್ರಣ ನೀಡಬಲ್ಲರು. ದೇಶಪ್ರೇಮ, ನಾಡು ನುಡಿಗಳ ಸೇವೆಗೈದ ಗುರು ಹಿರಿಯರನ್ನು ಕುರಿತು ಮನದುಂಬಿ ಹಾಡಬಲ್ಲರು. ಎಂದೇ ಸಹೃದಯರ ನೆನಪಿನಲ್ಲುಳಿಯುವ ಹಲವಾರು ಶ್ರೇಷ್ಠ ಭಾವಗೀತೆಗಳನ್ನು ನೀಡಿದ್ದಾರೆ. ಆದರೆ ಗಾಢ ರಾಷ್ಟ್ರ ಭಕ್ತಿ, ಹೋರಾಟದ ಪ್ರೇರಣೆ ನೀಡುವಂಥ ಕಾವ್ಯ ರಚಿಸಲಿಲ್ಲ. ಬದುಕಿನ ನೂರೆಂಟು ಸಮಸ್ಯೆ, ಹಸಿವು, ಬಡತನ, ಅಸಮಾನತೆ, ಶೋಷಣೆ ಸಂಘರ್ಷಗಳಿಗೆ ಅವರು ದನಿಯಾಗಲಿಲ್ಲ. ಹಾಗಾಗಿ "ಭಟ್ಟರ ಕಾವ್ಯಲೋಕ ಒಂದು ರಮ್ಯ, ಸೌಮ್ಯ ಪ್ರಪಂಚ" ವೆಂಬ, ಕವಿ ಊದಿದ "ಸುಳಿದಳಿರೆಲೆಯ ಪೀಪಿ" ಕೊಳಲಾಯಿತು. ಆದರೆ ಕಹಳೆಯಾಗಲಿಲ್ಲ. ಮೃದಂಗವಾಯಿತು. ಭೇರಿಯಾಗಲಿಲ್ಲ... ಒಟ್ಟಾರೆ ಯುಗಧರ್ಮಕ್ಕೆ ತಕ್ಕಂತೆ ಭಟ್ಟರ ಮನೋಧರ್ಮ ಶೈಲಿಗಳು ಬದಲಾಗಲಿಲ್ಲ"[16] ಎಂಬ ಸ್ವಲ್ಪ ಕಟುವೆನಿಸಿದರೂ ವಸ್ತುನಿಷ್ಠ ವಿಮರ್ಶೆಯ ಮಾತಿಗೆ ಎಡೆ ದೊರೆತಿದೆ. ಅಷ್ಟೇ ಅಲ್ಲ, ಐವತ್ತರ ದಶಕದಲ್ಲಿ ಬದಲಾದ ಕನ್ನಡ ಕಾವ್ಯಮಾರ್ಗ ತಮ್ಮ ಮನೋಧರ್ಮಕ್ಕೆ ಹೊಂದಿಬಾರದ ಕಾರಣದಿಂದಲೋ ಏನೋ, ಹಳೆಯ ರೀತಿಯ ಭಾವಗೀತಗಳ ರಚನೆಯನ್ನು ಪೂರ್ತಿ ಬಿಟ್ಟುಕೊಡದಿದ್ದರೂ ಹೆಚ್ಚು ಕಡಿಮೆ ಸ್ಥಗಿತಗೊಳಿಸಿ ಮುಕ್ತಕಗಳು ಮತ್ತು ಅನುವಾದಗಳತ್ತ ತಿರುಗಿದರು.

2. ಮುಕ್ತಕಗಳು

'ಮುಕ್ತಕ' ಒಂದು ಪ್ರಸಿದ್ಧವಾದ ಮತ್ತು ಅತ್ಯಂತ ಜನಪ್ರಿಯವಾದ ಕಾವ್ಯ ಪ್ರಕಾರ. ಸುಭಾಷಿತ, ಸೂಕ್ತಿ, ಸದುಕ್ತಿ ಅನ್ಯೋಕ್ತಿ, ಚಾಟುಪದ್ಯ ಎಂದೆಲ್ಲ ಬೇರೆ ಬೇರೆ ಹೆಸರುಗಳಿಂದ ಇದನ್ನು ಗುರುತಿಸಲಾಗುತ್ತದೆ. "ಎರಡನೇ ನಾಗವರ್ಮನು ಇದನ್ನು 'ಇಡುಕುಂಗಬ್ಬ' ಎಂಬ ಹೆಸರಿನಿಂದ ಕರೆಯುತ್ತಾನೆ. ಆಕಾರದಲ್ಲಿ ಕಿರಿದಾದ, ಆದರೆ ಮಹತ್ವದಲ್ಲಿ ಹಿರಿದಾದ ಹಿಂದು ಮುಂದಿನ ಪದ್ಯಗಳೊಂದಿಗೆ ಯಾವುದೇ ಸಂಬಂಧವಿರದೆ ಸ್ವಯಂಪೂರ್ಣ ಕವಿತೆಯಾದ ಇದು ಧ್ವನಿ ಪೂರ್ಣವಾದ ಮತ್ತು ರಸಯುಕ್ತವಾದ ಕಾವ್ಯಜಾತಿ. ವಿವರಣೆ, ಕಥೆ, ಅನಗತ್ಯ ಪದಗುಚ್ಛಗಳನ್ನು ಕಳೆದುಳಿದ ರಸಘಟ್ಟಿಯಾದ ಇದಕ್ಕೆ ಸುಖ, ದುಃಖ, ಆಸೆ, ಉತ್ಸಾಹ, ಕ್ರೋಧ, ವ್ಯಥೆ, ಪ್ರೇಮ, ವಿರಹ ಭಾವಗಳು ಹಾಗೂ ರಾಜಕೀಯ, ಪೌರಾಣಿಕ, ಚಾರಿತ್ರಿಕ, ವೈಯಕ್ತಿಕ – ಹೀಗೆ ಯಾವುದೇ ವಿಚಾರವೂ ವಸ್ತುವಾಗಬಹುದು.[17] ಸಂಸ್ಕೃತದಲ್ಲಿ ಶ್ಲೋಕ ಛಂದಸ್ಸಿನ ರೂಪದ ಎರಡು ಸಾಲಿನ ರಚನೆಗಳು ಮತ್ತು ಚೌಪದಿಗಳು ಸರ್ವೇಸಾಮಾನ್ಯವಾದರೆ, ಕನ್ನಡದಲ್ಲಿ 2, 3, 4 ಸಾಲಿನ ಮುಕ್ತಕಗಳ ದ್ವಿಪದಿ, ತ್ರಿಪದಿ, ಚೌಪದಿ ಮತ್ತು ಸಾಂಗತ್ಯಗಳು ಸರ್ವೇ ಸಾಮಾನ್ಯ. ಸಾಲುಗಳ ಸಂಖ್ಯೆಯ ಮಿತಿ ಇಲ್ಲವೆಂದರೂ ಹೆಚ್ಚು ಲಂಬಿಸದೆ ಆರೆಂಟು ಸಾಲುಗಳಲ್ಲಿ ಮುಕ್ತಾಯವಾಗುತ್ತದೆ.

ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ ಮಾತಿನಲ್ಲೇ ಹೇಳುವುದಾದರೆ 'ಮುಕ್ತಕವು ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿ ಪರಿಪೂರ್ಣವಾಗಿ ಮುತ್ತಿನ ಹಾಗೆ ಇಡಿಯಾಗಿ, ಬಿಡಿಯಾಗಿ ದುಂಡಾಗಿ ಇರುತ್ತದೆ. ಈ ಮುಕ್ತಗಳಲ್ಲಿ ಒಂದೇ ಒಂದು ಭಾವ ಪ್ರಧಾನವಾಗಿ ಇರುತ್ತದೆ. ಕಥೆ, ರಚನೆ, ವಿವರಗಳನ್ನೆಲ್ಲ ಕಳಚಿಕೊಂಡು, ಭಾವ ಪ್ರಚುರವಾಗಿ ಧ್ವನಿ ಪೂರ್ಣವಾಗಿ ರಸಗಮ್ಯವಾಗಿ ಈ ಚಿತ್ರಗಳು ವಿರಾಜಿಸುತ್ತವೆ. ಇವುಗಳ ರಸಾಸ್ವಾದನೆ ಓದುವವನ ವಿದ್ಯೆ,

ಬುದ್ಧಿ, ನಾಗರಿಕತೆ, ಸಂಸ್ಕಾರ ಲೋಕಾನುಭವ, ಅಭಿರುಚಿಗಳನ್ನವಲಂಬಿಸಿರುತ್ತದೆ'. ಕಥೆಯ ಹಂಗಿಲ್ಲದೆ, ಭಾವ ಅಥವಾ ವಿಚಾರವೊಂದನ್ನು, ಧ್ವನಿಪೂರ್ಣವಾಗಿ ರಸಸಮನ್ವಿತವಾಗಿ ಹರಳುಗಟ್ಟಿಸುವ ಅಪೂರ್ವ ಪ್ರಕಾರ. "ನಾಲ್ಕಾರು ಮಾತುಗಳಲ್ಲಿ ಭಾವಚಿತ್ರವೊಂದನ್ನು ಸೃಷ್ಟಿಸಬಲ್ಲ ಕವನರೂಪವೇ ಮುಕ್ತಕ (ಡಾ. ಪ್ರಭುಶಂಕರ)". ಭಾವಪ್ರಖರತೆ, ರಸಾರ್ದ್ರತೆ, ಧ್ವನಿ ಪ್ರಚುರತೆಗೆ ಇವು ಹೆಸರಾಗಿವೆ.

ಕನ್ನಡದಲ್ಲಿ ಸರ್ವಜ್ಞನ ವಚನಗಳು, ಸೋಮೇಶ್ವರ ಶತಕ, ಹರಿಹರನ ಹಾಗೂ ರತ್ನಾಕರನ ಶತಕಗಳು ಇವೆಲ್ಲ ಮುಕ್ತಕದ ವ್ಯಾಪ್ತಿಯಲ್ಲೇ ಬರುತ್ತವೆ. ಹೊಸಗನ್ನಡದಲ್ಲಂತೂ ಮಂಕುತಿಮ್ಮನ ಕಗ್ಗ ತುಂಬಾ ಹೆಸರಾಂತ ಮುಕ್ತಕ ಕೃತಿ.

ಭಟ್ಟರ ಕೃತಿಲೋಕದಲ್ಲಿ ಉಳಿದೆಲ್ಲ ಕೃತಿಗಳದು ಒಂದು ತೂಕವಾದರೆ, ಮುಕ್ತಗಳದೇ ಒಂದು ತೂಕ. ಕಾರಣ ಅವರಷ್ಟು ಮುಕ್ತಕಗಳನ್ನು ರಚಿಸಿದ ಇನ್ನೊಬ್ಬ ಕವಿ ಕನ್ನಡದಲ್ಲಿ ಇಲ್ಲ. ಸಂಸ್ಕೃತ ಸಾಹಿತ್ಯದ ಮುಕ್ತಕಗಳ ಓದಿನಿಂದ ಬಹುವಾಗಿ ಪ್ರಭಾವಿತರಾದ ಭಟ್ಟರು ಬೇರೆಲ್ಲ ಸಾಹಿತ್ಯ ಪ್ರಕಾರಗಳಿಗಿಂತ ಮುಕ್ತಕ ರಚನೆ ತಮ್ಮ ಜಾಯಮಾನಕ್ಕೆ ಹೆಚ್ಚು ಒಗ್ಗುವಂಥದೆಂಬುದನ್ನು ಕಂಡು ಕೊಂಡರೆನಿಸುತ್ತದೆ. ಒಟ್ಟು ಏಳು ಮುಕ್ತಕ ಸಂಕಲನಗಳನ್ನು ನೀಡಿದ್ದಾರೆ. ಈ ಏಳು ಮುಕ್ತಕ ಸಂಗ್ರಹಗಳು ಒಳಗೊಳ್ಳುವ ಮುಕ್ತಕಗಳ ಸಂಖ್ಯೆ ಐದು ಸಾವಿರಕ್ಕೂ ಅಧಿಕ. ತ್ರಿಪದಿ, ಏಳೆ, ಸಾಂಗತ್ಯ ಮುಂತಾದ ಕನ್ನಡದ ಪ್ರಾಚೀನ ದೇಸಿ ಛಂದೋ ಬಂಧಗಳಲ್ಲಿ ಇವು ರಚಿತವಾಗಿವೆಯಾದರೂ ಭಟ್ಟರಿಗೆ ಒಲಿದು ಬಂದಿರುವುದು ಸಾಂಗತ್ಯ. ಹಾಗಾಗಿಯೇ ಸಾಂಗತ್ಯದಲ್ಲಿ ರಚಿತವಾಗಿರುವ ಮುಕ್ತಕಗಳ ಸಂಖ್ಯೆ ಅತಿ ಹೆಚ್ಚು. 'ಇಂದ್ರ ಚಾಪ', 'ಚಂದ್ರವೀಧಿ', 'ಚಿತ್ರಪಥ' 'ಮಳೆಬಿಲ್ಲು' ಗಳು ಇಡಿಯಾಗಿ ಸಾಂಗತ್ಯದಲ್ಲಿವೆ.

ಮುಕ್ತಕಗಳನ್ನೇ ವಿಶೇಷವಾಗಿ ಬರೆಯಲು ಕಾರಣವೆಂದರೆ "ಬಿಡುವು ದೊರೆತಾಗಲೆಲ್ಲ ಮುಕ್ತಕಗಳ ರಚನೆ ಸಾಧ್ಯ. ಪೇಟೆಯಲ್ಲಿ ವಾಕಿಂಗ್ ಹೋದಾಗ, ತರಕಾರಿ ತರುವಾಗ, ಹೂ ಮಾರುವವಳೊಡನೆ ಚರ್ಚೆ ನಡೆಸಿದಾಗ, ಬಸ್‌ಸ್ಟ್ಯಾಂಡಿನಲ್ಲಿ ಕಾಯುತ್ತಿರುವಾಗಲೆಲ್ಲ ವಸ್ತುಗಳು ಬೇಕಷ್ಟು ಸಿಗುತ್ತವೆ. ಚಿಕ್ಕ ಘಟನೆಗಳು ಸಾಕಾಗುತ್ತವೆ. ಬಿಂದು ಮಾತ್ರವಾಗಿರುತ್ತವೆ. ಸಿಂಧು ಮಾಡುವುದಕ್ಕೆ ಆಗುವುದಿಲ್ಲ. ಸಾಂಗತ್ಯ ತ್ರಿಪದಿ, ಏಳೆ, ಗಾದೆ, ವಚನಗಳ ಸೃಷ್ಟಿ ಎಲ್ಲ ಹೀಗೆಯೇ ಆದವು. ನನ್ನ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಬೇಕೆಂಬ ಬಯಕೆಯೂ ಇತ್ತು. ಸ್ನಾತಕೋತ್ತರ ಅಧ್ಯಾಪನ, ಅಧ್ಯಯನಗಳು ಈ ರಚನೆಗಳಿಗೆ ಪ್ರೇರಕ. ಒದಗಿದ ಪರಿಕರಗಳೇ ಸಹಾಯಕವಾದವು. ದೊಡ್ಡದು ಬರೆಯುವುದಕ್ಕೆ ವೇಳೆಯಿಲ್ಲ. ಚಿಕ್ಕದರ ಸೃಜನೆಗೆ ಹುದ್ದೆ ತಡೆಯಾಗುವುದಿಲ್ಲ"[18] ಎಂದು ಹೇಳಿರುವುದೇ ಅಲ್ಲದೆ "ಕನ್ನಡಕ್ಕೆ ತಮ್ಮದೇ ಆದ ಕೊಡುಗೆಯೆಂದರೆ ಮುಕ್ತಕಗಳ ಸೃಷ್ಟಿ" ಎಂದು ಆ ಬಗ್ಗೆ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುವಾಗ ಪ್ರೊ.ಭಟ್ಟರು ಹೇಳಿರುವುದು ವಸ್ತುಸ್ಥಿತಿಯ ವಿವರಣೆಯೇ ಆಗಿದೆ. ಸಂಸ್ಕೃತದಿಂದ ಪ್ರಾಕೃತದಿಂದ ಅನುವಾದಿಸಿದ ಮುಕ್ತಗಳೂ ಸೇರಿದರೆ ಒಟ್ಟು ಮುಕ್ತಗಳ ಸಂಖ್ಯೆ ಆರು ಸಾವಿರವನ್ನೂ ಮೀರುತ್ತದೆ.

1965ರಲ್ಲಿ ಪ್ರಕಟವಾದ **'ಇಂದ್ರಚಾಪ'** ಅವರ ಮೊದಲ ಮುಕ್ತಕಗಳ ಸಂಕಲನವಷ್ಟೇ ಅಲ್ಲ; ಅವರ ಮುಕ್ತಕ ಕಾವ್ಯ ಮಾಲೆಯ ಸಿದ್ಧಿ ಶೃಂಗ. ಇದರಲ್ಲಿ ಒಟ್ಟು 1200 ಸಾಂಗತ್ಯಗಳಿವೆ. ಇದನ್ನು ಸ್ವವಿಚಾರ ಲಹರಿ ಮತ್ತು ಸುಭಾಷಿತ ಸಾರವೆಂದು ಕರೆದು ಮೊದಲ ಮುನ್ನೂರು ಪದ್ಯಗಳಲ್ಲಿ ತಮ್ಮ ಸ್ವಂತ ಬದುಕಿನ ಸುಖ ದುಃಖಗಳ, ನೋವು ನಲಿವುಗಳ ಕಥಾ ಹಂದರವನ್ನು ನಿರ್ಮಿಸಿದ್ದಾರೆ. ಉಳಿದ 900 ಮುಕ್ತಕಗಳಲ್ಲಿ ತಮ್ಮ ಲೋಕಾನುಭವದ

ವಿಚಾರಗಳು, ಸಂಗತಿಗಳು ಹಾಗೂ ಸಂಸ್ಕೃತದಲ್ಲಿ, ಇಂಗ್ಲಿಷಿನಲ್ಲಿ ತಾವು ಓದಿದ, ಕೇಳಿದ ಹತ್ತು ಹಲವು ಸಂಗತಿಗಳಿಗೆ ಸಾಂಗತ್ಯದ ರೂಪುಕೊಟ್ಟಿದ್ದಾರೆ.

ಬೇಂದ್ರೆಯವರ ಸಖಿಗೀತದ ನಂತರದಲ್ಲಿ ಇಷ್ಟೊಂದು ದೀರ್ಘವಾಗಿ ಆತ್ಮಕಥನರೂಪದ ಕಾವ್ಯವನ್ನು ನೀಡಿದವರು ಎಸ್.ವಿ.ಪಿ. ಅವರೇ. ಆದರೆ ಅದು ನೀರಸ ಬದುಕಿನ ನಿರೂಪಣೆಯಾಗದೆ, ಕಾವ್ಯದ ಮಾಂತ್ರಿಕ ಸ್ಪರ್ಶ ಪಡೆದುಕೊಂಡು ಎಲ್ಲರ ಹೃದಯ ಮಿಡಿಸುತ್ತದೆ. 'ಇಂದ್ರಚಾಪ' ಎಂಬ ಶೀರ್ಷಿಕೆಗೆ ಕಾರಣವೂ ಸ್ಪಷ್ಟ.

ಮನವೆ ಬಾನಂಗಳ ದುಗುಡವೆ ಮಳೆಮೋಡ
ಕವಿಗಣ ಸೂಕ್ತಿಯೆ ದಿನಪ
ಮೂಡಿತು ಮಳೆಬಿಸಿಲಿನ ಮೇಳದೊಳು ನೋಡ
ಕವಿತೆಯ ಈ ಇಂದ್ರಚಾಪ.

ಬದುಕಿನಲ್ಲಿ ನಲಿವಿಗಿಂತ ನೋವನ್ನೇ ಹೆಚ್ಚು ಕಂಡವರಾದರೂ, ನಲಿವಿನ ದಿನಗಳೂ ಇದ್ದುವು. ತಮ್ಮ ಬದುಕಿನ ಸುಖದ ಸಂದರ್ಭವನ್ನು ಈ ಉಪಮೆಯ ಮೂಲಕ ಹೇಳುತ್ತಾರೆ.

ತಂಗಾಳಿ ಸುಳಿದಾಗ ಮಲ್ಲಿಗೆ ಬನದೊಳು
ಹೊಕ್ಕಾಡುವಾರಡಿಯಂತೆ
ಮನೆಯೊಳು ಮಠದೊಳು ನಾಡೊಳು ಬೀಡೊಳು
ಮನವಾಡಿ ನಲಿಯಿತೋರಂತೆ [ಇಂ.ಚಾ.ಪ 2–98 ಪು. 42]

ತುಮಕೂರಿನಲ್ಲಿದ್ದಾಗ, ಸ್ವಾತಂತ್ರ್ಯ ಚಳುವಳಿ ಪರಾಕಾಷ್ಠೆಗೇರಿದ್ದ ದಿನಗಳಲ್ಲಿ, ಕಾಲೇಜಿನಲ್ಲಿ ತರಗತಿಯಲ್ಲಿ ಪಾಠಮಾಡುತ್ತಿದ್ದಾಗ, ಕೈ ಬಾಂಬು ಸಿಡಿದು, ಇನ್ನೇನು ತಮ್ಮ ಮೇಲೆ ಎರಗಲಿದ್ದ ಆಘಾತವೊಂದರಿಂದ ಸ್ವಲ್ಪದರಲ್ಲೇ ಪಾರಾದ ಸಂದರ್ಭವನ್ನು ಸೊಗಸಾದ ಮುಕ್ತಕವಾಗಿಸಿದ್ದಾರೆ:

ನನ್ನ ನಗೆ ಮಾತಿಗೆ ಮರುಳಾಗಿ ಮೃತ್ಯುವು
ಕೂಡ ಮೈಮರೆಯಿತೊ ಹೇಗೆ?
ಅಲ್ಲದೊಡೆನ್ನಿಂದಲಿಂದು ಈ ಕಾವ್ಯವು
ರಚಿತವಾಗುತಲಿತ್ತೆ ಹೇಗೆ?

ಮುಂದೆ ಶಿವಮೊಗ್ಗಕ್ಕೆ ಹೋದ ಪ್ರಾರಂಭದ ಕೆಲವು ವರ್ಷಗಳಷ್ಟೇ ಅವರ ಸಂತಸದ ದಿನಗಳು. ಆಮೇಲೆ ಮನೆಯವರ ಮಾನಸಿಕ ಸ್ಥಿತಿ ಏರುಪೇರಾಗತೊಡಗಿದ್ದು, ಮಧ್ಯೆ ಮಧ್ಯೆ ಸ್ವಲ್ಪ ಗುಣವಾಯಿತೆನ್ನುವ ಲಕ್ಷಣ ತೋರಿದರೂ ಗುಣವಾಗದೆ ವಿಷಮಿಸುತ್ತಲೇ ಹೋಯಿತು ಪರಿಣಾಮ, ಮನೆಯಲ್ಲಿ ಹೆಣ್ಣಾಗಿ, ಮಕ್ಕಳಿಗೆ ತಾಯಾಗಿ, ಹೊರಗೆ ದುಡಿವ ಗಂಡಾಗಿ ಪಾತ್ರ ನಿರ್ವಹಿಸಬೇಕಾದ ಸಂಕಷ್ಟಗಳ ಸುಂಟರಗಾಳಿಗೆ ಸಿಕ್ಕಿದ ತರಗೆಲೆಯಾದ ಜೀವದ ನೋವು ಹಾಡಾಗಿ ಒಡಮೂಡಿರುವ ಬಗೆ ಸಹೃದಯರ ಹೃದಯವನ್ನು ಕಲಕುವಂತಿವೆ.

ಸಂಸಾರದೊರಳಿಗೆ ವಿಧಿ ರುಬ್ಬುಗುಂಡಾಗಿ
ಚಟ್ನಿ ಮಾಡಿದನೆನ್ನ ತಿರುವಿ
ತಿರುವಿದರಿನ್ನಷ್ಟು ಹೋದೀತು ಹಾಳಾಗಿ
ಧರ್ಮನೆ ನೀನೆಂದು ಬರುವಿ

ಎಂದು ಕಂಗೆಡುವಂತಾಯಿತು. ಇದರ ಜೊತೆಗೆ ಬಂಧು ಬಾಂಧವರ ಸಾವು ನೋವುಗಳಿಂದ ನೊಂದ ಈ ಅಸಹಾಯಕ ಸ್ಥಿತಿಗೇನು ಹೇಳುವುದು.

ಎಡದೊಳೆ ಹೋದರು ಹೇ ಬಾಜು ಎಂದರು
ಎಚ್ಚರದೊಳೆ ನಡೆಸಿದರು
ನನ್ನ ಬಾಳಿನ ಗಾಡಿಗಪಘಾತವೆನುವುದು
ನಿತ್ಯದ ಮಾತಾಯಿತಿಂದು

ಬದುಕಿನ ಸಕಲ ಸಂಕಟ ನೋವುಗಳನ್ನು ಮರೆಸುವ ಹಾಸ್ಯ ವಿನೋದಗಳನ್ನು ತಮ್ಮ ಮನೋಧರ್ಮವಾಗಿ ರೂಢಿಸಿಕೊಂಡು ಬಾಳುವ ಕಲೆಯನ್ನು ರೂಪಿಸಿಕೊಂಡದ್ದು ಅವರ ವೈಶಿಷ್ಟ್ಯ.

ದಿನದ ದೈನಿಕಗಳಲ್ಲಿ ಪಂಪ, ಕಾಳಿದಾಸರ ಕಾವ್ಯಗಳನ್ನು ನೆನೆದುಕೊಳ್ಳುತ್ತ ಸಂಸಾರದ ದುಃಖಗಳನ್ನು ಮರೆಯುವುದನ್ನು, ಪಾಡನ್ನು ಹಾಡಾಗಿಸುವುದನ್ನು ಬಾಳಿನ ಸೂತ್ರವಾಗಿಸಿಕೊಂಡದ್ದನ್ನು ಹೀಗೆ ಹೇಳುತ್ತಾರೆ.

ಸಾಹಿತ್ಯವನು ಕಂಡೆ ಸಂಸಾರದೊಳು ಹೀಗೆ
ಸಾಂಗತ್ಯವಾಗಿಸಿ ಕೊನೆಗೆ
ಇಲ್ಲದೆ ಹೋದರೆ, ಉಸಿರಾಡುವುದು ಹೇಗೆ
ಹೊಗೆಗಟ್ಟಿದೀಗೂಡಿನೊಳಗೆ

ಎಂದು ವಿವೇಕಯುತ ತೀರ್ಮಾನ ತಾಳಿ ಸಾಹಿತ್ಯ ರಚನೆಗೆ ಮನಗೊಟ್ಟುದನ್ನು, ಅದರಿಂದ ಸಂಕಷ್ಟದ ಸರಮಾಲೆಯನ್ನು ದಾಟಿದ ಬಗೆಯನ್ನು, ಈ ಪದ್ಯದಲ್ಲಿ ಒಡಮೂಡಿಸಿದ್ದಾರೆ.

ಒಲೆಯ ಮುಂದಿರುವಾಗ ತಲೆಯೊಳು ಸುಳಿವುದು
ಪಂಪನ ಪದ್ಯವದೊಂದು
ಮಕ್ಕಳಿಗೆರೆವಾಗ ಮನ ಮಡಿಗೊಳುವುದು
ಕಾವ್ಯ ಗಂಗೆಯ ಬಿಂದುವಿಳಿದು

ಉಳಿದ 900 ಸಾಂಗತ್ಯಗಳಲ್ಲಿ ಮಾಗಿದ ಅನುಭವದ ಪರಿಣಾಮವಾಗಿ ಬಂದ ತಿಳಿವು, ಬದುಕಿನ ಹಾದಿ ಸವೆಸುತ್ತಿರುವ ಎಲ್ಲರಿಗೂ ಅರಿವಿನ ಬೆಳಕನ್ನು ಪ್ರಖರವಾಗಿ ಚೆಲ್ಲುವುದು ಗೋಚರವಾಗುತ್ತದೆ. ಅನ್ಯಮೂಲದಿಂದ ಅನುವಾದಿತಗೊಂಡವುಗಳ ಜೊತೆಗೆ ಕವಿಯ ಅನನ್ಯ ಅನುಭವಗಳು ಸಾಂಗತ್ಯದ ರೂಪುಧಾರಣೆ ಮಾಡಿಕೊಂಡು ಇದರಲ್ಲಿ ಎಡೆಪಡೆದಿವೆ. ಆದರೆ ಇವೆಲ್ಲವೂ ಸುಂದರವಾದ ಉಪಮೆ, ರೂಪಕ, ದೃಷ್ಟಾಂತಗಳ ರೂಪದಲ್ಲಿ ಮೂಡಿರುವ ಕಾರಣದಿಂದ ಅವು ನಮಗೆ ಆಪ್ಯಾಯಮಾನವೆನಿಸುತ್ತವೆ. ಲೋಕದ ಡೊಂಕನ್ನು, ಸ್ವಭಾವವನ್ನು ಕಂಡು ಕವಿ ನುಡಿದ ಅನ್ಯೋಕ್ತಿಗಳಿವೆ.

ಅನ್ಯರ ಸಾಧನೆಯ ನೆರಳಿನಲ್ಲೇ ಇದ್ದರೂ ತನ್ನದೇ ಸಾಧನೆಯೆಂದು ಬೀಗುವವರನ್ನು ಈ ಪದ್ಯ ವಿಡಂಬಿಸುತ್ತದೆ.

ಎತ್ತಿನ ಗಾಡಿಯ ಕೆಳಗಡೆಯೊಳೆ ತೂರಿ
ಹೋಗುತಲಿದ್ದರು ಶುನಕ
ತಾನೆಯೆ ಗಾಡಿಯನೆಳೆಯುವೆನೆಂದಾರಿ
ಬಡಬಡಿಪುದು ಕೊನೆತನಕ

ಮಹಾವ್ಯಕ್ತಿಗಳ ಸಂಪರ್ಕ ಘನವಾದ ಫಲ ನೀಡಿದರೆ, ಅಲ್ಪರ ಸಂಗ ಅಲ್ಪ ಫಲವನ್ನೇ ನೀಡುತ್ತದೆನ್ನುವ ಸುಭಾಷಿತ.

ಸಿಂಹದ ಗುಹೆಯನು ಹೊಕ್ಕರೆ ಸಿಗುವುದು
ದಂತದ ಮುತ್ತಿನರಾಸಿ
ಜಂಬುಕದೆಡೆಯನು ಹೊಕ್ಕರೆ ಸಿಗುವುದು
ಗೊರಸಿನ ಚರ್ಮದ ಹೇಸಿ

ಬದುಕು ಯಶಸ್ವಿಯಾಗಲು, ಬದುಕಿನಲ್ಲಿ ನಿಜವಾದ ಸಾಧನೆ ಏನೆಂದು ಹೇಳುವ, ಹಸನಾದ ಬದುಕನ್ನು ಬಾಳಲು ಮಾರ್ಗದರ್ಶಕವಾದ ಹಲವಾರು ಸಾಂಗತ್ಯಗಳು ಇಲ್ಲಿವ

ನದಿಗೆದುರೀಸುತ ಹೋಗುವುದಾದರೆ
ಜೀವಂತ ಮತ್ಸ್ಯವೆ ಬೇಕು
ಹೊನಲಿನ ದಿಕ್ಕಿಗೆ ಸಾಗುವುದಾದರೆ
ಕೊಳೆತೊಂದು ಕಸಕಡ್ಡಿ ಸಾಕು

ಬದುಕಿನ ಸ್ವರೂಪವನ್ನು ಕಟ್ಟಿಕೊಡುವ ಈ ಸಾಂಗತ್ಯದಲ್ಲಿ ಬಳಸಲಾಗಿರುವ ಉಪಮೆ ಇಂದಿನ ವೈಜ್ಞಾನಿಕ ಯುಗದ ವಿಚಾರವನ್ನೊಳಗೊಳ್ಳುವ ಕಾರಣಕ್ಕಾಗಿ ಒಮ್ಮೆಗೇ ಹಿಡಿಸುತ್ತವೆ.

ಬೀದಿಯ ವಿದ್ಯುತ್ತಿನೊಂದು ಕಂಬದ ಮೇಲೆ
ಸ್ವಿಚ್ಚಿನ ಪೆಟ್ಟಿಗೆಯೊಳಗೆ
ಗೂಡು ಕಟ್ಟಿದ ಗುಬ್ಬಿ ಸುಖವಾದುದೆನುವೋಲೆ
ಸುಖವಹುದೀ ಜಗ ನಿನಗೆ

ಕೆಳಗಿನ ಪದ್ಯ ಕೂಡ ಬದುಕಿನ ಸಂಕಷ್ಟಗಳನ್ನು ಮರೆಯಲು, ಬದುಕಿನಲ್ಲಿ ಹಿಗ್ಗು ಕಾಣಲು ಕಲೆ ಸಂಸ್ಕೃತಿಯ ಸಂಸ್ಕಾರದ ಅಗತ್ಯವನ್ನು ಒತ್ತಿ ಹೇಳುತ್ತದೆ.

ಕಟ್ಟಿಗೆ ಹೊರೆಯನೆ ಹೊತ್ತರು ತಲೆಯೊಳು
ತುರುಬಿನೊಳಿರಲೊಂದು ಹೂವು
ಹೊರೆ ಭಾರವಾದಾಗ ಹೂವಿನ ಕಂಪೊಳು
ಕಡಿಮೆಯೆಂದೆನಿಪುದು ನೋವು (ಪು. 104)

ಎಸ್.ವಿ.ಪಿಯವರು ಹುಟ್ಟಾ ಹಾಸ್ಯ ಮನೋಧರ್ಮದವರು. ಅವರ ವ್ಯಕ್ತಿತ್ವದಲ್ಲಿ ಹಾಸ್ಯ ಹಾಸು ಹೊಕ್ಕು. ಅವರ ಮಾತುಕತೆಯೇ ಸದಾ ವಿನೋದಪೂರ್ಣ. ಅವರ ಈ ಹಾಸ್ಯದ ವಿನೋದೀ ವ್ಯಕ್ತಿತ್ವ ಅವರ ಸ್ವತಂತ್ರ ಮುಕ್ತಕಗಳಲ್ಲಿ ನಿಚ್ಚಳವಾಗಿ ಅನಾವರಣಗೊಂಡಿದೆ. ಹಾಸ್ಯಕ್ಕಾಗಿಯೇ ಮೀಸಲಾದ ಒಂದು ಸಂಕಲವವನ್ನೇ (ಚಿತ್ರಪಥೆ) ಹೊರತಂದವರು ಅವರು. ಆದರೆ ಅವರದು ಅತ್ಯಂತ ನಿರ್ಮಲವಾದ ಹಾಸ್ಯಪ್ರವೃತ್ತಿ. ಅದರಲ್ಲಿ ಯಾರನ್ನೂ ನೋಯಿಸುವ ಉದ್ದೇಶ ಕಿಂಚಿತ್ತು ಇರುವುದಿಲ್ಲ. ಮರೆಯಬಾರದ ಮತ್ತೊಂದು ಅಂಶವೆಂದರೆ, ಬಹುಪಾಲು ಹಾಸ್ಯ ಪದ್ಯಗಳು ನಮ್ಮಲ್ಲಿ ನಗೆಯುಕ್ಕಿಸಿದಷ್ಟಕ್ಕೇ ವಿರಮಿಸುವುದಿಲ್ಲ. ಬದಲಿಗೆ ನಮ್ಮನ್ನು ಚಿಂತನೆಗೆ ಹಚ್ಚುತ್ತವೆ.

ಗಂಡ ಹೆಂಡಿರ ಈ ಸಂಭಾಷಣೆ, ಅವರ ರಸಿಕತೆ, ಚಾತುರ್ಯ, ಒಬ್ಬರನ್ನೊಬ್ಬರು ಮೀರಿಸುವ ಜಾಣ್ಮೆಯಿಂದ ಕೂಡಿದ ಮಧುರ ಶೃಂಗಾರದ ದ್ಯೋತಕವಾಗಿದ್ದಂತೆ ಅಂತರಂಗದ ನೋವಿನ ಎಳೆಗೂ ಕನ್ನಡಿ ಹಿಡಿಯುತ್ತದೆ.

"ನೀವೊಂದು ಸೀರೆಯನೆನಗಾಗಿ ತಂದಂತೆ
ನಾ ಕಂಡೆ ಕನಸನು ನಿನ್ನೆ"

"ನಾಳೆ ಆ ಸೀರೆಯ ನೀನುಟ್ಟು ಮೆರೆದಂತೆ
ಕನಸನು ಕಾಣೆನ್ನ ಚೆನ್ನೆ"

ಹಾಸ್ಯದ ಮಾತುಗಳಲ್ಲಿ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಪ್ರತಿಭಾವಂತನು. ಅವಕಾಶ ವಂಚಿತನಾಗುವ ಪರಿಯನ್ನು ವಿಡಂಬಿಸಿರುವ ರೀತಿ ಹೀಗಿದೆ:

ಮೇಲಕೆ ಹತ್ತಿರಿ ಮುಂದಕೆ ಬನ್ನಿರಿ
ಎಂದು ಕಂಡಕ್ಟರು ಕರೆಯೆ
ಉಳಿದೆಲ್ಲ ಕಡೆಯೊಳು ಹಿಂದಕೆ ತಳ್ಳಿಸಿ
ಕೊಂಡವನಾನಂದಕೆಣೆಯೆ

"ಇಲ್ಲಿಯ ವಿನೋದದಲ್ಲಿ ವಿಡಂಬನೆಯಿದೆ. ನೋವಿನ ಎಳೆಯಿದೆ. ಸಹಜ ಪರಿಸ್ಥಿತಿಯ ಚಿತ್ರವಿದೆ."[13] (ಪು.431)

ಪರಿಶುದ್ಧವಾದ ಹಾಸ್ಯವನ್ನೇ ಚಿಮ್ಮಿಸುವ ಸಾಂಗತ್ಯಗಳೂ ಸಾಕಷ್ಟಿವೆ.

ಮದನ ಕೈ ಗೊಂಬೆಯ ಬೇಲೂರು ಗುಡಿಯೊಳು
ಕೊರೆದವರಾರೆಂದು ಒದರಿ
ಕೇಳಿದ ರಭಸಕೆ ಶಾಲೆಯ ಮಕ್ಕಳು
ನಾವೆಲ್ಲವೆಂದರು ಹೆದರಿ

ನಡು ಸಣ್ಣದಾದರೆ ಮನದೊಡ್ಡದಾದರೆ
ಕಾಂತೆ ಮೆಚ್ಚಾಗುವೆ ನೀನು
ನಡುಮನಗಳ ಗಾತ್ರ ತಿರುಗುಮುರುಗಾದರೆ
ಮತ್ತೆ ನಾ ಹೇಳುವುದೇನು.

ಸಂಸ್ಕೃತದಿಂದ ಅನುವಾದಿಸಿದ **ಅನ್ಯೋಕ್ತಿಗಳು, ಸುಭಾಷಿತಗಳು** ಬೇಕಾದ ಹಾಗೆ ಇದರಲ್ಲಿ ಸೇರ್ಪಡೆಯಾಗಿವೆ. ಉದಾಹರಣೆಗೆ

ಮಳೆಗಾಲದೊಳು ನೀನು ಹಾಡುವುದಿಲ್ಲವೆ
ಕೇಳಿತು ಪಿಕವನು ಶುಕವು
ಕಪ್ಪೆಗಳೊಟಗುಟ್ಟುವೆಡೆಯೊಳು ಮೌನವೆ
ಲೇಸೆಂದು ಹೇಳಿತು ಮನವು (ಅನ್ಯೋಕ್ತಿ)

ಸುಭಾಷಿತಕ್ಕೆ

ತಮ್ಮ ನೀರನು ತಾವೆ ಕುಡಿಯವು ನದಿಗಳು
ಅನ್ಯರತೃಷೆಯ ನೀಗಲಿಹವು
ತಮ್ಮ ಹಣ್ಣನು ತಾವೆ ತಿನ್ನವು ಮರಗಳು
ಅನ್ಯರ ಕ್ಷುಧೆ ಕಳೆದಪವು

ಸಂಭಾಷಣೆಯಲ್ಲೇ ಸಾಂಗತ್ಯವನ್ನು ಮುಗಿಸಿ, ಒಂದು ಪರಿಸರವನ್ನು ಕಣ್ಣ ಮುಂದೆ ಕಡೆದು ನಿಲ್ಲಿಸುವ ಪರಿಣತಿ ಕೆಲವು ಪದ್ಯಗಳಲ್ಲಿ ಕಂಡುಬರುತ್ತದೆ. ಚಿಕ್ಕ, ಚೊಕ್ಕ ಪಾದಗಳಲ್ಲೇ ಪ್ರಶ್ನೆ ಉತ್ತರಗಳನ್ನು ಅಳವಡಿಸಿ, ಒಂದು ಸನ್ನಿವೇಶದ ಹಿನ್ನೆಲೆಯಲ್ಲಿ ಪಾತ್ರಗಳೇ ಮಾತಾಡುವಂತಿರುವ ಚಿತ್ರಗಳನ್ನು ಕಣ್ಮುಂದೆ ಸುಳಿಸುವ ಶಕ್ತಿ ಕವಿಗಿದೆ.

"ಕಾದಲೆ ಕುಶಲವೇ?" 'ಬದುಕಿಹಳೆಲೆಜೀಯ'
'ಕುಶಲವ ಕೇಳಿದೆ ಬಾಲೆ'

'ಬದುಕಿಹಳೆಲೆ ಜೀಯ', 'ನುಡಿದದ್ದೆ ನುಡಿವೆಯ?'
'ಉಸಿರಾಡುತಿಹೆ ಸತ್ತಳೆನಲೆ?'

ಕ್ಷೇಮ ಸಮಾಚಾರ ಬೆಸಗೊಳ್ಳುವ ಈ ಪರಿಯಲ್ಲಿ ಪ್ರಿಯನ ವಿಷಯಕ್ಕೆ ಪ್ರಿಯೆಯ ಮುನಿಸು, ಬೇಸರ, ಅವಳ ಪ್ರೇಮದ ಗಾಢತೆ, ಎಲ್ಲದರ ದ್ಯೋತಕವಾಗಿ ಈ ಸಾಲುಗಳಿವೆ.

ಹೀಗೆ ಸದಭಿರುಚಿಯ ರಸಿಕತೆ, ಅಶ್ಲೀಲದ ಸೋಂಕಿಲ್ಲದ ನವುರಾದ ಸದಭಿರುಚಿಯ ತಿಳಿಹಾಸ್ಯ, ಜೀವನತತ್ವವಿವೇಕ ಎಲ್ಲವೂ ಕನ್ನಡ ಸಾಂಗತ್ಯಗಳ ರೂಪದಲ್ಲಿ ಅಳವಟ್ಟು, 'ಇಂದ್ರಚಾಪ' ತನ್ನ ಹೆಸರಿಗೆ ತಕ್ಕಂತೆ ವರ್ಣವೈಭವದಿಂದ ಎಲ್ಲ ಸಹೃದಯರಿಗೆ ಮೆಚ್ಚಾಗುತ್ತದೆ. "ಜೀವನದ ಅನಂತಮುಖಗಳ ಸಹಾನುಭೂತಿಯುತವಾದ ಆರ್ದ್ರ ಅನುಭವದ ಘನೀಭೂತಸತ್ವ ಈ ಕವನಗಳಲ್ಲಿ ಕೆನೆಗಟ್ಟಿ ನಿಂತಿದೆ. ಕನ್ನಡ ಸಾಹಿತ್ಯಕ್ಕೆ ಇದೊಂದು ಕಲಾಪೂರ್ಣ ಕೊಡುಗೆ"[19] ಎಂಬುದು ಇಂದ್ರಚಾಪದ ಯಥಾರ್ಥ ವಿಮರ್ಶೆಯಾಗಿದೆ. ಹಾಗೆಯೇ "ಅರಿವು- ಅನುಭವಗಳ ಹಿನ್ನೆಲೆಯಲ್ಲಿ ಮೂಡಿಬಂದ, ... ಬಾಳಿನ ಸಿಹಿ-ಕಹಿಗಳು ಪಾಕಗೊಂಡು ಬಂದಿರುವ ಕವಿತೆ ಸಹಜ ಸುಂದರವಾಗಿದೆ"[19ಅ] ಎಂಬ ಪ್ರೊ. ಸ.ಸ. ಮಾಳವಾಡರ ಅಭಿಪ್ರಾಯ ಕೂಡ ಸಮತೂಕದ ಅಭಿಪ್ರಾಯ.

'ಇಂದ್ರಚಾಪ'ದ ನಂತರ ಬಂದ 'ಚಂದ್ರವೀಧಿ' ಅವರ ಸಾಂಗತ್ಯ ಕಾವ್ಯಮಾಲೆಯ ಮಹತ್ವದ ಕೃತಿ.

ಚಂದ್ರವೀಧಿ

ಸಾಂಗತ್ಯದಲ್ಲಿ ಮಹಾಕಾವ್ಯ ರಚಿಸಿ ಅದನ್ನು ಚರಮ ಸಿದ್ಧಿಗೆ ಒಯ್ದುವನು ರತ್ನಾಕರವರ್ಣಿ. ಆದರೆ ಇಪ್ಪತ್ತನೇಶತಮಾನದಲ್ಲಿ ಅದರಲ್ಲಿ ಪರಿಣತಿಯನ್ನು ಸಾಧಿಸಿದವರು ಪ್ರೊ. ಎಸ್.ವಿ.ಪಿ. ಇಂದ್ರಚಾಪದ ನಂತರ ಬಂದ 'ಚಂದ್ರವೀಧಿ' ಅವರ ಸಾಂಗತ್ಯ ಕಾವ್ಯಮಾಲೆಯ ಮಹತ್ವದ ಕೃತಿ. ಗಂಡು ಹೆಣ್ಣಿನ ಶೃಂಗಾರ ಚಂದ್ರವೀಧಿಯ ವಸ್ತು. "ತರುಣ ವತ್ಸರಗಳ ನಾಗರಿಕ ದಂಪತಿಗಳ ಸರಸ-ವಿರಸ, ಶೃಂಗಾರಗಳ ಬಿಸಿಲು ಬೆಳುದಿಂಗಳಿನಲ್ಲಿ ಉಲ್ಲಸಿತರಾಗಿ ಉಸಿರಾಡುತ್ತೇವೆ. ಪ್ರಣಯಿಗಳ ಆಮೋದ ಪ್ರಮೋದಗಳು, ಲಜ್ಜೆ ಬೀತಿಗಳು. ಮುನಿಸು-ಕನಸುಗಳು ನೋಟ ಬೇಟಗಳು, ಆಟ-ಪಾಟಗಳು, ವಿರಹ-ವಿಲಾಸಗಳು" ರಮ್ಯಾಭಿವ್ಯಕ್ತಿಯನ್ನು ಪಡೆದಿವೆ.[20] ಒಟ್ಟಾರೆ ಅನುರಾಗದ ನೂರೆಂಟು ಬಗೆಗಳೇ ಇಲ್ಲಿಯ ಸ್ಥಾಯಿ ಸಂಚಾರಿಗಳು. ಕವಿಯೇ ಹೇಳಿರುವಂತೆ ಇದು ಆಧುನಿಕ ಗಾಥಾಸಪ್ತಶತಿ. ಆದರೆ ದಾಂಪತ್ಯದ ಸರಸ ವಿರಸಗಳ ಚಿತ್ರದ ಜೊತೆಗೆ ಪ್ರಕೃತಿ ಚಿತ್ರಗಳು, ಲೋಕೋಕ್ತಿ, ಅನ್ಯೋಕ್ತಿ, ಚಾಟುಕ್ತಿಗಳೂ ಸೇರಿರುವುದರಿಂದ ಈ ಮುಕ್ತಕಗಳ ವಿಷಯ ವೈವಿಧ್ಯ ಮತ್ತು ವಿಷಯ ವಿಸ್ತಾರ ಗಾಥಾ ಸಪ್ತಶತಿಗಿಂತಲೂ ಹೆಚ್ಚು.

ಹೆಸರಿಗೆ ಇದು ಚಂದ್ರವೀಧಿಯಾದರೂ ಇಲ್ಲಿ ಕಾಣಬರುವ ವ್ಯಕ್ತಿಗಳು ಈ ನಮ್ಮ ಪ್ರೀತಿಯ ಮಣ್ಣಿನ ನೆಲದ ಮೇಲೆ ನಡೆಯುವವರೇ. ಮುನಿಸಿಗೆ ಸಣ್ಣದೊಂದು ಕಾರಣವೇ ಸಾಕು. ಕಾಫಿಗೆ ಸಕ್ಕರೆ ಹೆಚ್ಚಾಯಿತೆಂದೋ ಇಲ್ಲ ಸಾರಿಗೆ ಉಪ್ಪು ಸಾಲದಾಯಿತೆಂದೋ ಮುನಿಸು ತಾಳಿ, ಸರಸದ ಕ್ಷಣವನ್ನು ವಿರಸಗೊಳಿಸಬಹುದು.

ಕಾಫಿಗೆ ಸಕ್ಕರೆ ಹೆಚ್ಚಾಯಿತೆಂದೆನು
ಅಷ್ಟಕ್ಕೆ ಇಷ್ಟೇಕೆ ಸಿಟ್ಟೆ
ನಾಲಗೆ ಸಿಹಿಯಾಯಿತಾದರು ಮನವನು
ಸುಮ್ಮನೆ ಕಹಿ ಮಾಡಿಬಿಟ್ಟೆ

ಉಪಮೆಗಳು ಸಾಂಪ್ರದಾಯಿಕವೇ ಆದರೂ ಅದರಲ್ಲೊಂದು ಚೆಲುವು ಇದೆ.

ನೀನೊಬ್ಬಳೆನ್ನುದುರಿದ್ದರಿನ್ನೇತಕೆ
ಕಬ್ಬವನೋದುವ ಗೊಡವೆ
ಕಬ್ಬಿನ ಹಾಲೆದುರಿದ್ದರಿನ್ನೇತಕೆ
ಬೆಲ್ಲಕೆ ಅಲೆಯುವ ಗೊಡವೆ

ಇಂಥ ಶೃಂಗಾರದ ಚಿತ್ರಗಳು ಕೃತಿಯಲ್ಲಿ ಅನೇಕವಿವೆ.

ಪ್ರೇಮೋನ್ಮಾದದ ತುದಿಯೇರಿರುವ ಪ್ರೇಮಿನಿಯ ಪ್ರಣಯ ಚರ್ಯೆಯನ್ನು ಬಿಂಬಿಸುವ ಪದ್ಯ.

ಇನಿಯನ ಓಲೆಯನೋದುತಿರುವಳು
ತುಟಿಯಿಡುವಳು ಪುಟಪುಟಕೆ
ಪರಿಹಾಸ ಶೀಲಕೆ ಬೆರಗಾಗುತಿರುವಳು
ನಸುನಗುವಳು ಪದಪದಕೆ

ಹೆಣ್ಣಿನ ಚೆಲುವಿನ ನೋಟ ಮತ್ತು ನಗೆಯನ್ನು ಆಸ್ವಾದಿಸುವ ತರುಣನೊಬ್ಬನ ಪ್ರೇಮಾನುಭವ ಅಭಿವ್ಯಕ್ತಿ ಪಡೆದುಕೊಳ್ಳುವುದು ಹೀಗೆ:

ಹೊಳೆಯುವ ಕಣ್ಣಿನ ಶಾಂತಿಯನೀಂಟುವೆ
ಹಾಗೆಯೆ ತುಸು ನೋಡು ಬಾಲೆ
ಪರಿಹಾಸದೊಲವಿನ ಸೊದೆಯನು ಹೀರುವೆ
ಹಾಗೆಯೆ ನಗುತಿರುವೋಲೆ

ಚಂದ್ರವೀಥಿಯಲ್ಲಿ ಕವಿಯ ಸ್ವಂತ ಜೀವನದ ನೋವುಗಳು ಆತ್ಮಕಥಾತ್ಮಕ ಅಂಶಗಳು ಸಾಂಗತ್ಯ ಮಾಧ್ಯಮದಲ್ಲಿ ಹೊರಹೊಮ್ಮಿರುವುದಕ್ಕೆ ಅನೇಕ ನಿದರ್ಶನಗಳಿವೆ. ಇದು ಅಂಥವುಗಳಲ್ಲೊಂದು

ನಿಮ್ಮ ಕಾವ್ಯವನೋದಿ ಕಣ್ಣೀರು ಕರೆದೆನು
ಎಂದಿದ್ದಳೆನ್ನಾಕೆ ಹಿಂದೆ
ನಿನ್ನ ಪಾಡನೆ ಪಾಡುಮಾಡಿ ಹಾಡಿರುವೆ
ಅತ್ತಾರು ನಿನ್ನನ್ನರೆಂದೆ

ಗಂಡ-ಹೆಂಡತಿಯರ ಆರೋಪ ಪ್ರತ್ಯಾರೋಪಗಳು:

ಗಂಡ: ಮಂದಿಗೆ ನೀ ನಗುಮೊಗವನೆ ತೋರುವೆ
ನನಗುರಿ ಮೋರೆಯ ತೋರುವೆ
ಅವರೆಸಗಿದ ಪುಣ್ಯವತಿಶಯವಾದರೆ
ನಾನೇಸು ಪಾಪಿಯೆ ನೀರೆ

ಹೆಂಡತಿ: ಅರಳು ಹುರಿದ ಹಾಗೆ ಗೆಳೆಯರ ಜೊತೆಯೊಳು
ಮಾತಾಡುತಿರುವಂಥ ನೀವು
ಮುತ್ತುದುರುವ ಹಾಗೆ ಆಡುವಿರೆಮ್ಮೊಳು
ಬಹುಪುಣ್ಯವಂತರು ನಾವು

ದಿನನಿತ್ಯದ ಮಾತುಕತೆಗಳಲ್ಲಿ ಸಾಮಾನ್ಯ ಸಂಗತಿಗಳಲ್ಲಿ ನಡೆನುಡಿಗಳಲ್ಲಿ ನಲ್ಲನಲ್ಲೆಯರ ಅಂತರಂಗ ತೆರೆದುಕೊಂಡಿದೆ. ಗಂಡನಿಂದ ದೂರವಿರುವ ಹೆಂಡತಿ ತನ್ನ ದುಃಖವನ್ನು ಮರೆಸಿಕೊಳ್ಳುವ ಸೂಕ್ಷ್ಮತೆಗೆ.

ಕಾಫಿಗೆಂದೊಲೆಯನು ಹೊತ್ತಿಸಿದಿನಿಯಳು
ಇನಿಯನ ನೆನೆದಳುವಳು
ಬಂದು ನೋಡುವರೆಂದು ಮುದ್ದಿನ ಮಕ್ಕಳು
ಕಣ್ಣನು ಒರೆಸಿಕೊಳ್ಳುವಳು

'ಚಂದ್ರವೀಧಿ' ಶೃಂಗಾರ ಮುಕ್ತಕಗಳ ಕಾವ್ಯವೇನೋ ಹೌದು. ಆದರೆ ಅದರಲ್ಲಿರುವುದು ಬಹುಮಟ್ಟಿಗೆ ವಿಪ್ರಲಂಭ ಶೃಂಗಾರದ ಹಾಗೂ ಗಂಡು–ಹೆಣ್ಣಿನ ವಿರಸ ದಾಂಪತ್ಯದ ಚಿತ್ರಗಳು. ಒಂದು ಬಗೆಯ ಬೇಗುದಿ, ಕಹಿ, ವಿಷಾದ ಇಲ್ಲಿಯ ಪದ್ಯಗಳ ಪಲ್ಲವಿಯಾಗಿದೆ. ಗಂಡ–ಹೆಂಡಿರ ಮಧ್ಯೆ ಕಲಹ ಮನಸ್ತಾಪ ಹೆಚ್ಚಾದಾಗ ಇಂಥ ದಾಂಪತ್ಯಕ್ಕೆ ಏನರ್ಥ ಎಂದು ಪರಸ್ಪರ ಕೇಳಿಕೊಳ್ಳುತ್ತಾರೆ

ಗುದ್ದಾಡುವುದಕೆಮಗೊಬ್ಬರು ಬೇಕೆಂದು
ಮದುವೆಯಾದೆವೆ ಹೀಗೆ ನಾವು
ನಮ್ಮ ಈ ಕಲಹಕೆ ಬೇಕೆಂದು ಮರೆಯೆಂದು
ಮನೆಕಟ್ಟಿಕೊಂಡೆವೆ ನಾವು **4–21**

ಗಂಡ–ಹೆಂಡತಿಯ ನಡುವೆ ವಿವಾದ ತೀವ್ರವಾದಾಗ, ವ್ಯಂಗ್ಯ, ಮಾತಿನ ಮೊನಚು ಹೇಗಿರುತ್ತದೆ ಎನ್ನುವುದಕ್ಕೆ

ಮತ್ತೊಬ್ಬಳನು ನೀವು ನಾ ಸತ್ತು ಹೋದರೆ
ಮದುವೆಯಾಗುವಿರೇನು ಮತ್ತೆ
ಅನುಭವ ಕಲಿಸಿದ ಪಾಠವ ಮರೆವರೆ
ಅಲ್ಲವೆ ನಾನೆಂಥ ಕತ್ತೆ **(1–36)**

ಸೋರುವ ಮನೆಹೊಲ್ಲ, ದೂರುವ ನೆರೆಹೊಲ್ಲ, ಹೋರುವ ನಾರಿಯೆ ಹೊಲ್ಲ ಆದರ್ಶವೆಂಬಂಥ ಹಾಲು ಜೇನಿನ ದಾಂಪತ್ಯವಿಲ್ಲದಿದ್ದರೆ. ಹೋಗಲಿ, ಹಾಲು–ನೀರಿನಂಥ ಹೊಂದಾಣಿಕೆಯ ದಾಂಪತ್ಯವೂ ಆಗದೆ ಹಾಲು–ಹುಳಿಸೇರಿದಂತಾಗಿ ಬಿಟ್ಟರೆ, ಬಾಳವುದು ಎಂತು ಎಂಬಂಥ ಇಜ್ಜೋಡು ದಾಂಪತ್ಯದ ಚಿತ್ರಗಳು ವಿಷಾದದ ರೇಖೆಯನ್ನು ಅಂಕಿಸಿ ಹೋಗುತ್ತವೆ.

'ಚಂದ್ರವೀಧಿ' ಕೇವಲ ಶೃಂಗಾರದ, ವಿರಹದ ಚಿತ್ರಗಳಿಂದಷ್ಟೇ ತುಂಬಿಲ್ಲ. ಲೋಕೋಕ್ತಿ, ಅನ್ಯೋಕ್ತಿ, ಚಾಟೂಕ್ತಿ ಮತ್ತು ಪ್ರಕೃತಿ ವರ್ಣನೆಯ ಸುಂದರ ಚಿತ್ರಗಳಿಂದ ಕೂಡಿರುವ ಮುಕ್ತಗಳು ಇಲ್ಲಿ ಸಾಕಷ್ಟಿವೆ. ಹಾಸ್ಯವಂತೂ ಭಟ್ಟರ ಕಾವ್ಯದ ಹಾಸುಹೊಕ್ಕು. ಅರ್ಥಪೂರ್ಣ ಉಪಮೆ ರೂಪಕಗಳು ಅಳವಟ್ಟು ಬರುವ ಕಾರಣದಿಂದ ಇವು ಓದುಗರ ಮನಸ್ಸನ್ನು ಸೆರೆಹಿಡಿಯುತ್ತವೆ.

ಮಂಜಿನ ಬಿಳಿ ಹನಿಯಭಿಷೇಕವಾಗಿದೆ
ಹಳದಿಯ ಹಣ್ಣೆಲೆಗಳಿಗೆ
ಮೌನದ ನೀರವದುಪದೇಶವಾಗಿದೆ
ಕಾಜಾಣ ಕೋಗಿಲೆಗಳಿಗೆ

ಹಾಗೆಯೇ ಈ ಕಲ್ಪನೆ ವಿನೂತನವಾಗಿದೆ:

ನಂದನದರಳನು ತರುತಿದ್ದ ಚಂದ್ರನು
ಬಿದ್ದನು ಎಡವಿ ಮೋಡದೊಳು

ಸುತ್ತಲು ಬುಟ್ಟಿಯ ಹೂಗಳು ಬಿದ್ದುವು
ಎಂಬಂತೆ ತಾರೆಗಳಿಹವು

ಹಾಸ್ಯದ, ವಿಡಂಬನೆಯ ಚುಚ್ಚು ಮಾತಿನ ಮುಕ್ತಕಗಳಿಗೇನೂ ಇಲ್ಲಿ ಬರವಿಲ್ಲ.

"ಸಂಸಾರದ ಸರಸ ವಿರಸಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಇಂಥದೊಂದೇ ಒಂದು ಛಂದೋ ರೂಪದಲ್ಲಿ ಕೇವಲ ಚಿತ್ತವೃತ್ತಿಯ ಚಿತ್ರ ವಿಚಿತ್ರಗಳ ವ್ಯಾಪಾರ ವಿಶೇಷಗಳಾಗಿ ಒಬ್ಬ ಕವಿಯ ನಿರೂಪಣೆಗಳಾಗಿ ಚಿತ್ರಿತವಾಗಿರುವುದು ಗಮನಾರ್ಹ ವಿಷಯವಾದೀತು.[21] ಎಂಬ ಕವಿಯ ಸದಾಶಯ ಸತ್ಯವೆನಿಸುತ್ತದೆ ಹಾಗೂ ಗಾಳಿ, ನೀರು ಬೆಳಕುಗಳ ನೆರವಿನಿಂದ ಬದುಕಿ ಬಾಳುತ್ತಿರುವ ಕವಿ ಕಂಡುಂಡ ಗತಿಗಳು, ಸಂಗತಿಗಳು"[22] ಇದ್ದು ಈ ಮುಕ್ತಕ ಮಾಲೆಯನ್ನು ವಿಶಿಷ್ಟವಾದ ಕವನ ಸಮುಚ್ಚಯವನ್ನಾಗಿ ಮಾಡುವುದರಲ್ಲಿ ಸಮರ್ಥವಾಗಿವೆ.

ಸುರಗಿ – ಸುರಹೊನ್ನೆ

ಭಟ್ಟರು ತಮ್ಮ ಮುಕ್ತಕ ರಚನೆಗಳಿಗೆ ಬಳಸಿದ್ದು ಕನ್ನಡದ ಪ್ರಾಚೀನ ಛಂದೋ ರೂಪಗಳಾದ ಏಳೆ, ತ್ರಿಪದಿ, ಸಾಂಗತ್ಯ ಮುಂತಾದುವನ್ನು. ಕನ್ನಡ ವೃತ್ತಗಳ ಗಾಯತ್ರಿಯೆಂದೇ ಹೆಸರಾದ 'ತ್ರಿಪದಿ' ಅತ್ಯಂತ ಜನಪ್ರಿಯವೂ, ಪ್ರಾಚೀನವೂ ಆದ ಛಂದೋಬಂಧ. ಕ್ರಿ.ಶ. 7ನೇ ಶತಮಾನದ ಬಾದಾಮಿ ಶಾಸನದ ಕಾಲದಿಂದಲೂ ಬಳಕೆಯಾಗುತ್ತ ಬಂದಿರುವ ಇದು ಜನಪದರ ಕೈಯಲ್ಲಿ ಯಾವುದೇ ರೀತಿಯ ಭಾವಾಭಿವ್ಯಕ್ತಿಗೂ ಅನುಕೂಲಕರವಾಗಿ ಒದಗಿ ಬರುವ ಛಂದಸ್ಸಾಯಿತು. ಎಂದೇ ಜನಪದ ಸಾಹಿತ್ಯದಲ್ಲಿ ತ್ರಿಪದಿಯದೇ ಸಾಮ್ರಾಜ್ಯ. ಸರ್ವಜ್ಞನಿಂದಾಗಿ ತ್ರಿಪದಿ ಅತ್ಯಂತ ಜನಪ್ರಿಯವಾಗಿ, ಮುಕ್ತಕ ರಚನೆಗೆ ಹೇಳಿ ಮಾಡಿಸಿದ ಛಂದಸ್ಸಾಯಿತು. ಅದೇ ರೀತಿ 'ಏಳೆ' ಕೂಡ ಈ ಬಗೆಯ ರಚನೆಗೆ ಅತ್ಯಂತ ಸೂಕ್ತವಾದ ಛಂದಸ್ಸೆಂಬುದನ್ನು ಮನಗಂಡು, ಈ ಎರಡೂ ಬಗೆಯ ಛಂದೋರೂಪಗಳನ್ನು ವ್ಯಾಪಕವಾಗಿ ದುಡಿಸಿಕೊಂಡು ನೂರಾರು ತ್ರಿಪದಿ ಮತ್ತು ಏಳೆಗಳನ್ನು ನೀಡಿದವರು ಭಟ್ಟರೊಬ್ಬರೇ. ಮುಂದೆ ಜಯದೇವಿ ತಾಯಿ ಲಿಗಾಡೆಯವರು ತ್ರಿಪದಿಯಲ್ಲಿಯೇ 'ಸಿದ್ದರಾಮೇಶ್ವರ ಪುರಾಣ'ದಂಥ ಮಹಾಕಾವ್ಯ ರಚಿಸಿದರೂ ತ್ರಿಪದಿ ಏನಿದ್ದರೂ ಸಣ್ಣ, ಸಣ್ಣ, ಬಿಡಿ ಬಿಡಿಯಾದ ಸಂಗತಿಗಳನ್ನು ಭಾವಗಳನ್ನು ಕಾವ್ಯಾತ್ಮಕವಾಗಿ ಅಭಿವ್ಯಕ್ತಿಸಲು ಅತ್ಯಂತ ಸೂಕ್ತವಾದ ಬಂಧ ಎಂದು ತಮ್ಮ 'ಸುರಗಿ–ಸುರಹೊನ್ನೆ'ಯಲ್ಲಿ ತೋರಿಸಿಕೊಟ್ಟಿದ್ದಾರೆ. ಇಲ್ಲಿಯ ನಾಯಕ–ಗೃಹಸ್ವಾಮಿ ತನ್ನ ಗೃಹಸ್ವಾಮಿನಿಯನ್ನೆ ಉದ್ದೇಶಿಸಿ ಹೇಳಿದಂತಿವೆ ಇಲ್ಲಿಯ ತ್ರಿಪದಿಗಳು. ಹಾಗಾಗಿ 'ಸರಸಿಯೆ' ಎನ್ನುವುದು 'ತಾಂತ್ರಿಕ' ಅಗತ್ಯವನ್ನು ಪೂರೈಸುವ ಸಂಬೋಧನೆಯ ಶಬ್ದವಾಗಿದೆ. ಏಳು ನೂರು ತ್ರಿಪದಿಗಳಿಂದ ಕೂಡಿರುವ ಈ ಮುಕ್ತಕಕಾವ್ಯದ ವಸ್ತು ಮುಖ್ಯವಾಗಿ ಸಂಸಾರಜೀವನದ ಸಿಹಿ–ಕಹಿಗಳು, ನೋವು–ನಲಿವುಗಳು, ಸಮಸ್ಯೆ–ಸಂಕಷ್ಟಗಳು, ಸರಸ–ವಿರಸಗಳು, ವಿನೋದ–ವಿಷಾದಗಳು. ಇದರ ಜೊತೆಗೆ ಸಾಮಾಜಿಕ ಬದುಕಿನ ಬೇರೆ ಬೇರೆ ಅನುಭವಗಳೂ ಇಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ.

ಇಲ್ಲಿಯ ತ್ರಿಪದಿಗಳ ಹಾರದ ತಂತುವಾಗಿರುವುದು ಸುಂದರ ಸಂಸಾರದ ಸತಿಪತಿಗಳ ಸರಸ ಸಂಭಾಷಣೆ. ಬಾಳಿನಲ್ಲಿ ಪರಸ್ಪರ ಹೊಂದಾಣಿಕೆ ಇದ್ದರೆ ಬಾಳು ರಸ ಪೂರ್ಣವಾಗುತ್ತದೆ. ಅದಕ್ಕೆ ಮನಸ್ಸು ಸುರಗಿ ಹೂವಂತಾಗಬೇಕು. ಅದು ಸುರಗಿ (ಕತ್ತಿ) ಯಾಗಬಾರದು. ಅದು ಎಂದೂ ನಲುಗಬಾರದು. ಇದೇ ಇಲ್ಲಿಯ ತತ್ತ್ವ

ಸಂಸಾರವನ್ನೊಂದು ವಾಹನವೆನ್ನುವ ಈ ರೂಪಕ ಗಂಡ–ಹೆಂಡಿರ ಪಾತ್ರವನ್ನು ವಿವರಿಸುವುದು ಹೀಗೆ:

ಸಂಸಾರದಲ್ಲಿ– ಇನಿಯನೆ ಚಾಲಕ ಇನಿಯೆ ನಿಯಂತ್ರಿಕೆ
ಮನೆವಾಳ್ತೆಯೆಂಬ ಯಂತ್ರಕೆ–ಪೆಟ್ರೋಲು
ಮನದೊಲವರವು ಸರಸಿಯೆ

ಯಾರ ಬದುಕಿನಲ್ಲಿ ಕಹಿ ಇಲ್ಲ? ಹಾಗೆಂದು ಬದುಕಿನ ಬಗ್ಗೆ ಭರವಸೆ ಕಳೆದುಕೊಳ್ಳಬಾರದು. ಬದಲಿಗೆ ಆ ಕಹಿ ಜೀವನದಲ್ಲಿಯೂ ಸಿಹಿಯನ್ನು ಕಂಡುಕೊಳ್ಳುವ ಚಾತುರ್ಯವಿರಬೇಕು.

ಕಹಿಯ ಜೀವನದೊಳು ಸಿಹಿಯನ್ನು ಸವಿವರೆ
ಬಹುವಿಧ ಕಲೆಯ ಸಂಸ್ಕಾರ ಇರಬೇಕು.
ಇಹದೊಳು... ನಮಗೆ ಸರಸಿಯೆ

ರಸಿಕತೆಯ ಮಾತುಗಳು ಇಲ್ಲಿ ಬೇಕಾದ ಹಾಗಿವೆ

ತುಟಿಯುಂಟು ಕೆಂಪಗೆ ಕಟಿಯುಂಟು ತೆಳ್ಳಗೆ
ಮಿಟಿಮಿಟಿ ಕಪ್ಪು ಕಣ್ಣುಂಟು – ನೀಯಾರೆ
ಪುಟಿಯುವ ಎದೆಯ – ಸರಸಿಯೆ

ಜೀವನದಲ್ಲಿ ಸುಖವನ್ನು ಕೊಟ್ಟ ದೈವವೇ ಸಂಕಟವನ್ನೂ ಕೊಡುತ್ತದೆ ಎಂಬ ಅರಿವಿರಬೇಕು ಎಂಬುದನ್ನು

"ದೇವನೆ ನಮಗಾಗಿ ಹೂವನು ಕೊಟ್ಟನು
ಹೂವಿನ ಜತೆಗೆ ಮುಳ್ಳನು ಕೊಟ್ಟನು
ಭಾವಿಸಿಂತಿದನು ಸರಸಿಯೆ" – ಎಂಬ ಮಾತುಗಳಲ್ಲಿ ಹೇಳುತ್ತಾರೆ.

ಕಹಿ, ವಿಷಾದ, ನೋವು, ಸಂಕಟಗಳಿಂದ ಪಾರಾಗಲು ಬೇಕಾದ್ದು ಹಾಸ್ಯ ಪ್ರವೃತ್ತಿ, ಹೊಗೆಯನ್ನೇ ನಗೆಯಾಗಿಸುವ ಜಾಣ್ಮೆ, ನಗೆಯ ಗುರಾಣಿ ಇದ್ದಿತಾದರೆ, ನೋವಿನಿಂದ ಪಾರಾಗಬಹುದು ಎಂಬುದು ಕವಿಯ ಕಾಣ್ಕೆ:

ನಗಿಸುವ ಕಲೆಯಂತೆ ನಗುವುದು ಸಹ ಕಲೆ
ನಗಿಸುವ ನಗುವ ಕಲೆಯನು ಮರೆತರೆ
ಮೃಗ ನಾವು ಕೇಳೆ ಸರಸಿಯೆ

ಸತ್ಯವನ್ನು ನೇರವಾಗಿ ಎದುರಿಸಬೇಕು. ಸತ್ಯಕ್ಕೆ ಬೆನ್ನು ಹಾಕ ಕೂಡದು. ಹಾಗೆ ಬೆನ್ನು ಹಾಕಿದರೆ ಆಗುವುದು ಅನರ್ಥವೇ ಎಂಬುದು ಕವಿಯ ದರ್ಶನ:

ಜ್ಯೋತಿಗೆ ಬೆನ್ನಾಗಿ ಕೂತುಕೊಂಡರೆ ನೀನು
ಜ್ಯೋತಿಯ ಬೆಳಕು ಸುತ್ತಲು ಇದ್ದರು,
ಜ್ಯೋತಿ ಕಾಣುವುದೆ ಸರಸಿಯೆ

ಭಟ್ಟರ ವೈಯಕ್ತಿಕ ಬದುಕೆಲ್ಲವೂ ಪಾಡನ್ನು ಹಾಡಾಗಿಸಿದ್ದೇ ಆಗಿದೆ. ಸಂಸಾರ ಧರ್ಮದ ರೀತಿನೀತಿಗಳನ್ನು ಬಗೆಬಗೆಯಾಗಿ ಇಲ್ಲಿಯ ತ್ರಿಪದಿಗಳಲ್ಲಿ ಹರಳುಗಟ್ಟಿಸುವ ಪ್ರಯತ್ನವಿದೆ. ಜೀವನ ನೀತಿಯ ಮಾತುಗಳು ಸೂತ್ರ ರೂಪದಲ್ಲಿ ಬೇಕಾದ ಹಾಗೆ ತ್ರಿಪದಿಯ ಆಕಾರ ತಾಳಿವೆ. ಸಾವು ಹೇಗೆ ಸದ್ದಿಲ್ಲದೆ ಜೀವಿಯನ್ನು ಹೊಂಚುಹಾಕಿ ಹಿಡಿಯುತ್ತದೆಂದು ಹೇಳಿರುವ ರೀತಿ ಅದ್ಭುತವಾಗಿದೆ.

ಹುಲಿ ಪೊದೆ ಮರೆಯೊಳು ಮೆಲು ಮೆಲ್ಲನೈ ತಂದು
ಜಲವೀಂಟುತಿರುವ ಹುಲ್ಲೆಯ – ಹಿಡಿವಂತೆ
ಕೊಲುವನು ಯಮನು ಸರಸಿಯೆ

ಅರ್ಥಗರ್ಭಿತ ಅನ್ಯೋಕ್ತಿಗಳು ಕಾವ್ಯಚಿಂತನೆಗಳು ಅವರ ಮುಕ್ತಕ ಸಂಗ್ರಹಗಳ ಅವಿಭಾಜ್ಯ ಅಂಗ:

ಕಡಲಂಥ ಕೆರೆಯೊಳು ಬಡನಾಯಿ ನೆಕ್ಕಿಯೆ
ಕುಡಿದೀತು ನೀರನು ಬೆರಗೇಕೆ – ಅದು ನೀರು
ಕುಡಿವುದು ಹಾಗೆಯೆ ಸರಸಿಯೆ

ಯಾವುದೇ ಸಂಗತಿ, ವಸ್ತು ಕವಿಯ ಮನಸ್ಸಿನಲ್ಲಿ ಪಾಕಗೊಂಡಲ್ಲದೆ ಕಾವ್ಯ ಹೊಮ್ಮದು ಎಂಬುದನ್ನು ಭಟ್ಟರು ಹೀಗೆ ಹೇಳುತ್ತಾರೆ.

ತತ್ತಿಗೆ ಕಾವನು ಇತ್ತಲ್ಲದೊಡೆಯದು
ಚಿತ್ತಕೆ ಕಾವು ಕೊಡದೆಯೆ – ಕಾವ್ಯವು
ಬಿತ್ತರಗೊಳ್ಳದು ಸರಸಿಯೆ

ಆದಿಪ್ರಾಸ, ಅನುಪ್ರಾಸ, ಒಳಪ್ರಾಸಗಳಿಂದ ಕೂಡಿದ ಇವು ಸಲ್ಲಕ್ಷಣದ ಅಂಶ ತ್ರಿಪದಿಗಳು. ಇವನ್ನು ನೋಡಿದಾಗ ಭಟ್ಟರು ಎಷ್ಟು ಸಲೀಸಾಗಿ ಸಂಗತಿಯೊಂದಕ್ಕೆ ತ್ರಿಪದಿಯ ರೂಪು ಕೊಟ್ಟು ಬಿಡುತ್ತಾರಲ್ಲ ಎಂದು ಬೆರಗಾಗುತ್ತದೆ. ಆದರೆ ಹಾಗೆ ರಚನೆ, ಸಲೀಸಾದ್ದರಿಂದಲೋ ಏನೋ ತೀರಾ ಸಾಮಾನ್ಯವಾದ ಸಂಗತಿಗಳಿಗೂ ತ್ರಿಪದಿಯ ವೇಷ ತೊಡಿಸಿಬಿಡುತ್ತಾರೆ. ಇದು ಅವರ ಮುಕ್ತಕ ಸಾಹಿತ್ಯದ ಒಂದು ಮುಖ್ಯ ದೋಷವೆಂದೇ ಹೇಳಬೇಕು. ಕವಿಯೇ ಹೇಳಿರುವಂತೆ ಇಲ್ಲಿನ ತ್ರಿಪದಿಗಳಲ್ಲಿ ನೀತಿಯುಂಟು ಮಾತುಗಾರಿಕೆಯುಂಟು ಮೆಚ್ಚುಂಟು, ಚುಚ್ಚುಂಟು, ನಚ್ಚುಂಟು, ಕೆಚ್ಚೂ ಉಂಟು. ವ್ಯಂಗ್ಯ ವಿಡಂಬನೆಗಳು ಹಾಸುಹೊಕ್ಕಾಗಿವೆ.

ತುಂಬೆ ಹೂವು

'ತ್ರಿಪದಿ' ಮೂರು ಸಾಲಿನ ಪದ್ಯವಾದರೆ ಏಳೆ ಎರಡೇ ಸಾಲಿನ ಪದ್ಯ. ತ್ರಿಪದಿಯ ಮಧ್ಯದ ಸಾಲನ್ನು ಕೈಬಿಟ್ಟರೆ ಏಳೆಯಾಗುತ್ತದೆ ಎನ್ನುವುದು ಅದರ ಬಾಹ್ಯ ಲಕ್ಷಣ ವಿವರಣೆಯ ಒಂದು ಮಾತು. ಅದರ ಜೊತೆ, ಎರಡು ಸಾಲುಗಳ ಏಳೆಯಲ್ಲಿ ಮೊದಲ ಸಾಲಿನಲ್ಲಿ, ನಾಲ್ಕು ವಿಷ್ಣು ಗಣ, ಎರಡನೇ ಸಾಲಿನಲ್ಲಿ ಎರಡು ವಿಷ್ಣುಗಳ ನಡುವೆ ಒಂದು ಬ್ರಹ್ಮಗಣ ಎಂದು ಹೇಳಿದರೆ ಅದರ ಲಕ್ಷಣ ಪೂರ್ಣವಾಗುತ್ತದೆ. ಜನಪದ ಸಾಹಿತ್ಯದಲ್ಲಿ ಮಾತ್ರ ಕಂಡು ಬರುತ್ತಿದ್ದ ಎರಡು ಸಾಲುಗಳ ಈ ಮುತ್ತಿನಂಥ ಬಂಧುರ ಬಂಧವನ್ನು ವಿಪುಲವಾಗಿ ಬಳಕೆ, ಮಾಡಿದವರು ಕೂಡಾ ಭಟ್ಟರೊಬ್ಬರೇ. ಇದು ಅವರ ಪ್ರಯೋಗಶೀಲತೆಗೆ ಸಾಕ್ಷಿ. ಏಳೆ, ತ್ರಿಪದಿ, ಗಾದೆಗಳ ಸಂಬಂಧವನ್ನು ಕುರಿತು ಒಂದೆಡೆ ಅವರೇ ತುಂಬ ಸೊಗಸಾಗಿ ವಿಶ್ಲೇಷಿಸಿದ್ದಾರೆ. ಎಸ್.ವಿ.ಪಿ. ಅವರ ಪ್ರಕಾರ ಅನೇಕ ಗಾದೆಗಳಿಗೆ ಇನ್ನೊಂದು ಸಣ್ಣ ವಾಕ್ಯ ಖಂಡವನ್ನು ಸೇರಿಸಿ ಸುಲಭವಾಗಿ ಏಳೆ ಮಾಡಬಹುದು. ಉದಾ: ಆಕಾಶ ನೋಡೋಕೆ ನೂಕು ನುಗ್ಗಲು ಯಾಕೆ" ಎಂಬ ಗಾದೆಗೆ 'ಬೇಕಾದ ಹಾಗೆ ಕಾಂಬೋದು' ಎಂಬ ಸಣ್ಣ ವಾಕ್ಯ ಖಂಡ ಸೇರಿಸಿದರೆ ಅದು ಒಂದು ಏಳೆಯಾಗುತ್ತದೆ.

'ಏಳೆ' ಹೇಗೆ ಅನಾದರಕ್ಕೆ ತುತ್ತಾದ ಛಂದಸ್ಸೋ ಅದೇ ರೀತಿ 'ತುಂಬೆ ಹೂ' ಕೂಡ ಪುಷ್ಪ ಪ್ರೇಮಿಗಳ ಅವಕೃಪೆಗೆ, ಅನಾದರಕ್ಕೆ ಪಾತ್ರವಾದ ಹೂ. ಎಲ್ಲರೂ ಕಮಲ, ಜಾಜಿ, ಮಲ್ಲಿಗೆ, ಸೇವಂತಿಗೆ, ಗುಲಾಬಿ ಮುಂತಾದ ಪುಷ್ಪಗಳ ಪ್ರೇಮಿಗಳೇ. ಇವು ಕಾವ್ಯ ಪ್ರಪಂಚದಲ್ಲೂ ಕವಿಗಳಿಗೆ ಪ್ರಿಯವಾದ ಹೂವುಗಳೇ. ಆದರೆ ತುಂಬೆಯನ್ನು ಯಾರು ಕೇಳಬೇಕು? ಶಿವನಿಗೆ ಮಾತ್ರ ಪ್ರಿಯವೆಂದು ಪ್ರತೀತ. ಆ ಕಾರಣದಿಂದ ಏಳೆಗಳ ಈ ಸಂಕಲನಕ್ಕೆ 'ತುಂಬೆ ಹೂ' ಎಂಬ ಅರ್ಥಪೂರ್ಣವಾದ ಶೀರ್ಷಿಕೆಯನ್ನಿತ್ತಿದ್ದಾರೆ. ಇದರಲ್ಲಿ ಸೇರ್ಪಡೆಯಾಗಿರುವ

ಪದ್ಯಗಳು ಕೂಡ ಸುಭಾಷಿತ ರೂಪಿ ಮುಕ್ತಕಗಳೇ. ವ್ಯಾಖ್ಯಾನ ನಿರಪೇಕ್ಷಕವಾದ ಈ ಪುಟ್ಟ ರಚನೆಗಳಲ್ಲಿ ಲೋಕಾನುಭವದಿಂದ ಕೂಡಿದ ಹಲವು ಹತ್ತು ವಿಚಾರಗಳನ್ನು ಲೋಕ ನೀತಿಯನ್ನು, ಬಾಳ ತತ್ವವನ್ನು, ಉಪಮೆ, ದೃಷ್ಟಾಂತಗಳನ್ನು ಬೆರೆಸಿ ಹೇಳಿದ್ದಾರೆ.

ಉದಾ: 1. **ನೀಚರ ಸಂಗವು ಈಚಲ ಮರದಂತೆ**
ದೋಚುವುದೊಳಗಣರಿವನು

2. **ಅರಿವೆಂಬ ಕುದುರೆಗೆ ಹುರುಳಿ ತನ್ನನುಭವ**
ಹೆರರುಪದೇಶ ಕಡಿವಾಣ.

ನಾವು ಸಾಮಾನ್ಯವಾಗಿ ಕಾಣುವ ಸಂಗತಿಗಳಿಗೇ ಗಾದೆಯಂಥ ಮಾತುಗಳಿಗೆ ಅತ್ಯಂತ ನಿರಾಯಾಸವಾಗಿ ಏಳೆಯ ಛಂದೋ ರೂಪ ನೀಡಿರುವುದು ಅಚ್ಚರಿವುಂಟು ಮಾಡುತ್ತದೆ. ಲವಲವಿಕೆಯಿಂದ ಕೂಡಿದ ಇವು ಅತ್ಯಂತ ಚೇತೋಹಾರಿಯಾಗಿವೆ. ಉಪಮೆಗಳು, ಸಾಮತಿಗಳು ದೃಷ್ಟಾಂತಗಳು ತೀರ ಸಹಜವಾಗಿ ಮೂಡಿ ಬಂದಿವೆ.

1) **ಸೂಳೆ ಮುಪ್ಪಾದರೆ ಚಾಳಿ ಮುಪ್ಪಾದೀತೆ**
ಮೂಳಿಗುಣವು ಅಳಿದೀತೆ

2) **ಅಂಕೆಯಿಲ್ಲದ ಕಪಿ ಲಂಕೆಯ ಸುಟ್ಟಿತು**
ಅಂಕೆಯೊಳಿರ್ಪುದೆ ಒಳಿತು

ಈ ಮೂರರಲ್ಲಿ ಗಾದೆಯಂಥ ಮಾತುಗಳ ಒಂದು ಸಾಲಿಗೆ, ಇನ್ನೊಂದು ಕಿರು ಸಾಲು ಸೇರಿಸಿ ಏಳೆ ಮಾಡಿದ್ದಾರೆ.

ವಿಡಂಬನೆ ಮತ್ತು ತಿಳಿಹಾಸ್ಯಕ್ಕೆ ಕೊರತೆಯಿಲ್ಲ. ಉದಾಹರಣೆಗೆ

1) **ಕಾನೂನು ಕತ್ತೆಯ ನೀನೇಕೆ ಕೆಣಕುವೆ**
ಮಾನವ ತೂರಿಕೊಳ್ಳುವೆ

2) **ಒಲ್ಲೆನೆಂದರು ಬಂದು ಹೊಲ್ಲಕೈ ಕುಲುಕಲು**
ಮೆಲ್ಲನೆ ಎಣಿಸು ಬೆರಳನು

3) **ತಾನೆಯೆ ಬೊಗಳುವ ಮಾನವನೇತಕೆ**
ಶ್ವಾನವ ಸಾಕಿಕೊಳಬೇಕು

ದೃಷ್ಟಾಂತಗಳು ರೂಪಕಗಳು ವಿಪುಲವಾಗಿ ಬರುತ್ತವೆ

1) **ಹೊತ್ತಗೆ ಎನ್ನುವುದು ಹೊತ್ತಿನ ದೀಪವು**
ಚಿತ್ತದ ತಮವ ಕಳೆವುದು

2) **ಮನದ ಪಾತ್ರೆ ತುಂಬ ಕನಸು ನೀರನು ತುಂಬಿ**
ಕೊನೆಗೆ ಕಣ್ದೆರೆಯೆ ಬಾಯಾರೆ

3) **ಮನಸಿನ ತಾಳನು ಅನುಮಾನ ಕೊರೆವುದು**
ಅನುದಿನ ಕುಟ್ಟೆ ಹುಳುವಾಗಿ

ಆದಿಪ್ರಾಸ, ಒಳಪ್ರಾಸ, ಅನುಪ್ರಾಸಗಳು ಸಾಮಾನ್ಯವಾಗಿ ಎಲ್ಲ ಏಳೆಗಳಲ್ಲೂ ಸರ್ವೇ ಸಾಮಾನ್ಯ

(1) **ಗಡ್ಡವಿದ್ದರೆಲ್ಲ ದೊಡ್ಡವರೇನಬೇಡ**
ಗಡ್ಡದ ಹೋತ ದೊಡ್ಡದೆ

(2) **ಸೋರುವ ಸೂರಿಗೆ ಸೀರೆಯ ಕಟ್ಟಿದ –**
ರಾರುವುದಂತೆ ಬೇಗನೆ

ಪ್ರಾಣಿ ಪಕ್ಷಿ ರೂಪಕಗಳೂ ಬೇಕಾದ ಹಾಗೆ ಬಳಕೆಯಾಗಿವೆ

1) **ಆನೆಯ ಗಾತ್ರದ ಜ್ಞಾನದ ಎದುರೊಳು**
ಮಾನವ ಬುದ್ಧಿ ಗುಂಗಾಡಿ

2) **ಎಲುಬಿಲ್ಲದಿರುವೆಯ ಬಲವನೇವೇಳ್ವುದು**
ಬಲುದೊಡ್ಡ ಕಾಳ ಹೊರುವುದು

ಹೀಗೆ ಜೀವನ ದರ್ಶನ ನೀತಿಗಳನ್ನು ಯಥೇಚ್ಛವಾಗಿ, ನೂತನವಾದ ಉಪಮೆ ದೃಷ್ಟಾಂತಗಳ ಮೂಲಕ ತುಂಬ ಸೊಗಸಾಗಿ, ಉಸಿರಾಡಿದಷ್ಟು ಸಹಜವಾಗಿ, ಲೀಲಾಜಾಲವಾಗಿ ಈ ಏಳೆಗಳ ಮುಖೇನ ಕಾಣಿಸಿದ್ದಾರೆ. ಕ್ಷಣಿಕವಾದರೂ ಸಾರ್ಥಕವಾದ ಬಾಳನ್ನು ಬಾಳುವ ತುಂಬೆಯಂತೆ ಮಾನವನೂ ತನ್ನ ಬಾಳಿನ ರೂಕ್ಷತೆಯನ್ನು ಹೋಗಲಾಡಿಸಿಕೊಂಡು ಸುಂದರವಾದ ಬಾಳನ್ನು ಬಾಳಬೇಕು" ಎಂಬುದೇ ಭಟ್ಟರ ಕೃತಿಯ ಸಂದೇಶ" ಎಂದು ಹೇಳಿರುವ ಡಾ.ಜೆ.ಕೆ. ರಮೇಶ್ ಅವರ ಮಾತು ಯಥಾರ್ಥವಾಗಿಯೇ ಇದೆ.[23]

ಚಿತ್ರಪಥೆ

'ಚಿತ್ರಪಥೆ' ಮತ್ತು 'ಮಳೆಬಿಲ್ಲು' ಸಂಗ್ರಹಗಳು ಕೂಡ 'ಸಾಂಗತ್ಯ' ಛಂದಸ್ಸಿನಲ್ಲಿ ರಚಿತವಾದ ಮುಕ್ತಕಗಳು. ಭಟ್ಟರಿಗೆ ಸಾಂಗತ್ಯ ರಚನೆ ಅತ್ಯಂತ ಸರಾಗ. ಸಾವಿರಾರು ಸಾಂಗತ್ಯಗಳನ್ನು ಬರೆದು ಕೈ ಪಳಗಿಸಿಕೊಂಡ ಕವಿಗೆ ಅದರ ರಚನೆ ನೀರು ಕುಡಿದಷ್ಟೇ ಸಲೀಸು. ಆ ಅನುಭವ ನಮಗೆ ಅವರ ಸಂಕಲನಗಳನ್ನು ನೋಡಿದಾಗ ಅನಿಸುತ್ತದೆ. "ಹಾಸ್ಯವೊಂದೇ ರಸವೆಂಬ ಪಂಥದವನು ನಾನು" ಎನ್ನುವ ಎಸ್.ವಿ.ಪಿ.ಯವರ ಮೂಲ ಮನೋಭಾವವೇ ಹಾಸ್ಯದ್ದು. ವೈಯಕ್ತಿಕ ಬದುಕಿನಲ್ಲಿ ತಾವೆಷ್ಟೇ ನೋವನ್ನು ಉಂಡಿದ್ದರೂ ಅವರ ಮಾತುಕತೆ ಬರವಣಿಗೆ ಭಾಷಣ ಎಲ್ಲದರಲ್ಲೂ ಹಾಸ್ಯವೆನ್ನುವುದು ಹಾಸುಹೊಕ್ಕು. ಅವರ 'ಇಂದ್ರ ಚಾಪ', 'ಚಂದ್ರವೀಥಿ' 'ಸುರಗಿ ಸುರಹೊನ್ನೆ'ಗಳಲ್ಲೂ ಹಾಸ್ಯ ಭರಿತ ಪದ್ಯಗಳು ಸಾಕಷ್ಟು ಇವೆಯಾದರೂ, ಹಾಸ್ಯಕ್ಕೋಸ್ಕರವಾಗಿಯೇ ಮೀಸಲಾದ ಸಂಕಲನವನ್ನು ತರಬೇಕೆಂದು ಸಂಕಲ್ಪಿಸಿ ಅದರಂತೆ ರಚಿತವಾದ್ದು 'ಚಿತ್ರಪಥೆ'. ಇದರಲ್ಲಿ ನಗೆಯುಕ್ಕಿಸುವಂಥ ಜೋಕ್‌ಗಳು, ನಗೆ ಹನಿಗಳು ಇವೆಲ್ಲ ಸಾಂಗತ್ಯದ ಆಕಾರ ತಾಳಿ ಬಂದಿವೆ. ಕೆಲವು ಈಗಾಗಲೇ ಪತ್ರಿಕೆಗಳ ಮೂಲಕ. ಜನರಿಗೆ ಪರಿಚಿತವಾದ ನಗೆ ಹನಿಗಳೇ. ವಿಡಂಬನೆ, ಕಟಕಿ, ವ್ಯಂಗ್ಯ ಕುಹಕ, ಶಬ್ದಶ್ಲೇಷೆ, ಅರ್ಥಶ್ಲೇಷೆ ಹೀಗೆ ಹಾಸ್ಯದ ಎಲ್ಲ ಥರದ ಬಗೆಗಳಿಗೆ ಉದಾಹರಣೆಗಳು ಇದರಲ್ಲಿ ದೊರೆಯುತ್ತವೆ. ಆದರೆ ಇವೆಲ್ಲ ಶುದ್ಧ ನಿರ್ಮಲ ಹಾಸ್ಯ ಹಾಗೂ ಅವು ಅತ್ಯಂತ ಸಹಜವಾಗಿ ಹೊಮ್ಮಿದ ಹಾಸ್ಯ. ಎಲ್ಲೂ ಬಲವಂತವಾಗಿ, ತಿಣುಕದೆ, ಪ್ರಯತ್ನಪೂರ್ವಕವಾಗಿ ಹಾಸ್ಯ ತರುವುದು ಇಲ್ಲ.

ಉದಾಹರಣೆಗೆ

ಇನ್ನೊಂದು ಹಾಸ್ಯದ ಮಾತನು ಹೇಳುವೆ
ನಕ್ಕು ಸಾಯುವೆ ನೀನು ಕೇಳಿ"
"ಹಾಗಾದರಿದೊ ನಮ್ಮ ಅತ್ತೆಯ ಕಳುಹುವೆ
ಬಂದಪರಿರಿ ಸ್ವಲ್ಪ ತಾಳಿ".

ವಿಡಂಬನೆಗೆ

"ಕ್ಷಮಿಸಿ ಬಹು ಹೊತ್ತು ಭಾಷಣಗೈದೆನು
ವಾಚಿಟ್ಟು ಕೊಳುವೆನು ಮುಂದೆ"
ಹೀಗೆಂದ ವಾಗ್ಮಿಗುತ್ತರಿಸಿದನೊಬ್ಬನು
ಕ್ಯಾಲೆಂಡರಿತ್ತಲ್ಲ ಹಿಂದೆ"

ಹೆದರುವಿರೇತಕೆ ಹೆಂಡಿರೆಂದರೆ
ನಾ ನಿಮ್ಮ ಕಣ್ಣಿಗೆ ಹುಲಿಯೆ
"ಗುಂಡಿಟ್ಟು ಕೊಲುತಿದ್ದೆ ಹುಲಿಯೆ ಆಗಿದ್ದರೆ
ಭಯ ಹುಲಿಯಲ್ಲವೆಂಬುದೆಯೆ"

ಕಟಕಿ

'ನನ್ನನ್ನು ನೋಡಿದರೈವತ್ತು ವರುಷವು
ಆದ ಹಾಗೆನಿಸುವುದೇನೆ?'
'ಛೆ ಛೆ ಛೆ ಒಮ್ಮೆ ಹಾಗೆನಿಸಿತ್ತು ಮನಸಿಗೆ
ಅದು ಹತ್ತು ವರುಷದ ಹಿಂದೆ'

ಶ್ಲೇಷೆ

"ಬಟ್ಟೆಯ ತೆಗೆವೆನು ಬಸ್ಸನು ನಿಲ್ಲಿಸು"
ಎಂಬ ಹೆಣ್ಣಿನ ದನಿ ಮೊಳಗೆ
ಏನೆಂದು ನೋಳ್ಪಾಗ, ಅಗಸರ ಹೆಂಗಸು
ಇಳಿದಳು ಬಟ್ಟೆಯ ಜೊತೆಗೆ

ತನ್ನ ಊರಿಗೆ ವರ್ಗಬೇಕೆಂದು ಬೇಡಲು
ನೋಡೋಣ ಹಿಂದಣೆಂದೆನಲು
ತಿರುಗಿನಿಂದಳು ನರ್ಸು ಡಾಕ್ಟರಿನೆದುರೊಳು
ಅವರು ತಬ್ಬಿಬ್ಬಾಗುವೊಲು

ಮಳೆಬಿಲ್ಲು

'ಇಂದ್ರಚಾಪ" ದಂತೆಯೆ **'ಮಳೆಬಿಲ್ಲು'** ಕೂಡ ಏಳು ನೂರು ಮುಕ್ತಕಗಳ ಸಂಕಲನ. ಅಲ್ಲಿರುವಂತೆಯೆ ಇವು ಕೂಡ, ವಿವಿಧ ಸಂಗತಿಗಳನ್ನು ವಿಷಯೀಕರಿಸಿ, ಸಾಂಗತ್ಯದ ಆಕೃತಿ ನೀಡಲಾಗಿರುವ ಪದ್ಯಗಳು. ಇದರಲ್ಲೂ, ಹಾಸ್ಯ ಪೂರ್ಣವಾದ, ಲೋಕನೀತಿ, ಜೀವನ ನೀತಿಗೆ ಸಂಬಂಧಿಸಿದ ಸಾಂಗತ್ಯಗಳು ಸಾಕಷ್ಟು ಇವೆ. ಆದರೆ ಇದರೊಂದಿಗೆ ನಾವು ಮರೆಯಬಾರದ ಸಂಗತಿಯೆಂದರೆ, ಗಾದೆ ಮಾತುಗಳು, ಸಾಮಾನ್ಯವಾದ ಜನರ ಸಾಮಾನ್ಯವಾದ ಮಾತುಕತೆಗಳಲ್ಲಿ ವ್ಯಕ್ತವಾಗುವಂಥ ವಿಚಾರ, ಸಂಗತಿಗಳಿಗೂ ಸಾಂಗತ್ಯದ ವೇಷ ತೊಡಿಸಿಬಿಟ್ಟಿರುವುದು. 'ಉಗುರಿನಲ್ಲಿ ಆಗುವ ಕೆಲಸಕ್ಕೆ ಕೊಡಲಿ ತೊಗೊಂಡ ಹಾಗೆ' ಎಂಬೆ 'ನಿದ್ರೆ ಬಂದವರನ್ನು ಎಬ್ಬಿಸಬಹುದು. ಆದರೆ ನಿದ್ರೆ ಬಂದವರಂತೆ ನಟಿಸುವ ಜನರನ್ನು ಎಚ್ಚರಿಸಲು ಸಾಧ್ಯವಿಲ್ಲ'. ಎತ್ತು ಈಯಿತು ಅಂದರೆ ಕೊಟ್ಟಿಗೆಗೆ ಕಟ್ಟು, 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' 'ಹೆಸರು ಕ್ಷೀರಸಾಗರ ಭಟ್ಟ, ಅರೆಕಾಸಿನ ಮಜ್ಜಿಗೆಗೆ ಗತಿಯಿಲ್ಲ' ಎಂಬಂಥ ಚಿರಪರಿಚಿತ, ಗಾದೆಗಳಿಗೆ ಸಾಂಗತ್ಯದ ರೂಪುಕೊಟ್ಟಿದ್ದಾರೆ. ಹಾಗೆಯೇ ಕೆಲವು ಸಂಸ್ಕೃತದ ಅನುವಾದಗಳು ಇನ್ನು ಕೆಲವು ತೀರ ಸಾಮಾನ್ಯವಾದ ಸಂಗತಿಗಳು. ಒಟ್ಟಾರೆ

ಹೇಳಬೇಕೆಂದರೆ ಏಳು ನೂರರ ಸಂಖ್ಯೆಗೆ ಕಟ್ಟು ಬಿದ್ದ ಕಾರಣದಿಂದಲೇ ಭಟ್ಟರ ಮುಕ್ತಕ ಕಾವ್ಯ ಭಂಡಾರದಲ್ಲಿ ಎಷ್ಟೋ ಮುಕ್ತಕಗಳು ತೀರಾ ಸಾಮಾನ್ಯ, ಅವಕ್ಕೆ ಛಂದಸ್ಸಿನ ರೂಪು ಕೊಡುವುದು ಅನಗತ್ಯವಾಗಿತ್ತು ಎನ್ನುವಂಥವು. ಇನ್ನು ಅನೇಕ ರೂಪಗಳು ಬೇರೆ ಬೇರೆ ಸಂಕಲನಗಳಲ್ಲಿ ಮತ್ತೆ ಮತ್ತೆ ಪುನರಾವರ್ತನೆಗೊಂಡು ಸಂಖ್ಯೆ ಹೆಚ್ಚಿಸುವ ಸಲುವಾಗಿಯೇ ಬಂದಿವೆಯೇನೋ ಎನ್ನುವಂಥವು. ಈ ಮಾತುಗಳು ಎಲ್ಲ ಮುಕ್ತಕ ಸಂಗ್ರಹಗಳಿಗೂ ಅನ್ವಯಿಸುತ್ತವೆ.

ಆದರೆ ಭಟ್ಟರ ನಿರಂತರ ಪ್ರಯೋಗಶೀಲತೆಯಂತೂ ದಿಗ್ಭ್ರಮೆ ಹುಟ್ಟಿಸುವಷ್ಟು ವಿಪುಲವೂ ವೈವಿಧ್ಯ ಪೂರ್ಣವೂ ಆಗಿದೆ. ಗುಣಭೇದದ ಅರಿವು ಇರುವುದೇನಿದ್ದರೂ ರಸಿಕರಾದವರಿಗೆ ಮಾತ್ರ ಎಂದು ಹೇಳುವ ಈ ಸಾಂಗತ್ಯ ಎಷ್ಟೊಂದು ಸೊಗಸಾಗಿದೆ?

ತಾವರೆ ಮಾತ್ರವೆ ಕಪ್ಪೆಯು ಸಹ ಇಂದು
ಪಂಕಜವಲ್ಲವೆ ಹೇಳು
ಆದರೆ ರಸಿಕರಾದವರಿಗೆ ಮಾತ್ರವೆ
ಗುಣಭೇದದರಿವುಂಟೆ ಕೇಳು

ಹಾಸ್ಯದ ಸಂಗತಿಗಳನ್ನು ಲೀಲಾಜಾಲವಾಗಿ 'ಸಾಂಗತ್ಯ' ಮಾಡಿರುವುದಕ್ಕೆ

ನಾಳೆ ನೀ ಬಂದರೆ ಹಲ್ಲನು ಮುರಿವೆನು
ಎಂದಳು ಸದ್ಗೃಹಿಣಿ ಸುಮುಖಿ
ನಾಳೆ ನಾ ಬರುವಾಗ ಹಲ್ಲನು ಕಳಚಿಟ್ಟು
ಬರುವೆನು ಎಂದನು ಕುಹಕಿ

ಭಟ್ಟರ ಪ್ರಯೋಗಶೀಲ ಬುದ್ಧಿ, ಸಂಸ್ಕೃತದ ಶ್ಲೋಕ ಛಂದಸ್ಸನ್ನು ಕನ್ನಡಕ್ಕೆ ಒಗ್ಗಿಸಿನೋಡುವ ಪ್ರಯತ್ನ ಕೂಡ ಮಾಡಿದೆ. 'ಸಂಜೆ ಮಲ್ಲಿಗೆ' ಸಂಕಲನದಲ್ಲಿ ಅನುಬಂಧವಾಗಿ "ಕೇದಗೆ" ಎಂಬ ಶೀರ್ಷಿಕೆಯಲ್ಲಿ 'ಶ್ಲೋಕ' ರೂಪದ ಮುಕ್ತಕಗಳನ್ನು ನೀಡಿದ್ದಾರೆ (1990) ಶ್ಲೋಕ ಛಂದಸ್ಸು ರಾಮಾಯಣದಷ್ಟೇ ಪ್ರಾಚೀನವಾದರೂ ಅದರಲ್ಲಿಯ ವಸ್ತು ಮಾತ್ರ ಸಮಕಾಲೀನ ಸಾಮಾಜಿಕ, ರಾಜಕೀಯ ಸಂಗತಿಗಳೇ.

1. **ಸೋತರೂ ಬಿಡನಾವಾತಂ ತನ್ನ ಪಕ್ಷವನೆಂದಿಗುಂ**
   ಆತನಂ ದೇವನೆಂದೆಂಬೆ ಆತಗೋರಂತೆರಗುವೆ

2. **ಪಕ್ಷಾಂತರಂ ಮಹಾಪಾಪಂ ಪ್ರಜಾಪ್ರಭುತ್ವ ಮಾರಕಂ**
   ಮತವಿತ್ತವಗನ್ಯಾಯಂ ತನಗಂ ದುಃಖಕಾರಕಂ"

3. **ಬೆಳ್ಳಿ ಇಳಿಯೆ ಬಂತೇನು ಈರುಳ್ಳಿ ಸಹ ತಗ್ಗಲಿ**
   ಆಗ ಮುದದಿಂದ ಮೆದ್ದಾನು ದೀನ ಹಿಟ್ಟಿನ ಮುದ್ದೆಯಂ"

4. **ರಕ್ತದಾನಂ ಮಹಾದಾನಂ ನೇತ್ರದಾನವುಮುತ್ತಮಂ**
   ಕೊಟ್ಟು ಕೊಂಡವರಿರ್ವರುಂ ಅಪ್ಪರೊರ್ಮೆಗೆ ಧನ್ಯರುಂ.

ಪ್ರಯೋಗದ ನಿದರ್ಶನಾರ್ಥವಾಗಿ ಇವು ಇವೆಯೆಂದರೂ ಕನ್ನಡದ ಜಾಯಮಾನಕ್ಕೆ ಒಗ್ಗಿ ಬಂದಿಲ್ಲವೆಂದೇ ಹೇಳಬೇಕು.

ಆಧುನಿಕ ವಿಚಾರಗಳನ್ನು ಶ್ಲೋಕರೂಪದಲ್ಲಿ ಹೇಳಹೊರಟಿರುವ ಈ ಹಳಗನ್ನಡ ಧಾಟಿ ಎಷ್ಟು ಮಾತ್ರಕ್ಕೂ ಹೊಂದಿಕೆಯಾಗುತ್ತಿಲ್ಲವೆಂಬುದಕ್ಕೆ ಈ ಶ್ಲೋಕಗಳು ನಿದರ್ಶನವಾದಾವು.

3. ಕಥನ ಕವನಗಳು

ಜಹನಾರಾ

ಭಟ್ಟರು ಕಥನ ಕವನಗಳ ರಚನೆಗೂ ಕೈಹಾಕಿ ಯಶಸ್ಸು ಪಡೆದಿದ್ದಾರೆ. ಅವರ 'ವಿಜಯನಗರದ ಗಿಳಿಗಳು' ಪದ್ಯವನ್ನು ಕಥನ ಕವನವೆಂದೇ ಕರೆಯಬಹುದಾದರೂ, ಮೊಗಲ್ ಬಾದಷಹ ಜಹಾಂಗೀರನ ಮಗಳಾದ ಜಹನಾರಾಳ ಮತ್ತು ರಜಪೂತ ವೀರ ಇವರ ನಡುವಿನ ಒಲವಿನ ಕಥೆಯನ್ನು ಐದು ಭಾಗಗಳಲ್ಲಿ ಏಳುನೂರಾ ಅರುವತ್ತೆಂಟು ಸರಳ ರಗಳೆಯ ಪಂಕ್ತಿಗಳಲ್ಲಿ ಕಥಿಸಿರುವ ಕಾವ್ಯಖಂಡವೇ ಅವರ ಯಶಸ್ವೀ ಕಥನ ಕವನ. ಆತ್ಮಕಥನದ ಧಾಟಿಯಲ್ಲಿ ಸಾಗುವ ಕಥನ, ಸೆರೆವಾಸದಲ್ಲಿರುವ ಜಹನಾರಾಳ ನೆನಪಿನ ರೂಪದಲ್ಲಿ ಸುರುಳಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಮೊದಲ ಭಾಗದಲ್ಲಿ (ಗತಿ–1) ಔರಂಗಜೇಬನು ತನ್ನವರನ್ನೆಲ್ಲ ಬಲಿಗೊಟ್ಟು ಸಿಂಹಾಸನವೇರಿದ ಸಂಗತಿಯ ನಿರೂಪಣೆಯಿದೆ. ಎರಡನೇ ಭಾಗದಲ್ಲಿ (ಗತಿ–2) ಅಂಗುರೀ ಬಾಗ್‌ನ ಉದ್ಯಾನದಲ್ಲಿ ಜೋಧ್‌ಪುರದ ರಜಪೂತ ಯೋಧನೊಂದಿಗೆ ಜಹನಾರಾಳ ಪ್ರೇಮ ವಲ್ಲರಿ ಕುಡಿವಡೆದ ರೀತಿಯ ನಿರೂಪಣೆಯಿದೆ. ಇದರಲ್ಲಿ ಅವಳ ಪ್ರಿಯತಮನು ಔರಂಗಜೇಬನನ್ನೆದುರಿಸಿ ಅಸ್ತ್ರ–ಶಸ್ತ್ರಗಳಿಂದ ಸಜ್ಜಿತನಾಗಿ ಮುನ್ನಡೆವ ಚಿತ್ರಣವಿದೆ. ಅದಕ್ಕೆ ಹಿನ್ನೆಲೆಯಾಗಿ ಸುಂದರ ಪ್ರಕೃತಿ ವರ್ಣನೆಯಿದೆ.

> **ಅಂಗುರೀ ಬಾಗಿನುದ್ಯಾನದೊಳಗಿಂದೇನು**
> **ಹಿಂದೆಂದು ಕಾಣದಿಹ ಸೌಂದರ್ಯ ಸೂಸುತಿದೆ**
> . . . .
> **ಚಿಗುರಿರುವುದಾಮ್ರವನ ನಿಮಿರಿ ನನೆಕೊನೆವೋಗಿ**
> **ಮನ್ಮಥೋತ್ಸವಕೆಂದು ನಿಂದ ತೇರೆಂಬಂತೆ**
> **ಕೊಂಬೆಕೊಂಬೆಗೆ ಕುಳಿತ ಪಕ್ಷಿ ಪರಿಷನ್ಮೇಳ**
> **ಜೇನ್ದನಿಯೊಳುಲಿಯುತಿವೆ ಸುಗ್ಗಿ ಸನ್ನಿಹಿತವೆನೆ**

ಗತಿ–3ರಲ್ಲಿ ಜಹನಾರಾಳು ಸಿಕ್ರಿಯ ಅರಮನೆಯಲ್ಲಿ ಮಲಗಿದ್ದಾಗ ಕಂಡ ರುದ್ರಭಯಂಕರ ಸ್ವಪ್ನದ ಕಥನವಿದ್ದರೆ, ಗತಿ–4ರಲ್ಲಿ ತನ್ನ ಪ್ರಿಯತಮನೊಡನೆ ಕಳೆದ ರಾತ್ರಿಯ ಭವ್ಯ ಸ್ಮೃತಿ ಸುರುಳಿ ಬಿಚ್ಚಿಕೊಂಡಿದೆ.

ಕೊನೆಯ ಭಾಗವು ಜಹನಾರಾಳ ಬಾಲ್ಯದ ನೆನಪುಗಳೊಂದಿಗೆ ಪ್ರಾರಂಭವಾಗಿ ಸ್ವರ್ಗದಲ್ಲಿ ತನಗಾಗಿ ಕಾದಿರುವ ಪ್ರಿಯತಮನನ್ನು ಸೇರಲು ಕಾಲದ ನಿರೀಕ್ಷೆಯಲ್ಲಿರುವುದಾಗಿ ಹೇಳುವುದರೊಂದಿಗೆ ಮುಕ್ತಾಯವಾಗುವುದು. ಜಾತಿ ಧರ್ಮಗಳ ಎಲ್ಲೆಕಟ್ಟನ್ನು ಮೀರಿದ, ಉತ್ಕಟ ಪ್ರೇಮಿನಿಯಾಗಿ ಜಹನಾರಾಳ ಚಿತ್ರಣ ಮೂಡಿಬಂದಿದೆ. "ಈ ಕಾವ್ಯ ನಿರ್ಮಲ ಪ್ರೇಮ, ವೀರ, ಸಾಹಸ, ತ್ಯಾಗ, ದೇಶಭಕ್ತಿ ಮುಂತಾದ ಉದಾತ್ತ ತತ್ವಗಳನ್ನು ಶಕ್ತವಾಗಿ ಬಿತ್ತರಿಸುತ್ತದೆ."[24] ಎಂಬ ಹಾಗೂ ರಜತಪೂರ ವೀರನ ಶೌರ್ಯ, ಔದಾರ್ಯ, ನಾಡಪ್ರೇಮ, ಅಕಲುಷಿತವಾದ ಸರ್ವ ಸಮರ್ಪಣ ಭಾವದ ದಿವ್ಯಾನುರಾಗ ಹಾಗೂ ತ್ಯಾಗ ಮತ್ತು ಜಹನಾರಾಳ ಶೃಂಗಾರ, ಶಾಂತ, ವಿರಕ್ತಿ, ಧೃತಿಭಾವಗಳು ತುಂಬ ಹಿತವಾಗಿ ಹೃದ್ಯವಾಗಿ ನಿರೂಪಿತವಾಗಿವೆ"[25]. ಎಂಬ ಮೆಚ್ಚುಗೆಯ ಮಾತುಗಳು ವ್ಯಕ್ತವಾಗಿವೆ. ಅಷ್ಟೇ ಅಲ್ಲ, ಕಾವ್ಯರಚನೆಯ ಮೊದಲ ಘಟ್ಟದಲ್ಲಿ ಪರಮೇಶ್ವರ ಭಟ್ಟರಿಗಿದ್ದ ಭಾಷೆಯ ಮೇಲಿನ ಹಿಡಿತ, ಬಂಧದ ಬಿಗಿ, ಬಣ್ಣನೆಯ ಕೌಶಲ, ಇವುಗಳಿಗೆ ನಿದರ್ಶನವಾಗಿರುವ 'ಜಹನಾರ', ಕನ್ನಡದ ಅತ್ಯುತ್ತಮ ಕಥನ ಗೀತೆಗಳಲ್ಲೊಂದಾಗಿದೆ"[26] ಎಂಬ ಮುಕ್ತ ಪ್ರಶಂಸೆಗೆ ಒಳಗಾಗಿದೆ.

ಮಾಚಯ್ಯ

ಶ್ರೀಯವರ 'ಇಂಗ್ಲಿಷ್ ಗೀತೆಗಳು' ಕನ್ನಡ ಕಾವ್ಯದಲ್ಲಿ ನೂತನ ಹಾದಿಯನ್ನು ತೆರೆದದ್ದು ವಿದಿತವೇ ಇದೆ. ಅದು ಸ್ವತಂತ್ರ ಭಾವಗೀತೆಗಳ ಸೃಷ್ಟಿಗೆ ಪ್ರೇರಣೆ ನೀಡಿದಂತೆಯೇ ಕಥನಕವನಗಳ ಅನುವಾದ. ಅಳವಡಿಕೆಗಳಿಗೂ ಪ್ರೇರಣೆ ನೀಡಿತು. ಎಸ್.ವಿ.ಪಿ. ಅವರು ಎಂ.ಎ. ವಿದ್ಯಾರ್ಥಿಯಾಗಿದ್ದಾಗಲೇ ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಕೃತಿ ಕವಿ ಎಂದೇ ಹೆಸರಾದ ವರ್ಡ್ಸ್‌ವರ್ತ್ ಕವಿಯ 'ಮೈಕೇಲ್' ಎಂಬ ಕಥನಕವನವನ್ನು "ಮಾಚಯ್ಯ" ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿ ಶ್ರೀಯವರ ಬಂಗಾರದ ಪದಕ ಪಡೆದರು. ಮೂಲದ 484 ಪಂಕ್ತಿಗಳ ಈ ಕಥನಕವನವನ್ನು ಎಸ್.ವಿ.ಪಿ. ಅವರು 1412 ಸಾಲುಗಳ ಸರಳ ರಗಳೆಯ ರೂಪಕ್ಕೆ ರೂಪಾಂತರಿಸಿದ್ದಾರೆ. ಇದನ್ನು ಅವರು ಭಾವಾನುವಾದವೆಂದು ಕರೆದಿದ್ದಾರೆ. ವಾಸ್ತವವಾಗಿ ಮೂಲಕವನದ ವ್ಯಕ್ತಿಗಳ ಹೆಸರುಗಳು, ಪರಿಸರ ಎಲ್ಲವನ್ನೂ ಕನ್ನಡದ ಪರಿಸರಕ್ಕೆ ಹೊಂದುವಂತೆ ರೂಪಾಂತರಿಸಿದ್ದು, ಇದು ಒಂದು ರೀತಿಯಲ್ಲಿ ಅನುಸೃಷ್ಟಿ ಎಂದೇ ಹೇಳಬಹುದಾದ ರೂಪಾಂತರವಾಗಿದೆ. ಇಂಗ್ಲೆಂಡಿನ ಲೇಕ್ ಜಿಲ್ಲೆಯ ಗ್ರೀನ್‌ಹೆಡ್ ಘಿಲ್ ಕಣಿವೆ ಇಲ್ಲಿ ಕನ್ನಡದ ಮಲೆನಾಡಿನ ಹಿಲಕುಂಜಿ ಬೆಟ್ಟವಾಗಿದೆ ಹಾಗೂ ಅಲ್ಲಿಯ Grasmerevale ಇಲ್ಲಿ ಕುರುಬರ ಕಣಿವೆಯಾಗಿದೆ. 'ಮೈಕೇಲ್' 'ಇಸಾಬೆಲ್' ಮತ್ತು 'ಲ್ಯೂಕ್' ಇಲ್ಲಿ 'ಮಾಚ', 'ಮಾಚಿ' ಮತ್ತು 'ಲಕ್ಕ' ಆಗಿದ್ದಾರೆ. ಇದು ಅತ್ಯಂತ ಸೂಕ್ತವಾಗಿದೆ.

ಬಡತನದ ಮತ್ತು ಕಷ್ಟದ ಬಾಳುವೆಯಲ್ಲಿ ದಿನಕಳೆದ ಮುದಿಕುರುಬ ಮಾಚಯ್ಯ ಇಳಿವಯಸ್ಸಿನಲ್ಲಿ ಗಂಡುಮಗು ಜನಿಸಿದಾಗ ಬದುಕಿನಲ್ಲಿ ಇಮ್ಮಡಿಸಿದ ಜೀವನೋತ್ಸಾಹದಿಂದ ಕ್ರಿಯಾಶೀಲನಾಗುತ್ತಾನೆ. ಮಗನನ್ನು ಸಾಕಿ ಬೆಳೆಸಿ ದೊಡ್ಡವನನ್ನಾಗಿ ಮಾಡುವುದರಲ್ಲಿ ಸಂತೃಪ್ತಿಯನ್ನು ಕಂಡುಕೊಳ್ಳುತ್ತಾನೆ. ಲಕ್ಕನು ಹದಿನೆಂಟು ವರ್ಷ ವಯಸ್ಸಿಗೆ ಬಂದು ಇನ್ನು ಅವನು ತನ್ನ ಪಾಲಿನ ಕರ್ತವ್ಯವನ್ನು ತಾನು ನಿಭಾಯಿಸಿಕೊಂಡು ಬದುಕು ಸಾಗಿಸಿಕೊಂಡು ಹೋಗಬೇಕೆಂಬ ನಂಬಿಕೆ ಉಂಟಾಗುವ ಕಾಲಕ್ಕೆ ಮೈಕೇಲನು ತನ್ನ ಅಣ್ಣನ ಮಗನಿಗೆ ಜಾಮಿನಾಗಿದ್ದ ಕಾರಣಕ್ಕೆ ಅವನು ಹೂಡಿದ ಕುತಂತ್ರಕ್ಕೆ ಸಿಕ್ಕಿ, ತಾನೇ ಸಾಲ ತೀರಿಸಬೇಕಾಗುತ್ತದೆ. ಆ ಸಂಬಂಧದಲ್ಲಿ ತನ್ನ ಸ್ವಂತ ಜಮೀನಿನ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಮಾರಿಕೊಳ್ಳಬೇಕಾದ ಅನಿವಾರ್ಯಕ್ಕೆ ಈಡಾಗಿ ದಿಕ್ಕುತಪ್ಪಿದಂತಾಗಿ ಮಾನಸಿಕವಾಗಿ ಕುಸಿದು ಹೋಗುತ್ತಾನೆ. ಮಗನನ್ನು ಹಣಸಂಪಾದಿಸಲು ನಗರಕ್ಕೆ ಕಳಿಸುತ್ತಾನೆ. ಅವನ ದುಡಿಮೆಯಿಂದ ಹೊಸ ರೊಪ್ಪ ಕಟ್ಟಬೇಕೆಂದು ಆಶಿಸಿದ್ದ. ಆದರೆ ಅವನ ದುರದೃಷ್ಟಕ್ಕೆ ಲಕ್ಕ ಇವರ ನಿರೀಕ್ಷೆಯನ್ನು ತಲೆಕೆಳಗು ಮಾಡಿ ಮೈಗಳ್ಳನಾಗಿ ಮೋಸ ಮಾಡಿ ಅಪಮಾನಿತನಾಗುತ್ತಾನೆ. ಅವನನ್ನು ಸಮುದ್ರದಾಚೆಗೆ ಗಡೀಪಾರು ಮಾಡಲಾಗುತ್ತದೆ. ವಂಶಮರ್ಯಾದೆ ಕಳೆದು ಕುಲಗೌರವವನ್ನು ಮಣ್ಣುಪಾಲು ಮಾಡಿದ ಮಗನ ದೆಸೆಯಿಂದಾಗಿ ತಾನು ಬದುಕಿನ ಹೋರಾಟದಲ್ಲಿ ಸೋತೆನೆಂದು ಹತಾಶನಾದ. ತಾನು ರೊಪ್ಪ ಕಟ್ಟಬೇಕೆಂದಿದ್ದ ಜಾಗಕ್ಕೆ ಅನಂತರದಲ್ಲಿ ಎಷ್ಟೋ ಸಲ ಬಂದರೂ "ಕಲ್ಲನೊಂದನಾದರೂ ಮತ್ತೆ ಎತ್ತಿಡಲಿಲ್ಲ" ಎಂಬ ಸಾಲು ಅವನ ಘೋರ ಹತಾಶೆಯ ದ್ಯೋತಕ.

ಈ ಕಥಾಹಂದರದ ಕಥನಕವನವನ್ನು ಅನುವಾದಿಸುವಲ್ಲಿ ಎಸ್.ವಿ.ಪಿ. ಅವರು ತೋರಿರುವ ಕೌಶಲ ಸಾಲು ಸಾಲಿನಲ್ಲೂ ಗೋಚರವಾಗುತ್ತದೆ.

ಎಂಬತ್ತು ವರ್ಷದ ಮಾಚನ ಶಕ್ತಿ ಸಾಮರ್ಥ್ಯ ಕುರಿತ ಈ ವರ್ಣನೆ

"An old man, stout of heart and strong of limb.
His bodily frame had been from youth to age
Of an unusual strength, his mind was keen,
Intense and frugal, apt for all affairs"

ಎಂಬ ಸಾಲುಗಳು ಎಸ್.ವಿ.ಪಿ. ಅವರಲ್ಲಿ

"ಮುದುಕನಾದರೂ ಕೂಡ ಕೆಚ್ಚೆದೆಯ ಕಟ್ಟಾಳು,
ಹರೆಯದೊಳಗೆಂತಂತು ಮುಪ್ಪಿನಲು ಅಸಮಾನ
ಬಲಯುತನು. ಎಲ್ಲ ಕೆಲಸಕು ಒಡನೆ ಒದಗಿ ಬರು–
ವನಿತು ಕಡು ಚುರುಕಾದ ಬುದ್ಧಿ ಗುಣವಾತನದು" ಎಂದಾಗಿದೆ.

ಅವನು ಕುರಿ ಕಾಯುವಾಗ ಗಾಳಿಯ ಸುಳಿವನ್ನು ಹೇಗೆ ಹಿಡಿಯುತ್ತಾನೆಂಬುದನ್ನು ಹೇಳುವ ಮೂಲ ಕವಿಯ ಮಾತುಗಳು ಅನುವಾದದಲ್ಲೂ ಅಷ್ಟೇ ಸೊಗಸಾಗಿ ಮೂಡಿವೆ.

"When others heeded not, he heard the South
Make subterraneous music, like the noise
Of bagpipers on distant Highland hills.
....
....
The winds are now devising work for me!"

"ಮಿಕ್ಕವರು ನಿರ್ಲಕ್ಷ್ಯದಿಂದಿರಲು
ದೂರಮೇಡಿನ ಮೇಲೆ ತುರುಗಾಹಿಯೂದುತಿಹ
ಕೊಳಲಂತೆ ದನಿಗೈವ ತೆಂಕಣೆಲರಿನ ಸುಳಿವಲರ
ಮಾಚಯ್ಯನಾಲಿಸುವನು. ಅಂತಲೆವ ಸುಳಿವೆಲರೆ
ತನ್ನನೂಳಿಗಾಗಿ ಕರೆವುದೆನ್ನುವನು"

ಅನುವಾದದ ನಿಜವಾದ ಸಾಮರ್ಥ್ಯ – ಬೇರೊಂದು ಭಾಷೆಯ ಗಾದೆಯ ಮಾತಿಗೆ ತನ್ನ ಮಾತೃಭಾಷೆಯ ತತ್ಸಮನಾದ ಮಾತನ್ನು ಹೊಂದಿಸುವುದರಲ್ಲೇ ಕಂಡುಬರುವುದು ಎನ್ನುವುದಕ್ಕೆ ನಿದರ್ಶನವೆನ್ನುವಂತೆ

With Shepherd's Phrase
One foot in the grave

– ಕನ್ನಡತನ ಪಡೆದುಕೊಂಡು "ಮುದುಕನಾಗಿಹ ನನ್ನ ಕಾಡುಕರೆಯುವುದೆಂದು ಕುರುಬನಾಡುವ ಮಾತಿನಲಿ..." ಎಂದು ರೂಪುಗೊಂಡಿದೆ.

ಅದೇ ರೀತಿ ಮಗನ ವಿಷಯಕ್ಕೆ ತಂದೆ ತಾಯಿಗಳಿಗಿರುವ ಈ ಪ್ರೀತಿಯ ಒಗಟನ್ನು ವರ್ಡ್ಸ್‌ವರ್ತ್‌ನಿಗಿಂತಲೂ ಮಿಗಿಲೆನಿಸುವ ಹಾಗೆ ಭಟ್ಟರು ಕನ್ನಡಿಸಿದ್ದಾರೆ.

There is comfort in the endlesss love;
Will make a thing endurable, which else
Would overset the brain, or break the heart:

ಎಂಬ ಸಾಲುಗಳ ಕನ್ನಡ ರೂಪ ಹೀಗಿದೆ:

ಪ್ರೇಮ ಬಂಧನದಲ್ಲಿ ಒಂದು ಬಗೆ ಸುಖವಿಹುದು
ಬಗೆಗೆಟ್ಟು ಹುಚ್ಚು ಹಿಡಿದೆದೆಯೊಡೆವ ಸಮಯದಲಿ
ಸಹನಶಕ್ತಿಯನೀವ ಹಿರಿಯ ಗುಣವಿದಕಿಹುದು.

ಸಾರ್ಥಕ ಮತ್ತು ಯಶಸ್ವೀ ಅನುವಾದಿತ ಕವನವಾಗಿ ಇದು ಭಟ್ಟರ ಅನುವಾದ ಸಿದ್ಧಿಗೊಂದು ಉಜ್ವಲ ನಿದರ್ಶನವಾಗಿದೆ.

ಹಾಗಾಗಿ "ಮೂಲದ ಭಾವ ಮಸುಕಾಗದಂತೆ, ರಸ ಸೋರದಂತೆ, ವರ್ಣನೆ ವಿವರ್ಣವಾಗದಂತೆ ಸಮರ್ಥ ಭಾಷಾಂತರ ಮೂಡಿಬಂದಿದೆ" ಎಂಬುದು ಸರಿಯಾದ ಮೌಲ್ಯಮಾಪನ.[27]

4. ವಚನಗಳು

ಎಸ್.ವಿ.ಪಿ. ಅವರ ಸ್ವತಂತ್ರ ರಚನೆಗಳಲ್ಲಿ ಮುಕ್ತಕಗಳ ನಂತರದ ಅಗ್ರಸ್ಥಾನ ಅವರ ವಚನಗಳಿಗೆ ಸಲ್ಲುತ್ತದೆ. ಕೆಲವಂಶಗಳಲ್ಲಿ ಅವರ ಮುಕ್ತಕಗಳಿಗಿಂತಲೂ ಇವು ಒಂದು ಕೈ ಮೇಲು ಎಂದು ಹೇಳಬೇಕು. ಹನ್ನೆಡನೆಯ ಶತಮಾನದಲ್ಲಿ ಕಾಣಿಸಿಕೊಂಡ ಈ ವಚನಮಹಾವಾಹಿನಿ ಈ ಮಧ್ಯೆ ಗುಪ್ತಗಾಮಿನಿಯಾಗಿದ್ದು, ಇಪ್ಪತ್ತನೆಯ ಶತಮಾನದಲ್ಲಿ ಮತ್ತೆ ಕಾಣಿಸಿಕೊಂಡು ಉಕ್ಕಂದವಾಗಿ ಹರಿದು ಇಪ್ಪತ್ತೊಂದನೇ ಶತಮಾನದಲ್ಲೂ ಮುಂದುವರಿದಿದೆ. ಸುಮಾರು 2100 ರಷ್ಟು ಸಂಖ್ಯೆಯಲ್ಲಿ ವಚನಗಳನ್ನು ರಚಿಸುವ ಮೂಲಕ, ಆಧುನಿಕ ಶ್ರೇಷ್ಠ ವಚನಕಾರರಾದ ಪ್ರೊ. ಎಸ್.ವಿ. ರಂಗಣ್ಣ, ಜಚನಿ ಮತ್ತು ಸಿದ್ದಯ್ಯ ಪುರಾಣಿಕರ ಸಾಲಿನಲ್ಲಿ ನಿಲ್ಲುತ್ತಾರೆ. 'ಸದಾಶಿವಗುರು' ಎಂಬ ಅಂಕಿತದಲ್ಲಿ 'ಉಪ್ಪುಕಡಲು'(1970), 'ಪಾಮರ'(1974) ಮತ್ತು 'ಉಂಬರ'(1980) ಎಂಬ ಶೀರ್ಷಿಕೆಗಳಲ್ಲಿ ಈ ವಚನಗಳು ಸಂಕಲಿತವಾಗಿವೆ. 'ಸದಾಶಿವ' ಗುರು ಅವರಿಗೆ ಪಾಠ ಹೇಳಿದ ಗುರುವೂ ಆದ ಅವರ ತಂದೆ ಸದಾಶಿವರಾಯರು ಹಾಗೂ ಅವರ ಪೂರ್ವಿಕರು ಪೂಜಿಸುತ್ತಿದ್ದ ಶೃಂಗೇರಿಯ ಸದಾಶಿವದೇವರು. ಭಟ್ಟರ ವಚನಗಳು ರೂಪ ಮತ್ತು ಸ್ವರೂಪದಲ್ಲಿ ಪ್ರಾಚೀನರ ವಚನಗಳನ್ನು ಅತ್ಯಂತ ಸಮೀಪದಲ್ಲಿ ಹೋಲುತ್ತವೆ. ಪ್ರಾಚೀನರ ವಚನಗಳ ಹಾಗೆಯೇ ಇವುಗಳಲ್ಲಿ ಕೂಡ ನಡುಗನ್ನಡ ರೀತಿಯ ಪದವಿನ್ಯಾಸ, ಪ್ರಾಸಯೋಜನೆ, ಲಯಗಾರಿಕೆ, ಆಡುಮಾತಿನ ಪ್ರಯೋಗ, ಉಪಮೆ ರೂಪಕಗಳ ಅಳವಡಿಕೆ, ಗಾದೆಮಾತುಗಳ ಬಳಕೆ ನಡುನಡುವೆ ಸಂಸ್ಕೃತ ಸೂಕ್ತಿಗಳು, ಸುಭಾಷಿತಗಳ ಉಲ್ಲೇಖ, ಮೊದಲ ವಾಕ್ಯದ ಹಾಗೆಯೇ ಮುಂದಿನ ವಾಕ್ಯಗಳು ರೂಪುಗೊಳ್ಳುವುದು ಇವೇ ಮುಂತಾದ ಲಕ್ಷಣಗಳು ಕಂಡು ಬರುತ್ತವೆ. ಅಲ್ಲಿರುವಂತೆ ಇಲ್ಲಿ 'ನಿಗಮನ ರೀತಿ' (Inductive method) ಯಲ್ಲಿ ಅಂದರೆ– ಆಯಾ ವಚನಗಳ ಸಾರಾಂಶ ಅಥವಾ ವಚನದ ಮುಖ್ಯಾರ್ಥ ಸಾಮಾನ್ಯವಾಗಿ ಕೊನೆಯ ವಾಕ್ಯದಲ್ಲಿದ್ದು ಅದಕ್ಕಿಂತ ಮೊದಲಿನ ವಾಕ್ಯಗಳಲ್ಲಿ ಆ ಕೊನೆಯ ಮಾತನ್ನು ಪುಷ್ಟೀಕರಿಸಲು ಬೇಕಾದ ದೃಷ್ಟಾಂತ, ನಿದರ್ಶನಗಳನ್ನು ಸಂಯೋಜಿಸುವುದು ಇಲ್ಲಿಯ ಬಹುಪಾಲು ವಚನಗಳಲ್ಲಿ ಕಂಡುಬರುವುದಿಲ್ಲ. ಆದರೆ ಎಲ್ಲ ಬಗೆಯ ಲೋಕಾನುಭವಗಳ ಅಭಿವ್ಯಕ್ತಿಗೆ ಅತ್ಯಂತ ಸಮರ್ಥವಾದ ರೀತಿಯಲ್ಲಿ ಈ ವಚನ ಮಾಧ್ಯಮವನ್ನು ಹದಗೊಳಿಸಿಕೊಂಡಿರುವುದು ಭಟ್ಟರ ವೈಶಿಷ್ಟ್ಯವಾಗಿದೆ. ಇನ್ನೂ ಸರಿಯಾಗಿ ಹೇಳಬೇಕೆಂದರೆ, ತಮ್ಮ ಪ್ರತಿಭೆ ಮತ್ತು ವ್ಯುತ್ಪತ್ತಿಗಳಿಂದ ಇಂದಿನ ಅನುಭವಗಳಿಗೆ ವಾಹಕವಾಗುವಂತೆ

ಮಾಡಿಕೊಂಡಿರುವುದೇ ಆ ವೈಶಿಷ್ಟ್ಯ. ಎಂದೇ "ಪ್ರಾಚೀನ ವಚನಗಳ ರೂಪವನ್ನು ಇಷ್ಟು ಯಶಸ್ವಿಯಾಗಿ ಹಿಡಿದವರು, ಅರ್ವಾಚೀನ ಅನುಭವದ ಸೊಗಡನ್ನು ಅಷ್ಟೇ ಯಶಸ್ವಿಯಾಗಿ ಅವುಗಳೊಳಕ್ಕೆ ಗಿಡಿದವರು ಭಟ್ಟರೊಬ್ಬರೆ" ಎಂಬ ಮುಕ್ತ ಪ್ರಶಂಸೆಗೆ ಪಾತ್ರವಾಗಿದ್ದಾರೆ.[28] ಅಲ್ಲದೆ ಈ ವಚನಗಳು ಮೂಡಿದ್ದೂ ಅನುಭವಗಳನ್ನು ಹೀಗೆ ತೋಡಿಕೊಳ್ಳಲೇಬೇಕೆಂಬ ಅನಿವಾರ್ಯತೆಯಿಂದ:

ಕಟ್ಟುಕಥೆಯಾಗಿ ನನ್ನ ವಚನಗಳನ್ನು ಬರೆದುದಲ್ಲ
ಕೆಟ್ಟ ಕಥೆಯಾಗಿ ನನ್ನ ವಚನಗಳನ್ನು ಬರೆದುದಲ್ಲ
ನನ್ನ ಅನಿಸಿಕೆಗಳನ್ನು ಇಂತು ಮೂಡಿಸಿದಲ್ಲದೆ ನನಗೆ ನೆಮ್ಮದಿಯಿಲ್ಲ
ಅದು ಕಾರಣ ಈ ರಚನೆಗಳೆಲ್ಲ ಹೀಗೆ ಹೊಮ್ಮಿವೆ ಸದಾಶಿವ ಗುರು.

ಇಲ್ಲಿ ಲೋಕದ ಡೊಂಕನ್ನು ವಿಡಂಬಿಸಿರುವ ಮಾತುಗಳಿವೆ. ಆ ಮಾತಿಗೆ ಮೊನಚೂ ಇದೆ. ದೈವಭಕ್ತಿಯಿದೆ. ಅನುಭಾವವಿದೆ. ಆದರೆ ಅದಕ್ಕೆ ಜಾತಿಯ ಸೋಂಕಿಲ್ಲ. ಡಾ. ಹಾ.ಮಾ. ನಾ. ಹೇಳುವಂತೆ 'ಮತಾತೀತವಾದ ಭಕ್ತಿ' ಇಲ್ಲಿನ ಮೂರು ವಚನಸಂಕಲನಗಳಲ್ಲಿ ಮಡುಗಟ್ಟಿ ನಿಂತಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸ್ವತಃ ಕವಿಯಾದ್ದರಿಂದ ಅವು ಅತ್ಯಂತ ಸೂತ್ರಪ್ರಾಯವಾಗಿವೆ. ಆತ್ಮನಿವೇದನೆ, ಸಾಮಾಜಿಕ ವಿವೇಚನೆ, ಲೋಕವಿಮರ್ಶೆ ಇವೆಲ್ಲ ಪ್ರಾಚೀನ ವಚನಕಾರರಲ್ಲಿರುವಂತೆಯೇ ಇದ್ದರೂ ಅವು ಹೊಸಕಾಲದ ಸಂವೇದನೆಗಳಿಂದ ಕೂಡಿಕೊಂಡು ಹೊಸರೀತಿಯ ಅಭಿವ್ಯಕ್ತಿಯನ್ನು ಪಡೆದುಕೊಂಡಿರುವ ಕಾರಣದಿಂದಾಗಿ ಹೃದ್ಯವಾಗಿವೆ. ಉದಾಹರಣೆಗೆ, ಶ್ರೀಮಂತರು, ಅತಿ ಶ್ರೀಮಂತರಾಗಿ, ಬಡವರು ಅತಿ ಬಡವರಾಗುತ್ತ ಹೋಗುತ್ತಿರುವ ನಮ್ಮ ದೇಶದ ವಿಷಮಸ್ಥಿತಿಯನ್ನು ವಿಡಂಬಿಸುವ ಈ ವಚನ ವಾಸ್ತವವೇ ಆಗಿಬಿಟ್ಟಿರುವುದು ಒಂದು ದುರಂತವೇ ಸರಿ.

ಪುರಭವನದಾವರಣ ಶುದ್ಧಿಗೆ ಆಳೋರ್ವನು
ತಳಿದ ಫಿನಾಯಿಲಿನ ನೀರಿನ ತುಂತುರ
ಬಳಿಯೆ ಕುಳಿತೋರ್ವ ತಿರುಕನ ಪಾಲಿಗೆ ಪನ್ನೀರು ಆಯಿತ್ತಯ್ಯ
ಶ್ರೀಮಂತರ ಮನೆಯ ಮದುವೆಯೌತಣದ ಬಳಿಕೆಸೆದ
ಎಂಜಲು ಪತ್ರಾವಳಿಗಂಟಿರ್ದ ಹೋಳಿಗೆ ಚೂರು
ಬಳಿಯೆ ಹಸಿದಿರ್ದೋರ್ವ ಭಿಕ್ಷುಕನ ಪಾಲಿಗೆ
ಅಮೃತೋಪಮ ಮಿಷ್ಟಾನ್ನ ವಾಯಿತ್ತಯ್ಯ
ಇದಕೆ ಶತಪಾಲು ಕಷ್ಟಕಾರ್ಪಣ್ಯದೊಳು ನೊಂದು ಬೇವರನು
ನೋಳ್ಪ ವಿಧಿ ಅಸಹಾಯಕವಾದೆನ್ನ ಪಾಲಿಗೆ
ಏಕೆ ಒದಗಿತ್ತಯ್ಯ ಸದಾಶಿವ ಗುರು.

ಹೀಗೆ ಇಲ್ಲಿಯ ಬಹುತೇಕ ವಚನಗಳು, ಆರ್ಥಿಕ ಸಾಮಾಜಿಕ ಅಸಮಾನತೆಗಳಿಂದ ತುಂಬಿದ ಸಮಾಜದ ಸ್ಥಿತಿಯನ್ನು ಬಿಂಬಿಸುವುದಷ್ಟೇ ಅಲ್ಲ; ಸಂವೇದನಾಶೀಲ ಮನಸ್ಸೊಂದು ಅಸಹಾಯಕವಾಗಿ ಪರಿತಪಿಸುವುದನ್ನು ಬಿಂಬಿಸುತ್ತಿದೆ. ಸಮಾಜದ ಅಂಕುಡೊಂಕುಗಳ ವಿಡಂಬನೆ ತೀಕ್ಷ್ಣವಾಗಿಯೇ ಇದೆ. ವ್ಯಂಗ್ಯವೇ ವಾಸ್ತವವಾಗಿ ಬಿಟ್ಟಿರುವುದೇ ನಮ್ಮ ಸಮಾಜದ ದುರಂತ ಎಂಬುದನ್ನು ಈ ವಚನ ಪರೋಕ್ಷವಾಗಿ ಧ್ವನಿಸುತ್ತಿದೆ.

"ಗೊಡ್ಡು ಹಸುವಿಗೆ ಮುರವನೀವ ಗೋವಳಿಗನ ಕಂಡೆನಯ್ಯ
ಕುಂಟು ಕುದುರೆಗೆ ಹುರುಳಿಯನೀವ ಅಶ್ವಪಾಲಕನ ಕಂಡೆನಯ್ಯ

ಪ್ರತಿಷ್ಠಿತನಲ್ಲದ ಲೇಖಕನಿಗೆ ಅವನ ಬರಹವನು
ಅಚ್ಚುಮಾಡುವೆನೆಂಬ ಪ್ರಕಾಶಕ ದೊರೆತುದನು ಕಂಡೆನಯ್ಯ"

ಅದೇ ರೀತಿ

"ನಾವು ಸಬಲರೆ ನಮಗೆ ಕಾನೂನಿನ ರಕ್ಷೆಯಿದೆ
ನಾವು ಅಬಲರೆ ನಮಗೆ ಕಾನೂನಿನ ಶಿಕ್ಷೆಯಿದೆ"

– ಎಂಬುದು ನಮ್ಮ ಕಾನೂನು ವ್ಯವಸ್ಥೆಯ ವಿಡಂಬನೆ.

ಲೋಕದ ಮನುಷ್ಯರೆಲ್ಲ ಒಂದೇ, ಆರ್ಥಿಕತೆ, ಸಿರಿವಂತಿಕೆಗಳಿಂದಾಗಿ ಜನರ ಬದುಕಿನ ಶೈಲಿ ವಿಭಿನ್ನವಾಗುತ್ತದಷ್ಟೇ ಎಂದು ಈ ಕೆಳಗಿನ ವಚನ ಹೇಳುತ್ತದೆ.

ಶ್ರೀಗಂಧದ ಸಾಬೂನು ಬಳಸಿ ಆ ಮೈಯನು ಬಿಸಿನೀರಿನೊಳು ಮಿಸಿಸು
ಮೃದುಗಂಪಿನ ಎಣ್ಣೆಯ ಹಚ್ಚಿ ಆ ತಲೆಗೂದಲು ಬಾಚಿಸು
ಮಡಿಮಾಡಿದ ಉಡುಪನು ತರಿಸಿ ಆ ಒಡಲನು ಸಿಂಗರಿಸು
ಆಗ ಆ ಕೂಲಿಯ ಹುಡುಗ ನಿನ್ನ ಮಗನಿಗಿಂತ ಚೆಲುವಾಗಿ ತೋರ್ಪನು
ಓ ದಣಿಯೆ, ಆಗ ತನ್ನ ಮಗನಿಗಿಂತ ನಿನ್ನ ಕೂಲಿಯಣುಗನ ಕಣ್ಣಣಿಯೆ
ಕಂಡು ಮೆಚ್ಚಿಕೊಂಬನು ಸದಾಶಿವ ಗುರು.

ಅವರ ಬದುಕಿನ ಬಗೆಗಿನ ನಿಲುವು, ಲೋಕಗ್ರಹಿಕೆ ಅತ್ಯಂತ ಆರೋಗ್ಯಕರವಾದ್ದು. ಅದು ಸದಾ ಜೀವಪರವಾದ, ಪ್ರಗತಿಪರವಾದ ದೃಷ್ಟಿಕೋನ ಹೊಂದಿರುವಂಥದು. ಅದು ಮೇಲೆ ಉಲ್ಲೇಖಿಸಲಾದ ವಚನ ಹಾಗೂ ಈ ಮುಂದಿನ ವಚನಗಳಿಂದ ಸ್ಪಷ್ಟವಾಗುತ್ತದೆ.

"ನನ್ನ ಆತ್ಮ ಪಕ್ಷಿಗೆ ವಿಜ್ಞಾನದ ರೆಕ್ಕೆಯಿರಲಿ
ಧರ್ಮದ ಕಾಲಿರಲಿ, ರಾಜಕೀಯದ ಕೊಕ್ಕಿರಲಿ
ತತ್ತ್ವಜ್ಞಾನದ ಕಣ್ಣಿರಲಿ ಸದಾಶಿವ ಗುರು"
ಶ್ರೀಮಂತರೆಲ್ಲ, ಶೋಷಕರಲ್ಲ, ಶೋಷಕರೆಲ್ಲ ಶ್ರೀಮಂತರಲ್ಲ
ಬಡವರೆಲ್ಲ ಶೋಷಿತರಲ್ಲ, ಶೋಷಿತರೆಲ್ಲ ಬಡವರಲ್ಲ
ಅಪವಾದ ಬಾಹುಳ್ಯದಿ ನಿಯಮಂಗಳಿವು ಸದಾಶಿವ ಗುರು.

ಅವರ ವಿಚಾರಗಳ ಅಭಿವ್ಯಕ್ತಿಯ ರೀತಿಯಾದರೂ ತೀರ ನವೀನವಾದದ್ದು. ಅದು ಹೊಸ ಹೊಸ ವಿಧಾನವನ್ನು ಅಳವಡಿಸಿಕೊಳ್ಳುತ್ತ ಹೋಗುವುದನ್ನು ಈ ಸಂಕಲನಗಳ ವಚನಗಳನ್ನು ಓದುತ್ತ ಹೋದಂತೆ ಮನವರಿಕೆಯಾಗುತ್ತದೆ. ಅದು ಹೊಸ ಹೊಸ ಲೋಕವ್ಯಾಪಾರದ ಸಂಗತಿಗಳ ನಿರೂಪಣೆಯ ವಿಧಾನವಾಗಬಹುದು. ನೂತನ ದೃಷ್ಟಾಂತ ಇಲ್ಲವೆ ಉಪಮೆಯಾಗಬಹುದು. ಉದಾಹರಣೆಗೆ ಮನುಷ್ಯ, ಮನುಷ್ಯರಲ್ಲಿ ಸಾಮರಸ್ಯವೆಂಬುದು ಮೊಲದ ಕೋಡಾಗಿದೆ ಎಂಬುದನ್ನು ಹೇಳುವುದು ಹೀಗೆ :

ನೀನು ಕಡಲನು ತೋರಿ ಇದರ ಮೇಲೆ ಹೋಗಬಲ್ಲಿರೆ ಎಂದೆ
ನಾವು ಹೋಗಿ ನಿನಗೆ ಬೆರಗು ತಂದೆವು ತಂದೆ
ನೀನು ಗಿರಿಯನು ತೋರಿ ಇದರ ಮೇಲೆ ಏರಬಲ್ಲಿರೆ ಎಂದೆ
ನಾವು ಏರಿ ನಿನಗೆ ಬೆರಗ ತಂದೆವು ತಂದೆ
ನೀನು ನಮ್ಮೆಲ್ಲರನು ತೋರಿ ನೀವೆಲ್ಲರು
ಒಂದು ಕುಟುಂಬದವರಂತೆ ಬಾಳಬಲ್ಲಿರೆ ಎಂದೆ
ನಾವು ಉತ್ತರಿಸಲಾರದೆ ತತ್ತರಿಸುತ್ತಿದ್ದೇವೆ ತಂದೆ ಸದಾಶಿವ ಗುರು.

ಇದೇ ವಿಚಾರವನ್ನು ಇನ್ನೊಂದು ಕಡೆ "ಗ್ರಹಸಂಪರ್ಕ ಬೆಳೆಸಿದೆವು– ಗೃಹಸಂಪರ್ಕ ಸಾಧಿಸಲಿಲ್ಲ" ಎಂದು ಹೇಳಿದ್ದಾರೆ. ಈ ತೆರನ ಸಾಮರಸ್ಯದ ಸಮಸ್ಯೆ, ಕುಟುಂಬದ ವಿಷಯಕ್ಕಾದರೂ ಅಷ್ಟೆ. ಗಂಡ ಹೆಂಡಿರ ಬದುಕಿನ ರೀತಿಗಳು ಕಿಂಚಿತ್ ವಿಭಿನ್ನವಾದರೂ ಅವರ ಮನಸ್ಸು ಒಮ್ಮುಖವಾದರೆ ಮಾತ್ರ ಸಂಸಾರದಲ್ಲಿ ಸಾಮರಸ್ಯ ಸಾಧ್ಯ ಎಂಬುದನ್ನು ಹೇಳಲು ಅವರು ಬಳಸುವ ದೃಷ್ಟಾಂತ ಅತ್ಯಂತ ವಿನೂತನವಾದ್ದು.

ಸ್ಕೂಟರು ನಡೆಸುವ ಗಂಡನ ಮುಖ ಪಯಣದ ದಿಕ್ಕಿಗೆ ಮನೆಯ ಕಡೆಗೆ
ಹಿಂದೆ ಕುಳಿತ ಹೆಂಡತಿಯ ಮುಖ ಪಯಣದ ದಿಕ್ಕಿಗೆ ಅಂಗಡಿಯ ಕಡೆಗೆ
ಹೀಗೆ ಪತಿಯ ಮುಖ ಅತ್ತ, ಸತಿಯ ಮುಖ ಇತ್ತ
ಆದರೇನು? ಒಮ್ಮುಖವಾದರೆ ಚಿತ್ತ ಸುಖವದುವೆ ಸದಾಶಿವ ಗುರು.

ಹೀಗೆ ಆಧುನಿಕ ಕಾಲದ ವಸ್ತುಸಂಗತಿಗಳನ್ನು ಅನುಕೂಲಕರವಾಗಿ ಉಪಮಾನ, ರೂಪಕ, ದೃಷ್ಟಾಂತಗಳಾಗಿ ಬಳಸುವ ಉತ್ಸಾಹ ಬಹುಪಾಲು ವಚನಗಳಲ್ಲಿ ಕಂಡುಬರುತ್ತದೆ. ಸಾಮತಿಗಳು ಸಾಲು ಸಾಲಾಗಿ ಬರುವುದೇ ರೂಢಿ

ದೋಣಿ ಮುಳುಗಲು ಸಣ್ಣದೊಂದು ತೂತು ಸಾಲದೆ?
ಮನೆ ಸುಡಲು ಸಣ್ಣದೊಂದು ಕಿಡಿ ಸಾಲದೆ?
ಮನೆ ಕೆಡಲು ಸಣ್ಣದೊಂದು ಮಾತು ಸಾಲದೆ?
ಸರ್ವ ಚಿತ್ತಾರವ ಮಸಿ ನುಂಗಿತೆಂಬ ಗಾದೆಯೆ ಇಲ್ಲ ಸದಾಶಿವ ಗುರು?

ರೂಪಕ ಸಾಲಿನಿಂದ ಸಾಲಿಗೆ ಬೆಳೆಯುತ್ತ ಹೊಗುವ ದಂಗುಬಡಿಸುವ ಪರಿಯನ್ನು ಈ ವಚನದಲ್ಲಿ ಮನಗಾಣಬಹುದು.

ಕಾಲವೆಂಬುದು ಒಂದು ಜಮೀನು
ಬೇಸಾಯಗೈದರೆ ಅದು ನಂದನವನ
ಬಂಜರು ಬಿದ್ದರೆ, ಅದು ಬರಿ ಮಸಣ
ಆಬಾದಿನೊಳಗಿದ್ದರೆ ಫಲ ಶತಾಧಿಕ
ಪಾಳುಗೆಡವಿದರೆ ಕಳೆ ಶತಾಧಿಪ
ರೂಢಿಸಿಕೊಂಡರೆ ಕಾಲ ಕಲ್ಪತರು ಸದಾಶಿವ ಗುರು.

ಭಟ್ಟರ ವಚನವಾಙ್ಮಯದ ವೈಶಿಷ್ಟ್ಯವೆಂದರೆ, ನಿಸರ್ಗದ ಅದ್ಭುತಗಳಲ್ಲಿ ಒಂದಾದ ಕಡಲಿನ ವಿರಾಟ್ ದರ್ಶನವನ್ನು "ಉಪ್ಪು ಕಡಲಿನ" ನೂರೈದು ವಚನಗಳಲ್ಲಿ ಅನ್ಯಾದೃಶವಾಗಿ ಕಾಣಿಸಿರುವುದು. ಅಷ್ಟಾದಶ ವರ್ಣನೆಗಳಲ್ಲಿ ಕಡಲ ವರ್ಣನೆಯೂ ಒಂದೆಂಬ ಕಾರಣಕ್ಕೆ, ನಮ್ಮ ಪ್ರಾಚೀನ ಕವಿಗಳು ಕಡಲನ್ನು ನೋಡಿರಲಿ ಬಿಡಲಿ, ತಮ್ಮ ಕಾವ್ಯಕ್ಕೆ ಅಗತ್ಯವಿರಲಿ ಬಿಡಲಿ, ಕವಿ ಸಮಯಬದ್ಧವಾಗಿ ವರ್ಣಿಸಿದ್ದೇ ವರ್ಣಿಸಿದ್ದು. ಇದಕ್ಕೆ ಏಕೈಕ ವಿನಾಯಿತಿಯೆಂದರೆ ಕಡಲ ತೆರೆಗಳ ವರ್ಣನೆಯನ್ನು ಅತ್ಯಂತ ವಾಸ್ತವಿಕವಾಗಿ ತನ್ನ ಭರತೇಶ ವೈಭವದಲ್ಲಿ ಮಾಡಿದ ಕಡಲತೀರದ ಕವಿ ರತ್ನಾಕರವರ್ಣಿ. ಕಡಲಿನ ಅತ್ಯಂತ ವಾಸ್ತವವೂ, ಮಹೋನ್ನತವೂ ಆದ ವರ್ಣನೆಯನ್ನು ನಾವು ಕಾಣಲು ಆಧುನಿಕ ಕವಿಗಳಿಗೇ ಬರಬೇಕು. ಕಡಲಿನ ಭವ್ಯ ಅಪಾರ ಸೌಂದರ್ಯವನ್ನು ಕಂಡು ಆನಂದಿಸಿ ಅದರ ಕುರಿತಾಗಿ ವಿವಿಧ ಸ್ವರದಿಂದ ವಿಫುಲವಾಗಿ ತಮ್ಮ "ಸಮುದ್ರ ಗೀತೆಗಳಲ್ಲಿ ಮೊತ್ತ ಮೊದಲಿಗೆ ಗಾನಗೈದ ವಿನಾಯಕರನ್ನು ಬಿಟ್ಟರೆ, ಕಡಲನ್ನು ಕಂಡು ಮೋಹಿತರಾಗಿ ಅದರ ವಿರಾಟ್ ಸ್ವರೂಪವನ್ನು ತಮ್ಮ ವಚನದರ್ಪಣದ ಮೂಲಕ ಅನನ್ಯವೆಂಬಂತೆ ಕಾಣಿಸಿದವರು ಪ್ರೊ. ಪರಮೇಶ್ವರ ಭಟ್ಟರು. ಅವರ ಉಪ್ಪುಕಡಲಿನ ನೂರೈದು ವಚನಗಳಲ್ಲಿಯೂ

ಏಕಮುಖವಾಗಿ ಮತ್ತು ಏಕಪ್ರಕಾರವಾಗಿ ವ್ಯಕ್ತವಾಗುವ ಭಾವ ಕಡಲಿನೊಂದಿಗೆ ಕವಿ ಬೆಳೆಸಿಕೊಂಡಿರುವ ಆತ್ಮೀಯ, ಮಧುರ, ಅಹೇತುಕ ಪ್ರೇಮ.

'ವಿಸ್ಮಯಕೆ ವಿಸ್ಮಯವಾದ' ಕಡಲು ಕಂಡು ಕವಿ ಮೂಕನಾಗುತ್ತಾನೆ. ಹೊಂಪುಳಿ ಹೋಗುತ್ತಾನೆ. ಅದು ಅವನಿಗೆ ಜೀವಾತ್ಮ, ಪರಮಾತ್ಮರ ಸರಸ-ಸುಹಾಸದ ರಸೋದಧಿ. ಮಂಗಳೂರಿನಲ್ಲಿದ್ದ ದಿನಗಳಲ್ಲಿ ಅದರ ವಿರಾಟ್ ಸೌಂದರ್ಯವನ್ನು ಮನಸಾರೆ ಸವಿದ ಕವಿಗೆ ಅದನ್ನು ಎಷ್ಟು ಬಗೆಯಲ್ಲಿ ವರ್ಣಿಸಿದರೂ ತೃಪ್ತಿಯಿಲ್ಲ; ಅದರ ತೆರೆಗಳ ಲಾಸ್ಯವನ್ನು, ಅದರ ವರ್ಣವೈಭವವನ್ನು, ಕಡಲಿನಲ್ಲಿ ಸೂರ್ಯಾಸ್ತದ ಬೆಡಗನ್ನು ಬಗೆಬಗೆಯಾಗಿ ವರ್ಣಿಸಿ ದಣಿಯುತ್ತಾರೆ. ಈ ಕೆಳಗಿನದು ಅದರ ತೆರೆಗಳ ಲೀಲೆಯ ಮನೋಜ್ಞ ವರ್ಣನೆ, ಜೊತೆಗೆ ಕವಿಯ ವಿಸ್ಮಯ ಹೀಗೆ ವ್ಯಕ್ತವಾಗಿದೆ.

ಪಡುಗಡಲ ತೆರೆಗಳ ಲೀಲೆ ಚೋದ್ಯಕೆ ಚೋದ್ಯ
ತೆರೆಗಳು ಒಂದನು ಒಂದು ದಾಟಿ ಬರುತಿವೆ
ತೆರೆಗಳು ಒಂದನು ಒಂದು ನುಂಗಿನೊಣೆದು ಬರುತಿವೆ
. . . .
ಮುಂದೆ ಹೋಹ ತೆರೆಯನು ಹಿಂದೆ ಬಹ ತೆರೆ
ಬೆನ್ನಟ್ಟಿ ಬರುವ ಪರಿಯ ನೋಡಾ
. . . .
. . . .
ಬಂದ ತೆರೆ ದಡಕೆ ಕಚಕುಳಿಯಿಡುವಷ್ಟರೊಳು
ತೆರೆಯ ಮುಡಿಮುರಿದು ಕಡೆಗೆ
ತನ್ನಡಿಗೆ ತಾನೆ ಕೆಡೆವ ಪರಿಯ ನೋಡಾ

– ಎಂದು ವಿಸ್ಮಯಪಟ್ಟಿದ್ದಾನೆ.

ಒಂದನಿನ್ನೊಂದು ನುಂಗಿನೊಣೆವಂತೆ ಸೆಣಸಿ ಕುಣಿವಂತೆ
ತೆರೆಯ ಮೇಲೆ ತೆರೆಯುರುಳಿ ಬರುವ ಪರಿಯ ನೋಡಾ.

ಪಶ್ಚಿಮ ಸಮುದ್ರ ಅವರಿಗೆ "ಅಂಶಗಣದಲ್ಲಿ ರುದ್ರ, ರಸಂಗಳದಲಿ ರೌದ್ರ, ಛಂದದೊಳು ಮತ್ತೇಭವಿಕ್ರೀಡಿತ, ಕಾವ್ಯ ಪ್ರಕಾರದೊಳು ಚಂಪು– ಎಂದು ಒಮ್ಮೆ ಅನಿಸಿದರೆ, ಇನ್ನೊಮ್ಮೆ ಅದರ ಅಲೆಯ ವಿನ್ಯಾಸದಲ್ಲಿ ಹೆಡೆಯೆತ್ತಿ ನಿಂತ ಸರ್ಪದ ರೂಪಕ ಹೊಡೆದು ಕಾಣುತ್ತದೆ:

ಕಡಲಿನೊಂದಿಗೆ ಆಪ್ತಸಖನಂತೆ, ಲೋಕಾಭಿರಾಮವಾಗಿ ಸರಸ ಸಲ್ಲಾಪ ಮಾಡಿದ ಕವಿ ಭಟ್ಟರೊಬ್ಬರೇ. ಹೊರಗಣ ಕಡಲನ್ನು ನೋಡಿ, ಕವಿಯೊಳಗಣ ರಸವಾರಿಧಿ ಉಕ್ಕೇರಿದಾಗ, ನಡೆದ ಕಡಲೆರಡರ ಹೃತ್ಸಂವಾದವೇ ಇಲ್ಲಿ ವಚನತರಂಗದಲ್ಲಿ ರೂಹು ಪಡೆದಿದೆ. ತನ್ನ ಕಥೆ ವ್ಯಥೆಯನ್ನು ಹಾಡು ಪಾಡನ್ನು ನೋವು ನಲಿವನ್ನು ತನ್ನಲ್ಲಿ ಒರೆಯಿತೆಂದು ಹೇಳುವ ಸಾಲುಗಳು ಅಕೃತಕವೂ ಪಾರದರ್ಶಕವೂ ಆದುವು.

"ನನ್ನ ಕಡಲ ಸಲ್ಲಾಪ ಮೊನ್ನೆ ಸೊಗಸಾಗಿ ನಡೆಯಿತ್ತಯ್ಯ
ಅದು ತನ್ನ ಮನೋವ್ಯಥೆಯ ತೋಡಿಕೊಂಡರೆ
ನಾನು ನನ್ನ ಮನೋವ್ಯಥೆಯ ತೋಡಿಕೊಂಡೆನಯ್ಯ
ತನ್ನೊಳಗಣ ಮತ್ಸ್ಯ ಜಗತ್ತಿನ ಮಾತ್ಸರ್ಯದ ಬದುಕು ಸಾವುಗಳ
ಹೋರಾಟದ ಕಥೆಯನ್ನು ಹೇಳಿಕೊಂಡು ಅತ್ತಿತಯ್ಯ"

ನನ್ನೊಳಗಣ ನೆಲದ ಮಕ್ಕಳ ಹೇರಾಳದಸೂಯೆಯ ಬದುಕು ಸಾವುಗಳ
ಹೋರಾಟದ ಕಥೆಯನು ನಾನು ಹೇಳಿಕೊಂಡು ಅಳುತ್ತಿದ್ದೆನಯ್ಯಾ

ಹೀಗೆ ಉಭಯ ಕುಶಲೋಪರಿ ನಡೆಸುವುದಾಗಲಿ, "ನಿನಗೆ ಬೇಡಾದರೆ ನೂಕಿ ಕಳೆವ, ತಾಯಿಬುದ್ಧಿಯ, ಬೇಕಾದುದಾರೆ, ಯಾವ ಮೂಲೆಯೊಳು ಅಡಗಿದ್ದರೂ ಅರಸಿಬಂದು ಮುದ್ದಾಡಿ ನಲಿವುದೆಂದು ಛೇಡಿಸುವುದಾಗಲಿ ಭಟ್ಟರಿಗೆ ಮಾತ್ರ ಸಾಧ್ಯ.

ಕಡಲಿನಲ್ಲಿ ಮುಳುಗುತ್ತಿರುವ ರವಿಯ ತುಂಬ ಮನೋಹರ ಚಿತ್ರ ಇದರಲ್ಲಿದೆ. ರವಿಯ ಬಿಂಬ ತೇಲುವ ಚೆಂಡಾದಾಗ ಕವಿ ಕ್ರೀಡಾಸಕ್ತ ಯುವಕನಾಗಿ, ತೇರಿನ ಪರಿಜಾದಾಗ ಪರದೆಯ ನೋಟಕನಾಗಿ, ಬುಗುರಿಯಾಯಿತೆಂದು ಆಡಿಸುವ ಬಾಲಕನಾಗಿ, ಅಮೃತ ಕಲಶವಾಯಿತೆಂದು ತೃಷಿತ ಪಥಿಕನಾಗಿ, ಶಿವಲಿಂಗವಾಯಿತೆಂದು ಜಂಗಮಭಾವವಾಂತು, ತಟ್ಟೆಯಾಯಿತೆಂದು ಉಂಬ ಹಸುಳೆಯ ಭಾವ ತಾಳಿ, ಬೆಳಗುವ ಸೊಡರ ಕುಡಿಯಾಯಿತೆಂದು ಪೂಜಾರಿಯಾಗಿ ನಲಿವ– ಈ ಆರಾಧನಾ ಮನೋಭಾವ ಅದೆಂಥ ಸಂಸ್ಕಾರದ ಪಾಕ ಎಂದು ವಿಸ್ಮಿತರಾಗುತ್ತೇವೆ.

ಭಟ್ಟರಿಗೆ ಕಡಲು ದೈವೀಕಪ್ರಕಾಶನದ ಒಂದು ರೂಪ. ಅದಕ್ಕೆಂದೇ

"ಕತ್ತಲಲ್ಲಿ ಬೆಂಕಿಯ ಹಾಳೆ ಹಗಲಿನಲ್ಲಿ ನೀಲಿಯ ಚಾಪೆ
ನೀನಲ್ಲದೆ ಇದ ಹೊತ್ತಿಸಿದ್ದವರನ್ಯರು ಉಂಟೆ?
ನೀನಲ್ಲದೆ ಇದ ಹಾಸಿದ್ದವರನ್ಯರು ಉಂಟೆ?
ಈ ಪಡುಗಡಲೆಂಬುದು ನಿನ್ನ ಸದೃಶತ್ವದ ಸುಂದರ ಸೃಷ್ಟಿ ಸದಾಶಿವ ಗುರು.

ಎಂದು ಹೇಳುವಲ್ಲಿ ಹಾಗೂ

"ನಿನ್ನ ಕಡಲು ಉಪ್ಪಾದರೂ ಅದರೊಳಗೆ ನಿನ್ನದೆಂಬ ಮುತ್ತುಂಟು, ರತ್ನವುಂಟು
ನನ್ನ ಈ ಒಡಲು ಮುಪ್ಪಾದರೂ ಇದರೊಳಗೆ ನೀನೆಂಬ ಮುತ್ತುಂಟು ರತ್ನವುಂಟು"

ಎಂಬಲ್ಲಿ ಭಟ್ಟರ 'ಜೀವನದರ್ಶನ' ಕಡಲುವರಿದಿದೆ. ಅದು ಪ್ರಿಯವಾಗಿರುವ ಕಾರಣವಾದರೂ ತಾವಿಬ್ಬರೂ ಒಬ್ಬನೇ ಭಗವಂತನ ಸೃಷ್ಟಿ ಮತ್ತು ಅದರಲ್ಲಿ ಕಾಣುವುದು ಅವನದೇ ರೂಪವನ್ನು ಎಂಬುದೇ ಆ ದರ್ಶನ.

ಈ ಮೂರೂ ವಚನ ಸಂಕಲನಗಳನ್ನು ಪರಿಭಾವಿಸಿದಾಗ, ಪುರಾಣ, ಇತಿಹಾಸ, ಧರ್ಮ, ಆಧ್ಯಾತ್ಮದ ಅನುಭಾವ, ವಿಜ್ಞಾನ ವಿಚಾರ, ಜನರ ನಂಬಿಕೆ, ಪ್ರಸ್ತುತ ರಾಜಕೀಯ, ಸಾಹಿತ್ಯ, ಕವಿ–ಕಾವ್ಯ ಚಿಂತನೆ – ಬಡತನ – ಸಿರಿತನ ವಿಚಾರ, ಜೀವನ ವಿವೇಕ – ಹೀಗೆ ಅವರು ಪ್ರಸ್ತಾಪಿಸದಿರುವ ಸಂಗತಿಗಳಿಲ್ಲ, ವಿಚಾರಗಳಿಲ್ಲ. ನಮ್ಮ ಬದುಕನ್ನು ಆವರಿಸಿರುವ ಎಲ್ಲದರ ಬಗ್ಗೆಯೂ ಚಿಂತಿಸಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಆ ಚಿಂತನೆಗಳು ಜೀವನಾನುಭವಗಳು ಸಮರ್ಥವಾದ ಶಬ್ದಾರ್ಥದ ಮಾಧ್ಯಮದಲ್ಲಿ ಅಳವಟ್ಟಿರುವ ಕಾರಣದಿಂದಾಗಿ ಅವಕ್ಕೆ ಅಪೂರ್ವ ಸೊಗಸು ಸೌಂದರ್ಯಗಳು ಪ್ರಾಪ್ತವಾಗಿವೆ. ಎಂದೇ ಅವರ ಉಪ್ಪುಕಡಲು ಕುರಿತು ಡಾ. ಹಾ.ಮಾ. ನಾಯಕರು ಹೇಳಿದ– "ಉಪ್ಪುಕಡಲು ಆಧುನಿಕ ಕನ್ನಡದ ಒಂದು ಶ್ರೇಷ್ಠ ಗ್ರಂಥ. ಪ್ರೊ. ಪರಮೇಶ್ವರಭಟ್ಟರ ಪರಿಣತ ಕೃತಿ"[28ಅ] ಮಾತು ಒಟ್ಟಾರೆ ಅವರ ವಚನಗಳನ್ನು ಕುರಿತ ಬೆಲೆಯುಳ್ಳ ವಿಮರ್ಶೆಯ ಮಾತೆನ್ನಬಹುದು. ಇಷ್ಟೆಲ್ಲ ಹೇಳಿದ ಬಳಿಕವೂ ಹೇಳಬೇಕಾದ ಮಾತೆಂದರೆ– ಅವರ ಸಾವಿರಾರು ಮುಕ್ತಕಗಳು ಮತ್ತು ವಚನಗಳ ಒಂದು ದೌರ್ಬಲ್ಯವೆಂದರೆ, ತೀರಾ ಸಾಮಾನ್ಯವಾದ ಸಂಗತಿಗಳಿಗೂ ಛಂದಸ್ಸಿನ ಇಲ್ಲವೆ ವಚನದ ಆಕಾರ ನೀಡಿರುವುದು. ಅಲ್ಲದೆ ಒಂದೇ ಬಗೆಯ ಮುಕ್ತಕದ ಇಲ್ಲವೆ

ವಚನದ ಪುನರಾವೃತ್ತಿ ಹಾಗೂ ಒಂದೇ ಸಂಗತಿ ಅಥವಾ ವಿಚಾರವನ್ನು ಬೇರೆ ಬೇರೆ ಛಂದೋರೂಪಗಳಲ್ಲಿ ಹೇಳುವುದು. ಏಳುನೂರರ ಸಂಖ್ಯೆಯ ಬೆನ್ನುಹತ್ತಿದ್ದರಿಂದ ಹೀಗಾಗಿರಬೇಕು– ಇದನ್ನು ವಿಮರ್ಶಕರೂ ಗಮನಿಸಿದ್ದಾರೆ.[29]

ಗದ್ಯಬರಹಗಳು

5. ವಿಮರ್ಶೆ

ಭಟ್ಟರ ಸ್ವತಂತ್ರ ಕೃತಿಗಳಲ್ಲಿ ಗದ್ಯಬರಹಗಳೂ ವಿಪುಲವಾಗಿವೆ. ಮುಖ್ಯವಾಗಿ ಇವು ವಿಮರ್ಶಾತ್ಮಕ ಬರಹಗಳು. ಸಾಹಿತ್ಯದ ವಿದ್ಯಾರ್ಥಿಯಾಗಿ, ಹತ್ತಿರ ಹತ್ತಿರ ನಾಲ್ಕು ದಶಕಗಳ ಸುದೀರ್ಘ ಅವಧಿಯ ಅಧ್ಯಾಪನದ ಫಲವಾಗಿ, ತಾವು ಅಧ್ಯಯನ ಮಾಡಿದ ಸಾಹಿತ್ಯ ಕೃತಿಗಳನ್ನು ಕುರಿತ ವಿಮರ್ಶೆ, ವ್ಯಾಖ್ಯಾನರೂಪದ ಬರಹಗಳಾಗಿವೆ. ಇವು. **'ಭಾವಗೀತೆ', 'ಅಕ್ಕಮಹಾದೇವಿ'**(1939)– ಇವೆರಡೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆಗೆ ಬರೆದ ಪುಸ್ತಕಗಳು. **'ಸೀಳುನೋಟ'**(1963) **ಲೇಖನಗಳು**(1971), **ಭಾಷಣಗಳು**(1970) **ಪ್ರಬಂಧಗಳು**(1971) – ಈ ನಾಲ್ಕೂ ಅವರ ವಿಮರ್ಶಾತ್ಮಕ ಕೃತಿಗಳು. ಹಳಗನ್ನಡ ಹೊಸಗನ್ನಡ ಸಾಹಿತ್ಯದ ಕವಿಗಳು ಮತ್ತು ಕೃತಿಗಳನ್ನು ಕುರಿತ ಈ ಬರಹಗಳು ಭಟ್ಟರ ಚಿಂತನದ ಗಾಢತೆ ಮತ್ತು ಮಂಥನದ ವೈಶಾಲ್ಯಕ್ಕೆ ನಿದರ್ಶನಗಳೆನ್ನಬಹುದು. ಐದು ಭಾಗಗಳಲ್ಲಿ ಪ್ರಕಟವಾಗಿರುವ ಅವರ ಕೊನೆಯ ಗದ್ಯಕೃತಿ **'ರಸಋಷಿ'** ಕುವೆಂಪು ಅವರ ಸಮಗ್ರ ಕೃತಿ.ಲೋಕವನ್ನು ಅದರೆಲ್ಲ ಹಾಸುಬೀಸುಗಳಲ್ಲಿ ಹಿಡಿದಿಡುವ ಮಹಾಪ್ರಯತ್ನವಾಗಿದೆ. ಇವುಗಳನ್ನು ಸ್ವಲ್ಪ ವಿವರವಾಗಿ ನೋಡಬಹುದು.

'ಅಕ್ಕಮಹಾದೇವಿ' ಅಧ್ಯಾಪಕರಾದ ತರುಣದಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘದ ಆಶ್ರಯದಲ್ಲಿ ನೀಡಿದ ಎರಡು ಉಪನ್ಯಾಸಗಳನ್ನಾಧರಿಸಿ ಬರೆದದ್ದು. ನಾಲ್ಕು ಶೀರ್ಷಿಕೆಗಳಲ್ಲಿ ಅಕ್ಕನ ಜೀವನ ಮತ್ತು ಅವಳ ವಚನಗಳನ್ನು ವಿವರವಾದ ಪರಿಶೀಲನೆಗೆ ಒಳಗುಮಾಡಿದ್ದಾರೆ. ಅಕ್ಕನ ಬದುಕು, ಪುರಾಣ, ದಂತಕಥೆ ಹಾಗೂ ಹರಿಹರ, ಚಾಮರಸ, ಸಿದ್ಧವೀರಣಾಚಾರ್ಯ, ಚನ್ನಬಸವಾಂಕನೇ ಮೊದಲಾದ ಕೃತಿಕಾರರಿಗೆ ತಿಳಿದಿದ್ದ ವಾಸ್ತವ ಸಂಗತಿಗಳ ಜೊತೆಗೆ ಕಲ್ಪನೆಯೂ ಸೇರಿಕೊಂಡು, ಸಂಕೀರ್ಣಗೊಂಡಿದೆ. ಆದರೆ ಈ ಕೃತಿಗಳಿಗಿಂತ ಮಿಗಿಲಾಗಿ ಆಕೆಯ ವಚನಗಳಲ್ಲಿ ಅವಳ ವೈಯಕ್ತಿಕ ಬದುಕು ಬೇಕಾದ ಹಾಗೆ ಸುಳುಹುದೋರಿದೆ. ಹಾಗೆ ನೋಡಿದರೆ ಅಕ್ಕನ ಬದುಕು ಬೇರೆಯಲ್ಲ, ಅವಳ ವಚನಗಳು ಬೇರೆಯಲ್ಲ ಎಂಬಷ್ಟು ಮಟ್ಟಿಗೆ ಅವಳ ಬದುಕು ಅವಳ ವಚನಗಳಲ್ಲಿ ಸೇರಿಹೋಗಿದೆ. ಪರಮೇಶ್ವರಭಟ್ಟರು ಅಕ್ಕನ ಬದುಕನ್ನು, ಕೌಶಿಕನನ್ನು ಮದುವೆಯಾಗುವುದಕ್ಕಿಂತ ಮುಂಚಿನ ಅವಳ ಪ್ರಾರಂಭಿಕ ಜೀವನ, ಕೌಶಿಕನೊಂದಿಗೆ ಒಲ್ಲದ ಸಾಂಸಾರಿಕ ಬದುಕು, ಅನಂತರದಲ್ಲಿ ಬಸವಾದಿಗಳ ಸಂಗದಲ್ಲಿ ಕಲ್ಯಾಣದಲ್ಲಿ ಕಳೆದ ಅವಳ ಆಧ್ಯಾತ್ಮಿಕ ಬದುಕು ಮತ್ತು ಶ್ರೀಶೈಲದ ಕದಳಿಯ ವನದಲ್ಲಿ ತನ್ನ ಚೆನ್ನನೊಂದಿಗೆ ಐಕ್ಯವಾಗುವ ಹಂತದ ಕೊನೆಯ ಘಟ್ಟದ ಬದುಕು ಎಂಬ ನಾಲ್ಕು ಘಟ್ಟಗಳಲ್ಲಿ ವಿಶ್ಲೇಷಿಸಿದ್ದಾರೆ. ಅವಳ ಬದುಕಿಗೆ ನೇರವಾಗಿ ಸಂಬಂಧಿಸಿವೆ ಎಂಬಂಥ ವಚನಗಳಿಂದ ಅದನ್ನು ರೇಖಿಸಲು ಮಾಡಿರುವ ಪ್ರಯತ್ನ ಅತ್ಯಂತ ಸಾರ್ಥಕವಾಗಿದೆ. ಅವಳಿಗೆ ಕಿಂಚಿತ್ತೂ ಇಷ್ಟವಿಲ್ಲದಿದ್ದರೂ, ಕೌಶಿಕನೊಂದಿಗಿನ ಬದುಕು ಸಾಗಿಸಬೇಕಾಗಿ ಬಂದ ಅನಿವಾರ್ಯ ಸಂದರ್ಭವನ್ನು ಮಾಯದ ಮದ, ಕಾಯದ ಕತ್ತಲೆ, ಮತ್ತು 'ಜೀವದ ಜಂಜಡ' ಎಂದು ಅರ್ಥಪೂರ್ಣವಾಗಿ

ವಿವರಿಸಿಕೊಂಡು ಅದರಂತೆ ಅವಳ ಮನಸ್ಸಿನ ಹೊಯ್ದಾಟ, ಸಂಕಷ್ಟ, ತಳಮಳಗಳ ಚಿತ್ರಣವನ್ನು ನೀಡುವ ವಚನಗಳನ್ನು ಅವಳ ಬದುಕಿನ ಬೇರೆ ಬೇರೆ ಸಂದರ್ಭಗಳಿಗೆ ಅನ್ವಯಿಸುವಂತೆ ಮಾಡಿರುವುದು ಕೂಡ ತುಂಬ ಯಶಸ್ವಿಯಾಗಿದೆ. ಅಂತೆಯೇ ಅವಳ ಆಧ್ಯಾತ್ಮಿಕ ಬದುಕಿನ ಸಾಧನೆ, ಚೆನ್ನಮಲ್ಲಿಕಾರ್ಜುನನೊಂದಿಗಿನ ಅವಳ ಸತಿಪತಿ ಭಾವದ ಮಧುರ ಭಕ್ತಿಯ ಸಾಧನಾ ಪಥವನ್ನು ಸೊಗಸಾಗಿ ರೇಖಿಸಿಕೊಟ್ಟಿದ್ದಾರೆ.

ಅಕ್ಕನವರ ವಚನಗಳಲ್ಲಿ ಕಂಡುಬರುವ ಅನನ್ಯ ಕಾವ್ಯ ಗುಣವನ್ನು ವಿಶ್ಲೇಷಿಸಿರುವ ರೀತಿ ಅತ್ಯಂತ ಹೃದ್ಯವಾಗಿದೆ. ಅವಳ ಜೀವನವೇ ಒಂದು ಕಾವ್ಯ. ಕನ್ನಡದ ಈ ಮೊದಲ ಕವಯಿತ್ರಿಯ ವಚನಗಳಷ್ಟು ಭಾಗೀತಾತ್ಮಕ ಗುಣವುಳ್ಳ ವಚನಗಳು ಬೇರೆ ಯಾರವೂ ಇಲ್ಲ ಎನ್ನಿಸುವಷ್ಟು ರಮ್ಯವಾಗಿರುವುದನ್ನು– "ಆಕೆಯ ನುಡಿಹಿಣಿಲು ಮುಟ್ಟಿದಲ್ಲಿ ಮಧು ಸುರಿಸುವ ಕೋಲು ಜೇನಿನ ಹಿಣಿಲಿನಂತೆ" ಉಪಮೆ, ರೂಪಕ, ದೃಷ್ಟಾಂತವೇ ಮೊದಲಾದ ಅಲಂಕಾರಗಳಿಂದ ಮೆರುಗು ಪಡೆದಿರುವುದನ್ನು, ಅವುಗಳ ಕಾವ್ಯಮಯತೆಯನ್ನು ತೋರಿಸಿಕೊಟ್ಟಿದ್ದಾರೆ. "ಅಕ್ಕನ ವಚನಗಳಲ್ಲಿ ಭಾವೋತ್ಕರ್ಷವಿದೆ. ಉತ್ತಮ ಕವಿಜೀವನದ ಎಲ್ಲ ಸಂಸ್ಕಾರವೂ ಹೃದಯದ ಎಲ್ಲ ರಸಾನುಭವವೂ ಕಂಡುಬರುತ್ತಿದೆ" ಎಂಬ, ಹಾಗೆಯೇ "ಅಕ್ಕನ ವಚನಗಳಲ್ಲಿ ನೀತಿಗೆ ಮಹತ್ವದ ಸ್ಥಾನವಿಲ್ಲವೆಂದರೆ ತಪ್ಪಾಗಲಾರದು. . . . .ಅವಳೊಬ್ಬ ಹಿರಿಯ ಆಧ್ಯಾತ್ಮಿಕ ಶಕ್ತಿಯಾಗಿ ಬಾಳಿದವಳು. ಮತಪ್ರವರ್ತಕಳಾಗಿ, ಪ್ರಚಾರಕಳಾಗಿ ಬಾಳಿದವಳಲ್ಲ. ಕಾವ್ಯ, ಅನುಭಾವ, ಪ್ರೇಮ ಮೂರೂ ಮುಪ್ಪುರಿಗೊಂಡಿರುವ ವಚನಗಳು ಅವು" ಎಂಬುದು ಅವಳ ವಚನಗಳ ಯಥಾರ್ಥ ವಿಮರ್ಶೆಯಾಗಿದೆ.

'ಕರಿಯನ್ನು ಕನ್ನಡಿಯಲ್ಲಿ ಅಡಗಿಸಿದಂತೆ" ಈ ಸಣ್ಣ ಹೊತ್ತಗೆಯಲ್ಲಿ ಅಕ್ಕನ ಬದುಕು ಮತ್ತು ವಚನಗಳ ಚಿತ್ರಣ ಹಾಳತವಾಗಿ ಮೂಡಿಬಂದಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಮಂಡ್ಯ ಮತ್ತು ಬಳ್ಳಾರಿಗಳಲ್ಲಿ ನೀಡಿದ ಉಪನ್ಯಾಸಗಳನ್ನಾಧರಿಸಿ ಬರೆದ ಪುಸ್ತಿಕೆ **ಭಾವಗೀತೆ (1956).**

ಕನ್ನಡ ಸಾಹಿತ್ಯ ಆಧುನಿಕತೆಗೆ ತೆರೆದುಕೊಂಡದ್ದೇ ಭಾವಗೀತ ಕಾವ್ಯಪ್ರಕಾರದ ಮೂಲಕ ಎನ್ನಬಹುದು. ಅನಂತರದಲ್ಲಿ ಈ ಆಧುನಿಕತೆ ಅಥವಾ 'ನವೋದಯ' ಉಳಿದ ಸಾಹಿತ್ಯ ಪ್ರಕಾರಗಳಿಗೂ ವ್ಯಾಪಿಸಿದ ಎಷ್ಟೋ ಕಾಲದ ಅನಂತರದಲ್ಲಿ ನವೋದಯ ಕಾವ್ಯ ಎಂದು ರಾಷ್ಟ್ರಕವಿ ಕುವೆಂಪು ಇದನ್ನು ಹೆಸರಿಸಿದರು. ಇದು ಅತ್ಯಂತ ಜನಪ್ರಿಯ ಪ್ರಕಾರವಾಗಿ ನೂರಾರು ಭಾವಗೀತೆಗಳು ರಚಿತವಾದವು. ಕನ್ನಡ ಕಾವ್ಯ ಅನೇಕ ಚಳುವಳಿಗಳು, ಬದಲಾವಣೆಗಳನ್ನು ಕಂಡರೂ ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವ ಕಾವ್ಯಪ್ರಕಾರ 'ಭಾವಗೀತೆ'. ಇಷ್ಟೊಂದು ಕವಿಗಳಿಗೂ ಕಾವ್ಯಪ್ರೇಮಿಗಳಿಗೂ ಪ್ರಿಯವಾದ ಈ ಕಾವ್ಯಪ್ರಕಾರದ ಸ್ವರೂಪ ಲಕ್ಷಣಗಳನ್ನು ವ್ಯವಸ್ಥಿತವಾಗಿ ನಿರ್ವಚಿಸುವ ಕೆಲಸ ನಡೆದಿರಲಿಲ್ಲ. 1954ರಲ್ಲಿ ಡಾ. ತಿಪ್ಪೇರುದ್ರಸ್ವಾಮಿಯವರು ಇದೇ ಹೆಸರಿನ ಪುಸ್ತಕವನ್ನು ಪ್ರಕಟಿಸಿದ್ದರೂ, ಭಾವಗೀತೆಯ ಸ್ವರೂಪ, ಲಕ್ಷಣಗಳ ವಿವೇಚನೆ ಅಲ್ಲಿ ಅಷ್ಟು ಸರಿಯಾಗಿ ಆಗಿರಲಿಲ್ಲ.

'ಭಾವಗೀತೆ' ಪದದ ಅರ್ಥ, ಅದರ ಉಗಮ, ಇತರೆ ಸಾಹಿತ್ಯಪ್ರಕಾರಗಳಿಂದ ಭಾವಗೀತೆ ಹೇಗೆ ಭಿನ್ನ, ಅದರ ಪ್ರಧಾನ ಅಂಶ ಯಾವುದು, ಎಂಬುದನ್ನೆಲ್ಲ ತಿಳಿಸಿ, ಅದರ ಮುಖ್ಯ ಲಕ್ಷಣಗಳಾದ, ಗೇಯತೆ, ಸಂಕ್ಷಿಪ್ತತೆ, ಸ್ವಾಂತತೆ, ಭಾವದೀಪ್ತತೆ ಇವುಗಳನ್ನು ಗುರುತಿಸಿ, ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಪು.ತಿ.ನ., ವಿ.ಸೀ., ಕೆ.ಎಸ್. ನರಸಿಂಹಸ್ವಾಮಿ ಮೊದಲಾದ ಕನ್ನಡದ ಪ್ರಮುಖ ಕವಿಗಳ ಪ್ರಸಿದ್ಧ ಕವಿತೆಗಳ, ಸ್ವಾರಸ್ಯಪೂರ್ಣ ವ್ಯಾಖ್ಯಾನದ ಹಿನ್ನೆಲೆಯಲ್ಲಿ

ಅವುಗಳನ್ನು ವಿವರಿಸಿರುವ ರೀತಿ ಅನ್ಯಾದೃಶವಾಗಿವೆ. ಆ ವ್ಯತಿಕರದಲ್ಲಿ ಬೇಂದ್ರೆಯವರ 'ಬೆಳದಿಂಗಳ ನೋಡ', 'ಭಾವಗೀತೆ', 'ಕುರುಡು ಕಾಂಚಾಣ', 'ಹೆಣದ ಹಿಂದೆ', ಶ್ರೀಯವರ 'ಮುದ್ದಿನ ಕುರಿಮರಿ' ಹಾಗೂ ಅಮರುಕ ಕವಿಯ ಒಂದೆರಡು ಪದ್ಯಗಳನ್ನು ಅಂತರ್ದೃಷ್ಟಿಯಿಂದ, ವ್ಯಾಖ್ಯಾನಿಸಿರುವ ರೀತಿ ಅತ್ಯಂತ ಹೃದ್ಯವಾಗಿದೆ. ಕೊನೆಯ ಅಧ್ಯಾಯದಲ್ಲಿ ನಮ್ಮ ಹಿಂದಿನ ಚಂಪೂ, ರಗಳೆ, ವಚನಪ್ರಕಾರಗಳಲ್ಲೂ ಭಾವಗೀತೆಯ ಲಕ್ಷಣಗಳನ್ನು ಅಳವಡಿಸಿಕೊಂಡು ಅದನ್ನು ಹತ್ತಿರದಲ್ಲಿ ಹೋಲುವಂಥ ರಚನೆಗಳಿವೆಯೆಂಬುದನ್ನು ಉಲ್ಲೇಖಿಸಿದ್ದಾರೆ. ಇನ್ನಿತರ ಕೆಲವು ಸಂಗತಿಗಳಲ್ಲಿ ಭಾವಗೀತೆಯ ಹುಟ್ಟು ಆಗುವ ರೀತಿ ಹೇಗೆ ಎಂಬುದನ್ನು ಬೇಂದ್ರೆಯವರ 'ಹೆಣದ ಹಿಂದೆ' ಕವಿತೆಯನ್ನು ನಿದರ್ಶನವಾಗಿ ಇಟ್ಟುಕೊಂಡು–"ಸಂತತ ಧ್ಯಾನಶೀಲನಾದ ಕವಿಯೊಬ್ಬನ ಪ್ರಬಲವಾದ ಅನುಭವಗಳ ಪ್ರಕಟಣೆಯೇ ಭಾವಗೀತೆ" ಎಂದು ನಿರೂಪಿಸಿರುವುದು ಕೂಡ ಸಾರ್ಥಕವಾಗಿದೆ. ಹಾಗೆಯೇ ಭಾವಗೀತದಲ್ಲಿ ಭಾವಗ್ರಹಣ, ಅನುಭವ ವಿವರಣ, ರಸನಿರೂಪಣಗಳು ಮುಖ್ಯವೆಂಬುದನ್ನು ಒತ್ತಿ ಹೇಳಿರುವುದೂ ಮುಖ್ಯವಾದ ಮಾತು.

ಹೀಗೆ 84 ಪುಟಗಳ ಅಂಗೈಯಗಲದ ಈ ಪುಸ್ತಿಕೆ ಭಾವಗೀತೆಯ ಬಗೆಗಿನ ಸಮರ್ಥ ಕೈಪಿಡಿ ಎನ್ನಬಹುದು.

ಸೀಳುನೋಟ (1963)

ಇದು ಐದು ವಿಮರ್ಶಾತ್ಮಕ ಲೇಖನಗಳ ಸಂಗ್ರಹ. ಪಂಪ, ಅಕ್ಕಮಹಾದೇವಿ, ಕುವೆಂಪು, ಬಸವೇಶ್ವರ, ವಿ,ಸೀ. – ಹೀಗೆ ಪ್ರಾಚೀನ ಅರ್ವಾಚೀನರ ಸಾಹಿತ್ಯವನ್ನು ಕುರಿತ ಲೇಖನಗಳ ಮೂಲಕ ಸಂಬಂಧಿಸಿದ ಕವಿ, ಕೃತಿಗಳ ಸೊಗಸನ್ನು ಸೌಂದರ್ಯವನ್ನು, ಸಹೃದಯರಿಗೆ ಉಣಬಡಿಸುವ ಗುರಿ ಲೇಖಕರದು. ವಿನಯಶೀಲರಾದ ಮಾನ್ಯ ಲೇಖಕರು ಎಲ್ಲಿಯೂ ಇದನ್ನು ವಿಮರ್ಶೆ ಎಂದು ಹೇಳಿಕೊಳ್ಳುವ ಗೋಜಿಗೆ ಹೋಗಿಲ್ಲ. ಹಾಗೆ ಮಾಡದೆ ಇದ್ದರೂ ನವೋದಯ ಮಾದರಿಯ ವಿವರಣಾತ್ಮಕವಾದ ರಸವಿಮರ್ಶೆಯ ರೀತಿಯ ಈ ಬರಹಗಳು ಮೂಲ ಕೃತಿ ಮತ್ತು ಕೃತಿಕಾರರನ್ನು ಕುರಿತಂತೆ, ಓದುಗರಲ್ಲಿ ಆಸ್ಥೆ ಅಕರಾಸ್ಥೆಯನ್ನು ಮೂಡಿಸುವಲ್ಲಿ ಸಮರ್ಥವಾಗಿವೆ. ಅತ್ಯಂತ ಸುಂದರವಾದ, ಅಕ್ಲಿಷ್ಟವಾದ, ಸರಳ ಗದ್ಯದಲ್ಲಿ ಮೂಲ ಕೃತಿಕಾರರ ಅಂತರಂಗದ ಸಕೃದ್ದರ್ಶನ ಮಾಡಿಸುವಲ್ಲಿ ಇವು ಸಫಲವಾಗಿವೆ.

ಮೊದಲನೆಯದಾದ **'ಪಂಪನು ಬೆಳಗಿದ ಲೌಕಿಕದ ಒಂದು ಚಿತ್ರ'**ದಲ್ಲಿ ಪಂಪಭಾರತದಲ್ಲಿ ಭೀಷ್ಮನಿಗೆ ಸೇನಾಧಿಪತಿ ಕಟ್ಟುವ ಸಂದರ್ಭದಲ್ಲಿ, ಭೀಷ್ಮ, ಕರ್ಣ, ದ್ರೋಣ, ದುರ್ಯೋಧನರ ನಡೆವಳಿಗಳನ್ನು ಪಂಪಕವಿ ಚಿತ್ರಿಸಿರುವ ಬಗೆಯನ್ನು ಅತ್ಯಂತ ಸೊಗಸಾಗಿ ವಿಶ್ಲೇಷಿಸುವ ಮೂಲಕ ಲೌಕಿಕವನ್ನು ಬೆಳಗಬೇಕೆಂಬ ಪಂಪನ ಉದ್ದೇಶ. ಈ ಸನ್ನಿವೇಶದಲ್ಲಿ ಎಷ್ಟರಮಟ್ಟಿಗೆ ಸಾರ್ಥಕವಾಗಿದೆ ಎಂಬುದನ್ನು ಅತ್ಯಂತ ಸ್ವಾರಸ್ಯಪೂರ್ಣವಾಗಿ ತೆರೆದು ತೋರಿದ್ದಾರೆ. ತಮ್ಮನ್ನು ಕುರಿತೇ ಕರ್ಣ ದ್ರೋಣರು ಪರಸ್ಪರ ತೀವ್ರ ವಾಗ್ಯುದ್ಧದಲ್ಲಿ ತೊಡಗಿರುವಾಗಲೂ, ಒಂದು ಮಾತನ್ನೂ ಆಡದೆ, ತಮ್ಮ ವ್ಯಕ್ತಿತ್ವದ ಗುರುತ್ವವನ್ನು ಕಾಪಾಡಿಕೊಂಡ ಭೀಷ್ಮರು ಯಾವಾಗ, ಕರ್ಣನು ಮಾಡಿದ ಪ್ರತಿಜ್ಞೆಯಿಂದ ತನ್ನನ್ನೇ ನಂಬಿದ ಸ್ವಾಮಿಯಾದ ದುರ್ಯೋಧನನಿಗೆ ಕೇಡಾಗುವುದೆಂದು ಖಚಿತವಾಯಿತೋ ಆಗ, ಕರ್ಣನ ದುಡುಕನ್ನು ತೋರಿಸಿಕೊಟ್ಟು, ರಚನಾತ್ಮಕ ಪ್ರತಿಜ್ಞೆ ಮಾಡಬೇಕೇ ಹೊರತು, ಕರ್ಣನಂತೆ ವಿನಾಶಾತ್ಮಕವಾಗಿ ಮಾಡುವುದಲ್ಲ ಎಂಬುದನ್ನು ತಾವು ಮಾಡುವ ಪ್ರತಿಜ್ಞೆಯ ಮೂಲಕ ತೋರಿಸಿಕೊಟ್ಟುದು,

ಭೀಷ್ಮನ ಅತ್ಯುನ್ನತಿಯನ್ನು, ಹಾಗೆಯೇ ಮುಂದೆ ತಾನೇ ಸೇನಾಧಿಪತಿಯಾದಾಗ, ಕರ್ಣ ನಡೆದುಕೊಳ್ಳುವ ರೀತಿಯಿಂದ ಕರ್ಣನ ವ್ಯಕ್ತಿತ್ವ ಭೀಷ್ಮರ ಮಾತಿನಿಂದ ಹೇಗೆ ಪ್ರಭಾವಿತವಾಗಿದೆ ಎಂಬುದನ್ನು ಎಸ್.ವಿ.ಪಿ. ಅವರು ತಾರ್ಕಿಕವಾಗಿ ವ್ಯಾಖ್ಯಾನಿಸಿರುವುದರಿಂದಾಗಿ ನಮಗೆ ಮನದಟ್ಟಾಗುತ್ತದೆ.

'ಅಕ್ಕನವರ ವಚನಗಳಲ್ಲಿ ಕಾವ್ಯಗುಣ'– ಎಂಬ ಎರಡನೇ ಲೇಖನದಲ್ಲಿ ಅಕ್ಕನವರ ವಚನಗಳ ಮೂಲಕವೇ ಅವರ ಆಧ್ಯಾತ್ಮಿಕ ಜೀವನದ ವಿವಿಧ ಘಟ್ಟಗಳನ್ನು ರೇಖಿಸಲು ಮಾಡಿರುವ ಪ್ರಯತ್ನ ಅತ್ಯಂತ ಅರ್ಥಪೂರ್ಣ ಹಾಗೂ ಸಾರ್ಥಕ. ಲೇಖನದ 7ನೆಯ ಭಾಗದಲ್ಲಿ ಅಕ್ಕನವರ ವಚನಗಳಲ್ಲಿ ಕಂಡುಬರುವ ಕಾವ್ಯಗುಣವನ್ನು ವಿಶ್ಲೇಷಿಸಿದ್ದಾರೆ. ಉಪಮೆ, ರೂಪಕ, ದೃಷ್ಟಾಂತಗಳು ಹೇಗೆ ಜೊತೆಜೊತೆಯಾಗಿ ಬರುತ್ತವೆಂಬುದನ್ನು, ಛಂದಸ್ಸಿನ ಲಯಗತಿಯಿಂದ ಕೂಡಿದ ಅವರ ವಚನಗಳು ಕಿವಿಗೆ ಹಿತವೆನಿಸುವ ಪ್ರಾಸಾನುಪ್ರಾಸಗಳಿಂದ ಕೂಡಿರುವುದನ್ನು ತೋರಿಸಿಕೊಟ್ಟಿದ್ದಾರೆ. ಅಲ್ಲದೆ ಹರಿಹರನು ಅಕ್ಕನ ವಚನಗಳ ಸಾಲುಸಾಲುಗಳನ್ನು ಹಾಗೆ ಹಾಗೆಯೇ ತನ್ನ ರಗಳೆಗೆ ಬಳಸಿಕೊಳ್ಳುವ ಮೂಲಕವೂ ಅವು ಹೇಗೆ ಸಹಜ ಕಾವ್ಯವಾಗಿವೆ ಎಂಬುದನ್ನು ನಿಚ್ಚಳವಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ.

ಮೂರನೆಯದಾದ, **'ಬಸವಣ್ಣನವರು ಕಂಡ ಲೋಕದ ಡೊಂಕು'** ಬಸವಣ್ಣನವರ ವಚನಗಳನ್ನು ವಿಪುಲವಾಗಿ ಉದಾಹರಿಸುವ ಮೂಲಕ, ಆಗಿನ ಸಮಾಜದಲ್ಲಿ ತಾಂಡವವಾಡುತ್ತಿದ್ದ ಪ್ರಾಣಿಹಿಂಸೆ, ಕಪಟ ಡಂಬಾಚಾರ, ಬಹಿರಾಡಂಬರಗಳು, ಅರ್ಥರಹಿತವಾದ, ಮತೀಯ ದುಷ್ಟ ಆಚರಣೆಗಳು, ಜಾತಿ ವಿಭೇದವನ್ನು, ಹಲವು ರೀತಿಯ ದೈವೋಪಾಸನೆ, ದುಷ್ಟತನ, ಹುಸಿಧಾರ್ಮಿಕತೆ, ಸಂಸ್ಕೃತಿ ಹೀನತೆ, ಅನಾಗರಿಕತೆ, ದ್ವಂದ್ವಾಚರಣೆಗಳು, ಲಿಂಗದೀಕ್ಷೆ ತಳೆದ ಮೇಲೂ, ಹಿಂದಿನ ಜಾತಿಧರ್ಮದ ಆಚರಣೆಗಳನ್ನು ಗುಟ್ಟಾಗಿ ಆಚರಿಸುತ್ತಿದ್ದುದು ಮುಂತಾದ ಲೋಕದ ಡೊಂಕುಗಳನ್ನೆಲ್ಲ ಬಯಲಿಗೆಳೆದ ರೀತಿಯನ್ನು, ಹಾಗೆಯೇ ಅವರಿಗೆ ಭಕ್ತಿಯ, ಸದಾಚಾರದ, ಸನ್ನಡತೆಯ ಸದ್ಧರ್ಮದ ರೀತಿಯನ್ನು ವಚನಗಳಲ್ಲಿ ಹೇಳಿರುವುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಇಲ್ಲೆಲ್ಲಾ ವಿವರಣೆ, ವಿಶ್ಲೇಷಣೆಗಿಂತ ಹೆಚ್ಚಾಗಿ ಸಂಬಂಧಪಟ್ಟ ವಚನಗಳನ್ನು ಮಾಲೆಮಾಲೆಯಾಗಿ ಕೋದು, ಓದುಗರ ಮುಂದೆ ಇಡುವ ಮೂಲಕ ಕನ್ನಡಿ ಹಿಡಿಯುವ ಕಾರ್ಯಮಾಡಿದ್ದಾರೆ.

ಕೊನೆಯ ಎರಡು ಪ್ರಬಂಧಗಳು ನವೋದಯದ ಹಿರಿಯ ಕವಿಗಳಾದ ಶ್ರೀ ಕುವೆಂಪು ಮತ್ತು ವಿ.ಸೀ. ಅವರ ಕಾವ್ಯದ ಮುಖ್ಯ ಧೋರಣೆಯನ್ನು ವಿಪುಲವಾದ ಉದಾಹರಣೆಗಳ ಮೂಲಕ ರೇಖಿಸುತ್ತ ಹೋಗಿದ್ದಾರೆ. **'ಕುವೆಂಪು ಅವರ ಭಾವಗೀತೆಯಲ್ಲಿ ಪ್ರಕೃತಿದರ್ಶನ; ದೃಷ್ಟಿ ಮತ್ತು ವಿಕಾಸ'** ಎಂಬುದು 63 ಪುಟಗಳಿಗೂ ಮೀರಿದ ವಿಸ್ತಾರವಾದ ಲೇಖನ. ಪ್ರಕೃತಿ ಕವಿಯೆಂದೇ ಹೆಸರಾದ ಕುವೆಂಪು ಅವರ ಕಾವ್ಯಲೋಕದಲ್ಲಿ ಪ್ರಕೃತಿಯನ್ನು ಕುರಿತಾದ ಕವಿದೃಷ್ಟಿ ಯಾವರೀತಿ ಬೆಳವಣಿಗೆ ಹೊಂದುತ್ತ ಹೋಗಿದೆ ಎಂಬುದನ್ನು ಎಲ್ಲ ವಿವರಗಳಲ್ಲಿ ದಾಖಲಿಸಿದ್ದಾರೆ. ಡಾ. ಎಚ್.ಜೆ. ಲಕ್ಕಪ್ಪಗೌಡರು ಹೇಳುವಂತೆ "ಸರಳವಾಗಿ, ವಿಸ್ಮಯವಾಗಿ ಆರಂಭವಾದ ಅವರ ಪ್ರಕೃತಿ ಪ್ರೇಮ ಬರುಬರುತ್ತ ಆರಾಧನೆಯಾಗಿ, ಒಡಲ ರಕ್ತವಾಗಿ, ಜೀವದ ಜೀವವಾಗಿ, ಸರ್ವದೇವರ ಸಾಕಾರಮೂರ್ತಿಯಾಗಿ, ಕೊನೆಗೆ ಮುಕ್ತಿಯ ಮಹಾನೆಲೆಯೇ ಆಗಿ ಹೇಗೆ ಪರಿಣಮಿಸಿತೆನ್ನುವ ಒಂದು ಸುಂದರ ಸಾಧನಾ ಪಥವನ್ನು ಅವರ ಕವನಗಳ ಕಾಮನ ಬಿಲ್ಲಿನ ಮೂಲಕ ನಿರ್ಮಿಸಿದ್ದಾರೆ."[29ಅ]

ಕೊನೆಯ ಪ್ರಬಂಧ ನಮ್ಮ ನಾಡಿನ ಹಿರಿಯ ಕವಿ, ವಿಮರ್ಶಕ, ವೈಚಾರಿಕರೆಂದು ಖ್ಯಾತರಾದ, ವಿ.ಸೀ. ಅವರ ಕಾವ್ಯದ ಪರಿಯನ್ನು ಪರಿಶೀಲಿಸುವ ಉದ್ದೇಶದಿಂದ ಕೂಡಿದೆ. ವಿ.ಸೀ. ಅತ್ಯಂತ ನವುರು ಭಾವನೆಗಳ, ತುಂಬ ರುಚಿಶುದ್ಧಿಯ ಕವಿ. ಜಗತ್ತನ್ನು ನಡೆಸುತ್ತಿರುವ ಯಾವುದೋ ಒಂದು ಕ್ಷೇಮಕಾರಿ ಶಕ್ತಿ ಇದೆ ಎಂದು ತಿಳಿದು ಅದನ್ನು ದೈವವೆಂದು ನಂಬಿ ಅದರ ಅನಂತ ಕರುಣೆ, ಪೊರೆವ ಗುಣ ಮಹಿಮೆಗಳನ್ನು ಹಾಡಿ ತಣಿಯನು ಕವಿ. ಅದು ಪ್ರಕೃತಿ ಪ್ರೇಮ, ದೈವ ಪ್ರೇಮ, ಸಮಾಜದ ಉನ್ನತ ವ್ಯಕ್ತಿಗಳ ಬಗೆಗಿನ ಗೌರವ ಇದಾವುದೇ ಆದರೂ ಅವರ ಒಟ್ಟಾರೆ ಮನೋಧರ್ಮ ಶುಚಿಜೀವನದೃಷ್ಟಿ. ಅವರ ಕಾವ್ಯಪ್ರಪಂಚವನ್ನು ಮುಖ್ಯವಾಗಿ ಪರತತ್ವಚಿಂತನ, ಆತ್ಮ ಸಾಂತ್ವನ, ಪ್ರೇಮಾರಾಧನ, ರಾಷ್ಟ್ರಾಭಿಮಾನ, ಎಂದು ನಾಲ್ಕು ನೆಲೆಗಳಲ್ಲಿ ವಿಂಗಡಿಸಿಕೊಂಡು ಅವರ ಕವಿತೆಗಳಲ್ಲಿ ಕಂಡುಬರುವ ಶುಚಿಜೀವನದ ರೀತಿಯನ್ನು ಸೋದಾಹರಣವಾಗಿ ವಿಶ್ಲೇಷಿಸಿದ್ದಾರೆ. ವಿ.ಸೀ. ಅವರ ಕಾವ್ಯ ಸೋತ ಜೀವಕ್ಕೆ ಒಂದು ಧೈರ್ಯವನ್ನು, ನೊಂದ ಜೀವಕ್ಕೆ ಒಂದು ಭರವಸೆಯನ್ನು ಕೊಡಬಲ್ಲ ಶಕ್ತಿ ಉಳ್ಳದ್ದು ಎಂಬುದು ಎಸ್.ವಿ.ಪಿ. ಅವರ ತೀರ್ಮಾನ. ಅಲ್ಲದೆ, ಜೀವನದಲ್ಲಿ ಕಷ್ಟ ಕಾರ್ಪಣ್ಯಗಳಲ್ಲಿ ಬೇನೆ ಬೇಸರುಗಳಲ್ಲಿ ಕಸಮುಸುರೆಗಳಲ್ಲಿ ಸಿಕ್ಕಿ ನೊಂದ ಜೀವಕ್ಕೆ ಒಂದು ದಾರಿದೀಪ ಎಂದು ತಿಳಿದು ಅದನ್ನು ತೋರಿಸಿಕೊಟ್ಟಿದ್ದಾರೆ. 'ಕಸ್ಮೈದೇವಾಯ'ದಂಥ ಅವರ ಪ್ರಸಿದ್ಧ ಕವಿತೆಯಲ್ಲಿ ವಿಚಾರ ಪರವಾದ ಕವಿಯ ಮನಸ್ಸು, ದೇವರ ಅಸ್ತಿತ್ವ, ಸ್ವರೂಪ, ಕುರಿತು ಸಂದೇಹವನ್ನು ವ್ಯಕ್ತಪಡಿಸಿದರೂ ಈ ಕವಿಯ ದೈವಶ್ರದ್ಧೆ, ಗಾಢವಾದದ್ದೆಂದು, ಆಸ್ತಿಕ್ಯ ಮನೋಧರ್ಮ ಪ್ರಬಲವಾದದ್ದೆಂದು ಎಸ್.ವಿ.ಪಿ. ಗುರುತಿಸುತ್ತಾರೆ. ವಿಶ್ವಾಸವೇ ದೈವ ಎನ್ನುವುದಾದರೆ ವಿ.ಸೀ. ಅಂಥ ಗಾಢ ವಿಶ್ವಾಸವುಳ್ಳವರು ಎಂಬುದನ್ನು ಮನಗಾಣಿಸಿದ್ದಾರೆ.

ಲೇಖನಗಳು

ಎಂಟು ವಿಮರ್ಶಾಲೇಖನಗಳ ಸಂಗ್ರಹವಾದ **"ಲೇಖನಗಳು"**- ಕೃತಿಯು **'ಲಲಿತ ಕಲೆಗಳು' 'ಜನತೆಯ ಏಳಿಗೆಯೂ ಕಾವ್ಯಸತ್ಯವೂ' 'ಗೋವಿನ ಹಾಡು' 'ಶ್ರೀ ಕುವೆಂಪು ಅವರ ಸೂರ್ಯೋದಯ ಗೀತೆಗಳು' 'ಕನ್ನಡದಲ್ಲಿ ಜೀವನ ಚರಿತ್ರೆಗಳು' 'ರಂಗಣ್ಣನವರ ಕೃತಿಗಳು' 'ಕುವೆಂಪು ಅವರ ಸನ್ಯಾಸಿ ಮತ್ತು ಇತರ ಕಥೆಗಳು' 'ಎ.ಆರ್.ಕೃ. ಅವರ ಭಾಷಣಗಳು'** ಎಂಬ ಬರಹಗಳನ್ನೊಳಗೊಂಡಿದೆ. ಎಸ್.ವಿ.ಪಿ. ಅವರೇ ಸೂಚಿಸಿರುವ ಪ್ರಕಾರ ಮೊದಲೆರಡು ಲೇಖನಗಳೂ ಅವರು ವಿದ್ಯಾರ್ಥಿಯಾಗಿದ್ದಾಗ ಬರೆದವು.

ಮೊದಲ ಲೇಖನದಲ್ಲಿ ಚಿತ್ರ, ಶಿಲ್ಪ, ಗಾನ, ನಾಟಕ ಮತ್ತು ಕಾವ್ಯ ಇವುಗಳನ್ನು ಲಲಿತ ಕಲೆಗಳೆಂದು ಹೇಳಿ ಸೌಂದರ್ಯನಿರೂಪಣವೇ ಅವುಗಳ ಕಾರ್ಯ ಮತ್ತು ಆನಂದವೇ ಅದರ ಪರಿಣಾಮವೆಂದು ಹೇಳಿ ಒಂದೊಂದೂ ಕಲೆಯ ಸಂಕ್ಷಿಪ್ತ ಪರಿಚಯ, ಅವುಗಳ ಸ್ವರೂಪ ಮತ್ತು ಉದ್ದೇಶಗಳನ್ನು ಸಾರಾಂಶರೂಪದಲ್ಲಿ ಸ್ಫುಟವಾಗಿ ನಿರೂಪಿಸಿದ್ದಾರೆ.

ನಿದರ್ಶನಕ್ಕೆ- "ಶಿಲ್ಪದಲ್ಲಿ ವಾಸ್ತು, ಪ್ರತಿಮಾ, ಚಿತ್ರ ಎಂಬ ಮೂರು ಬಗೆ. ವಾಸ್ತುಶಿಲ್ಪವು ನಗರ ಹಾಗೂ ಗ್ರಾಮ ನಿರ್ಮಾಣದಲ್ಲಿಯೂ, ಮನೆಗಳನ್ನು ಕಟ್ಟುವಿಕೆಯಲ್ಲಿಯೂ, ಪ್ರತಿಮಾಶಿಲ್ಪವು ವಿಗ್ರಹಾದಿಗಳನ್ನು ರಚಿಸುವುದರಲ್ಲಿಯೂ ಚಿತ್ರಶಿಲ್ಪವು ಗುಡಿ ಗೋಪುರಗಳನ್ನು ಕಟ್ಟುವುದರಲ್ಲಿಯೂ, ಬಂಡೆಗಳಲ್ಲಿ ಗೋಡೆಗಳಲ್ಲಿ ಸಣ್ಣ ಸಣ್ಣ ನಕ್ಷೆಗಳನ್ನು ಕೊರೆಯುವುದರಲ್ಲಿಯೂ ಪರ್ಯಾಯವಾಗಿದೆ". ಬರಹದ ಕೊನೆಗೆ- "ಹೀಗೆ ಲಲಿತ ಕಲೆಗಳು ಈಪ್ಸಿತಾರ್ಥ ಸಿದ್ಧಿಗೆ ಕಾಮಧೇನುವಿನಂತಿವೆ"- ಎಂದು ಘೋಷಿಸಿ, ಕಲೆಗಳನ್ನು ಕುರಿತಂತೆ ಖ್ಯಾತ ಲೇಖಕ ಟಾಲ್‌ಸ್ಟಾಯ್ ಅವರ ಒಂದು ಮಾತನ್ನು ಉಲ್ಲೇಖಿಸಿದ್ದಾರೆ.

ಎರಡನೇ ಲೇಖನದಲ್ಲಿ ಕಾವ್ಯಪ್ರಪಂಚದ ಅಷ್ಟೇ ಏಕೆ, ಇಡೀ ಸಾಹಿತ್ಯ ಪ್ರಪಂಚದ ಬಹಳ ಮುಖ್ಯ ತತ್ವವಾದ 'ಕಾವ್ಯಸತ್ಯ'ವನ್ನು ಕುರಿತಂತೆ ತಮ್ಮ ಅಭಿಪ್ರಾಯವನ್ನು ಹೊರಗೆಡಹಿದ್ದಾರೆ. ಲೋಕಸತ್ಯ ಒಂದಾದರೆ, ಕಾವ್ಯಸತ್ಯ ಅದಕ್ಕಿಂತ ಭಿನ್ನವಾದ್ದು. ಲೋಕಸತ್ಯ ತರ್ಕಸಮ್ಮತವಾಗಿ ಬುದ್ಧಿಗಮ್ಯವಾಗಿದ್ದರೆ, ಕಾವ್ಯಸತ್ಯ ತರ್ಕವನ್ನು ಮೀರಿ ಹೃದಯಗಮ್ಯವಾದದ್ದು ಎಂಬುದನ್ನು ಕೆಲವೊಂದು ಉದಾಹರಣೆಗಳ ಮೂಲಕ ಮನವರಿಕೆ ಮಾಡಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಲೋಕದಲ್ಲಿ ನಮ್ಮ ಅನುಭವಕ್ಕೆ ಬರುವುದು ಲೌಕಿಕ ಅಥವಾ ಅನುಭವವೇದ್ಯವಾದ ಸತ್ಯ ಹಾಗೂ ಅಲೌಕಿಕ ಅಥವಾ ಅನುಭಾವಿಕ ಸತ್ಯ. ಒಂದು ವಿಷಯ ಪ್ರಾಮಾಣ್ಯವನ್ನೊಳಗೊಂಡ ಶಾಸ್ತ್ರಸತ್ಯ. ಇನ್ನೊಂದು ವಿವಿಧ ದೃಷ್ಟಿಕೋನದಿಂದ ಇಂದ್ರಿಯಗಳ ಮೂಲಕ ಅನುಭವಿಸಿದ ಕಾವ್ಯಸತ್ಯ. ಮೊದಲನೆಯದು ಬುದ್ಧಿ ಗೋಚರವಾದರೆ, ಎರಡನೆಯದು ಹೃದಯ ಗೋಚರ. ಹೀಗೆ ಎರಡರ ನಡುವಿನ ವೈದೃಶ್ಯಗಳನ್ನು ಪಟ್ಟಿಮಾಡಿ ಹೇಳುತ್ತಾರೆ.

ಕನ್ನಡ ನಾಡಿನ ಅತ್ಯಂತ ಜನಪ್ರಿಯ ಕಥನಕವನವಾದ 'ಗೋವಿನ ಹಾಡ'ನ್ನು ಕುರಿತ ಮೂರನೇ ಲೇಖನದಲ್ಲಿ ಡಿ.ಎಲ್.ಎನ್. ಸಂಪಾದಿಸಿರುವ 114 ಪದ್ಯಗಳನ್ನು ಅಧಿಕೃತವೆಂದು ತೀರ್ಮಾನಿಸಿ ಆ ಪದ್ಯಗಳನ್ನು ಉದಾಹರಿಸುವ ಮೂಲಕ ಕಥೆಯನ್ನು ಚೊಕ್ಕವಾಗಿ ಕಟ್ಟಿಕೊಡುತ್ತಾರೆ. ಮಗನ ಮೇಲಿನ ಮಾತೃವಾತ್ಸಲ್ಯ ಮತ್ತು ಹುಲಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ದ್ವಂದ್ವದಲ್ಲಿ ಕೊನೆಯಲ್ಲಿ ಗೆದ್ದದ್ದು ಹಸುವಿನ ತತ್ವನಿಷ್ಠೆ. ಆ ಸತ್ಯನಿಷ್ಠೆಯ ಫಲಿತವೆಂದರೆ, ಆತ್ಮಬಲಿದಾನ ಮಾಡಿಕೊಳ್ಳುವುದು. ಇದನ್ನು ಗಟ್ಟಿ ಮಾಡಿಕೊಂಡ ಹಸು ತನ್ನನ್ನೇ ಬಲಿಯೊಡ್ಡಿಕೊಂಡು ನಿಂತಾಗ, ಹುಲಿ ಅರ್ಬುತ, ಪುಣ್ಯಕೋಟಿಯ ಸತ್ಯನಿಷ್ಠೆಗೆ ಸೋತು ತಾನೇ ಹಾರಿ ಆಕಾಶಕ್ಕೆ ನೆಗೆದು ತನ್ನ ಪ್ರಾಣ ಬಿಟ್ಟಿತು." ಎಂದು ಕೊನೆಗೊಳ್ಳುವ ಈ ಸುಂದರ ಜನಪದಗೀತೆಯ ಧ್ವನಿರಮ್ಯತೆಯನ್ನು ವಿವರಿಸುತ್ತ "ಎಲ್ಲ ಕಾಲದಲ್ಲೂ ಅಸುರೀಶಕ್ತಿಗಳ ಮೇಲೆ ಸಾತ್ವಿಕ ಶಕ್ತಿಗಳು ಗೆಲುವು ಸಾಧಿಸಿವೆ. ಅಂಗುಲಿ ಮಾಲನ ಮೇಲೆ ಬುದ್ಧ, ಡಕಾಯಿತ ಖೂಳನ ಮೇಲೆ ವಿನೋಬಾ, ಬ್ರಿಟಿಷರ ಮೇಲೆ ಗಾಂಧೀಜಿ ಸಾಧಿಸಿದ ವಿಜಯ ಇಂಥದೇ. ಅದು ಹೃದಯ ಪರಿವರ್ತನೆಯ ಮೂಲಕ ಹುಲಿಯನ್ನು ಹಸುವನ್ನಾಗಿ ಪರಿವರ್ತಿಸಿದ್ದಾನೆ" – ಎಂದು ವ್ಯಾಖ್ಯಾನಿಸಿದ್ದಾರೆ. ಜೊತೆಗೆ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಮಲ್ಲಿಗೆ ದಂಡೆಯಲ್ಲಿರುವ 'ಆಕಳ ಹಾಡು'ವಿನೊಂದಿಗೆ ಪರಸ್ಪರ ತುಲನೆ ಮಾಡಿ ಅಲ್ಲಿ ಸತ್ಯನಿಷ್ಠೆಗಿಂತ ಮಾತೃವಾತ್ಸಲ್ಯವನ್ನು ಎತ್ತಿ ತೋರುವ ದೃಷ್ಟಿ ಇದೆ ಎಂದು ಸರಿಯಾಗಿಯೇ ಹೇಳಿದ್ದಾರೆ. ಒಟ್ಟಾರೆ ಗೋವಿನ ಕಥೆಯ ಮೂಲಕ ಕರ್ನಾಟಕದ ಸ್ವಾರ್ಥತ್ಯಾಗದ, ಪರಾರ್ಥ ಪ್ರೇಮದ ಮೌಲ್ಯವನ್ನು ಸಾರುವ ಈ ಜನಪದ ಗೀತೆಯ ಅರ್ಥ ಪರಂಪರೆಯನ್ನು ಎಳೆಎಳೆಯಾಗಿ ಬಿಡಿಸಿ ತೋರಿದ್ದಾರೆ.

ನಿಸರ್ಗಕವಿಯೆಂದೇ ಹೆಸರಾದ ಕುವೆಂಪು ಅವರ ಸೂರ್ಯೋದಯದ ಗೀತೆಗಳಾದ 'ಶರತ್ಕಾಲದ ಸೂರ್ಯೋದಯದಲಿ', 'ಭಾದ್ರಪದದ ಸುಪ್ರಭಾತ', 'ಬಾ ಫಾಲ್ಗುಣರವಿ ದರ್ಶನ', 'ನವಿಲು ಕಲ್ಲಿನಲ್ಲಿ ಸೂರ್ಯೋದಯ' ಇತ್ಯಾದಿ ಕವಿತೆಗಳಲ್ಲಿ ವ್ಯಕ್ತವಾಗಿರುವ ಕವಿಯ ಭಾವಾನುಭವದ ತೀವ್ರತೆಯನ್ನು ಮನಗಾಣಿಸುವ ಪ್ರಯತ್ನ ಮಾಡಿದ್ದಾರೆ. ನವನವ ಉಪಮೆಗಳು, ಕಲ್ಪನೆಗಳು, ವರ್ಣನಾ ವೈಖರಿ, ನಮ್ಮನ್ನು ಹೇಗೆಲ್ಲ ಬೆರಗುಗೊಳಿಸುತ್ತವೆ, ಸಹೃದಯನನ್ನು ಮೈಮರೆಯುವಂತೆ ಮಾಡುತ್ತವೆ ಎಂಬುದನ್ನು ಕಾಣಿಸಿಕೊಟ್ಟಿದ್ದಾರೆ.

ಪ್ರಕೃತಿ ಆರಾಧನೆಯೇ ಪರಮನ ಆರಾಧನೆ' ಎಂಬ ಭಾವ ತಾಳಿದ ಕವಿಗೆ ಜಗತ್ತಿನಲ್ಲಿ ಯಾವುದೂ ಜಡವಲ್ಲ. ಎಂದೇ ಅವರು ಅಷ್ಟೊಂದು ದೃಢವಾಗಿ–

"ತೆಗೆ ಜಡವೆಂಬುದೆ ಬರಿಸುಳ್ಳು
ಚೇತನ ಮೂರ್ತಿಯ ಆ ಕಲ್ಲು"

– ಎಂಬ ನೆಲೆಗೆ ತಲಪಿರುವುದು ಎಂಬುದನ್ನು ಮನಗಾಣಿಸಿ, ಇವು ಕೇವಲ ಸೂರ್ಯೋದಯದ ಗೀತೆಗಳಲ್ಲ; 'ಶಿವೋದಯದ ಗೀತೆಗಳು' ಎಂದು ಮರು ವ್ಯಾಖ್ಯಾನಿಸುತ್ತಾರೆ.

ಕವಿ ಕುವೆಂಪು ಅವರದು ಅನನ್ಯ ಕಥನಾತ್ಮಕ ಪ್ರತಿಭೆ. ಅದರ ಪರಿಣಾಮವೇ ಅವರ ಎರಡು ಮಹಾ ಕಾದಂಬರಿಗಳು. ಅವರ ಕಥನ ಕವನಗಳು ಕೂಡ ಅವರ ಕಥನ ಪ್ರತಿಭೆಗೆ ಜ್ವಲಂತ ಸಾಕ್ಷಿ. ಅಂಥ ಕುವೆಂಪು ಅವರ **"ಸನ್ಯಾಸಿ ಮತ್ತು ಇತರ ಕಥೆಗಳು"** ಎಂಬ ಕಥಾಸಂಕಲನದಲ್ಲಿಯ ಕಥೆಗಳನ್ನು ವಿವರಿಸಿ ವಿಶ್ಲೇಷಿಸುವ ಕೆಲಸವನ್ನು ಈ ಲೇಖನದಲ್ಲಿ ಮಾಡಿದ್ದಾರೆ. ಇಲ್ಲಿಯ ಒಂಬತ್ತು ಕಥೆಗಳ ವಸ್ತುವನ್ನು ಮೊದಲು ತಿಳಿಸಿ, ಅಂತ್ಯದಲ್ಲಿ ಆ ಕತೆಗಳಲ್ಲಿ ಕಂಡುಬರುವ ಸಂವಾದ ಕೌಶಲ, ವಸ್ತು ಸಂವಿಧಾನದ ಸ್ವಾರಸ್ಯ, ಕಥಾಶೈಲಿ, ಹಾಸ್ಯ ಹಾಗೂ ಕಥೆಯ ಕಲಾತ್ಮಕತೆಗಳನ್ನು ಕುರಿತು ತಮ್ಮ ಗಮನಿಕೆಗಳನ್ನು ದಾಖಲಿಸಿದ್ದಾರೆ. ಕೊನೆಯಲ್ಲಿ ಕಥೆಗಾರರ ವರ್ಣನೆಯ ಸೊಗಸು, ನಿರ್ಮಾಣ ಕೌಶಲ, ಮತ್ತು ಹಾಸ್ಯಶೈಲಿ, ಕಥೆಗಾರನ ಮನುಷ್ಯ ಸ್ವಭಾವದ ಪರಿಜ್ಞಾನ, ಜೊತೆಗೆ ಕಥೆಗಾರನಲ್ಲಿ ಅಡಗಿರುವ ಕವಿಯನ್ನು ಕಾಣಿಸಿಕೊಟ್ಟಿದ್ದಾರೆ. 'ಕನ್ನಡದಲ್ಲಿ ಜೀವನ ಚರಿತ್ರೆಗಳು' ಚಿಕ್ಕಚೊಕ್ಕ ಲೇಖನ. ಜೀವನ ಚರಿತ್ರೆ ಎಂದರೇನು ಎಂಬ ಬಗ್ಗೆ ಕೆಲವೊಂದು ಉಲ್ಲೇಖಗಳನ್ನು ದಾಖಲಿಸಿ, ಜೀವನ ಚರಿತ್ರೆ, ಕಾದಂಬರಿಗಿಂತ ಹೇಗೆ ಭಿನ್ನ ಎಂಬುದನ್ನು ಹೇಳಿದ್ದಾರೆ. "ಸತ್ಯನಿರೂಪಣೆಯೇ ಮುಖ್ಯವಾಗಿರುವ ಜೀವನ ಚರಿತ್ರೆಯಲ್ಲಿ ಪ್ರತಿಭಾವಂತ ಕವಿ, ಕಾದಂಬರಿಯ ಕಲ್ಪನಾವಿಲಾಸವನ್ನು ತರುವುದು ಸಾಧ್ಯ ಎಂದು ಹೇಳಿರುವುದು ಸ್ವಲ್ಪ ವಿವಾದಕ್ಕೆ ಕಾರಣವಾಗಬಹುದು. ಕಾದಂಬರಿಯ ಸ್ವಾರಸ್ಯವನ್ನು ತರಲು ಸಾಧ್ಯ ಎಂದು ಒಪ್ಪಬಹುದು. ರಾಗದ್ವೇಷಾದಿಗಳಿಗೆ, ವಿಸ್ಮೃತಿಗೆ ಲೋಕ ಭೀತಿಗೆ, ತರ್ಕ ಪ್ರತಿಪಾದನೆಗೆ, ಪಕ್ಷಭಕ್ತಿಗೆ, ಜೀವನ ಚರಿತ್ರೆಯಲ್ಲಿ ಎಡೆಯಿರಕೂಡದು ಎಂದು ಹೇಳಿರುವುದು ಅತ್ಯುಪಯುಕ್ತವಾಗಿದೆ. ಕನ್ನಡದಲ್ಲಿ ಬಂದಿರುವ ಕೆಲವು ಜೀವನ ಚರಿತ್ರೆಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿದ್ದಾರೆ.

ರಂಗಣ್ಣನವರ ಕೃತಿಗಳನ್ನು ಕುರಿತ ಲೇಖನದಲ್ಲಿ ಅವರ ಪ್ರಮುಖ ಕೃತಿ **'ಶೈಲಿ'**ಯ ಹಲವು ಭಾಗಗಳು, **'ರುಚಿ'**, **'ವಿಡಂಬನೆ'**, **'ಕುಮಾರವ್ಯಾಸ'**, **'ಸಾಹಿತ್ಯದ ಆವಶ್ಯಕತೆ'** ಹಾಗೂ ಅವರ ಪ್ರಮುಖ ಕೃತಿಯಾದ **'ರಂಗಬಿನ್ನಪ'** ಇವುಗಳನ್ನು ಕುರಿತಾದ ವಿವರವೂ ವ್ಯಾಖ್ಯಾನಸಹಿತವೂ ಆದ ವಿಮರ್ಶೆ ಇದೆ. ಎಸ್.ವಿ. ರಂಗಣ್ಣ ಎಂದರೆ, ಶೈಲಿ, ವಚನದ ರಂಗಣ್ಣ ಎಂದು ತಮ್ಮ ಗುರುಗಳಾದ ಎ.ಆರ್.ಕೃ. ಅವರಿಂದಲೇ ಪ್ರಶಂಸೆಗೆ ಪಾತ್ರರಾದ ರಂಗಣ್ಣನವರ ವಿಮರ್ಶೆಯ ರೀತಿಯನ್ನು, ಗದ್ಯದ ಸ್ವರೂಪವನ್ನು ರೂಪಕ ವಿಧಾನದಲ್ಲಿ ಕಟ್ಟಿಕೊಟ್ಟಿದ್ದಾರೆ. "ಈ ಲೇಖಕರ ಬರವಣಿಗೆಯಲ್ಲಿ ಮಾತಿನ ವಜ್ರ ಹಾಗೆ ಥಳಥಳಿಸುತ್ತದೆ. ಜೀವನ ಭಾಸ್ಕರನ ಜಾಜ್ವಲ್ಯಮಾನವಾದ ಬೆಳಕಿನಲ್ಲಿ ಈ ಲೇಖಕರ ಒಂದೊಂದು ಮಾತೂ ಬೆಳಗಿ ಬೆಳೆದಿದೆ. ಚಪ್ಪಡಿಯ ಹುಲ್ಲಿನಂತೆ ಬಿಳಿಚಿಕೊಂಡಿಲ್ಲ" ಎಂಬುದು ಅಂಥದೊಂದು ರೂಪಕ. 'ಸ್ಪಷ್ಟತೆ, ಅಚ್ಚುಕಟ್ಟಾದ ವಿಷಯ ವಿಭಜನೆ, ಸೂತ್ರಪ್ರಾಯವಾದ ಗಾದೆ ಮಾತಿನಂಥ ಮಾತು ಅವರ ಕೃತಿಗಳಲ್ಲಿ ಎದ್ದು ಕಾಣುವ ಲಕ್ಷಣ' ಎಂದು ಗುರುತಿಸುತ್ತಾರೆ. ಎಲ್ಲವೂ ಹಗಲ ಬೆಳಕಿನ ಹಾಗೆ ಸುಸ್ಪಷ್ಟ ಸುವ್ಯಕ್ತ ಎಂದು ಹೇಳಿ ಅದಕ್ಕೆ ಅವರ 'ಶೈಲಿ' ಸಂಪುಟಗಳಿಂದ ಸಾಲು ಸಾಲುಗಳನ್ನೇ ಉದ್ಧರಿಸಿಕೊಡುತ್ತಾರೆ. ಅವರ ವಿಸ್ತಾರವೂ ಆಳವೂ ಆದ ಪಾಂಡಿತ್ಯ,

ಓದು, ವ್ಯುತ್ಪತ್ತಿಯನ್ನು ಮನಗಾಣಿಸುತ್ತಾರೆ. ರಂಗಯ್ಯನ ವಚನಗಳಲ್ಲಿ ಕಂಡುಬರುವುದು ಕಾವ್ಯಗುಣವುಳ್ಳ ಸರಸ ಗದ್ಯ ಎಂದು ಗುರುತಿಸುತ್ತ, ವಿಚಿತ್ರ ಕಲ್ಪನೆ, ಭಾವಸಂವೇದನೆ, ವಕ್ರತೆ, ಅಸ್ಪಷ್ಟ ಸೌಂದರ್ಯ, ಅವ್ಯಕ್ತ ಮಾಧುರ್ಯ, ಅದ್ಭುತ ರಮ್ಯತೆ, ಅನೇಕಾರ್ಥತೆ, ನವೋನವತೆ, ರಸೋತ್ಕಟತೆ ಮುಂತಾದ ಕಾವ್ಯಲಕ್ಷಣಗಳ ಬೆಡಗು ಸೇರಿಕೊಂಡಿದೆ ಎಂದು ಹೇಳುತ್ತಾರೆ. ಕೊನೆಗೆ ಸೂತ್ರಪ್ರಾಯವಾಗಿ ರೂಪಕದಲ್ಲಿ–"ರಂಗಣ್ಣನವರ ಗದ್ಯವನ್ನು ಒಂದು ರಥಕ್ಕೆ ಹೋಲಿಸಬಹುದು. ಅದರ ಒಂದು "ಗಾಲಿ" ಅರ್ಥವ್ಯಕ್ತಿಯಾದರೆ, ಇನ್ನೊಂದು ಗಾಲಿ ಹೃದ್ಯತೆ, ಶಬ್ದಲಾಲಿತ್ಯ ಮತ್ತು ತಾಳಲಯಗಳೇ ಎರಡು ಅಶ್ವಗಳು ಎಂದು ಸಿದ್ಧಾಂತಿಸುವಲ್ಲಿ ಆ ರೂಪಕದ ಸಾರ್ಥಕ್ಯವಿದೆ.

ಕೊನೆಯ ಲೇಖನವಾದ "ಶಾಸ್ತ್ರಿಗಳವರ ಭಾಷಣಗಳು"–ನಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳ ವ್ಯಕ್ತಿತ್ವ, ಸ್ವಭಾವಗಳ ಬಗ್ಗೆ ತುಂಬ ಬೆಲೆಯುಳ್ಳ ತೂಕದ ಮಾತುಗಳನ್ನು ಹೇಳಿ– "ಹೇಳಬೇಕಾದುದನ್ನು ಸ್ಪಷ್ಟವಾಗಿ, ನೇರವಾಗಿ, ಖಚಿತವಾಗಿ ಹೇಳಿಬಿಡುವುದು. ಶಾಸ್ತ್ರಿಗಳ ಭಾಷಣದ ಪ್ರಮುಖ ಲಕ್ಷಣಗಳಲ್ಲಿ ಒಂದು ಎಂದು ಗುರುತಿಸಿ ಅದಕ್ಕೆ ಅವರ ಭಾಷಣಗಳಿಂದ ವಿಪುಲವಾಗಿ ಉದಾಹರಿಸಿದ್ದಾರೆ. ಹಾಗೆಯೇ ನಿರ್ದಾಕ್ಷಿಣ್ಯ ಮನೋಭಾವ ಎರಡನೆಯ ಪ್ರಮುಖ ಲಕ್ಷಣ ಎನ್ನುತ್ತಾರೆ. ಒಂದು ಬಿಗಿ, ಒಂದು ಅಚ್ಚುಕಟ್ಟು ಒಂದು ಓರಣ ಶಾಸ್ತ್ರಿಗಳ ಲೇಖನ ಭಾಷಣಗಳಲ್ಲಿ ಕಂಡು ಬರುತ್ತದೆ. ಸೂತ್ರಪ್ರಾಯವಾಗಿ ನಿಸ್ಸಂದಿಗ್ಧವಾಗಿ ಮಾತನಾಡುತ್ತಾರೆ. ಇದು ಬಸವಣ್ಣನವರ "ನುಡಿದರೆ ಮುತ್ತಿನ ಹಾರದಂತಿರಬೇಕು. . ." ಎಂಬ ಪ್ರಸಿದ್ಧ ವಚನಕ್ಕೆ ಲಕ್ಷ್ಯವೆಂಬಂತಿವೆ ಅವರ ಭಾಷಣಗಳು ಎಂದು, ಅದರ ಮೌಲ್ಯನಿರ್ಧಾರ ಮಾಡಿದ್ದಾರೆ. "ಶಾಸ್ತ್ರಿಗಳ ಭಾಷಣ ಖಡಾಖಂಡಿತ ಎಂದಾಕ್ಷಣ ನೀರಸವಲ್ಲ, ಬದಲಿಗೆ ತುಂಬ ರಸವತ್ತಾದ್ದು"– ಎಂಬುದು ಅದರ ಸರಿಯಾದ ಮೌಲ್ಯಮಾಪನ.

ಭಾಷಣಗಳು

ಆರು ಬರಹಗಳ ಸಂಗ್ರಹವಾದ **'ಭಾಷಣಗಳು'** ಬೇರೆ ಬೇರೆ ಸಂದರ್ಭದಲ್ಲಿ ಬರೆದು ಓದಿದ ಭಾಷಣಗಳು. ಮುದ್ದಣ ಕವಿಯನ್ನು ಕುರಿತ ಬರಹ ಮಾತ್ರ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಭಾಷಣಗಳ ತುಣುಕುಗಳು.

ಮೊದಲ ಲೇಖನವಾದ **'ಶಾಸ್ತ್ರ ಶ್ರೀರೋಹಣಗಿರಿಯಾರೋಹಣಕ್ಕೆ ಕರೆ'** ಎಂಬುದು ಶ್ರವಣಬೆಳಗೊಳದ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಕವಿಗೋಷ್ಠಿಯ ಅಧ್ಯಕ್ಷ ಭಾಷಣ. ಇದರಲ್ಲಿ ಕಾವ್ಯ ಏಕೆ ಹುಟ್ಟುತ್ತದೆ ಎಂಬ ಪ್ರಶ್ನೆ ಹಾಕಿಕೊಂಡು ನೂರಕ್ಕೆ 90 ಭಾಗ ಯಾವುದೋ ಹೊರಗಿನ ಸಂಗತಿಯೊಂದರಿಂದ ಚೋದಿತನಾದ ಕವಿ ತನ್ನ ಅಂತರಂಗದಲ್ಲಿ ಕುದ್ದುಕೊಂಡು ಕಾವ್ಯ ರಚಿಸುವ ಸ್ಫುರಣೆಗೆ ಒಳಗಾಗುತ್ತಾನೆನ್ನುತ್ತಾರೆ. ಆದರೆ ಅದೇ ಕಾವ್ಯ ಹೇಗೆ ಹುಟ್ಟುತ್ತದೆ ಎಂಬ ಪ್ರಶ್ನೆಗೆ ಉತ್ತರ ಅಷ್ಟು ಸುಲಭವಲ್ಲ. "ಮನಸ್ಸಿನಲ್ಲಿ ಒಂದು ಸಂದರ್ಭ ನೆನೆದು ಎಂದೋ ಒಮ್ಮೆ ಬುಗ್ಗೆ ಬುಗ್ಗೆಯಾಗಿ ತಕ್ಕ ಪದಗಳು, ನುಡಿಗಟ್ಟುಗಳು, ಲಯಗಳು, ಪ್ರಾಸ, ಅಲಂಕಾರ ಎಲ್ಲದರೊಂದಿಗೆ ಕೂಡಿಕೊಂಡು ಒಡಮೂಡಬಹುದು" ಎನ್ನುತ್ತಾರೆ. ಕವಿತೆಯ ರಚನೆಯಲ್ಲಿ ಪ್ರತಿಭೆಯ ಕಾವ್ಯ ಒಕ್ಕಾಲು, ವಿಭಾವನೆಯ ಕಾವ್ಯ ಮುಕ್ಕಾಲು ಎಂದು ಅದರ ಪಾತ್ರವನ್ನು ಎತ್ತಿಹಿಡಿದು ಅದು ದೊರಕುವುದು ಶಾಸ್ತ್ರ ವ್ಯಾಸಂಗದಿಂದ; ಕವಿತಾ ಚಿಂತಾರತ್ನ ದೊರೆಯಬೇಕಾದರೆ ಶಾಸ್ತ್ರ ಶ್ರೀರೋಹಣಗಿರಿಯನ್ನು ಏರಲೇಬೇಕು ಎಂಬುದು ಅವರ ನಿಲುವು. ಜೊತೆಗೆ ಲೋಕಾನುಭವವೂ ಅಷ್ಟೇ ಮುಖ್ಯ ಎನ್ನುತ್ತಾರೆ.

'ಶ್ರೀ ರಾಮಾಶ್ವಮೇಧದ ಗದ್ಯದ ಸ್ವರೂಪ'ವನ್ನು ಚರ್ಚಿಸುವ ಲೇಖನ ಆಳವಾದ ಒಳನೋಟಗಳಿಂದ ಕೂಡಿದ್ದು ಮುದ್ದಣನ ಗದ್ಯದ ಕುರಿತಂತೆ ಹೊಸಬೆಳಕು ಚೆಲ್ಲುತ್ತದೆ. ರಾಮಾಶ್ವಮೇಧದ ಯಶಸ್ಸು ನಿಂತಿರುವುದು ಮುದ್ದಣ-ಮನೋರಮೆಯರ ಅಪೂರ್ವ ಸಂವಾದದ ಮೇಲೆ ಎಂಬ ಹಳೆಯ ಮಾತುಗಳ ಹೊರತಾಗಿ ಮುದ್ದಣನ ಗದ್ಯ ಸಂಸ್ಕೃತ-ಕನ್ನಡಗಳ ಬಳಕೆಯಲ್ಲಿ ಒಂದು ಅತ್ಯುತ್ತಮವಾದ ಹದವನ್ನು ಸಾಧಿಸಿದೆ ಎಂಬುದು. ಅದು ತಿರುಳ್ಗನ್ನಡದ ಸಂಬಂಧವಾಗಿ ಮುದ್ದಣನು ತಳೆದ ನಿಲುವು ಏನಿದೆ, ಅದು ಅವನ ಕೃತಿ ಆಂಡಯ್ಯನ ಅಚ್ಚಗನ್ನಡದ ಮೇಲೆ ಸಾಧಿಸಿದ ವಿಜಯ ಎಂಬ ತೀರ್ಮಾನ ಅವರದು. ಕನ್ನಡ, ಸಂಸ್ಕೃತ ಮತ್ತು ತದ್ಭವ ಈ ಮೂರೂ ಹುರಿಗೊಂಡ ಬಿಕ್ಕಟ್ಟಾದ ಹಳಗನ್ನಡ ಗದ್ಯ ಮುದ್ದಣನದು ಎಂಬುದೇ ಅವರ ತೀರ್ಪು. ಜೊತೆಗೆ ಮುದ್ದಣನ ಶಬ್ದಾಲಂಕಾರ ಪ್ರಿಯತೆ-ಪ್ರಾಸದ ಪ್ರಾಚುರ್ಯ, ಜೊತೆಗೆ ನಾದ ಮಾಧುರ್ಯ. ಇದು ಪ್ರಾಚೀನರಲ್ಲಿ ಕಾಣದ, ಮುದ್ದಣನಲ್ಲೇ ಕಂಡುಬರುವ ಗುಣವಿಶೇಷ. ಅದು ವೃತ್ತಗಂಧಿ. ಅದು ಎಷ್ಟರಮಟ್ಟಿಗೆ ಎಂದರೆ ಅದರಲ್ಲಿ ಸಲ್ಲಕ್ಷಣವಾದ ಛಂದೋಬದ್ಧ ಕಂದ ಪದ್ಯಗಳೇ ಅಡಗಿಕೊಂಡಿವೆ ಎಂದು ಅವಕ್ಕೆ ಪ್ರಸ್ತಾರ ಹಾಕಿ ತೋರಿಸಿಕೊಟ್ಟಿದ್ದಾರೆ. ಮುದ್ದಣನನ್ನು ಕುರಿತ ಇನ್ನೊಂದು ಭಾಷಣದಲ್ಲಿ ಕೂಡ ಅವನ ಗದ್ಯದ ವಿಶೇಷತೆಯನ್ನು ಕುರಿತೇ ಹೇಳಲಾಗಿದೆ.

'ಶಾಕುಂತಲ ನಾಟಕ ನವೀನ ಟೀಕೆ' - ಮುಮ್ಮಡಿ ಕೃಷ್ಣರಾಜರು ಕಾಳಿದಾಸನ ಪ್ರಸಿದ್ಧ ನಾಟಕಕ್ಕೆ ಮಾಡಿದ ಸವಿವರ ವ್ಯಾಖ್ಯಾನ ವಿಮರ್ಶೆಯ ಬಗೆಗಿನ ಲೇಖನ. ಕಾಳಿದಾಸನ ಮಾತುಗಳನ್ನು ವಿವರಿಸುತ್ತ- "ಮೂಲದ ಒಂದು ಮಾತಿಗೆ ವಿಮರ್ಶೆಯ ಅಥವಾ ವಿವರಣೆಯ ತಮ್ಮ ಒಂದು ಮಾತು ಸೇರಿಸಿ ಮೂಲವನ್ನು ಹಿಗ್ಗಿಸಿರುವುದು ಕಾಣಬರುತ್ತದೆ ಎಂದು ಹೇಳಿ ಮುಮ್ಮಡಿಯವರು- "ಒಬ್ಬ ಸಮರ್ಥರಾದ ಉಪಾಧ್ಯಾಯರಂತೆ, ಒಂದೊಂದೂ ವಾಕ್ಯವನ್ನು ವಿವರಿಸಿ ಅದರ ಅಂತರಾರ್ಥ ವಿಶದಪಡಿಸಿ. ಒಟ್ಟಿನ ಒಂದು ಸ್ವಾರಸ್ಯವೂ ತಾತ್ಪರ್ಯವೂ ಮನಸ್ಸಿಗೆ ಹೊಗುವ ರೀತಿಯಲ್ಲಿ ಆ ವಾಕ್ಯವನ್ನು ಬೇರೆ ಬೇರೆ ರೀತಿಯಲ್ಲಿ ಹೇಳುತ್ತಾರೆಯೋ ಹಾಗೆಯೇ ಮುಮ್ಮಡಿಯವರೂ ಮಾಡಿದ್ದಾರೆಂಬುದು ಒಟ್ಟಿನಲ್ಲಿ ಸಮರ್ಪಕವಾದ ತೀರ್ಪು.

'ಬಸವಣ್ಣನವರ ವಚನಗಳಲ್ಲಿ ರೂಪಾಂಶ' ಎಂಬುದು ಬಸವಣ್ಣನವರ ವಚನಗಳ ಕಟ್ಟೋಣವನ್ನು, ಸೂಕ್ಷ್ಮವಾಗಿ ವಿಶ್ಲೇಷಿಸಿ, ನೋಡಿರುವ ಬರಹ. ತುಂಬ ಸುಂದರವೂ, ಅರ್ಥಪೂರ್ಣವೂ ಆದ ಬಸವಣ್ಣನವರ ವಚನಗಳನ್ನು ಉದಾಹರಿಸಿ ಸಂಕ್ಷಿಪ್ತತೆ, ರೂಪಕ ಮುಖಾಂತರವಾದ ಸುಂದರ ನಿರೂಪಣ, ಪ್ರಾಸದ ವೈಖರಿ, ಲಯ ವಿನ್ಯಾಸ, ಬಳಕೆ ಮಾತಿನ ಪ್ರಯೋಗ, ವ್ಯಾಕರಣದ ಮೊಟಕಣೆ, ಬಿಗಿ, ಗಾದೆಗಳ, ಸುಭಾಷಿತಗಳ, ದೃಷ್ಟಾಂತಗಳ ಗರ್ಭೀಕರಣ, ಸೂತ್ರಾತ್ಮಕ ನಿರೂಪಣಾ ರೀತಿ, ಮೊದಲನೆಯ ವಾಕ್ಯ ಮೈ ತಳೆದ ರೀತಿಯಲ್ಲೇ, ಮುಂದಿನ ವಾಕ್ಯಗಳೂ ಮೈ ತಳೆದಿರುವುದು, ಎರಡು ಒಂದು ವಾಕ್ಯದಲ್ಲಿಯೇ ಅದರ ಅಂಗಗಳಲ್ಲಿ, ಉಪಾಂಗಗಳಲ್ಲಿ ಒಂದು ರೀತಿಯ ಸಮತೋಲನವಿರುವುದು ಎಂದು ಪಟ್ಟಿ ಮಾಡಿ ಹೇಳಿರುವುದು ಅವರ ಸೂಕ್ಷ್ಮದೃಷ್ಟಿಯ ವಿಶ್ಲೇಷಣೆಯ ದ್ಯೋತಕವಾಗಿದೆ. ಹೇಳದೆ ಬಿಟ್ಟಿರುವ ಬಹಳ ಮುಖ್ಯವಾದ ಅಂಶವೆಂದರೆ ವಚನ ಅನುಸರಿಸುವುದು ಅನುಗಮನ ವಿಧಾನವನ್ನು ಎಂದರೆ ವಚನದ ಸಾರಾಂಶ ಕೊನೆಯಲ್ಲಿದ್ದು, ಮೇಲಿನ ವಾಕ್ಯಗಳಲ್ಲಿ ಅದನ್ನು ಸಮರ್ಥಿಸುವ ಉಪಮೆ, ದೃಷ್ಟಾಂತದ ಮಾತುಗಳಿರುವುದು.

ಕೊನೆಯದಾಗಿ **'ಏಳೆ ತ್ರಿಪದಿ ಗಾದೆಗಳ ರೂಪ ಸಾಮ್ಯ'** ಎಂಬ ಲೇಖನದಲ್ಲಿ ಇವುಗಳಲ್ಲಿನ ಸಮಾನ ಗುಣಗಳನ್ನು ಚರ್ಚಿಸಲಾಗಿದೆ. 'ಏಳೆಯೇ ತಾಯಿ' ತ್ರಿಪದಿಯೇ ಮಗಳು,

ಏಳೆಯೇ ಬೆಳೆದು ತ್ರಿಪದಿಯಾಯಿತು. ತ್ರಿಪದಿಯೇ ಬೆಳೆದು ಸಾಂಗತ್ಯವಾಯಿತು. ಸಂಭಾಷಣೆಗೆ, ಸವಾಲು ಜವಾಬಿನ ರೀತಿಯ ಮಾತುಕತೆಗೆ ಏಳೆ ತಕ್ಕ ಬಂಧ ಎಂದು ಜಾನಪದ ಏಳೆಗಳಿಂದ ತೋರಿಸಿ ಕೊಟ್ಟಿರುವ ರೀತಿ ಸಮಂಜಸವಾಗಿದೆ. ಸಾಂಗತ್ಯ, ತ್ರಿಪದಿ, ಏಳೆ 4,3,2. ಇದು ಹೀಗೆಯೇ ಒಂದಕ್ಕಿಂತ ಒಂದು ಚಿಕ್ಕದಾಗಿ ಒಂದೊಂದು ಸಾಲು ಕಮ್ಮಿಯಾಗುತ್ತ, ಕೊನೆಗೆ ಒಂದು ಸಾಲಿನ ಗಾದೆ ಸೃಷ್ಟಿಯಾಗಿರಬೇಕೆಂದು, ಇವುಗಳ ರೂಪಸಾಮ್ಯದ ಮೇಲೆ ಮಾಡಿರುವ ಊಹೆ ಸಕಾರಣವಾದ್ದೆನಿಸುತ್ತದೆ. ಗಾದೆಯ ಒಂದು ಸಾಲಿಗೆ ಅರ್ಥಪೂರ್ಣವಾದ ಒಂದೋ ಎರಡೋ ಸಾಲು ಸೇರಿಸಿ, ಏಳೆ, ತ್ರಿಪದಿ ರಚಿಸಬಹುದೆಂಬ ಅವರ ತರ್ಕ–ಸಮಂಜಸದೆಂದೇ ತೋರುತ್ತದೆ. ಇದಕ್ಕೆ ವಿಪುಲವಾಗಿ ಗಾದೆಮಾತುಗಳನ್ನು ಬಳಸಿಕೊಂಡು ಸ್ಥಾಪಿಸಿದ್ದಾರೆ.

ಪ್ರಬಂಧಗಳು

ಬೇರೆ ಬೇರೆ ಸಂದರ್ಭಗಳಲ್ಲಿ ಎಸ್.ವಿ.ಪಿ. ಅವರು ಬರೆದ ಐದು ಲೇಖನಗಳ ಸಂಗ್ರಹವೇ ಪ್ರಬಂಧಗಳು. ಇದರಲ್ಲಿ ಮೊದಲ ಮೂರು ಪ್ರಬಂಧಗಳು ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದ ಬರಹಗಳಾದರೆ ಕೊನೆಯವೆರಡು, ಮುದ್ದಣನ ಅದ್ಭುತ ರಾಮಾಯಣ ಮತ್ತು ವಿನಾಯಕರ **'ಬಾಳದೇಗುಲದಲ್ಲಿ'** ಎಂಬ ಗ್ರಂಥಗಳನ್ನು ಕುರಿತ ಪ್ರಬಂಧಗಳು, ಕಾಳಿದಾಸ, ಹಾಲ, ಅಮರು ಮುಂತಾದ ಸಂಸ್ಕೃತ ಕವಿಗಳ ಕೃತಿಗಳನ್ನು ಕುರಿತಾದ ಸಹೃದಯ ವಿಮರ್ಶೆ ಮೊದಲ ಮೂರು ಪ್ರಬಂಧಗಳ ವಿಷಯ. ಮೇಲೆ ಹೆಸರಿಸಲಾದ ಕವಿಗಳ ಕೃತಿಗಳನ್ನು ಈ ಮುಂಚೆ ತಾವೇ ಕನ್ನಡಿಸಿದ್ದರು. ಇದೀಗ ಆ ಕೃತಿಗಳನ್ನು ಕುರಿತ ಹಾಳತವಾದ ವಿಮರ್ಶೆಯನ್ನು ಮಾಡಿದ್ದಾರೆ.

ಮೊದಲನೆಯ ಪ್ರಬಂಧದಲ್ಲಿ ಕುಮಾರ ಸಂಭವದಲ್ಲಿ ಬರುವ ಪಾರ್ವತಿ ಪರಮೇಶ್ವರರ ನಡುವಿನ ಸಂವಾದದ ಸ್ವಾರಸ್ಯವನ್ನು ಮನಗಾಣಿಸುತ್ತಾರೆ. ಪಾರ್ವತಿಯ ದೃಢತೆಯನ್ನು ತಿಳಿಯಲು ಶಿವನು ವಟುವೇಷಧಾರಿಯಾಗಿ ಕಾಣಿಸಿಕೊಂಡು, ಪಾರ್ವತಿಯನ್ನು – ಉತ್ಪಲಾಕ್ಷಿ, ಉದಾರದರ್ಶನೆ, ಸಂನತ ಗಾತ್ರೀ, ಕೃಶೋದರಿ, ಸುಭ್ರೂ, ತಪೋಧನೆ, ಬಹುಕ್ಷಮೆ, ಗೌರಿ– ಎಂದೆಲ್ಲ ಸಂಬೋಧಿಸಿ, ಕೊನೆಗೆ ಅವಳ ಹೆಸರು ಹಿಡಿದು ಕರೆದು, ಈಶ್ವರನಿಗೂ ನಿನಗೂ ಎಲ್ಲಿಂದೆಲ್ಲಿಗೆ ಎಂದು ಉದ್ದಕ್ಕೂ ಶಿವನನ್ನು ವಿಡಂಬಿಸುತ್ತಾ ಹೋಗುತ್ತಾನೆ" ಎಂದು ಎಸ್.ವಿ.ಪಿ. ವಿವರವಾಗಿ ಅದರ ಚಿತ್ರ ಕಟ್ಟಿಕೊಡುತ್ತಾರೆ.

ಕೊನೆಯಲ್ಲಿ ಅವರು ನೀಡುವ ತೀರ್ಮಾನ "ಪಾರ್ವತಿ, ಪದವಿ ಹಣ, ರೂಪ, ಯೌವನ, ಕುಲ ಇವುಗಳನ್ನು ಗಣಿಸದೆ, ಶುದ್ಧವಾದ ಏಕೋಭಾವದಿಂದ ಪರಮೇಶ್ವರನನ್ನು ಚಿಂತಿಸಿದಳು." "ಇಲ್ಲಿ ಪ್ರೇಮಭಾವನೆಯ ಚಿಂತನೆಯಿಂದ ಈಶ್ವರನನ್ನು ಕುರಿತು ಪರಿಭಾವಿಸಿದ ಈ ತಪಸ್ವಿನಿಯ ಅಮರವೂ, ಅಚ್ಯುತವೂ, ಅನಂತವೂ ಆತ್ಮೀಯವೂ, ಅಕಳಂಕವೂ, ಆದ ಭಕ್ತಿಗೆ ಸ್ನೇಹಕ್ಕೆ ದಾಕ್ಷಿಣ್ಯಕ್ಕೆ ಶ್ರದ್ಧೆಗೆ, ಸಹನೆಗೆ, ಮತ್ತು ಸೌಜನ್ಯಕ್ಕೆ ಪರಮೇಶ್ವರನು ಸೋಲೊಪ್ಪಿಕೊಂಡು ಒಲಿದು ಬಂದುದರಲ್ಲಿ ಆಶ್ಚರ್ಯವೇನಿದೆ?" ಎಂಬುದು ಭಾವುಕವಾದ ವ್ಯಾಖ್ಯಾನ. ಪಾರ್ವತಿಯ ಅನನ್ಯ ಪ್ರೀತಿ ಸ್ವರೂಪದ ಸುಂದರ ವಿವರಣೆಯಾಗಿದೆ. ಭಟ್ಟರ ಪ್ರಾಸಭರಿತ ವಾಗ್ಝರಿಗೆ ನಾವು ಮನ ಸೋಲುತ್ತೇವೆ.

"ಗಾಥಾ ಸಪ್ತಶತಿಯಲ್ಲಿ ಶೃಂಗಾರದ ಚಿತ್ರಗಳು" – ಎಂಬ ಲೇಖನ 1969ರಲ್ಲಿ ಪ್ರಜಾವಾಣಿಯ ದೀಪಾವಳಿ ವಿಶೇಷ ಸಂಚಿಕೆಗಾಗಿ ಬರೆದ ಲೇಖನ. ಎಸ್.ವಿ.ಪಿ. ಅವರು 1966ರಲ್ಲಿಯೇ ಗಾಥಾ ಸಪ್ತಶತಿಯನ್ನು ಇಡಿಯಾಗಿ ಕನ್ನಡಕ್ಕೆ ಅನುವಾದಿಸಿದ್ದರು. ಹೀಗಾಗಿ ಆ ಕಾವ್ಯದ

ಸಂಪೂರ್ಣ ಪರಿಚಯ ಅವರಿಗಿತ್ತು. ಗಾಥಾ ಸಪ್ತಶತಿಯ ಸುಂದರವೂ, ಶೃಂಗಾರ ಭರಿತವೂ ಆದ ಪದ್ಯಗಳನ್ನು ಉಲ್ಲೇಖಿಸುತ್ತಾ ಅದಕ್ಕೆ ಭಾವಪೂರ್ಣವಾದ ವ್ಯಾಖ್ಯಾನ ಮಾಡುವ ಮೂಲಕ ಗಾಥಾ ಸಪ್ತಶತಿಯ ಪ್ರಭಾವಪೂರ್ಣವಾದ ಚಿತ್ರವನ್ನು ನೀಡಿದ್ದಾರೆ. ಈ ಮುಕ್ತಗಳ ರಸಾರ್ದ್ರತೆ, ಧ್ವನಿರಮ್ಯತೆ, ಭಾವಪ್ರಖರತೆಗಳನ್ನು ಮುಕ್ತವಾಗಿ ಮೆಚ್ಚುತ್ತಾರೆ. ಸ್ವಾರಸ್ಯಕರವಾದ ಪದ್ಯಗಳನ್ನು ವಿಪುಲವಾಗಿ ಉದ್ಧರಿಸಿಕೊಟ್ಟಿರುವುದು ಗಾಥಾ ಸಪ್ತಶತಿಯ ಸೌಂದರ್ಯವನ್ನು ಸವಿಯಲು ಸಾಕಾಗುತ್ತದೆ.

'ಗಾಥಾ ಸಪ್ತಶತಿ'ಯನ್ನು ಕನ್ನಡಿಸಿದಂತೆಯೇ ಅದಕ್ಕೂ ಮುನ್ನ ಒಂದು ದಶಕದಷ್ಟು ಹಿಂದೆಯೇ 1953ರಲ್ಲಿ **'ಪ್ರೇಮಾರಾಧನ'** ಎಂಬ ಶೀರ್ಷಿಕೆಯಲ್ಲಿ ಅಮರುಕ ಕವಿಯ ಅಮರು ಶತಕವನ್ನು ಅನುವಾದಿಸಿ ಪ್ರಕಟಿಸಿದಾಗ ಅದಕ್ಕೆ ಬರೆದ ಸುಮಾರು 20 ಪುಟಗಳಷ್ಟು ವಿಸ್ತಾರವಾದ ಪ್ರಸ್ತಾವನೆಯೇ ಇದರಲ್ಲಿ ಸೇರ್ಪಡೆಯಾಗಿರುವ ಎರಡನೇ ಪ್ರಬಂಧ. ಗಾಥಾಸಪ್ತಶತಿಯ ಪದ್ಯಗಳಂತೆಯೇ ಇವು ಕೂಡ ಮುಕ್ತಕಗಳು. ಗಾಥಾಸಪ್ತಶತಿಯಲ್ಲಾದರೆ ಶೃಂಗಾರದ ಮುಕ್ತಗಳ ಜೊತೆಗೆ ಲೋಕಜೀವನದ ಇತರ ಚಿತ್ರಗಳೂ ಇದ್ದರೆ. 'ಅಮರು ಶತಕ' ಇಡಿಯಾಗಿ ಶೃಂಗಾರ ಚಿತ್ರಗಳಿಗೇ ಮೀಸಲಾದ ಕೃತಿ. ಪ್ರಣಯಿಗಳ ವಿವಿಧ ಮನೋವೃತ್ತಿಗಳನ್ನು ಶಬ್ದಚಿತ್ರಗಳ ಮಾದರಿಯಲ್ಲಿ ಕವಿ ಹಿಡಿದಿಟ್ಟಿದ್ದಾನೆ. ಇದರ ಪದ್ಯಗಳನ್ನು ನಾಯಕ ನಾಯಕೆಯರ ಮನೋವೃತ್ತಿ ಅನುಸರಿಸಿ, ಸಖೀವಾಕ್ಯ, ನಾಯಿಕಾ ವಾಕ್ಯ, ನಾಯಕೋಕ್ತಿ, ನಾಯಕ-ನಾಯಿಕಾ ಸಂವಾದ ಎಂದೆಲ್ಲ ವಿಭಾಗಿಸಲಾಗಿದೆ ಮತ್ತು ಆ ಕವನಗಳಲ್ಲಿ ಬರುವ ಪ್ರಣಯಿನಿಯರನ್ನು ಅವರ ಮನೋವ್ಯಾಪಾರಕ್ಕೆ ತಕ್ಕಂತೆ ಅಭಿಸಾರಿಕೆ, ಮುಗ್ಧೆ, ನೀರೆ, ಭಿನ್ನ ವಿರಹಾರ್ತೆ, ವಿರಹೋತ್ಕಂಠಿತೆ, ಗತಭರ್ತಾರಕೆ, ಸುಖೀ ಉಲ್ಲಾಸಿನಿ, ರತಿಕಾತರೆ ಎಂದು ಹಲವು ತೆರನಾಗಿ ಹೆಸರಿಸಲಾಗಿದೆ.

ಅಮರುಕನ ಈ ಶತಕ ಒಂದು ಶೃಂಗಾರ ಚಿತ್ರಶಾಲೆ. ಇಲ್ಲಿ ಪ್ರಣಯಿನಿಯ ಕೋಪದ, ಶೃಂಗಾರದ ನಾನಾ ಶಬ್ದಚಿತ್ರಗಳನ್ನು ಅರ್ಥಮಾಡಿಕೊಳ್ಳಲು ಪ್ರತಿಯೊಂದು ಪದ್ಯಕ್ಕೂ ಒಂದೊಂದು ಉಚಿತವಾದ ಹಿನ್ನೆಲೆಯೊಂದನ್ನು ಕಲ್ಪಿಸಿಕೊಂಡು ಆಸ್ವಾದಿಸಬೇಕಾಗುತ್ತದೆ. ಇಲ್ಲದಿದ್ದರೆ ಇಂಥ, ರಚನೆ ವಿವರಗಳನ್ನು ಕಳೆದುಕೊಂಡರೆ ಈ ಪದ್ಯದ ಪೂರ್ಣ ಆಸ್ವಾದ ಸಾಧ್ಯವಿಲ್ಲ ಎಂಬ ತುಂಬಾ ಮುಖ್ಯವಾದ ಮಾತನ್ನು ಹೇಳಿ ಒಂದೆರಡು ಕವಿತೆಗಳ ಹಿನ್ನೆಲೆಯನ್ನು ರೂಪಿಸಿಕೊಟ್ಟಿದ್ದಾರೆ.

ಗಂಡಸಿನ ಎಲ್ಲ ಅನರ್ಥಕ್ಕೂ ಹೆಣ್ಣಿನ ಅಸ್ಥಿರತೆ, ಅವಿಶ್ವಾಸ, ಪಾಪಬುದ್ಧಿ, ಚಾಂಚಲ್ಯಗಳನ್ನೇ ದೊಡ್ಡದು ಮಾಡಿ ಆಕೆಯನ್ನೇ ದೂರುವ ಭಾರತದ ಈ ವಾಡಿಕೆಯ ಜಾಡು ಬಿಟ್ಟು, ಪ್ರೇಮ ಜೀವನದಲ್ಲಿ ಒದಗಬಹುದಾದ ವಿರಸಗಳಿಗೆ ಹೆಣ್ಣು ಕಾರಣವಲ್ಲ ಗಂಡು ಕಾರಣ ಎನ್ನುವುದು ಈ ಕೃತಿಯಲ್ಲಿ ಕಾಣುವ ಒಂದು ಹೊಸ ಅಂಶ.

ಈ ಕವಿಗೆ ಹೆಣ್ಣು ಗಂಡಿಗಿಂತ ದೊಡ್ಡವಸ್ತು. ಗಂಡಸಿನ ನಾನಾ ಅನ್ಯಾಯವೂ, ಅಧರ್ಮವೂ ಆದ ವರ್ತನೆಗಳ ಪರಿಣಾಮವಾಗಿಯೇ ಹೆಣ್ಣು ನಡೆಯುತ್ತಾಳೆ. ಆಕೆ ಕೋಮಲೆ. ಸ್ವಭಾವತಃ ಭೀರು. ಅವಳನ್ನು ಸರಿಯಾಗಿ ನೋಡಿಕೊಳ್ಳುವುದು ಗಂಡಸಿನ ಕರ್ತವ್ಯ ಎಂಬ ಒಂದು ಭಾವನೆ ಬಲಿಯುತ್ತದೆ ಈ ಕೃತಿಯನ್ನು ಓದಿದವರ ಮನಸ್ಸಿನಲ್ಲಿ ಎಂಬ ಅರ್ಥಪೂರ್ಣ ವಿಶ್ಲೇಷಣೆ ಭಟ್ಟರದು.

ಈ ಸಂಕಲನದ ಕೊನೆಯ ಲೇಖನ ವಿನಾಯಕರ **"ಬಾಳದೇಗುಲದಲ್ಲಿ"** ಎಂಬುದು. **"ಬಾಳದೇಗುಲದಲ್ಲಿ"** ಎಂಬುದು ವಿನಾಯಕರ ಪ್ರಸಿದ್ಧ ಕವನಸಂಕಲನ. ಏಳು ಗುಂಪುಗಳಾಗಿ

ಇದನ್ನು ವಿಂಗಡಿಸಿಕೊಂಡು ಇಲ್ಲಿಯ ಕವನಗಳನ್ನು ವಿಮರ್ಶಾತ್ಮಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಮೊದಲು ಒಂದೊಂದೂ ಕವನವನ್ನು ವಿಮರ್ಶಿಸಿ, ಕೊನೆಯಲ್ಲಿ ಒಟ್ಟಾರೆಯಾಗಿ ಅದನ್ನು ಕುರಿತು ವಿಮರ್ಶೆಯ ಮಾತುಗಳನ್ನು ಹೇಳಿದ್ದಾರೆ. ಎಸ್.ವಿ.ಪಿ. ಅವರದು ಉದಾರವಾದೀ ವಿಮರ್ಶೆ. ಮೆಚ್ಚಿಕೆಯ ಮಾತುಗಳನ್ನು ಹೇಳುವಾಗ ಸ್ವಲ್ಪ ಧಾರಾಳವಾಗಿಯೇ, ಒಳ್ಳೆಯ ವಿಶೇಷಣಗಳನ್ನು ಬಳಸಿ ಹೇಳುವುದು ಅವರ ಸ್ವಭಾವ. ವಿನಾಯಕರ ಕಾವ್ಯದ ಬಗ್ಗೆಯೂ ಇಂಥದೇ ಮಾತುಗಳನ್ನು ಹೇಳಿದ್ದಾರೆ: "ಸಮಕಾಲೀನ ಕನ್ನಡ ಸಾಹಿತ್ಯದ ಒಂದು ಅಪೂರ್ವ ಅದ್ವಿತೀಯ ನಾಯಕ ಕಾವ್ಯ" ಎಂದು ಕರೆದು, "ಒಮ್ಮೆ ಓದಿ ಎತ್ತಿಡುವ ಕೃತಿಯಲ್ಲ ಇದು. ಮತ್ತೆ ಮತ್ತೆ ಓದಿ, ಓದಿದಷ್ಟನ್ನು ರೋಮಂಥನ ಕ್ರಿಯೆಯಿಂದ ರೋಚಕಗೊಂಡು, ತನ್ನ ಚೇತನಕ್ಕೆ ಸಂಸ್ಕಾರವನ್ನು ತಂದುಕೊಳ್ಳುವಂತಹ ಜೀವಾಣು ತುಂಬಿದ ಕಾವ್ಯದ ಜೇಂಗೊಡ ಇದು."– ಎನ್ನುತ್ತಾರೆ.

"ಬಾಳದೇಗುಲದಲ್ಲಿ ಎಂಬುದು ಮುಮ್ಮೊದಲಿನ ಸ್ಥಾನಕ್ಕೆ ಅರ್ಹವಾಗಿದೆ." "ಒಟ್ಟಿನಲ್ಲಿ ಈ ಕೃತಿ ಸಮುಚ್ಚಯದಲ್ಲಿ ಕಾಣುವ ದೃಷ್ಟಿ ಬಾಳನ್ನು ನೋಡುವ ದೃಷ್ಟಿ"... "ಭಾವಕ್ಕೆ ತಕ್ಕ ಛಂದದಲ್ಲಿ ಈ ಕೃತಿ ಅರಳಿದೆ"... ಎಂದು ಹೇಳಿ, ಇನ್ನೂ ಅನೇಕ ಕಾರಣಗಳನ್ನು ಕೊಟ್ಟು– "ಈ ಎಲ್ಲ ಕಾರಣಗಳಿಂದ ಇದು ವಿನೂತ ಕೃತಿಯಾಗಿದೆ" ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ರಸಋಷಿ

ಪ್ರೊ. ಎಸ್.ವಿ.ಪಿ. ಯವರು ಮಂಗಳೂರಿನಿಂದ ನಿವೃತ್ತರಾಗಿ ಮೈಸೂರಿಗೆ ಬಂದಮೇಲೆ, ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಐದು ವರ್ಷಗಳ ಕಾಲ ಯುಜಿಸಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ ಸಂದರ್ಭದಲ್ಲಿ ಕುವೆಂಪು ಅವರ ಸಮಗ್ರ ಸಾಹಿತ್ಯದ ಅಧ್ಯಯನವನ್ನು ಕೈಕೊಂಡು ತಮ್ಮ ಅಧ್ಯಯನದ ಫಲವನ್ನು **"ರಸಋಷಿ"** ಎಂಬ ಶೀರ್ಷಿಕೆಯಲ್ಲಿ ಐದು ಭಾಗಗಳಲ್ಲಿ ನೀಡಿದ್ದಾರೆ. ಮೊದಲ ಭಾಗದಲ್ಲಿ ಕುವೆಂಪು ಅವರ ಸಮಗ್ರ ಭಾವಗೀತೆಗಳು, ಅವರ ಕಥನ ಕವನಗಳು ಮತ್ತು 'ಚಿತ್ರಾಂಗದಾ' ಖಂಡಕಾವ್ಯ ಇವುಗಳನ್ನು ಕುರಿತು ವಿಸ್ತಾರವಾಗಿ ಚರ್ಚಿಸಿದ್ದಾರೆ. ಎರಡನೇ ಸಂಪುಟವನ್ನು ಇಡಿಯಾಗಿ 'ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಮೀಸಲಾಗಿಟ್ಟಿದೆ. ಮೂರನೇ ಸಂಪುಟವಷ್ಟೂ ಕುವೆಂಪು ಅವರ ನಾಟಕಗಳ ವಿವರಪೂರ್ಣ ಅಧ್ಯಯನಕ್ಕೆ ಮೀಸಲಾಗಿದೆ. ನಾಲ್ಕನೇ ಸಂಪುಟ ಕುವೆಂಪು ಅವರ ಸಮಗ್ರ ವಿಮರ್ಶಾತ್ಮಕ ಬರಹಗಳು, ವೈಚಾರಿಕ ಬರಹಗಳನ್ನು ಕುರಿತ ವಿವರವಾದ ಅಧ್ಯಯನವಾದರೆ, ಐದನೆಯ ಸಂಪುಟ ಅವರ ಎರಡು ಕಥಾಸಂಕಲನಗಳು, ಮಲೆನಾಡಿನ ಚಿತ್ರಗಳು, ಅವರು ಬರೆದ ಎರಡು ಜೀವನ ಚರಿತ್ರೆಗಳು, ಎರಡು ಕಾದಂಬರಿಗಳು ಹಾಗೂ ಕುವೆಂಪು ಅವರ ಆತ್ಮಕಥೆ 'ನೆನಪಿನ ದೋಣಿ'ಯಲ್ಲಿಯ ಎರಡೂ ಭಾಗಗಳನ್ನು ಕುರಿತ ಅಭ್ಯಾಸ ಪೂರ್ಣ ಬರಹವನ್ನೊಳಗೊಂಡಿದೆ.

ಕುವೆಂಪು ಈ ಶತಮಾನದ ಮೇರು ಸಾಹಿತಿ. ಬೃಹತ್ತು ಹಾಗೂ ಮಹತ್ತುಗಳಲ್ಲಿ ಅವರ ಸಾಹಿತ್ಯವನ್ನು ಸರಿಗಟ್ಟುವ ಇನ್ನೊಬ್ಬ ಬರಹಗಾರ ಕನ್ನಡದಲ್ಲಿ ಇಲ್ಲ. ವಿಪುಲವಾಗಿ ಬರವಣಿಗೆ ಮಾಡಿರುವ ಮಹಾ ಸಾಹಿತಿಯ ಸಮಗ್ರ ಬರಹಗಳನ್ನು ಕೇವಲ ಪರಿಚಯ ಮಾಡಿಕೊಡುವುದೆಂದು ಹೊರಟರೂ ಅದೇ ಒಂದು ಸಾಹಸ. ಅಂಥದ್ದರಲ್ಲಿ ಅವರ ಸಮಗ್ರ ಬರಹಗಳ ವಿವರಪೂರ್ಣವಾದ ಪರಿಚಯದೊಂದಿಗೆ ವಿಮರ್ಶೆಯನ್ನೂ ಮಾಡುವುದು ಅದಕ್ಕಿಂತಲೂ ಹೆಚ್ಚಿನ ಸಾಹಸದ ಕೆಲಸ. ಭಟ್ಟರು ಇದಕ್ಕಾಗಿ ಪಟ್ಟಿರುವ

ಶ್ರಮ ಅಪಾರ. ಅವರ ಕೃತಿಗಳ ಒಳಹೊಕ್ಕು ಅವುಗಳ ವಸ್ತುಕಥನವನ್ನು ಅದರೆಲ್ಲ ವಿವರಗಳಲ್ಲಿ ಮಾಡಿಕೊಡುವುದು ಭಟ್ಟರ ಪ್ರಧಾನ ಉದ್ದೇಶ. ಮೂಲ ಕೃತಿಯಲ್ಲಿ ಅನೇಕ ಭಾಗಗಳನ್ನು, ಕೆಲವೊಮ್ಮೆ ಸಾಲು ಸಾಲುಗಳನ್ನು ಪದಗುಚ್ಛಗಳನ್ನು ಉಲ್ಲೇಖಿಸುತ್ತಾ ಓದುಗರಿಗೆ ಅದರ ವಿವರವಾದ ಪರಿಚಯ ಮಾಡಿಕೊಡುತ್ತಾರೆ. ಜೊತೆಗೆ ಅಲ್ಲಲ್ಲೇ ಸಾಧ್ಯವಾದೆಡೆಗಳಲ್ಲಿ, ಹೇಳಬೇಕೆಂದೆಡೆಗಳಲ್ಲಿ ಸಂಕ್ಷಿಪ್ತವಾದ ವಿಮರ್ಶೆಯ ಮಾತುಗಳನ್ನೂ ಹೇಳುತ್ತಾರೆ.

ಮೊದಲ ಸಂಪುಟದಲ್ಲಿ ಕುವೆಂಪು ಅವರ ಭಾವಗೀತೆಗಳನ್ನು 'ಪ್ರಕೃತಿಗೀತೆಗಳು', 'ಸೂರ್ಯೋದಯ ಗೀತೆಗಳು', 'ಪ್ರೇಮ ಗೀತೆಗಳು', 'ಕ್ರಾಂತಿ ಕವನಗಳು', 'ದರ್ಶನ ಕವನಗಳು', 'ಅನುಭಾವ ಕವನಗಳು', 'ಸ್ವಾತಂತ್ರ್ಯೋದಯ ಕವನಗಳು', 'ವಚನ ಕವನಗಳು', 'ಶಿಶುಗೀತೆಗಳು' ಎಂಬ ಶೀರ್ಷಿಕೆಗಳಲ್ಲಿ ಕವಿಯ ಮಾತುಗಳನ್ನು ಅಲ್ಲಲ್ಲಿ ಉಲ್ಲೇಖಿಸುತ್ತ ವಿಸ್ತಾರವಾಗಿ ಪರಿಚಯಿಸಿಕೊಟ್ಟು, ಅವುಗಳಲ್ಲಿ ಅಡಗಿರುವ ತತ್ತ್ವಗಳನ್ನು ಹೊರಗೆಡವಿ ಅವರ ಕಾವ್ಯ ಸಾಗಿಹೋದ ಮಾರ್ಗವನ್ನು ಹೀಗೆ ಸಾರ್ಥಕವಾಗಿ ರೇಖಿಸುತ್ತಾ ಹೋಗುತ್ತಾರೆ– "ಕವಿ ಪ್ರಕೃತಿಯನ್ನು ಸಮೀಪಿಸಿದ ಸಂದರ್ಭದಲ್ಲಿ ಅವರು ತೋರಿದ ಈ ಶಿಶುಸಹಜವಾದ ಅವ್ಯಾಜಪ್ರೇಮ ಕ್ರಮಕ್ರಮವಾಗಿ ಆಧ್ಯಾತ್ಮಿಕವಾದ ಪ್ರೇಮವಾಗಿ ಈಶ್ವರ ಸಾಕ್ಷಾತ್ಕಾರದ ಅನುಭವ; ತರಂಗಗಳನ್ನು ಉಕ್ಕೇರಿಸುವ ದಿವ್ಯ ಪ್ರೇಮವಾಗಿ ಪರಿವರ್ತಿತವಾಗುವುದನ್ನು ನಾವು ಕಾಣುತ್ತೇವೆ." (ರಸಋಷಿ–1–ಪು.3)

ಮುಂದೆ 'ನವಿಲು' ಸಂಗ್ರಹದ 'ಕಲಾಸುಂದರಿ' ಕವನದಲ್ಲಿ ಕವಿಯ ಪ್ರಕೃತಿಪ್ರೇಮ ಆಧ್ಯಾತ್ಮಿಕವಾಗಿ ಪರಿವರ್ತಿತವಾಗಿರುವುದನ್ನು ಸ್ಪಷ್ಟವಾಗಿ ಕಾಣುತ್ತೇವೆ". ಈ ಮಾತುಗಳಲ್ಲಿ, ಕವಿಯ ದೃಷ್ಟಿ ಹೇಗೆಲ್ಲ ವಿಕಾಸವಾಗುತ್ತ ಹೋಗುತ್ತದೆಂಬುದರ ಸಕೃದ್ದರ್ಶನವನ್ನು ವಿಪುಲವಾದ ಉದಾಹರಣೆಗಳೊಂದಿಗೆ ಸಹೃದಯರಿಗೆ ಮಾಡಿಸುತ್ತಾರೆ.

ಕಥನಕವನಗಳೆಲ್ಲವನ್ನೂ ಇದೇ ರೀತಿ ಸರಳ ಗದ್ಯದಲ್ಲಿ ನಡುನಡುವೆ ಕವಿಯ ಪಂಕ್ತಿಗಳನ್ನು ಉದ್ಧರಿಸಿ, ವಿವರಿಸಿ ಕೊನೆಯಲ್ಲಿ ಒಂದೆರಡು ಸಾಲುಗಳಲ್ಲಿ ಅದರ ಬಗ್ಗೆ ವಿಮರ್ಶೆಯ ಮಾತುಗಳನ್ನು ಹೇಳುವುದು ಅವರ ಪದ್ಧತಿ. ಉದಾಹರಣೆಗೆ 'ಮರಸು ಬೇಟೆ' – ಕಥನ ಕವನ ಕುರಿತು– "ಇಲ್ಲಿ ಅನಿರೀಕ್ಷಿತವಾದ ಕೊನೆ ಇದರ ಸತ್ವ, ಸ್ವಾರಸ್ಯ. ಬೇಟೆಗಾರನ ಮನಸ್ಸಿನ ವಾತ್ಸಲ್ಯ, ಕಾತರ, ಕಳವಳ, ಭಯ, ಆನಂದ ಈ ಬಗೆ ಬಗೆಯ ತಾಕಲಾಟಗಳ ಚಿತ್ರ ಸ್ವಾರಸ್ಯಪೂರ್ಣವಾಗಿದೆ. ಓಟ, ಚೆನ್ನಾಗಿದೆ. ವರ್ಣನೆ ಹಿತವೂ ಮಿತವೂ ಉಚಿತವೂ ಆಗಿದೆ" ಎಲ್ಲ ಕಥನ ಕವನಗಳ ಬಗ್ಗೆಯೂ ವಿಮರ್ಶೆಯ ಮಾತು ಹೇಳಿಲ್ಲ.

'ಚಿತ್ರಾಂಗದಾ' ಕಾವ್ಯದ ಆರೂ ಪರ್ವಗಳ ಕತೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸಂಕ್ಷಿಪ್ತವಾಗಿ ನೀಡಿದ್ದಾರೆ.

ಎರಡನೆಯ ಸಂಪುಟ ಇಡಿಯಾಗಿ **'ರಾಮಾಯಣ ದರ್ಶನಂ'** ಮಹಾಕಾವ್ಯ ಕಥನಕ್ಕೆ ಮೀಸಲಾಗಿದೆ. ಸುಮಾರು 800 ಪುಟಗಳ, 23 ಸಾವಿರ ಪಂಕ್ತಿಗಳ ಬೃಹತ್ ಕಾವ್ಯವನ್ನು ಇಲ್ಲಿ ಸುಮಾರು 200, ಪುಟಗಳಲ್ಲಿ ಸಂಕ್ಷಿಪ್ತವಾಗಿ, ಪ್ರಮುಖ ಶೀರ್ಷಿಕೆಗಳ ಅಡಿಯಲ್ಲಿ ಕಥಿಸಿರುವುದೇ ಇದರ ಹೆಚ್ಚುಗಾರಿಕೆ ಎನ್ನಬೇಕು. ಹಾಗೆ ಕಥಿಸುವಾಗ ಕಥೆಯ ಅನುಸ್ಯೂತತೆಗೆ ಮತ್ತು ಸ್ವಾರಸ್ಯವಾಗಿ ಕಥಿಸುವುದಕ್ಕೆ ಲೇಖಕರು ಪ್ರಾಮುಖ್ಯ ನೀಡಿದ್ದಾರೆ. ಎಲ್ಲೋ ಒಂದೊಂದು ಕಡೆಮಾತ್ರ ಕಾವ್ಯದ ಪಂಕ್ತಿಗಳನ್ನು ಉದ್ಧರಿಸಿ ಕೊಟ್ಟಿದ್ದಾರೆ.

"ಸೌಂದರ್ಯಶ್ರೀಯನ್ನೂ ರೂಪ ವಿಭವವನ್ನೂ ಸುಭಗತೆಯ ರಾಶಿಯನ್ನೂ ವರ್ಣಿಸುವುದರಲ್ಲಿ ಯಾವ ಎತ್ತರದ ಕೌಶಲವನ್ನು ಮೆರೆದಿದ್ದಾರೆಯೋ ಅದೇ ಎತ್ತರದ

ಕೌಶಲವನ್ನು ವಿಕಾರದ ವಿಕೃತತೆಯ ಬೀಭತ್ಸ ಸ್ವರೂಪವನ್ನು ವರ್ಣಿಸುವುದರಲ್ಲಿಯೂ ಈ ಕವಿ ಮೆರೆದಿದ್ದಾರೆ" (ಮಂಥರೆಯ ವಿಕಾರರೂಪಿನ ವರ್ಣನೆ ಕುರಿತು ಹೇಳುವಾಗ)

"ಸೀತೆ ವಿಹ್ವಲಗೊಂಡಳು. ಅವಳ ಆ ಸಂದರ್ಭದ ಮನಃಸ್ಥಿತಿಯನ್ನು ಚಿತ್ರಿಸುವಲ್ಲಿ ಕವಿ ಬಳಸಿದ ಗುಣವಾಚಕಗಳು, ಕ್ರಿಯಾಪದಗಳೂ ಕ್ರಿಯಾವಿಶೇಷಣಗಳು– ಇವು ಸಮುಚಿತವಾಗಿವೆ. ಮಹಾಕವಿಗೆ ಮಾತ್ರ ಸಾಧ್ಯವಾದವು ಎನ್ನುವ ರೀತಿಯಲ್ಲಿ ಬಂದಿದೆ. ಯಾವ ಚಲನಚಿತ್ರ ದಿಗ್ದರ್ಶಕನ ಎಂತಹ ಮಹೋನ್ನತ ಪ್ರತಿಭೆಯೂ ನಾಚುವಂತಹ ರೀತಿಯಲ್ಲಿ ಇಲ್ಲಿ ಕವಿ ಪ್ರತಿಭೆ ಕೆಲಸ ಮಾಡಿದೆ" (ಓಲಕ್ಷ್ಮಣಾ ಸಂಚಿಕೆಯಲ್ಲಿ– ಪು.40)

ಹೀಗೆ ಅಲ್ಲೊಂದು ಇಲ್ಲೊಂದು ಮೆಚ್ಚಿಕೆಯ ಮಾತುಗಳು ಬಂದಿರುವುದನ್ನು ಬಿಟ್ಟರೆ, ಇಡೀ ಕೃತಿ ರಾಮಾಯಣ ದರ್ಶನದ ಸರಸ ಕಥನವಾಗಿದೆ.

ಮೂರನೆಯ ಸಂಪುಟವಷ್ಟೂ ಕುವೆಂಪು ಅವರ ಎಲ್ಲ ಹದಿನಾಲ್ಕು ನಾಟಕಗಳ ಚರ್ಚೆಗೆ ಮೀಸಲಾಗಿದೆ. ಎಂದಿನಂತೆ ಪ್ರತಿನಾಟಕದ ಪ್ರಾರಂಭದಲ್ಲಿ ನಾಟಕದ ವಸ್ತುವನ್ನು ಕೆಲವೇ ವಾಕ್ಯಗಳಲ್ಲಿ ಸಾರಾಂಶರೂಪದಲ್ಲಿ ನೀಡುತ್ತಾರೆ. ಅನಂತರ ಪ್ರತಿನಾಟಕದ ದೃಶ್ಯದೃಶ್ಯಗಳ ವಿವರಗಳನ್ನು ಸೊಗಸಾಗಿ ಕಥಿಸಿ, ನಾಟಕದ ಬಗ್ಗೆ ಅಂತ್ಯದಲ್ಲಿ ಕೆಲವೇ ರಸಾವತ್ತಾದ ವಾಕ್ಯಗಳಲ್ಲಿ ವಿಮರ್ಶೆಯನ್ನು ಮಾಡುವುದು ಅವರ ರೀತಿ.

ಉದಾಹರಣೆಗೆ **'ಬಿರುಗಾಳಿ'** ಮತ್ತು **'ರಕ್ತಾಕ್ಷಿ'** ನಾಟಕಗಳನ್ನು ಕುರಿತ ಲೇಖಕರ ಟಿಪ್ಪಣಿ: "ಈ ನಾಟಕ **'ಬಿರುಗಾಳಿ'** ಕ್ಷಮೆಯ ಸಂದೇಶವನ್ನು ಬೀರುತ್ತದೆ. ಪ್ರೇಮ, ಔದಾರ್ಯ, ಸ್ನೇಹ, ದಯೆ ಮುಂತಾದ ಪರಹಿತ ಸಾಧಕವೂ ಆತ್ಮೋದ್ಧಾರಕವೂ ಆದ ಕಲ್ಯಾಣಗುಣಗಳು ಮಾನವನಲ್ಲಿ ಅರಳಬೇಕೆಂಬ ತತ್ತ್ವ ಇದರಲ್ಲಿ ಅಡಗಿದೆ. ಈ ನಾಟಕದಲ್ಲಿ ಪ್ರತಿಪಾದನೆಗೊಂಡ ದರ್ಶನ ಭಾರತೀಯ ದರ್ಶನವೇ ಆಗಿದೆ". ಅನಂತರ ಕೆಲಕೆಲವೇ ವಾಕ್ಯಗಳಲ್ಲಿ ಭೈರವ, ಕಿಂಕರ, ಕಿನ್ನರ ಇವರ ಪಾತ್ರಗಳನ್ನು ಚರ್ಚಿಸಿದ್ದಾರೆ.

'ರಕ್ತಾಕ್ಷಿ'ಯ ಕೊನೆಯಲ್ಲಿ ರಕ್ತಾಕ್ಷಿ ಮತ್ತು 'ಹ್ಯಾಮ್ಲೆಟ್'ಗಳನ್ನು ಪರಸ್ಪರ ಹೋಲಿಸಿ ಅತ್ಯಂತ ತೂಕದ ಮಾತುಗಳನ್ನು ಆಡಿದ್ದಾರೆ.

"'ಹ್ಯಾಮ್ಲೆಟ್' ಮತ್ತು 'ರಕ್ತಾಕ್ಷಿ' ಇವು ಎರಡು ನಾಟಕಗಳಲ್ಲಿಯೂ ವಸ್ತು ಐತಿಹಾಸಿಕವಾದದ್ದು. ಇವೆರಡರಲ್ಲಿಯೂ ರಾಜಮನೆತನದ ಒಳತೋಟಿ ಕಾಣಬರುತ್ತದೆ. ಇವೆರಡರಲ್ಲಿಯೂ ಕಲುಷಿತ ಪ್ರಣಯದ ವೃತ್ತಾಂತವಿದೆ. ಇವೆರಡರಲ್ಲಿಯೂ ಆಳಿದ ದೊರೆಯ ಪ್ರೇತ ಕಾಣಿಸಿಕೊಂಡು ತನ್ನ ದುರ್ಮರಣ ವೃತ್ತಾಂತವನ್ನು ತನ್ನ ಮಗನಿಗೆ ತಿಳಿಸಿ ಸಂಬಂಧಪಟ್ಟ ಅಪರಾಧಿಗಳನ್ನು ಶಿಕ್ಷಿಸಿ ಸೇಡು ತೀರಿಸಿಕೊಳ್ಳಬೇಕು ಎಂದು ಹೇಳುವ ಪ್ರಸಂಗವಿದೆ. ಮುಂದೆ ಎರಡೂ ನಾಟಕ ದೃಶ್ಯಗಳಲ್ಲಿ ಹಬ್ಬಿ ಹರಿಯುವುದು ಬೇರೆಬೇರೆಯೆ ಆಗಿದೆ. ಮೂಲಕೃತಿಯಲ್ಲಿ 'ಹ್ಯಾಮ್ಲೆಟ್'ನ ಅರೆಹುಚ್ಚು ಅವನ ಕೊನೆಯನ್ನು ಬೇರೆಯ ರೀತಿಯಲ್ಲಿ ಕಾಣಿಸಿದೆ. ಮೂಲದಲ್ಲಿ ಬರುವ ಅಂತರ್ನಾಟಕ ಇಲ್ಲಿ 'ರಕ್ತಾಕ್ಷಿ'ಯಲ್ಲಿ ಇಲ್ಲ. 'ರಕ್ತಾಕ್ಷಿ'ಯಲ್ಲಿ ಬರುವ ತೃಣಾನಂದ ಸ್ವಾಮಿಗಳ ಪ್ರಸಂಗ ಮೂಲದಲ್ಲಿ ಇಲ್ಲ. ರುದ್ರಾಂಬೆ 'ರಕ್ತಾಕ್ಷಿ'ಯಾದ ಮೇಲೆ ನಡೆಯುವ ಮುಂದಿನ ಘಟನೆಗಳು ಕುವೆಂಪುವಿನ ಅದ್ಭುತ ಸೃಷ್ಟಿ. ಕುವೆಂಪು ಷೇಕ್ಸ್‌ಪಿಯರನನ್ನು ಓದಿದ್ದಾರೆ ಎಂಬುದು ಸುಸ್ಪಷ್ಟ. ಆ ಕವಿಯ ವಾಕ್ಯಗಳು 'ರಕ್ತಾಕ್ಷಿ'ಯಲ್ಲಿ ಬೇಕಾದ ಹಾಗೆ ತಮ್ಮ ಛಾಯೆ ಬೀರಿವೆ ಎಂಬುದೂ ನಿಜ. ಆದರೆ ಅಕ್ಷರಕ್ಷರವಾಗಿ ಪಂಕ್ತಿಪಂಕ್ತಿಯಾಗಿ ಎರಡೂ ನಾಟಕಗಳಲ್ಲಿ ಸಾವಧಾನವಾಗಿ ಪರಿಶೀಲಿಸಿದರೆ ಕುವೆಂಪುವಿನದು ಸ್ವಯಪ್ರತಿಭೆಯ ಗಂಭೀರ ನಾಟಕ ಎನ್ನುವುದು ನಿಜ

ಎನ್ನುವುದು ನನ್ನ ಎಣಿಕೆ. ಎಲ್ಲಿಯ ಒಫೀಲಿಯ? ಎಲ್ಲಿಯ ರುದ್ರಾಂಬೆ? ಎಲ್ಲಿಯ ಪೊಲೋನಿಯಸ್? ಎಲ್ಲಿಯ ಲಿಂಗಣ್ಣ ಮಂತ್ರಿ?

ಹೀಗಿರುವಾಗ 'ರಕ್ತಾಕ್ಷಿ' 'ಹ್ಯಾಮ್ಲೆಟ್'ನ ಅನುವಾದ ಎಂದಾಗಲಿ ರೂಪಾಂತರ ಎಂದಾಗಲಿ ಹೇಳುವುದರಲ್ಲಿ ಅರ್ಥವಿದೆಯೆ?"

ಶೂದ್ರ ತಪಸ್ವಿಯುನ್ನು ವಿವರಪೂರ್ಣವಾಗಿ ಕಟ್ಟಿಕೊಟ್ಟ ಮೇಲೆ ಕಡೆಯಲ್ಲಿ "ಪುರಾಣಗಳೆಂದರೆ ಸೂಕ್ಷ್ಮತರವಾದ ನಿತ್ಯ ಸತ್ಯಗಳಿಗೆ ಮಾನವಮತಿ ಕೆತ್ತಿರುವ ಸ್ಥೂಲವೂ ಸದೋಷವೂ ಆದ ಕಥಾಪ್ರತಿಮೆಗಳು. ಆದ್ದರಿಂದ ನಿತ್ಯ ಸತ್ಯಗಳಿಗೆ ಭಂಗ ಬಾರದಂತೆ ಆ ಕಥಾಪ್ರತಿಮೆಗಳನ್ನು ಆಯಾ ಕಾಲದ ಮನೋಧರ್ಮಕ್ಕೆ ಅನುಗುಣವಾಗಿ ತಮ್ಮ ತಮ್ಮ ಶಕ್ತಿಸಂಸ್ಕಾರ, ಧೈರ್ಯ ದರ್ಶನಗಳ ಅಭಿವ್ಯಕ್ತಿಗೆ ಅನುಕೂಲವಾಗುವಂತೆ ಕವಿಗಳು ಮಾರ್ಪಡಿಸಿಕೊಂಡು ಸಾಹಿತ್ಯಸೃಷ್ಟಿ ಮಾಡುವುದು ಅತ್ಯಂತ ಅವಶ್ಯಕ ಎಂದು ಒತ್ತಿ ಹೇಳಬಯಸುತ್ತೇನೆ" (ಪು.128)

'ರಸಋಷಿ'ಯ ನಾಲ್ಕನೆಯ ಸಂಪುಟ ಕುವೆಂಪು ಅವರ ವಿಚಾರ ವಿಮರ್ಶೆಯ ಸಮಗ್ರ ಬರಹಗಳ ಸಮೀಕ್ಷೆಗೆ ಮೀಸಲಾಗಿದೆ. ಇದರಲ್ಲಿ ಲೇಖಕರು ಕುವೆಂಪು ಅವರ ವೈಚಾರಿಕ ಲೇಖನಗಳ ಅಂತಃಸತ್ತ್ವವನ್ನು ಹಿಡಿದುಕೊಟ್ಟಿರುವ ರೀತಿಯೇ ದಂಗುಬಡಿಸುವಂತಿದೆ. ವಿಸ್ತಾರವಾದ ಲೇಖನದ ಹೃದಯವನ್ನು ಸೆರೆಹಿಡಿದು, ಅಗತ್ಯವಿದ್ದಲ್ಲಿ ಕವಿಯ ಮಾತುಗಳನ್ನೇ ಬಳಸಿ, ಉಪಶೀರ್ಷಿಕೆಗಳನ್ನು ಕೊಟ್ಟು ಮನವರಿಕೆ ಮಾಡಿಕೊಡುವ ರೀತಿಯೇ ಅಸದೃಶ. ಉದಾಹರಣೆಗೆ, "ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ" ಎಂಬ ಐವತ್ತು ಪುಟಗಳಷ್ಟು ವಿಸ್ತಾರವಾದ ಲೇಖನದಲ್ಲಿ ಕುವೆಂಪು ಪ್ರಸ್ತಾಪಿಸಿರುವ ಪ್ರಮುಖ ವಿಚಾರಗಳನ್ನು 'ಪುರೋಹಿತಶಾಹಿ', 'ಹಳೆಯ ಕಾವ್ಯಗಳನ್ನು ಗ್ರಹಿಸಬೇಕಾದ ಕ್ರಮ'; ಬಸವಲಿಂಗಪ್ಪನವರು ಮಂತ್ರಿಪದವಿ ಕಳೆದುಕೊಳ್ಳಲು ಕಾರಣವಾದ ಬೂಸಾ ಸಾಹಿತ್ಯದ ವಿಚಾರ ಎಂದು ಗುರುತಿಸಿ, ಪುರೋಹಿತಶಾಹಿ ಎಂದರೆ ಕೇವಲ ಬ್ರಾಹ್ಮಣವರ್ಗದವರಿಗೆ ಸೀಮಿತವಾಗುವುದಿಲ್ಲ. ಜೈನ, ಬುದ್ಧ, ಕ್ರಿಶ್ಚಿಯನ್ ಎಲ್ಲ ಮತದವರಲ್ಲೂ ಪುರೋಹಿತಶಾಹಿ ಇದೆ ಎಂದು ಹೇಳಿರುವುದು. ಹಳೆಯ ಸಾಹಿತ್ಯವನ್ನು ಸಾರಾಸಗಟಾಗಿ ತಿರಸ್ಕರಿಸದೆ ಪ್ರತಿಮಾ ದೃಷ್ಟಿಯಿಂದ ಓದಿ, ಹಳೆಯ ವಿಚಾರಗಳನ್ನು ಹೊಸ ರೀತಿಯಲ್ಲಿ ಮುಂದಿಡಬೇಕು ಎಂದು ಹೇಳಿರುವುದು, ಪ್ರಪಂಚದ ಎಲ್ಲ ಭಾಷೆಗಳಲ್ಲಿ ಮುಕ್ಕಾಲು ಪಾಲು ಇರುವುದು ಬೂಸಾ ಸಾಹಿತ್ಯವೇ ಎಂದು ಹೇಳಿ ಉಪನಿಷತ್ತಿನ ಹಿರಿಮೆ ಅರ್ಥಮಾಡಿಕೊಳ್ಳದೆ, ಮತಮೌಢ್ಯಗಳಲ್ಲಿ ಮುಳುಗಿರುವುದು, ಅದರಿಂದಾದ ಅನಾಹುತಗಳು, ಪುರೋಹಿತಶಾಹಿಯನ್ನು ನಾಶಮಾಡಲು ತಲೆಗೆ ಗುಂಡಿಟ್ಟು ಹೊಡೆಯಬೇಕು; ಅಂದರೆ ನಿಮ್ಮ ತಲೆಗೆ ಗುಂಡಿಟ್ಟುಕೊಳ್ಳಬೇಕು, ನೀವು ವಿಚಾರವಾದಿಗಳಾಗಬೇಕು ಎಂಬ ಯಾವ ಪ್ರಮುಖ ಅಂಶಗಳನ್ನೂ ಬಿಡದೆ ಕೇವಲ ಮೂರೂವರೆ ಪುಟಗಳಲ್ಲಿ ಹಿಡಿದಿರಿಸಿಕೊಟ್ಟಿದ್ದಾರೆ.

'ಕಾವ್ಯವಿಹಾರ', 'ವಿಭೂತಿಪೂಜೆ', 'ತಪೋನಂದನ', 'ದ್ರೌಪದಿಯ ಶ್ರೀಮುಡಿ', 'ರಸೋವೈಸಃ' ಮುಂತಾದ ಕಾವ್ಯವಿಮರ್ಶೆ ಮತ್ತು ಮೀಮಾಂಸೆಯ ಲೇಖನಗಳ ತಿರುಳನ್ನು ಅಂದರೆ ಸಾರಸಮಸ್ತವನ್ನೂ ಅತ್ಯಂತ ಸಂಗ್ರಹವಾಗಿ ಜಾಣ್ಮೆಯಿಂದ ಹಿಡಿದಿರಿಸಿದ್ದಾರೆ. ಇದು ಲೇಖಕರ, ವಿಚಾರಗ್ರಹಿಕೆಗಳ ಸೂಕ್ಷ್ಮತೆ ಮತ್ತು ಬರಹದ ಮೇಲಿನ ಅವರ ಹಿಡಿತಕ್ಕೆ ಉತ್ತಮ ನಿದರ್ಶನವಾಗಿದೆ.

'ರಸಋಷಿ'ಯ ಐದನೇ ಹಾಗೂ ಕೊನೆಯ ಭಾಗದಲ್ಲಿ ಕುವೆಂಪು ಅವರ ಸಮಗ್ರ ಗದ್ಯ ಬರಹಗಳನ್ನೂ ಆತ್ಮಕಥೆ, ಜೀವನ ಚರಿತ್ರೆ, ಕಥೆ ಮತ್ತು ಎರಡು ಮಹಾ ಕಾದಂಬರಿಗಳೂ

ಸೇರಿದಂತೆ ಅತ್ಯಂತ ಶ್ರಮ ವಹಿಸಿ ಹತ್ತಿರ ಹತ್ತಿರ ಐದುನೂರು ಪುಟಗಳಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡಿತಿ' ಎರಡೂ ಕುವೆಂಪು ಅವರ ಮಹಾಕಾದಂಬರಿಗಳು. 900 ಪುಟಗಳ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು 248 ಪುಟಗಳಿಗೆ ಭಟ್ಟಿಯಿಳಿಸಿ ಕೊಟ್ಟಿದ್ದಾರೆ. ಅದೇ ಕಾನೂರು ಹೆಗ್ಗಡಿತಿಯನ್ನು ಸುಮಾರು 80 ಪುಟಗಳಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. 'ಮದುಮಗಳು' ಕಾದಂಬರಿ 'ವಿವರಗಳಲ್ಲಿ ಸೊಕ್ಕಿ ಬಿಟ್ಟಿದೆ', 'ಇದಕ್ಕೊಂದು ಕೇಂದ್ರವಿಲ್ಲ' ಇತ್ಯಾದಿಯಾಗಿ, ವಿಮರ್ಶಕರು ಅಭಿಪ್ರಾಯಪಟ್ಟಿರುವುದುಂಟು. ಆದರೆ, ಕಾದಂಬರಿಯ ಕೇಂದ್ರ ಕಥಾನಕದ ಜಾಡು ಹಿಡಿದಂತೆ ಎಂಟು ಶೀರ್ಷಿಕೆಗಳ ಅಡಿಯಲ್ಲಿ ತುಂಬ ಚೊಕ್ಕವಾಗಿ ಕಥೆಯನ್ನು ಕಥಿಸಿದ್ದಾರೆ. ಜೊತೆಗೆ ಅಲ್ಲಲ್ಲಿ ಸನ್ನಿವೇಶ, ಸಂದರ್ಭಗಳನ್ನು ಕುರಿತಂತೆ, ತಮ್ಮ ಪ್ರತಿಕ್ರಿಯೆ ಹಾಗೂ ಪಾತ್ರದ ಸ್ವಭಾವದ ಬಗ್ಗೆ ತಮ್ಮ ಅನಿಸಿಕೆಗಳನ್ನು ದಾಖಲು ಮಾಡುತ್ತಾ ಹೋಗಿದ್ದಾರೆ. ಉದಾಹರಣೆಗೆ "ತಂದೆ ಮಗಳಿಗೆ ನಡೆಯುವ ಮಾತುಕತೆಗಳಲ್ಲಿಯೂ ಹೆಗ್ಗಡೆಯವರ ಮಗಳ ಮೇಲಿನ ಪ್ರೇಮವೂ ಮಗನ ಮೇಲಿನ ತಿರಸ್ಕಾರವೂ ವ್ಯಕ್ತವಾಗುವುದನ್ನು ಕಾಣುತ್ತೇವೆ" (ಪು.9) "ಈ ಪ್ರಸಂಗದಲ್ಲಿ ಸುಬ್ಬಣ್ಣ ಹೆಗ್ಗಡೆ, ಜಿಪುಣ, ಇನ್ನೊಬ್ಬರ ಏಳಿಗೆ ಸಹಿಸಲಾರದವನು, ತಿಮ್ಮಪ್ಪ ಹೆಗ್ಗಡೆ ಮೇಲೆ ತಾತ್ಸಾರವುಳ್ಳವನು, ಮಂಜಮ್ಮನ ವಿಷಯದಲ್ಲಿ ಹೆಚ್ಚಿನ ಆದರವುಳ್ಳವನು; ಕೋಳಿ, ಹಂದಿ, ಕುರಿ ಮುಂತಾದ ಪ್ರಾಣಿಗಳ ಸಾಕಣೆಯಲ್ಲಿ ಆಸಕ್ತನಾದವನು. ಸಾಹುಕಾರನಾದರೂ ವ್ಯವಹಾರದಲ್ಲಿ ಬಹಳ ಜಿಗುಟು ಸ್ವಭಾವದವನು ಮುಂತಾದ ಗುಣವಿಶೇಷಗಳೆಲ್ಲ ಕಾಣುತ್ತವೆ."

"ದೊಡ್ಡವರ ಮನಸ್ಸು ದಾಯಾದಿ ಮತ್ಸರದಿಂದ ಹೋರಾಡುತ್ತಿದ್ದರೂ ಮಕ್ಕಳ ಮನಸ್ಸು ಎಷ್ಟು ನಿರ್ವ್ಯಾಜ ಪ್ರೇಮದಿಂದ ನಿರ್ಮಲವಾಗಿರುತ್ತದೆ ಎದನ್ನುವುದಕ್ಕೆ ಈ ಸಂದರ್ಭ ಉದಾಹರಣೆಯಾಗಿದೆ... ದೊಡ್ಡವರ ಗುಣಸ್ವಭಾವಗಳ ಚಿತ್ರಣದಲ್ಲಿ ಕಾದಂಬರಿಕಾರರು ಎಷ್ಟು ಶ್ರದ್ಧೆ ವಹಿಸಿದ್ದಾರೆಯೋ ಅಷ್ಟೇ ಶ್ರದ್ಧೆಯನ್ನು ಈ ಮಕ್ಕಳ ಗುಣ ಸ್ವಭಾವ ಚಿತ್ರಣದಲ್ಲಿಯೂ ವಹಿಸಿದ್ದಾರೆ" (ಪು.32) ಇವು ಪಾತ್ರ ಸ್ವಭಾವಗಳನ್ನು ತೆರೆದು ತೋರುವ ಸತ್ವಪೂರ್ಣ ವಿಮರ್ಶೆಯ ಮಾತುಗಳಾಗಿವೆ.

ಒಟ್ಟಾರೆ ಹೇಳಬೇಕೆಂದರೆ, ಪ್ರೊ. ಪರಮೇಶ್ವರಭಟ್ಟರು ತಮ್ಮ 'ರಸಋಷಿ'ಯ ಈ ಸಂಪುಟಗಳಲ್ಲಿ, ಕುವೆಂಪು ಅವರ ಸಾಹಿತ್ಯ, ಮಹಾರಣ್ಯದೊಳಗೆ ಪ್ರವೇಶಿಸಿ ಅದರ ಎತ್ತರ ಬಿತ್ತರಗಳನ್ನು, ಬೃಹತ್ತು ಮಹತ್ತುಗಳನ್ನು ಕಂಡುಕೊಳ್ಳಬೇಕೆಂಬ, ಅದರ ಸೌಂದರ್ಯ ಸಂಪತ್ತನ್ನು ಆಸ್ವಾದಿಸಬೇಕೆಂಬ ಇಚ್ಛೆಯುಳ್ಳ, ಆದರೆ ದಾರಿ ತಪ್ಪಿಬಿಡಬಹುದೆಂದು ಅರಣ್ಯ ಪ್ರವೇಶಿಸಲೇ ಹೆದರಿ, ಹಿಂಜರಿಯುವ ಸಾಮಾನ್ಯ ಸಾಹಿತ್ಯಾಸಕ್ತರಿಗೆ ಅವರು ನಿರಾತಂಕವಾಗಿ ಸಾಗಿಹೋಗಲು ಅನುಕೂಲಕರವಾದ ಒಳದಾರಿಗಳನ್ನು ನಿರ್ಮಿಸಿರುವುದೇ ಅಲ್ಲದೆ ಅಲ್ಲಲ್ಲಿ ಕೈ ದೀವಿಗೆಗಳನ್ನೂ ಅಳವಡಿಸಿದ್ದಾರೆ. ಇದೊಂದು ಪರಿಶ್ರಮ ಪೂರ್ವಕವಾದ, ಆದರೆ ಪಥದರ್ಶಕವಾದ ಕಾರ್ಯ.

6. ಗಾದೆಗಳು ಮತ್ತು ಒಗಟುಗಳು

'ಮಂಥಾನ' ಎಂಬುದು ಎಸ್.ವಿ.ಪಿ ಅವರ ಏಳುನೂರು ಸ್ವತಂತ್ರ ಗಾದೆಗಳ ಸಂಕಲನ. ಗಾದೆಗಳು ಮತ್ತು ಒಗಟುಗಳು, ಸಮೂಹ ಸೃಷ್ಟಿಯೆಂದೇ ಸಾಮಾನ್ಯವಾಗಿ ತಿಳಿಯಲಾಗಿದೆ. ಬಹುಶಃ ಒಬ್ಬನ ಅನುಭವ, ವಿಚಾರಧಾರೆ, ಜಾಣ ಮಾತು, ಗಾದೆಗಳಲ್ಲಿ ಸಾಮೂಹಿಕ

ಸೃಷ್ಟಿಯಾಗಿ ಮಾರ್ಪಡಬಹುದು. ಗಾದೆಗಳು ಲೋಕಾನುಭವದ ಮಂಥನದಿಂದ ಮೂಡಿಬಂದವು. ಆದ್ದರಿಂದಲೇ ಅವು ಹೆಚ್ಚು ಬೆಲೆಯುಳ್ಳವು. "ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ" ಎಂಬ ಗಾದೆಯ ಹಿಂದಿರುವ ಅರ್ಥವಾದರೂ ಕೇವಲ ಬುದ್ಧಿ ಅಥವಾ ಮಸ್ತಿಷ್ಕಜನ್ಯ ಜ್ಞಾನಕ್ಕಿಂತ ಲೋಕಾನುಭವದಿಂದ ಹೊಮ್ಮಿದ ಗಾದೆ ಹೆಚ್ಚು ಪ್ರಮಾಣಭೂತವಾದುದು ಎಂದು. ಆದರೆ ಪ್ರೊ. ಪರಮೇಶ್ವರಭಟ್ಟರಾದರೋ ನೂರಾರು ಗಾದೆಗಳನ್ನು ಒಬ್ಬ ವ್ಯಕ್ತಿಯಾಗಿ ಸೃಷ್ಟಿಸಿ, ಗಾದೆಗಳು ಸಮೂಹ ಸೃಷ್ಟಿಯೆಂಬ ಮಾತನ್ನು ಸುಳ್ಳುಮಾಡಿದ್ದಾರೆ. ಗಾದೆಗಳಲ್ಲಿ ಉಪಮೆ, ಸಾಮತಿ ದೃಷ್ಟಾಂತಗಳು ಇರುತ್ತವೆ. ಕೆಲವೊಮ್ಮೆ ರೂಪಕಗಳೂ ಇರಬಹುದುದು. ಆದರೆ ಎಲ್ಲವೂ ಸಂಕ್ಷಿಪ್ತವೂ ಅರ್ಥಗರ್ಭಿತವೂ ಆಗಿ ಓದುಗರನ್ನು ರಂಜಿಸಿದಷ್ಟಕ್ಕೆ ವಿರಮಿಸದೆ ವಿಚಾರಮಂಥನಕ್ಕೂ ಹಚ್ಚುತ್ತವೆ. ಎಸ್.ವಿ.ಪಿ. ಅವರು ನಾಲ್ಕು ಸಾಲಿನ ಸಾಂಗತ್ಯ, ಮೂರು ಸಾಲಿನ ತ್ರಿಪದಿ, ಎರಡು ಸಾಲಿನ ಏಳೆಗಳ ನಂತರ ಮುಂದೇನು ಎಂಬ ಪ್ರಶ್ನೆಗೆ ಉತ್ತರವೋ ಎಂಬಂತೆ ಒಂದು ಸಾಲಿನ ಗಾದೆ ರಚಿಸಿದ್ದಾರೆ. ಎಸ್.ವಿ. ಪರಮೇಶ್ವರಭಟ್ಟರ ಮಾತಿನಲ್ಲಿ– "ಅಡಕವಾಗಿ, ನೇರವಾಗಿ, ಸರಳವಾಗಿ, ಸ್ವಾರಸ್ಯವಾಗಿ, ಸಾರವತ್ತಾಗಿ ಸಹಜವಾಗಿ, ಸುಂದರವಾಗಿ, ಒಂದು ನೀತಿಯನ್ನೋ, ಐತಿಹ್ಯವನ್ನೋ, ಅನುಭವ ವಿಶೇಷವನ್ನೋ ಒಂದು ತತ್ವವಿವೇಚನೆಯನ್ನೋ ಹೇಳುವ ಈ ಮುಕ್ತಕೋಕ್ತಿಗಳನ್ನು ಏಕಘನ ಪಿಂಡವೆಂಬಂತಿರುವ, ಈ ಗಾದೆಗಳನ್ನು ಒಂದು ಸಾಲಿನ ಕವನವೆಂದರೆ ತಪ್ಪಾದೀತೆ?"[29ಬ] ಉದಾಹರಣೆಗೆ, 1. ಕಡ್ಡಿ ಗೀರದೆ ಬುಡ್ಡಿ ಹೊತ್ತೀತೆ 2. ಕೈ ಚಾಚಿದರೆ ಆಕಾಶ ಸಿಕ್ಕೀತೇ? 3. ಗಣಿಕೆ ಕುಣಿದ ಹಾಗೆ ಗರತಿ ಕುಣಿದಾಳೆ 4. ಹಟ್ಟಿ ತುಂಬ ಹಸು, ಹಾಲು ಮಾತ್ರ ತುಸು. 5. ಹೋದಾಗ ಬಿಕ್ಕಿ ಬಿಕ್ಕಿ ಅತ್ತ, ಇದ್ದಾಗ ಕುಕ್ಕಿ ಕೊಂದ. 6. ಕಸಬು ಕಸಾಯಿ, ಹೆಸರು ದಯಾಮಯಿ 7. ಹಾಲಾಹಲ ಕುಡಿದವನಿಗೆ ಹಾಗಲಕಾಯಿ ಈಡೆ? 8. ಮಾಗಿ ಹಿಂದೆ, ಸುಗ್ಗಿ ಮುಂದೆ 9. ಹೆಣ್ಣು ಹೆತ್ತ ಮನೆ ಚೆಂದ, ಹಣ್ಣು ಹೊತ್ತ ಮರ ಚಂದ 10. ಕಾಡುದಾರೀಲಿ ಕಾರು ಕೆಟ್ಟ ಹಾಗೆ.

ಧ್ವನಿಶಕ್ತಿ, ಲೋಕಾನುಭವ, ಅದರಲ್ಲೂ ಹೊಸಕಾಲದ ಸಂಗತಿಗಳಿಗೆ ಸಂಬಂಧಿಸಿದ ಅನುಭವಗಳು, ಜೊತೆಗೆ ಒಂದು ಚುರುಕುತನವೂ ಸೇರಿದಾಗ ಗಾದೆ ಎಷ್ಟು ಸುಂದರವಾಗಬಲ್ಲುದು ಎಂಬುದಕ್ಕೆ ಇವು ನಿದರ್ಶನ. ಒಬ್ಬ ಕವಿ ಮನೋಧರ್ಮದ ವಿದ್ವಾಂಸ, ಪ್ರಾಧ್ಯಾಪಕ ಗಾದೆ ಕಟ್ಟಿದರೆ ಅವು ಎಷ್ಟು ಉತ್ಕೃಷ್ಟವಾಗಿರಬಹುದು ಎಂಬುದಕ್ಕೂ ಇವು ನಿದರ್ಶನ. ಇಷ್ಟೊಂದು ಸಂಖ್ಯೆಯಲ್ಲಿ ಹೀಗೆ ಗಾದೆಗಳನ್ನು ರಚಿಸಿ, ಪುಸ್ತಕರೂಪದಲ್ಲಿ ಪ್ರಕಟಿಸಿದ ದಾಖಲೆಯೂ ಎಸ್.ವಿ.ಪಿ. ಅವರದು ಮಾತ್ರ. ಇದಲ್ಲದೆ 'ನೆನಪಿಗೆ ಬಂದ ಗಾದೆಗಳು' ಎಂಬ ಶೀರ್ಷಿಕೆಯಲ್ಲಿ ಈಗಾಗಲೇ ಜನಬಳಕೆಯಲ್ಲಿರುವ, ಅಥವಾ ಒಮ್ಮೆ ಜನ ಬಳಕೆಯಲ್ಲಿದ್ದು ಸದ್ಯ ಮರೆವಿಗೆ ಸಂದಿರುವ 350 ಗಾದೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಭಟ್ಟರು ಸ್ವತಂತ್ರವಾಗಿ ಒಗಟುಗಳನ್ನು ಕೂಡ ಕಟ್ಟಿದ್ದಾರೆ. ಇವು ಸಮಸ್ಯೆಯನ್ನು ಮುಂದೊಡ್ಡುವ, ಅತ್ಯಂತ ಚಾತುರ್ಯ, ಚುರುಕುತನದಿಂದ ಕೂಡಿದ ನುಡಿರಚನೆಗಳು. ಇವುಗಳಲ್ಲೂ ಪ್ರಾಸ ಹಾಗೂ ಒಂದು ಬಗೆಯ ಸಮತೋಲನವಿದ್ದು ರಚನೆಕಾರರ ಲೋಕಜ್ಞಾನ, ಜಾಣ್ಮೆಗಳನ್ನು ತೋರುತ್ತವೆ. **"ಕಣ್ಣುಮುಚ್ಚಾಲೆ"** ಎಂಬ ಶೀರ್ಷಿಕೆಯಲ್ಲಿ 485 ಒಗಟುಗಳ ಸಣ್ಣ ಪುಸ್ತಿಕೆಯನ್ನು ಹೊರತಂದಿದ್ದಾರೆ. ಉದಾ:

1. ಮುಡಿಯಲಾಗದ ಹೂವು, ಕುಡಿಯಲಾಗದ ಹಾಲು (ನಕ್ಷತ್ರ, ತಿಂಗಳು)
2. ಹಗಲಾದರೆ ಕಣ್ಣುಮುಚ್ಚಿಕೊಂಡು ಹೋಗುತ್ತೆ. ಇರುಳಾದರೆ ಕಣ್ಣು ಬಿಟ್ಟುಕೊಂಡು ಹೋಗುತ್ತೆ (ಲಾರಿ)

3. ತೊಟ್ಟಿಲಿನ ಒಳಗಿನ ಗಡಿಯಾರ, ಚಿಟ್ಟನೆ ಚೀರೋ ಗಡಿಯಾರ (ಮಗು)
4. ಕೈ ಹಾಕಿದರೆ ಬಾಯಿ ಬಿಡುತ್ತಾನೆ (ಬೀಗ)
5. ಬಾಗಲಾರದ ಬಗ್ಗಲಾರದ ಗಂಡನ ಕೊಡೆ ಬಾಗಿ ಬಗ್ಗಿ ತಬ್ಬಿಕೊಂಡ ಹೆಂಡತಿ ನೋಡಿ. (ಮರ ಬಳ್ಳಿ)
6. ಬಲೆ ಒಳಗೆ ಬೇಟೆಗಾರ, ಬಲೆ ಹೊರಗೆ ಬೇಟೆ (ಸೊಳ್ಳೆ ಪರದೆ, ನಿದ್ರಿಸುವ ವ್ಯಕ್ತಿ, ಸೊಳ್ಳೆ)
7. ಅಮ್ಮನ ರೈಲು ನಿಂತೇ ಇಲ್ಲ. ಪಯಣಿಗರೆಲ್ಲ ರೈಲಿನಲ್ಲೇ ಹುಟ್ಟುತ್ತಾರೆ, ರೈಲಿನಲ್ಲೇ ಸಾಯುತ್ತಾರೆ. (ಸುತ್ತುವ ಭೂಮಿ, ಜನ)

ಬದಲಾದ ಕಾಲಕ್ಕೆ ತಕ್ಕಂತೆ, ಹೊಸಕಾಲದ ಸಮಾಜದ ವಸ್ತು ಮತ್ತು ಸಂಗತಿಗಳನ್ನು ಇವು ಒಳಗೊಂಡಿವೆ.

7. ಸಂಪಾದಿತ ಕೃತಿಗಳು

ಶಿವಮೊಗ್ಗದಿಂದ ಮೈಸೂರಿಗೆ ಬಂದ ಐವತ್ತರ ದಶಕದಲ್ಲಿ ಭಟ್ಟರು ಮಾಡಿದ ಒಂದು ಮಹತ್ವದ ಕಾರ್ಯವೆಂದರೆ ಮುದ್ದಣನ **'ಅದ್ಭುತ ರಾಮಾಯಣ'** ಮತ್ತು **'ಶ್ರೀ ರಾಮಪಟ್ಟಾಭಿಷೇಕ'** ಕೃತಿಗಳನ್ನು ವಿಸ್ತಾರವಾದ ಪೀಠಿಕೆ ಮತ್ತು ಅರ್ಥಕೋಶಗಳೊಂದಿಗೆ ಸಂಪಾದಿಸಿದ್ದು.

ಹೊಸ ಸಾಹಿತ್ಯದ ಮಂಗೋಳಿ ಎಂದೇ ಹೆಸರಾದ ಮುದ್ದಣ ಕಾವ್ಯನಾಮದ ನಂದಳಿಕೆ ಲಕ್ಷ್ಮೀನಾರಣಪ್ಪ 19ನೆಯ ಶತಮಾನದ ಕೊನೆಯಲ್ಲಿ ಹುಟ್ಟಿ (1870) ಇಪ್ಪತ್ತನೇ ಶತಮಾನದ ಪ್ರಾರಂಭದ ವರ್ಷ (1901) ತನ್ನ ಜೀವನ ವ್ಯಾಪಾರವನ್ನು ಮುಗಿಸಿದ ಕವಿಯಾದರೂ ಅವನ ವೈಯಕ್ತಿಕ ವಿವರಗಳು ಬೆಳಕಿಗೆ ಬಂದದ್ದು ತಡವಾಗಿಯೇ. ತನ್ನ ಹೆಸರನ್ನು ಮುಚ್ಚಿಟ್ಟು ಯಾರೋ ಪ್ರಾಚೀನ ಕವಿ ಮುದ್ದಣನೆಂಬುವನು ಈಗ ತನ್ನ ಹೆಸರನಲ್ಲಿರುವ 'ಅದ್ಭುತ ರಾಮಾಯಣ', 'ಶ್ರೀರಾಮಪಟ್ಟಾಭಿಷೇಕ' ಮತ್ತು 'ರಾಮಾಶ್ವಮೇಧ'ಗಳನ್ನು ಬರೆದವನೆಂದು ಹೇಳಿದ್ದರಿಂದ, ಇವುಗಳ ಕರ್ತೃತ್ವವೂ ಸ್ವಲ್ಪ ಕಾಲ ವಿವಾದಾಸ್ಪದವಾಗಿಯೇ ಇದ್ದು. ಪಂಜೆಯವರು, ಪೈಗಳವರು, ಬೆನಗಲ್ ರಾಮರಾಯರು ಮತ್ತು ಹುರಳಿ ಭೀಮರಾಯರು, ಮುದ್ದಣ ಕಾವ್ಯನಾಮದ ವ್ಯಕ್ತಿ ನಂದಳಿಕೆ ಲಕ್ಷ್ಮೀನಾರಾಯಣಪ್ಪನೇ ಎಂಬ ಖಚಿತಪಡಿಸಿದ ಮೇಲೆಯೇ ಮುದ್ದಣನ ವೈಯಕ್ತಿಕ ವಿವರಗಳು ಬೆಳಕಿಗೆ ಬಂದದ್ದು. ಪ್ರೊ. ಭಟ್ಟರು ಇವನ್ನೆಲ್ಲಾ ಕಲೆಹಾಕಿ ಮುದ್ದಣ ಕವಿಯ ವ್ಯಕ್ತಿ ಜೀವನದ ವಿವರಗಳನ್ನೆಲ್ಲಾ ಬಾಲ್ಯ, ವಿದ್ಯಾಭ್ಯಾಸ, ಯಕ್ಷಗಾನದಲ್ಲಿಯ ಅವನ ಆಸಕ್ತಿ, ಪರಿಶ್ರಮ, ಟ್ರೈನಿಂಗ್ ಸ್ಕೂಲಿನಲ್ಲಿ ಕಲಿತು, ಉಡುಪಿಯ ಪ್ರೌಢಶಾಲೆಯಲ್ಲಿ ವ್ಯಾಯಾಮಶಿಕ್ಷಕನಾಗಿ ನೆಲೆ ನಿಂತದ್ದು. ಮಳಲಿ ಸುಬ್ಬರಾಯರ ಪರಿಚಯ, ಅವರೊಡನೆ ಹಳಗನ್ನಡ ಕಾವ್ಯಗಳು, ಸಂಸ್ಕೃತಗಳನ್ನು ಅಭ್ಯಸಿಸಿದ್ದು, ಅವರ ನೆರವಿನಿಂದ ಯಕ್ಷಗಾನ ಕೃತಿಗಳನ್ನು ರಚಿಸಿದ್ದು, ಮೂಲ ಸಂಸ್ಕೃತ ಅದ್ಭುತ ರಾಮಾಯಣವನ್ನು ಮಳಲಿ ಸುಬ್ಬರಾಯರಲ್ಲಿ ಅಭ್ಯಾಸ ಮಾಡಿ, ಅದನ್ನು ಹಳಗನ್ನಡ ಗದ್ಯದಲ್ಲಿ ರಚಿಸಿದ ಸಂಗತಿ, ಮದುವೆ, ಮುಂದಿನ ವರ್ಷಗಳಲ್ಲಿ ವೆಂಕಟರಮಣ ಹೆಬ್ಬಾರರ ಪರಿಚಯವಾಗಿ 'ಶ್ರೀರಾಮ ಪಟ್ಟಾಭಿಷೇಕ'ವೆಂಬ ವಾರ್ಧಕ ಷಟ್ಪದಿಯ ಕಿರುಕಾವ್ಯ ರಚಿಸಿದ್ದು, ಮುಂದೆ ಗದ್ಯದಲ್ಲೇ ಬರೆಯುವುದು ಒಳಿತೆಂಬ ಅವರ ಸೂಚನೆಯ ಮೇರೆಗೆ

"ಶ್ರೀರಾಮಾಶ್ವಮೇಧ"ವನ್ನು ಹಳಗನ್ನಡ ಗದ್ಯದಲ್ಲಿ ರಚಿಸಿದ ವಿಚಾರ. ಅದು ಮೈಸೂರಿನ ಕಾವ್ಯಮಂಜರಿಯಲ್ಲಿ ಪ್ರಕಟವಾದ್ದು, ಮುದ್ದಣನ ಕೊನೆಗಾಲದ, ಬಡತನದ ದುರ್ಭರ ಬದುಕು. ಇವನ್ನೆಲ್ಲ ಎಳೆ ಎಳೆಯಾಗಿ ಕಟ್ಟಿಕೊಟ್ಟಿದ್ದಾರೆ.

ಇನ್ನು ಅದ್ಭುತ ರಾಮಾಯಣದ ವಿವರವಾದ ಹಾಗೂ ವಿಶ್ಲೇಷಣಾತ್ಮಕವಾದ 27 ಪುಟಗಳ ವಿಮರ್ಶೆ ಬರೆದಿದ್ದಾರೆ. ಇದರಲ್ಲಿ ಅವರು ಒಂದು ಸಾವಿರ ಶ್ಲೋಕಗಳು ಮತ್ತು ಇಪ್ಪತ್ತೇಳು ಸರ್ಗಗಳಿಂದ ಕೂಡಿರುವ ಮೂಲ ಸಂಸ್ಕೃತ ಅದ್ಭುತ ರಾಮಾಯಣವನ್ನು ತನ್ನ ಉದ್ದೇಶಕ್ಕನುಗುಣವಾಗಿ ನೀರಸವಾದ ಮತ ಧರ್ಮತತ್ತ್ವಗಳನ್ನು ಕುರಿತ ಸುದೀರ್ಘ ಉಪದೇಶಗಳು, ಅಡ್ಡದಾರಿಯ ಕವಲು ಕಥೆಗಳು ಮತ್ತು ಚರ್ವಿತ ಚರ್ವಣವೆಂದು ಕಂಡುಬಂದ ಭಾಗಗಳನ್ನು ಬಿಟ್ಟು ಮುಖ್ಯ ಕಥೆಯೊಂದರಲ್ಲೇ ನೆಟ್ಟದೃಷ್ಟಿಯುಳ್ಳವನಾಗಿ ಹದಿನಾರು ಆಶ್ವಾಸಗಳುಳ್ಳ 49 ಪುಟಗಳಿಗೆ ಭಟ್ಟಿ ಇಳಿಸಿಕೊಟ್ಟಿರುವ ಕವಿಯ ಸಂಗ್ರಹ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಮನಗಾಣಿಸಿಕೊಟ್ಟಿದ್ದಾರೆ. ಹಾಗೆ ತೋರಿಸಿಕೊಡುವ ವ್ಯತಿಕರದಲ್ಲಿ ಮೂಲ ಸಂಸ್ಕೃತ ರಾಮಾಯಣದ ಅಯಾ ಸರ್ಗದ ಭಾಗಗಳನ್ನು ಉಲ್ಲೇಖಿಸಿ, ಹೇಗೆಲ್ಲಾ ಸಂಕ್ಷೇಪಿಸಿದ್ದಾನೆಂಬುದನ್ನು ಆಧಾರಪೂರ್ವಕವಾಗಿ ತೋರಿಸಿ ಕೊಟ್ಟಿದ್ದಾರೆ. ಈ ಗದ್ಯಕಾವ್ಯದಲ್ಲಿ ಬರುವ ಕಾವ್ಯಯೋಗ್ಯವಾದ ವರ್ಣನೆಗಳ ಸೌಂದರ್ಯ, ಅದಕ್ಕಿಂತ ಹೆಚ್ಚಾಗಿ ಮುದ್ದಣನ ಗದ್ಯಶೈಲಿಯ ಪ್ರಮುಖ ಲಕ್ಷಣಗಳಾದ (1)ಹೊಸಗನ್ನಡದ ವಾಕ್ಯವಿನ್ಯಾಸದ ಬಗೆಬಗೆಯ ವಿಲಾಸಗಳು (2)ಅವನ ಶಬ್ದಾಲಂಕಾರ ಪ್ರಿಯತೆ (3)ತದ್ಭವ ಪ್ರಾಚುರ್ಯ, ಕೆಲವು ಕಡೆ ಅವುಗಳ ತಪ್ಪು ಬಳಕೆ ಆಗಿರುವುದನ್ನು, ಅಂಕಿತನಾಮಗಳಿಂದ ಅರ್ಥಪುಷ್ಟಿ ಒದಗಿ ಬಂದಿರುವುದನ್ನು ಕೂಡ ಹೇಳಿರುವುದು ವಿಮರ್ಶೆಯ ನಿರ್ದುಷ್ಟತೆಗೆ ನಿದರ್ಶನವಾಗಿದೆ. (4)ಸಂಸ್ಕೃತ ಸಮಾಸ ಪದಗಳಿಗೆ ಸಮಾನಾರ್ಥಕಗಳಾದ ಕನ್ನಡ ಪದಸೃಷ್ಟಿ (ಮಂದಮಾರುತ–ಕಿಱುವೆಲರ್, ಮಂದಸ್ಮಿತ>ಕಿಱುನಗೆ, ಆಕಾಶಗಂಗೆ>ಬಾಂಬೊಳ್ಚ, ಯಜ್ಞಸೂತ್ರ>ಜನ್ನದಾರ, ಪಕ್ಷಿರಥ>ಪಕ್ಕಿದೇರ ಇತ್ಯಾದಿ). ಒಂದೇ ಅಂಕಿತನಾಮಕ್ಕೆ ಬೇರೆ ಬೇರೆ ಅಂಕಿತಪದಗಳ ಬಳಕೆ. (6)ಸಂಸ್ಕೃತ ಪದಗಳ ಹದವರಿತ ಮಿಶ್ರಣ ಹಾಗೂ (7)ಲೋಕೋಕ್ತಿ ಮತ್ತು ನಾಡಗಾದೆಗಳ ಬಳಕೆ– ಇವುಗಳನ್ನೆಲ್ಲಾ ವಿವರವಾಗಿ ವಿಶ್ಲೇಷಿಸಿಕೊಟ್ಟಿದ್ದಾರೆ. ಒಟ್ಟಾರೆ ಹೇಳಬೇಕೆಂದರೆ ಅದ್ಭುತ ರಾಮಾಯಣದ ಅಧ್ಯಯನಕ್ಕೆ ಅಗತ್ಯವೆನಿಸಿದ ವಿದ್ವತ್ಪೂರ್ಣವೂ ಬೋಧಪ್ರದವೂ, ಉದ್ಬೋಧಕವೂ, ವಿವೇಚನಾತ್ಮಕವೂ ಆದ ಪೀಠಿಕೆಯ ಜೊತೆಗೆ ಕೊನೆಗೆ ಕಠಿಣ ಶಬ್ದಗಳ ಕೋಶವನ್ನು ರಚಿಸುವ ಮೂಲಕ ಸಂಪಾದಕನ ಹೊಣೆಗಾರಿಕೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದ್ದಾರೆ.

ಅದೇ ರೀತಿ ಮುದ್ದಣನ ಕಾವ್ಯಕೃತಿಯಾದ ಶ್ರೀ ರಾಮಪಟ್ಟಾಭಿಷೇಕಕ್ಕೆ ಬರೆದಿರುವ ಅಭ್ಯಾಸಪೂರ್ಣವಾದ ಪೀಠಿಕೆಯಲ್ಲಿ, ಕೃತಿ ಪರಿಚಯ ಭಾಗದಲ್ಲಿ ಕೃತಿಯ ಬಾಹ್ಯ ರೂಪರೇಖೆಗಳಾದ ಸಂಧಿಸಂಖ್ಯೆ, ಪದ್ಯಸಂಖ್ಯೆ ಇತ್ಯಾದಿಗಳನ್ನು ತಿಳಿಸಿ, ಪೀಠಿಕಾಸಂಧಿಯ ಪದ್ಯಗಳಲ್ಲಿ ವೆಂಕಟಕೃಷ್ಣ, ಕೃಷ್ಣ, ನಂದಿ, ಕೇಶವ, ರುದ್ರಭಟ್ಟ, ಷಡಕ್ಷರಿ ಮುಂತಾದ ಕನ್ನಡ ಕವಿಗಳನ್ನು ವ್ಯಾಸ, ವಾಲ್ಮೀಕಿ, ಜೈಮಿನಿ, ಪಿಂಗಳ, ಕಾಳಿದಾಸ, ಶೂದ್ರಕ- ಮೊದಲಾದ ಸಂಸ್ಕೃತ ಕವಿಗಳನ್ನು ಸ್ಮರಿಸಿರುವ ವಿಚಾರ ತಿಳಿಸಿದ್ದಾರೆ. ತನ್ನ ತಾಯಿ ಮಹಾಲಕ್ಷ್ಮಿಯ ಹೆಸರಿನಲ್ಲಿ– ಅನ್ಯ ಕರ್ತೃತ್ವದ ಸೋಗಿನಲ್ಲಿ ದೇವತಾಸ್ತುತಿ ಮಾಡಿರುವುದನ್ನು ಕೂಡ ಉಲ್ಲೇಖಿಸಿದ್ದಾರೆ.

ಅನಂತರ ಸುಮಾರು 22 ಪುಟಗಳಲ್ಲಿ ವಿಸ್ತಾರವಾದ ಕಾವ್ಯವಿಮರ್ಶೆ ಮಾಡಿದ್ದಾರೆ. ಅದರಲ್ಲಿ ಒಂದೊಂದೂ ಸಂಧಿಯ ವಿಷಯ, ಗದ್ಯದಲ್ಲಿ ಅವುಗಳ ಕಥಾನಿರೂಪಣೆ

ಇದನ್ನೆಲ್ಲಾ ಅಳವಡಿಸಿದ್ದಾರೆ. ತದನಂತರದಲ್ಲಿ ಮುದ್ದಣನ ವರ್ಣನಾ ಚಮತ್ಕಾರ, ಕಲ್ಪನೆಯ ನಾವೀನ್ಯ, ಪಾಂಡಿತ್ಯದ ಬಿಣ್ಪು, ಅಲಂಕಾರದ ಸೊಗಸು, ಶಬ್ದ ಚಿತ್ರಗಳ ಸ್ವಾರಸ್ಯ, ಉಕ್ತಿ ವೈಚಿತ್ರ್ಯ, ಕೌಶಲ, ಶಬ್ದಾಲಂಕಾರದ ಬೆಡಗು ಮುಂತಾದವುಗಳನ್ನು ಚರ್ಚಿಸಿದ್ದಾರೆ. ಮುದ್ದಣನ ವಿಶೇಷವಿರುವುದು ಭಾವಗಳನ್ನು ವಿಸ್ತರಿಸುವುದರಲ್ಲಿ, ಭಕ್ತಿಯ ಬಗೆಬಗೆಯ ಆರ್ದ್ರ ಅನುಭವ ವಿಶೇಷಗಳನ್ನು ಶಬ್ದಚಿತ್ರಗಳಲ್ಲಿ ಬಿಡಿಬಿಡಿಯಾಗಿ ವಿವರವಾಗಿ ಬಿಡಿಸಿಡುವುದರಲ್ಲಿದೆ ಎಂದು ಗುರುತಿಸಿದ್ದಾರೆ. ಕಾಳಿದಾಸನ ರಘುವಂಶದ 13ನೆಯ ಸರ್ಗ ಮತ್ತು ವಾಲ್ಮೀಕಿರಾಮಾಯಣದ ಯುದ್ಧಕಾಂಡದ ಕೊನೆಯ ಸರ್ಗಗಳಿಂದ ಅವನು ಪ್ರಭಾವಿತವಾಗಿರುವ ಬಗ್ಗೆ ಹಾಗೂ ಪದ್ಮಪುರಾಣದ ನೆರಳು ಬಿದ್ದಿರುವ ಬಗ್ಗೆ ಚರ್ಚಿಸಿದ್ದಾರೆ. ಈ ಕಾವ್ಯದ ಅಧ್ಯಯನಕ್ಕೆ ಅಗತ್ಯವಾದ ಶಬ್ದಕೋಶವನ್ನು ನೀಡಿರುವುದು ಕೂಡ ಈ ಗ್ರಂಥದ ಮೌಲ್ಯ ಹೆಚ್ಚಾಗಲು ಕಾರಣವಾಗಿದೆ.

ಅನುವಾದ

ಸಂಸ್ಕೃತದಿಂದ: ಕಾವ್ಯ-ನಾಟಕ ಸಂಪುಟಗಳು

ಎಸ್.ವಿ.ಪಿ. ಅವರ ಬಹಳ ದೊಡ್ಡ ಸಾಹಿತ್ಯ ಸಾಧನೆ ಎಂದರೆ ಸಂಸ್ಕೃತದಿಂದ ಮಾಡಿರುವ ವಿಪುಲವಾದ ಅನುವಾದಗಳು. ಇದು ಅವರ ಸೃಜನಶೀಲ ಸಾಹಿತ್ಯದಷ್ಟೇ ಅಥವಾ ಸರಿಯಾಗಿ ಹೇಳಬೇಕೆಂದರೆ ಅದಕ್ಕೂ ಒಂದು ಕೈ ಮೇಲು ಎನ್ನುವಂತಿದೆ. ಸಂಸ್ಕೃತದ ಖ್ಯಾತ ಕೃತಿಗಳನ್ನು ಅನುವಾದ ಮಾಡಿಕೊಂಡು ಬಂದಿರುವ ಸುದೀರ್ಘ ಪರಂಪರೆಯೇ ಕನ್ನಡದಲ್ಲಿ ಇದೆ. ಪಂಪಪೂರ್ವಯುಗದಲ್ಲಿದ್ದನೆಂದು ಹೇಳಲಾದ ಅಸಗನಿಂದ ಇದು ಪ್ರಾರಂಭವಾಯಿತೆನ್ನಬೇಕು. ಬಹುಶಃ ಅವನ ಅನುಪಲಬ್ಧ ಕೃತಿಯಾದ 'ಕರ್ನಾಟ ಕುಮಾರ ಸಂಭವ ಕಾವ್ಯ' ಕನ್ನಡದ ಮೊದಲನೇ ಅನುವಾದಿತ ಕೃತಿ ಎಂದು ಹೇಳಬಹುದು. ಅಂದಿನಿಂದ ಇಂದಿನವರೆಗೆ ಸಂಸ್ಕೃತದ ಉದ್ಧಕವಿಗಳಾದ ಕಾಳಿದಾಸ, ಭಾಸ, ಬಾಣ, ಭವಭೂತಿ, ಶ್ರೀಹರ್ಷ ಮುಂತಾದವರ ಕಾವ್ಯ ನಾಟಕಗಳಲ್ಲಿ ತಮಗೆ ಇಷ್ಟವಾದ ಒಂದೋ ಎರಡೋ ಕೃತಿಗಳನ್ನು ಕನ್ನಡ ಕವಿಗಳು ನಿರಂತರವಾಗಿ ಅನುವಾದ ಮಾಡಿಕೊಂಡು ಬರುತ್ತಲೇ ಇದ್ದಾರೆ. ಈ ನಿಟ್ಟಿನಲ್ಲಿ ಕೆಲವು ಕೃತಿಗಳ ಶ್ರೇಷ್ಠ ಅನುವಾದಗಳು ಬಂದಿರುವುದೂ ನಿಜವೇ. ಆದರೆ ಒಬ್ಬನೇ ವ್ಯಕ್ತಿ ಒಬ್ಬ ಕವಿಯ ಎಲ್ಲ ಕೃತಿಗಳನ್ನು ಏಕತ್ರ ಅನುವಾದ ಮಾಡಿದ ಉದಾಹರಣೆ ಅಪರೂಪವೆಂದೇ ಹೇಳಬೇಕು. ಅಂಥದರಲ್ಲಿ ಕಾಳಿದಾಸ, ಭಾಸ, ಭವಭೂತಿ, ಹರ್ಷ ಮೊದಲಾದ ಕವಿಶ್ರೇಷ್ಠರ ಸಮಗ್ರ ಕೃತಿಗಳನ್ನು ಒಬ್ಬನೇ ವ್ಯಕ್ತಿ ಅನುವಾದ ಮಾಡಿದ ಇನ್ನೊಂದು ಉದಾಹರಣೆ ಇಡೀ ಭಾರತದಲ್ಲಿಯೇ ಇಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಅವುಗಳ ಜೊತೆಗೆ, ಅಶ್ವಘೋಷನ **'ಬುದ್ಧಚರಿತೆ'** ಮಹಾಕಾವ್ಯ, ಜಯದೇವನ **'ಗೀತ ಗೋವಿಂದ'** ಸಂಸ್ಕೃತ ಮುಕ್ತಕ ಭಂಡಾರದ ಅನನ್ಯ ರತ್ನಗಳಾದ ಹಾಲನ **ಗಾಥಾ ಸಪ್ತಶತಿ**, ಅಮರುಕ ಕವಿಯ **ಅಮರು ಶತಕ**, ಭರ್ತೃಹರಿಯ **ಶತಕತ್ರಯ ಕಲ್ಯ** ಲಕ್ಷ್ಮೀನರಸಿಂಹ ಕವಿಯ **ಕವಿ ಕೌಮುದಿ** ಇವೆಲ್ಲವನ್ನೂ ಕನ್ನಡ ನುಡಿ ಸರಸ್ವತಿಗೆ ಕಾಣಿಕೆಯಾಗಿ ನೀಡಿದ್ದಾರೆಂದರೆ ಅದೊಂದು ಸಾರ್ವಕಾಲಿಕ ದಾಖಲೆಯೇ ಸರಿ. ಬಹುಶಃ ಇಷ್ಟೊಂದು ಕೃತಿಗಳನ್ನು ಒಬ್ಬರೇ ಅನುವಾದಿಸಿದ್ದಾರೆಂದರೆ ಯಾರೂ ನಂಬಲು ಸಾಧ್ಯವಿಲ್ಲ ಎನ್ನುವಂಥ ಸಾಧನೆ ಅವರದು. ಅನುವಾದ ಕ್ಷೇತ್ರದಲ್ಲಿನ ಅವರ ಈ ಸಾಧನೆಯ ಪರಿಚಯಕ್ಕೆ ಇದೀಗ ತೊಡಗಬಹುದು.

8. ಕನ್ನಡ ಕಾಳಿದಾಸ ಮಹಾ ಸಂಪುಟ

ಕಾಳಿದಾಸನ ಕೃತಿಗಳೆಲ್ಲವನ್ನೂ ಸಂಪೂರ್ಣವಾಗಿ ಅನುವಾದಿಸಲು ಸುಮಾರು ಇಪ್ಪತ್ತು ವರ್ಷ ತೆಗೆದುಕೊಂಡಿದ್ದಾರೆ. ಎರಡು ಮೂರು ವರ್ಷಗಳ ಅಂತರದಲ್ಲಿ ಇವು ಒಂದಾದ ಮೇಲೊಂದು ಪ್ರಕಟವಾಗುತ್ತ ಹೋದವು. ಅರವತ್ತರ ದಶಕದ ಮೊದಲಲ್ಲಿ (1963) ಕಾಳಿದಾಸನ ಸಮಗ್ರ ಕೃತಿಗಳ ಸಂಪುಟವನ್ನು ಮೊದಲಿಗೆ ಪ್ರಕಟಿಸಿದರು. ಆದರೆ ಮುಂದೆ ಮಂಗಳೂರಿಗೆ ಹೋದ ಮೇಲೆ 1972ರಲ್ಲಿ ಮೂಲ ಮತ್ತು ಅನುವಾದ ಕೃತಿಗಳು ಸೇರಿದಂತೆ ಕಾಳಿದಾಸನ ಸಮಸ್ತ ಕೃತಿಗಳ–**'ಕಾಳಿದಾಸ ಮಹಾ ಸಂಪುಟ'**ವನ್ನು ಪ್ರೊ..ಎಸ್.ವಿ.ಪಿ.ಯವರೇ ಪ್ರಕಟಿಸಿದರು. ಆ ಮೇಲಿನ **ಭಾಸ, ಭವಭೂತಿ, ಬುದ್ಧ ಚರಿತ** ಮತ್ತು **ಹರ್ಷ ಮಹಾಸಂಪುಟ**ಗಳನ್ನು ಸಂಕಲ್ಪ ಮಾಡಿದವರಂತೆ, 20 ವರ್ಷಗಳಲ್ಲಿ ಒಂದೇ ನಿಟ್ಟಿಗೆ ಒಂದಾದ ಮೇಲೊಂದರಂತೆ ಅನುವಾದಿಸಿ ತಾವೇ ಪ್ರಕಟಿಸಿದ ಸಾಹಸ (ದುಸ್ಸಾಹಸವೂ ಹೌದು!) ಅವರದು.

****

ಭಾರತೀಯ ಆರ್ಷೇಯ ಸಂಸ್ಕೃತಿಯ ಪ್ರಾಚೀನ ಪ್ರತಿನಿಧಿಗಳೆಂದರೆ ವಾಲ್ಮೀಕಿ, ವ್ಯಾಸ ಮತ್ತು ಕಾಳಿದಾಸ. ಅದರಲ್ಲೂ ಕಾಳಿದಾಸನು–"ಮರ್ತ್ಯದಲ್ಲಿ ಅಮರ್ತ್ಯವನ್ನು ಸವಿದ ಪ್ರತಿಭೆ" [ಕುವೆಂಪು ಮುನ್ನುಡಿ–ಕಾಳಿದಾಸ–ಮೈ.ವಿ.]. "ಕವಿಕುಲ ಗುರು"ವೆಂದೇ ಖ್ಯಾತನಾದ ಈ ಕವಿ, ಕಾವ್ಯ ನಾಟಕಗಳಲ್ಲಿ ತೋರಿರುವ ಪ್ರತಿಭೆಯನ್ನು ಮೆಚ್ಚದ ಸಹೃದಯರಿಲ್ಲ. ಕಾಲ, ದೇಶದ ಗಡಿಗಳನ್ನು ದಾಟಿ ಜಗತ್ತಿನ ಎಲ್ಲ ಸಾಹಿತ್ಯ ಪ್ರಿಯರಿಗೆ ಇಂದಿಗೂ ಕಾಳಿದಾಸನ ಕೃತಿಗಳು ಆಪ್ಯಾಯಮಾನವಾಗಿವೆ.

ನಮ್ಮ ದೇಶದ ಎಲ್ಲ ಕವಿಗಳ ಬಗ್ಗೆ ಇರುವ ಕಾಲ, ದೇಶ, ಕುರಿತ ಅನಿಶ್ಚಿತತೆಗಳು ಕಾಳಿದಾಸನ ಬಗೆಗೂ ಇವೆ. ಆದರೂ ಬಹುಜನ ವಿದ್ವಾಂಸರು ಅಭಿಪ್ರಾಯಪಟ್ಟಿರುವಂತೆ, ಕಾಳಿದಾಸನು ಕ್ರಿ.ಶ. 5ನೇ ಶತಮಾನದ ಕೊನೆಯಲ್ಲಿ ವಿಕ್ರಮನೆಂಬ ದೊಡ್ಡ ದೊರೆಯ ಆಶ್ರಯದಲ್ಲಿದ್ದುಕೊಂಡು ತನ್ನ ಕೃತಿಗಳನ್ನು ರಚಿಸಿದನು. ಅಂದರೆ ಕಾಳಿದಾಸನು ಭೋಗ ಪ್ರಧಾನವಾದ ಶ್ರೀಮಂತ ಕಾಲದಲ್ಲಿ ಸುಖಸಮೃದ್ಧಿಗಳ ಮಧ್ಯೆ ಬಾಳ್ವೆ ನಡೆಸಿದವನು. ಸಮೃದ್ಧವಾದ ಜೀವನಾನುಭವ, ಕಲ್ಪನಾವಿಲಾಸ, ಭಾವ ಶ್ರೀಮಂತಿಕೆ ಹಾಗೂ ನಾದಮಾಧುರ್ಯಗಳಿಗೆ ಹೆಸರಾದ ಕವಿ. ತನ್ನ ಉಪಮೆಗಳಿಗೆ ಹೆಸರಾದ ಈ ಕವಿಯನ್ನು ಪರಂಪರೆ "ಸರಸ್ವತಿಯ ವಿಲಾಸ" ಎಂದು ಕೊಂಡಾಡಿದೆ. ಅನೇಕ ಗ್ರಂಥಗಳನ್ನು ಬರೆದನೆಂಬ ಪ್ರತೀತಿ ಇದ್ದರೂ ಕಾಳಿದಾಸನ ಕೃತಿಗಳೆಂದು ವಿದ್ವಾಂಸರಿಂದ ಮಾನ್ಯಮಾಡಲ್ಪಟ್ಟ ಕೃತಿಗಳು ಏಳು – ಅವುಗಳೆಂದರೆ **ಋತುಸಂಹಾರ, ಮೇಘದೂತ**ಗಳೆಂಬ ಎರಡು ಖಂಡಕಾವ್ಯಗಳು, **ಕುಮಾರಸಂಭವ** ಮತ್ತು **ರಘುವಂಶ**ಗಳೆಂಬ ಎರಡು ಮಹಾಕಾವ್ಯಗಳು ಹಾಗೂ **ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ** ಮತ್ತು **ಅಭಿಜ್ಞಾನ ಶಾಕುಂತಲ** ಎಂಬ ಮೂರು ನಾಟಕಗಳು ಕಾಳಿದಾಸಕೃತವೆಂಬುದು ವಿದ್ವಾಂಸರ ತೀರ್ಮಾನ. ಇಲ್ಲಿ ವಿಕ್ರಮೋರ್ವಶೀಯವೊಂದನ್ನು ಹೊರತುಪಡಿಸಿ ಉಳಿದವನ್ನು ಪರಿಶೀಲಿಸಿದೆ.

****

"ಋತು ಸಂಹಾರ' ಕಾಳಿದಾಸನ ಕೃತಿ ಸಮುಚ್ಚಯದಲ್ಲಿ ಮೊದಲನೆಯದು. ಕಾಳಿದಾಸನ ಇತರ ಕೃತಿಗಳಿಗೆ ಹೋಲಿಸಿದರೆ ಇದರ ಕಾವ್ಯಗುಣ ಅಷ್ಟೇನೂ ಉತ್ಕೃಷ್ಟದ್ದಲ್ಲವಾದ ಕಾರಣ, ಕಾಳಿದಾಸನದಾಗಿರಲಿಕ್ಕಿಲ್ಲವೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರಾದರೂ

ವರ್ಧಿಷ್ಣುವಾದ ಕವಿ ಪ್ರತಿಭೆಯ ವಿಕಾಸದ ಆರಂಭಬಿಂದುವಿದೆಂದು ಹೇಳುತ್ತಾರೆ. ಯಾವ ಕಥಾಭಿತ್ತಿಯನ್ನೂ ಆಶ್ರಯಿಸದೆ, ಪ್ರಕೃತಿವರ್ಣನೆಯನ್ನೇ ಪ್ರಧಾನ ಉದ್ದೇಶವನ್ನಾಗಿ ಇಟ್ಟುಕೊಂಡು, ರಚಿಸಿದ ಕಾವ್ಯ ಋತುಸಂಹಾರ. ಋತುಸಂಹಾರವೆಂದರೆ, ಋತುಗಳನ್ನು ಒಟ್ಟುಗೂಡಿಸುವುದು ಎಂದು. ಕವಿ ತಾನು ಕಂಡು ಅನುಭವಿಸಿದ ಆರೂ ಋತುಗಳ ಸೌಂದರ್ಯವನ್ನು ವಿಧವಿಧವಾಗಿ ವರ್ಣಿಸುತ್ತಲೇ ಅವು ಪ್ರಣಯಿಗಳ ಮನಸ್ಸಿನ ಮೇಲೆ ಪ್ರಭಾವ ಬೀರಿ, ಅವರ ಪ್ರೇಮ ಅಥವಾ ವಿರಹಕ್ಕೆ ಉದ್ದೀಪಕವಾಗುವ ಪರಿಯನ್ನು ನಮಗೆ ಕಟ್ಟಿಕೊಡುತ್ತಾನೆ. ಹಾಗಾಗಿ ಇದು ಪ್ರಕೃತಿ ಸೌಂದರ್ಯ ಮತ್ತು ಪ್ರಣಯ ವಿಲಾಸಗಳು ಹಾಸುಹೊಕ್ಕಾಗಿರುವ ವಿನೂತನ ಪ್ರಕಾರದ ಕಾವ್ಯ.

ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ ಮತ್ತು ವಸಂತವೇ ಮೊದಲಾದ ಆರು ಋತುಗಳನ್ನು ಆರು ಸರ್ಗಗಳಲ್ಲಿ ವರ್ಣಿಸುವ ಈ ಕಾವ್ಯದಲ್ಲಿ ಒಟ್ಟು 144 ಪದ್ಯಗಳು ವಿವಿಧ ವೃತ್ತಗಳಲ್ಲಿವೆ. ಸಾಮಾನ್ಯವಾಗಿ ಮೂಲದಲ್ಲಿ ನಾಲ್ಕು ಸಾಲುಗಳಿರುವ ವೃತ್ತಕ್ಕೆ ಕನ್ನಡದಲ್ಲೂ ಅಷ್ಟೇ ಸಾಲುಗಳನ್ನು ಯೋಜಿಸಿ ಅನುವಾದಿಸುವುದು ಭಟ್ಟರ ಕ್ರಮ. ಇದರಿಂದ ಮೂಲದಲ್ಲಿರುವ ಭಾವಗಳನ್ನು ಯಥಾವತ್ತಾಗಿ ತರಲು ಅನುಕೂಲವಾಗುತ್ತದೆ. ಹಾಗಲ್ಲದೆ, ಹೆಚ್ಚು ಅಥವಾ ಕಡಿಮೆ ಸಾಲುಗಳಲ್ಲಿ ಅನುವಾದಿಸಿದರೆ, ಮೂಲದಲ್ಲಿರುವ ಭಾವವನ್ನು ಪೂರ್ತಿಯಾಗಿ ತಂದ ಮೇಲೂ, ಅನಗತ್ಯವಾಗಿ ಲಂಬಿಸುವುದೋ ಇಲ್ಲವೆ ಕೆಲ ಅಂಶವನ್ನು ಬಿಡುವುದೋ ಮಾಡಬೇಕಾಗುತ್ತದೆ. ಇದಕ್ಕೆ ಎಡೆಕೊಡಬಾರದೆಂಬುದು ಎಸ್.ವಿ.ಪಿ. ಅವರ ಉದ್ದೇಶ. ಋತುಸಂಹಾರದಲ್ಲಿ ಒಂದೊಂದು ಋತುವೂ ಒಂದೊಂದು ಸಂತಸದ ನೆಲೆ. ಗ್ರೀಷ್ಮದ ಈ ವರ್ಣನೆ ತುಂಬ ಸಹಜ ಮತ್ತು ಸುಂದರವಾಗಿದೆ. ಕನ್ನಡದಲ್ಲಿ ಕೂಡ ಮೂಲಕ್ಕೆ ಸರಿದೊರೆಯೆನ್ನುವ ಹಾಗೆ ಅತ್ಯಂತ ಚೆಲುವಾಗಿ, ದೇಸಿನುಡಿಗಳಿಂದ ಕೂಡಿದೆ.

ಸಭದ್ರಮುಸ್ತಂ ಪರಿಶುಷ್ಕ ಕರ್ದಮಂ
ಸರಃ ಖನನ್ನಾಯತಪೋತ್ರ ಮಂಡಲೈಃ
ರವೇರ್ಮಯೂಖೈರಭಿತಾಪಿತೋ ಭೃಶಂ
ವರಾಹಯೂಥೋ ವಿಶತೀವ ಭೂತಲಮ್ [1–17]

ನೀರಾರಿ ಕೆಸರೊಣಗಿ ಭದ್ರಮುಷ್ಟಿಯ ಜೊಂಡು
ಬೆಳೆದಿರಲು ಬರುಗೊಳವನೊಂದ ನೋಡಿ
ರವಿಕಿರಣದುರಿಯಿಂದೆ ಸೀದು ಸಿಡಿಮಿಡಿಗೊಂಡು
ಕಾಡು ಹಂದಿಯದೊಂದು ಮುಸುಡು ತೀಡಿ
ಕೋರೆದಾಡೆಗಳಿಂದೆ ಬಗೆಯುತಿಹುದೋರಂತೆ
ಭೂತಲಕೆ ಬಾದಣವ ಕೊರೆಯುವಂತೆ.

'ಅಭಿತಾಪಿತೋ ಭೃಶಂ'–ಎಂಬುದು 'ಸೀದು ಸಿಡಿಮಿಡಿಗೊಂಡು'–ಎಂದು ತುಂಬ ಸೊಗಸಾಗಿ ಸಹಜವಾಗಿ ಅನುವಾದಿತವಾಗಿದೆ. 'ವಿಶತೀವಭೂತಲಂ' ಎಂಬ ಸಂಸ್ಕೃತ ಮಾತು "ಭೂತಲಕೆ ಬಾದಣವ ಕೊರೆಯುವಂತೆ"– ಎಂದು ಅರ್ಥಪೂರ್ಣವಾಗಿ ಅನುವಾದಿತವಾಗಿದೆ.

ಋತುಗಳ ರಾಜನೆನಿಸಿದ ವಸಂತದ ವೈಭವದ ಪರಿಯೇ ಬೇರೆ. ಕಾಳಿದಾಸನ ಹೃದಯವನ್ನರಿತ ಎಸ್.ವಿ.ಪಿ. ಅದನ್ನು ಕನ್ನಡಕ್ಕೆ ಸಹಜವಾದ ಪ್ರಾಸ, ಅನುಪ್ರಾಸ ಮತ್ತು ಅರ್ಥ ಯತಿಗಳನ್ನು ಅಳವಡಿಸುವ ಮೂಲಕ ಚೆಲುವಾಗಿ ಕನ್ನಡಿಸಿದ್ದಾರೆ.

ದ್ರುಮಾಃ ಸಪುಷ್ಪಾಃ ಸಲಿಲಂ ಸಪದ್ಮಂ
ಸ್ತ್ರೀಯಃ ಸಕಾಮಾ ಪವನಃ ಸುಗಂಧಿಃ
ಸುಖಾಃ ಪ್ರದೋಷಾಃ ದಿವಸಾಶ್ಚರಮ್ಯಾಃ
ಸರ್ವಂ ಪ್ರಿಯೇ ಚಾರುತರಂ ವಸಂತೇ. [6–2]

ಕುಸುಮಭರಿತ ತರುಗಳಿಂದ ಕಮಲವನದ ಕೊಳಗಳಿಂದ
ಕಂಪು ಸೂಸುವೆಲರಿನಿಂದ ಸೊಬಗುವೆರೆದ ಸಂಜೆಯಿಂದ
ರಮ್ಯವಾದ ದಿನಗಳಿಂದ ರಾಗಭರಿತ ವಧುಗಳಿಂದ
ಸಂತಸವನು ತಂದ ಈ ವಸಂತ ಅತಿ ಮನೋಜ್ಞವಾಗಿದೆ.

ಮೂಲದಲ್ಲಿರುವ "ಸ್ತ್ರೀಯಃ"–ಎಂಬುದು 'ವಧು' ಎಂದಾಗಿರುವುದು ಅಷ್ಟೊಂದು ಸೂಕ್ತವೆಂದು ಅನ್ನಿಸದಿದ್ದರೂ ಒಟ್ಟಾರೆ ಅನುವಾದ ಚೆನ್ನಾಗಿ ಆಗಿದೆ. ಅದರ ಸೊಬಗಿನ ಹೆಚ್ಚಳಕ್ಕೆ ಕನ್ನಡಕ್ಕೆ ಸಹಜವಾದ ಅಂತ್ಯ ಪ್ರಾಸ ಮತ್ತು ಅನುಪ್ರಾಸಗಳೂ ಕಾರಣವಾಗಿರುವುದು ವಿಶೇಷ.

ಅದೇ ಶರತ್ಕಾಲದಲ್ಲಿ ನದಿ ಹರಿಯುವ ರೀತಿಯನ್ನು ಕವಿ ಹೀಗೆ ವರ್ಣಿಸುತ್ತಾನೆ.

ಚಂಚನ್ಮನೋಜ್ಞ ಶಫರೀ ರಸನಾ ಕಲಾಪಾಃ
ಪರ್ಯಂತ ಸಂಸ್ಥಿತ ತಾಂಡಜ ಪಂಕ್ತಿ ಹಾರಾಃ
ನದ್ಯೋ ವಿಶಾಲ ಪುಲಿನಾಂತ ನಿತಂಬ ಬಿಂಬಾ
ಮಂದಂ ಪ್ರಯಾಂತಿ ಸಮುದಾಃ ಪ್ರಮದಾ ಇವಾದ್ಯ [3–3]

ನದಿಯ ನಿಧಾನ ಗತಿಗೆ ತಕ್ಕ ದೀರ್ಘಾಕ್ಷರಗಳು ಮೂಲದಲ್ಲಿದ್ದರೆ ಕನ್ನಡ ಅನುವಾದ ಅಷ್ಟೇ ನಿಧಾನವಾಗಿ ಸಾಗುವ ಗತಿಯಲ್ಲಿ ಉಚಿತ ಪದಗಳಲ್ಲಿ ಮೂಡಿ ಬಂದಿದೆ.

ಹೊಳೆಯುವ ಸುಂದರ ಮರಿಮೀನುಗಳೇ
ಚಿನ್ನದ ಹೊಸ ಕಟಿಸೂತ್ರವೆನೆ
ದಡದಲಿ ಕುಳಿತಿಹ ಬೆಳ್ಳಕ್ಕಿಗಳೇ
ಮುತ್ತಿನ ನವಮಣಿ ಹಾರವೆನೆ
ಹಸರಿಸಿ ತೋರುವ ಪುಳಿನ ವಿತಾನವೆ
ಸುಂದರ ತೋರ ನಿತಂಬವೆನೆ
ಮಂದ ಗಮನದಲಿ ಹರಿವಳು ವಾಹಿನಿ
ಪ್ರೇಮೋನ್ಮಾದದ ಯುವತಿಯೆನೆ [3–3]

'ಸಮದಾಃ ಪ್ರಮದಾಃ'– 'ಪ್ರೇಮೋನ್ಮಾದದ ಯುವತಿ' ಎಂದಾಗಿದೆ. ಮೂಲ ನಾಲ್ಕು ಸಾಲಿನ ಪದ್ಯ ಎಂಟು ಸಾಲಿಗೆ ಹಿಗ್ಗಲಿಸಿದ್ದರೂ, ಮೂಲದಲ್ಲಿಲ್ಲದೆ–ಇರುವುದೇನನ್ನೂ ಹೇಳಿಲ್ಲವಾದ್ದರಿಂದ, ವಿವರಸೂಚಿಯಾದ ಗುಣವಾಚಕಗಳು ಹೆಚ್ಚು ಎನ್ನಿಸದೆ ಮೂಲದ ಸೌಂದರ್ಯವನ್ನು ತೆರೆದುತೋರುವಲ್ಲಿ ಯಶಸ್ವಿಯಾಗಿವೆ.

ಹೇಮಂತ ಋತುವಿನಲ್ಲಿ ಪ್ರಿಯತಮನ ಒಲವನ್ನು ಸವಿದ ಸುಂದರಿಯರ ಸ್ಥಿತಿಯನ್ನು ವರ್ಣಿಸುವ ಪದ್ಯವನ್ನು ಉತ್ಸಾಹಲಯದಲ್ಲಿ ತುಂಬ ಸೊಗಸಾಗಿ ಅನುವಾದಿಸಿದ್ದಾರೆ:

ರತಿಶ್ರಮ ಕ್ಷಾಮ ವಿಪಾಂಡು ವಕ್ತ್ರಾಃ
ಸಂಪ್ರಾಪ್ತ ಪ್ರಹರ್ಷಾಭ್ಯುದಯಾಸ್ತರುಣ್ಯಾಃ
ಹಸನ್ತಿ ನೋಚ್ಚೈರ್ದರ್ಶನಾಗ್ರ ಭಿನ್ನಾನ್
ಪ್ರಪೀಡ್ಯಮಾನಾನಧರಾನವೇಕ್ಷ್ಯ [4–6]

ರತಿಯ ಸೇದೆಯಿಂದೆ ಕುಂದಿ ಮೊಗವು ಬೆಳ್ಳಗಾದರು
ಭೋಗಸುಖವನುಂಡು ದಣಿದು ನಲಿಯುತಿಹರು ಸತಿಯರು
ನಲ್ಲರೊಲಿದು ಕಚ್ಚಿ ಘಾಯಗೊಳಿಸಿದಧರದೆಡೆಯನು
ನೋಡಿಕೊಳುತೆ ನೋವುದೆಂದು ತಡೆವರವರು ನಗೆಯನು

ಮೂಲದಲ್ಲಿರುವುದಕ್ಕೆ ಹೆಚ್ಚಿನದೇನನ್ನೂ ಸೇರಿಸದೆ ಇರುವುದೇನನ್ನೂ ಬಿಡದೆ ಮೂಲಕ್ಕೆ ತಕ್ಕಂತೆ ಅನುವಾದಿಸಿರುವ ಪದ್ಯವಿದು.

ಇದರ ಅನುವಾದ, ಕನ್ನಡಪದಗಳ ಸಮೃದ್ಧಿಯಿಂದ ಹಾಗೂ ಕನ್ನಡಕ್ಕೆ ಸಹಜವಾದ ಅಂತ್ಯಪ್ರಾಸ ಮತ್ತು ಅನುಪ್ರಾಸಗಳಿಂದ ಕೂಡಿಕೊಂಡು ಮೂಲಕ್ಕೆ ಸರಿಸಾಟಿಯಾಗಿ ಚೆಲುವಾಗಿ ಮೂಡಿದೆ.

****

ಮೇಘದೂತ

ಭಟ್ಟರು ಮೊದಲಿಗೆ ಅನುವಾದಕ್ಕೆ ಕೈಗೆತ್ತಿಕೊಂಡದ್ದು ಕಾಳಿದಾಸನ ಮೇಘದೂತವನ್ನು. ತುಮಕೂರಿನಲ್ಲಿ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಮಾಸ್ತಿಯವರ ವಿಮರ್ಶೆ ಭಾಗ-4 ಅನ್ನು ತರಗತಿಗೆ ಪಾಠ ಮಾಡಬೇಕಾಗಿ ಬಂದಾಗ, ಅಲ್ಲಿ ಕಾಳಿದಾಸನ ಮೇಘದೂತವನ್ನು ಕುರಿತ ಮಾಸ್ತಿಯವರ ಲೇಖನದಲ್ಲಿದ್ದ ಕೆಲವು ಚೆಲುವಾದ ಪದ್ಯಾನುವಾದಗಳನ್ನು ಓದಿ ಮೇಘದೂತವನ್ನೇಕೆ ಕನ್ನಡಕ್ಕೆ ಅನುವಾದಿಸಬಾರದೆನಿಸಿ, ಅನುವಾದಿಸಿ ಬಹುಶಃ 1942-43ರಲ್ಲಿ ಪ್ರಕಟಿಸಿದರು. ಜೊತೆಗೆ ಶ್ರೀ ಸಿ.ಕೆ. ವೆಂಕಟರಾಮಯ್ಯನವರ ಕಾಳಿದಾಸನನ್ನು ಕುರಿತ ಉಪನ್ಯಾಸಗಳೂ ಕಾಳಿದಾಸನನ್ನು ಅನುವಾದಿಸಲು ಸ್ಫೂರ್ತಿ ನೀಡಿತೆಂದು ಹೇಳಿಕೊಂಡಿದ್ದಾರೆ. ಎಸ್.ವಿ.ಪಿ.ಯವರು ಮೇಘದೂತದ ಅನುವಾದ ಪ್ರಕಟಿಸುವುದಕ್ಕೆ ಸ್ವಲ್ಪ ಮುಂಚೆ ಬೇಂದ್ರೆಯವರ ಕನ್ನಡ ಮೇಘದೂತ ಪ್ರಕಟವಾಗಿತ್ತು. ಭಟ್ಟರ ಅನುವಾದ ಮುಂಚೆಯೇ ಮುಗಿದಿದ್ದರೂ ಪ್ರಕಟವಾದದ್ದು ಬೇಂದ್ರೆ ಮೇಘದೂತ ಪ್ರಕಟವಾದ ನಂತರದಲ್ಲಿ. ಬೇಂದ್ರೆಯಂಥ ವರ ಕವಿಯ ಅನುವಾದ ಆಗಲೇ ಬಂದಿದ್ದರಿಂದ ತಮ್ಮ ಅನುವಾದವನ್ನು ಭಟ್ಟರು ಅಳುಕುತ್ತಲೇ ಪ್ರಕಟಿಸಿದರು. ಆದರೆ ಭಟ್ಟರು ಆಮೇಲೆ ಅಷ್ಟು ಅಳುಕಬೇಕಾಗಿ ಬರಲಿಲ್ಲ. ಕಾರಣ ಬೇಂದ್ರೆಯವರದು 'ಅನುವಾದ' ಎಂಬ ಪದದ ಸರಿಯಾದ ಅರ್ಥದಲ್ಲಿ ಅನುವಾದವಲ್ಲ. ಕಾಳಿದಾಸನ ಒಂದೊಂದೂ ಪದ್ಯವನ್ನು ಇಟ್ಟುಕೊಂಡು ಅದರ ಭಾವಕ್ಕೆ ತಕ್ಕಂತೆ ಕವಿಯಲ್ಲಿ ಮರುಹುಟ್ಟು ಪಡೆದ, ಇನ್ನೊಂದು ಸೃಷ್ಟಿಯೇ ಎನ್ನಬಹುದಾದ ಪದ್ಯಗಳು. ಭಟ್ಟರದು ಆದರ್ಶ ಅನುವಾದ. ಅಂದರೆ ಒಟ್ಟಿನಲ್ಲಿ ಮೂಲದಲ್ಲಿ ಇದ್ದುದನ್ನು ಬಿಡದೆ, ಇಲ್ಲದುದನ್ನು ಸೇರಿಸದೆ, ಸಂಸ್ಕೃತದ ಭಾವ, ತನ್ನ ಮೂಲದ ಅಭಿವ್ಯಕ್ತಿಯ ಸೊಗಸನ್ನು ಸಾಧ್ಯವಾದಷ್ಟೂ ಇಟ್ಟುಕೊಂಡೇ ಕನ್ನಡದಲ್ಲಿ ಒಡಮೂಡುವಂತೆ ಮಾಡುವುದು. ತಮ್ಮ ಈ ಸದಾಶಯದಲ್ಲಿ ಭಟ್ಟರು ಸಾಧಿಸಿರುವ ಯಶಸ್ಸಿನ ಪರಿಯನ್ನು ಸ್ವಲ್ಪಮಟ್ಟಿಗೆ ಬಗೆದು ನೋಡುವ ಪ್ರಯತ್ನ ಮಾಡಬಹುದು.

****

ಕಾಳಿದಾಸನ ಕೃತಿಗಳಲ್ಲಿ **ಮೇಘದೂತ**ಕ್ಕೆ ತನ್ನದೇ ಆದ ಅನನ್ಯ ಸ್ಥಾನವಿದೆ. ಅದೊಂದು ಅನನ್ಯ ಪ್ರೇಮ ಕಾವ್ಯ. ಸಿ.ಎ.ಸಿಂಕ್ಲೇಡ್ ಎಂಬ ವಿದ್ವಾಂಸರು "The most wonderful love poem in any language" ಎಂದು ಕೊಂಡಾಡಿದ್ದಾರೆ. "Meghaduta is a perfect work of Art" ಎಂದು ಟಾನಿ ಎಂಬಾತ ಪ್ರಶಂಸಿಸಿದ್ದಾನೆ. Maxmuller ಅವರಂತೂ

"It is a grand production" ಎಂದು ಕೈವಾರಿಸುತ್ತಾರೆ. ಚೇತನಾರೋಪಣೆಯ ಶ್ರೇಷ್ಠ ಕಾವ್ಯವೆನಿಸಿದ ಇದರ ಕಲ್ಪನೆಯ ಔಜ್ವಲ್ಯ ಮತ್ತು ಭಾವನೆಯ ಭವ್ಯತೆಯಲ್ಲಿ ಇದನ್ನು ಸರಿಗಟ್ಟುವ ಕಾವ್ಯವೇ ಇಲ್ಲ.

ಕುಬೇರನ ಕೋಪಕ್ಕೆ ಗುರಿಯಾಗಿ ಒಂದು ವರ್ಷ ಕಾಲ ತನ್ನ ನಲ್ಲೆಯಿಂದ ಅಗಲಿರಬೇಕೆಂಬ ಶಾಪಕ್ಕೆ ತುತ್ತಾದ ಯಕ್ಷನೊಬ್ಬನು, ಅವಳನ್ನು ಅಗಲಿ ರಾಮಗಿರಿಯಲ್ಲಿದ್ದ ಕಾಲದಲ್ಲಿ ಎಂಟು ತಿಂಗಳು ವಿರಹದ ಬೇಗೆಯಲ್ಲಿ ಬೆಂದ ಮೇಲೆ ಒಂದು ಮಳೆಗಾಲದ ಪ್ರಾರಂಭದಲ್ಲಿ ಆಷಾಢದ ಆಗಸದಲ್ಲಿ ತೇಲುತ್ತಿದ್ದ ಮೋಡವನ್ನು ನೋಡಿ, ಕುಬೇರನ ಅಲಕಾ ನಗರದಲ್ಲಿದ್ದ ತನ್ನ ಪ್ರಿಯೆಗೆ ಸಂದೇಶವನ್ನು ಕೊಂಡೊಯ್ಯಬೇಕೆಂದು ಕೇಳಿಕೊಳ್ಳುತ್ತಾನೆ. ಮೇಘಕ್ಕೆ ಅದು ಸಾಗಿ ಹೋಗಬೇಕಾದ ಪಯಣದ ಹಾದಿಯನ್ನು ಹೇಳುವಾಗ, ಉದ್ದಕ್ಕೂ ಬರುವ ನದಿ, ಬೆಟ್ಟ, ನಗರಗಳನ್ನು ಮನೋಹರವಾಗಿ ವರ್ಣಿಸುತ್ತಾ ಹೋಗುತ್ತಾನೆ. ಇದಿಷ್ಟೂ ಪೂರ್ವ ಮೇಘವೆನಿಸಿದರೆ ಉತ್ತರಮೇಘದಲ್ಲಿ ಅಲಕಾ ನಗರದ ವೈಭವ, ಅಲ್ಲಿಯ ಯಕ್ಷರ ಭೋಗ ವಿಲಾಸಗಳು, ವಿರಹದಲ್ಲಿ ಬೇಯುತ್ತಿರುವ ತನ್ನ ಪತ್ನಿಯ ಕರುಣಾಜನಕ ಸ್ಥಿತಿ ಮೊದಲಾದುವನ್ನು ವರ್ಣಿಸಿ ಕಡೆಯಲ್ಲಿ ತನ್ನ ಸಂದೇಶವನ್ನು ಹೇಳುವುದೂ ಸೇರಿದಂತಿರುವುದು ಮೇಘದೂತದ ರೂಪುರೇಷೆ. ಇಷ್ಟು ತೆಳ್ಳನೆಯ ಕಥಾಹಂದರದ ಮೇಲೆ ತನ್ನ ಕಾವ್ಯಲತೆಯನ್ನು ಹಬ್ಬಿಸಿ, ತನ್ಮೂಲಕ ಬಾಹ್ಯ ಪ್ರಕೃತಿ ಮತ್ತು ಮಾನವ ಪ್ರಕೃತಿಗಳ ಮರ್ಮವನ್ನರಿತ ಕವಿ, ಅವುಗಳ ಹೃದಯವನ್ನೇ ಮಿಡಿದು ಸುಮಧುರ ಗಾನವನ್ನು ಹೊಮ್ಮಿಸಿದ್ದಾನೆ. ಯಕ್ಷ-ಯಕ್ಷಿಯರ ವಿಪ್ರಲಂಭ ಶೃಂಗಾರದ ಭಾವಲಹರಿಗಳ ಜೊತೆ ಜೊತೆಗೇ ಪ್ರಕೃತಿಯ ಸುಂದರ ಚಿತ್ರಗಳನ್ನು ಅಂಕಿಸುತ್ತಾ ಹೋಗುತ್ತಾನೆ. ಮೇಘದೂತ ಕೂಡ ಋತುಸಂಹಾರದ ಹಾಗೆಯೇ ನಿಸರ್ಗ ವರ್ಣನೆಯ ಖಂಡ ಕಾವ್ಯ. ಜೊತೆಗೆ ನಲ್ಲ ನಲ್ಲೆಯರ ಪ್ರಣಯ ಚಿತ್ರಗಳಿಂದ ಕೂಡಿ ಮನೋಹರವಾಗಿದೆ.

ಉಜ್ಜಯನಿಯ ಸಮೀಪದಲ್ಲೇ ನಿರ್ವಿಂಧ್ಯಾ ನದಿ ಹರಿಯುತ್ತಿದೆ. ನೀರಿನ ಅಲೆಗಳ ಮೇಲೆ ಸಾಲು ಸಾಲಾಗಿ ಕುಳಿತು ಕಲಕಲ ನಿನಾದ ಮಾಡುವ ಹಕ್ಕಿಗಳ ಒಡ್ಯಾಣ, ಸುಳಿನಾಭಿ, ಅಂಕುಡೊಂಕಾದ ಹರಿವಿನ ಒಯ್ಯಾರದ ನಡಿಗೆಯಿಂದ ಕಾಮಿನಿಯಂತೆ ತೋರುವ ಆ ನದಿಯಲ್ಲಿ ನೀರು ಸುರಿಸು ಎಂದು ಯಕ್ಷನು ಮೇಘವನ್ನು ಕೋರುವ ಪದ್ಯ.

ವೀಚೀ ಕ್ಷೋಭಸ್ತನಿತ ವಿಹಗಶ್ರೇಣಿ ಕಾಂಚೀ ಗುಣಾಯಾ
ಸ್ಸಂಸರ್ಪಂತ್ಯಾ ಸ್ಸ್ಖಲಿತ ಸುಭಗಂ ದರ್ಶಿತಾ ವರ್ತನಾಭೇಃ
ನಿರ್ವಿಂಧ್ಯಾಯಾಃ ಪಥಿ ಭವ ರಸಾಭ್ಯಾಂತರಸ್ಸನ್ನಿಪತ್ಯ
ಸ್ತ್ರೀಣಾಮಾದ್ಯಂ ಪ್ರಣಯ ವಚನಂ ವಿಭ್ರಮೋಹಿ ಪ್ರಿಯೇಷು [1–30]

ಭಟ್ಟರ ಅನುವಾದ

ಅಲೆಗಳುಲ್ಲೋಲದಲಿ ಕಲರವಂಗೈಯುತಿಹ
ಹಕ್ಕಿಗಳ ಸಾಲಿನೊಡ್ಯಾಣದಿಂದೆ
ಘುಮುಘುಮುಕಿ ಹರಿವಂದು ಸುಭಗಮನೆ ತೋರುತಿಹ
ಆವರ್ತವೆನಿಸುವ ಸುಳಿನಾಭಿಯಿಂದೆ
ಮೆರೆವ ನಿರ್ವಿಂಧ್ಯೆಯನು ಬಳಿಸಾರ್ದುಸಂತಸದೆ
ಅಲ್ಲಿ ರತ ಲೋಲನೆನೆ ಸುಖಿಸು ಸಖನೆ
ವನಿತೆಯರಿಗಿನಿಯರೊಳು ಒಲವ ಬೇಡುವುದರಲಿ
ವಿಲಸನವೆ ತಾನಲ್ತೆ ಮೊದಲ ನುಡಿಯು.

'ವೀಚೀಕ್ಷೋಭ' ಇಲ್ಲಿ 'ಅಲೆಗಳುಲ್ಲೋಲ'ವಾಗಿದೆ. 'ವಿಹಗ ಶ್ರೇಣಿ ಕಾಂಚೀಗುಣಾಯಾಃ' ಇಲ್ಲಿ 'ಹಕ್ಕಿಗಳ ಸಾಲಿನ ಒಡ್ಯಾಣವಾಗಿದೆ.' 'ಕಲರವ' ಅರ್ಥದ ಶಬ್ದ ಮೂಲದಲ್ಲಿ ಇಲ್ಲವಾದರೂ ಅದು ಅನುವಾದದಲ್ಲಿ ಸೇರಿರುವುದು ಅತ್ಯಂತ ಉಚಿತವಾಗಿದೆ. ಹಾಗೂ ಅದರಿಂದ ಸೊಗಸು ಹೆಚ್ಚಿದೆ. ಹಾಗೆ ಸಂಸರ್ಪಂತ್ಯಾ ಸ್ಖಲಿತಾಸುಭಗಂ ದರ್ಶಿತಾ ವರ್ತನಾಭೇಃ" – ಎಂಬುದು "ಧುಮುಕಿ ಧುಮುಕಿ ಹರಿವಂದು ಸುಭಗಮನೆ ತೋರುತಿಹ ಆವರ್ತನ – ಎಂದಾಗಿದೆ. ಹೀಗೆ ಸಾಕಷ್ಟು ಉಚಿತವೇ ಎನ್ನಬಹುದಾದ ಕನ್ನಡದ ನುಡಿಗಳು ಬಂದು ಅನುವಾದ ಕಳೆಗಟ್ಟಿದೆ.

ತನ್ನ ಪತ್ನಿ ಲೋಕೋತ್ತರ ಸುಂದರಿ ಎಂದು ಯಕ್ಷನು ವರ್ಣಿಸುವ ಮಾತುಗಳೆಲ್ಲವೂ ಕವಿ ಸಮಯ ಬದ್ಧವೇ ಎನಿಸಿದರೂ, ಅಲ್ಲೂ ಕವಿಯ ಚಿತ್ರಕಶಕ್ತಿ ಎದ್ದು ಕಾಣುತ್ತದೆ:

ಶ್ಯಾಮಾಸ್ವಂಗಂ ಚಕಿತ ಹರಿಣೀ ಪ್ರೇಕ್ಷಣೇ ದೃಷ್ಟಿಪಾತಂ
ವಕ್ತ್ರಚ್ಛಾಯಾಂ ಶಶಿನಿ ಶಿಖಿನಾಂ ಬಹುರ್ಧಾರೇಷು ಕೇಶಾನ್
ಉತ್ಪಶ್ಯಾಮಿ ಪ್ರತನುಷು ನದೀ ವೀಚಿಷು ಭ್ರೂವಿಲಾಸಾನ್
ಹಂತೈಕಸ್ಮಿನ್ ಕ್ವಚಿದಪಿನ ತೇ ಚಂಡಿ ಸಾದೃಶ್ಯಮಸ್ತಿ [2–43]

ಇದರ ಕನ್ನಡ ಅನುವಾದವಂತೂ ಮೂಲಕ್ಕೆ ಸರಿದೊರೆಯಾಗಿ ಕನ್ನಡ ಮಾತುಗಳಲ್ಲಿ ಸೊಗಸಾಗಿ ಮೂಡಿಬಂದಿದೆಯಾದರೂ 'ಚಕಿತ' ಎಂಬ ಶಬ್ದಕ್ಕೆ ಕನ್ನಡದಲ್ಲಿ ಸಾಮಾನ್ಯವಾಗಿ 'ಆಶ್ಚರ್ಯ' ಎಂಬ ಅರ್ಥವಿರುವ ಕಾರಣ ಮೂಲದ ಬೆದರಿದ ಎಂಬ ಅರ್ಥ ಸಂವಹನೆ ಆಗುವುದಿಲ್ಲ. ಮೂಲದ ನಾಲ್ಕು ಸಾಲುಗಳ ಮಂದಾಕ್ರಾಂತ ವೃತ್ತ ಇಲ್ಲಿ 5 ಮಾತ್ರೆಗಳ 4 ಗಣದ 8 ಸಾಲುಗಳಿಗೆ ಹಿಗ್ಗಲಿಸಿದ್ದರೂ ಮೂಲದಲ್ಲಿ ಇಲ್ಲದಿರುವ ಭಾವವಾವುದೂ ಹೆಚ್ಚಿಗೆಯಾಗಿ ಸೇರಿಲ್ಲ. ಇಲ್ಲಿ ಕನ್ನಡಕ್ಕೆ ಹೊಂದಿಕೆಯಾಗದಿರುವ ಏಕೈಕ ಶಬ್ದವೆಂದರೆ 'ಚಂಡಿಯೆ' ಎಂಬುದು.

ಶ್ಯಾಮಾಲತಾವಳಿಯೊಳಂಗದೊಂದಂದವನು
ಮೊಗದೊಂದು ಕಾಂತಿಯನು ಚಂದಿರನೊಳು
ಚಕಿತಹರಿಣಿಯಾಲೋಕನದೆ ನೋಟವನು
ತೆಳ್ವೊಳೆಯ ಅಲೆಗಳಲಿ ಹುಬ್ಬಿನೊಲವ
ಶಿಖಿಕಲಾಕಪಂಗಳಲಿ ಕುರುಳ ಸೌಂದರ್ಯವನು
ನೋಡಿ ನಿನ್ನಂದವನು ಪರಿಭಾವಿಸಿ
ಒಂದೆಡೆಯೊಳಾದರೂ ನಿನ್ನ ಸಾದೃಶ್ಯವನು
ಕಾಣದೆಯೆ ಕೊರಗುತಿಹನೆಲೆ ಚಂಡಿಯೆ

ಪ್ರಕೃತಿಯ ಒಂದೊಂದರಲ್ಲೂ ಅವನು ಕಂಡಿದ್ದು ಕೇವಲ ಆಂಶಿಕ ಸೌಂದರ್ಯವನ್ನು. ಒಟ್ಟಾರೆ ಅವಳನ್ನು ಹೋಲುವಂಥದು ಅವನಿಗೆ ಎಲ್ಲೂ ಕಂಡಿಲ್ಲ.

ಪ್ರಕೃತಿ ಚಿತ್ರಗಳನ್ನು ಕೊಟ್ಟಂತೆಯೇ ದೇಶ, ಸ್ಥಲಗಳ ವೈಶಿಷ್ಟ್ಯ, ವೈಚಿತ್ರ್ಯಗಳನ್ನು ಕವಿ ಮನಃಪಟಲದ ಮೇಲೆ ಅಂಕಿಸಿ ಬಿಡುತ್ತಾನೆ. ಕೈಲಾಸದ ತಪ್ಪಲಲ್ಲಿ ಅಲಕಾ ನಗರಿ ಹೇಗೆ ನೆಲೆಸಿತ್ತು ಎಂಬುದರ ಉಜ್ವಲವಾದ ಚಿತ್ರ ಹೀಗಿದೆ.

ತಸ್ಯೋತ್ಸಂಗೇ ಪ್ರಣಯಿನ ಇವ ಸ್ರಸ್ತ ಗಂಗಾ ದುಕೂಲಾಮ್
ನತ್ವಂ ದೃಷ್ಟ್ವಾನ ಪುನರಲಕಾಂ ಜ್ಞಾಸ್ಯಸೇ ಕಾಮ ಚಾರಿನ್
ಯಾವಃ ಕಾಲೇ ವಹತಿ ಸಲಿಲೋದ್ಗಾರ ಮುಚ್ಚೈರ್ವಿಮಾನಾ
ಮುಕ್ತಜಾಲಗ್ರಥಿತಮಲಕಂ ಕಾಮಿನೀವಾಭ್ರಬೃಂದಮ್ [1–68]

ಇದನ್ನು ಮೂಲದಷ್ಟೇ ಸೊಗಸಾಗಿ, ಕನ್ನಡದ ದೇಸೀ ನುಡಿಗಳಲ್ಲಿ ಭಟ್ಟರು ಅನುವಾದಿಸಿರುವ ಪರಿ ಇದು:

ಪ್ರಿಯತಮನ ತೊಡೆಯಂತೆ ಕೈಲಾಸಸಾನುವಿರೆ
ಹರಿವ ಗಂಗೆಯೆ ಜಗುಳಿದುಡೆಯಾಗಿರೆ
ಅಲ್ಲಿ ಅಲಕೆಯ ನೋಡಿ ಕಾಮಚಾರಿಯೆ ಸಖನೆ
ಅದನು ಕಾಮಿನಿಯೆಂದು ಭಾವಿಸದಿರು!
ತುಂಗಸೌಧಗಳಿರುವ ಅಲಕೆ ಕಣ್ಗೊಳಿಸುವುದು
ನೀರ ಸುರಿಸುವ ಮುಗಿಲ ಧರಿಸಿದಂದು
ಹೊಳೆವ ಮುಂಗುರುಳಿನಲಿ ಮುತ್ತುಗಳ ಹಾರವನು
ತಳೆದು ಕಂಗೊಳಿಸುತಿರುವಿನಿಯಳಂತೆ

ಮೇಘಕ್ಕೆ ಯಕ್ಷನು ನೀಡುವ ಸಂದೇಶವಾದರೂ ಇಡೀ ವಿಶ್ವ ಸಾಹಿತ್ಯದಲ್ಲೇ ಅತ್ಯಂತ ಆರ್ದ್ರವಾದ, ಪ್ರೇಮಲವಾದ, ಒಲವಿನ ತಂತಿಯನ್ನೇ ಮಿಡಿದಂತಿರುವ ಸಂದೇಶ. ಅದರಲ್ಲಿ ನಮಗೆ ಕಾಣಸಿಗುವುದು ಯಕ್ಷ-ಯಕ್ಷಿಯರ ಉತ್ಕಟ ಪ್ರೇಮದ ಚಿತ್ರವೇ. ಆ ಸಂದೇಶ ಸಂಗಮದ ಸುಖಕ್ಕಿಂತ ಕಿಂಚಿದೂನ, ಅಷ್ಟೇ.

ಅಗಲಿಕೆಯ ನೋವನ್ನು ಸಹಿಸಿಕೊಂಡು ತನ್ನ ಪ್ರಿಯತಮನೊಂದಿಗೆ ಶೀಘ್ರದಲ್ಲೇ ಮಿಲನವಾಗುತ್ತದೆಂಬ ಭರವಸೆ ನೀಡುತ್ತಾ ಯಕ್ಷ ಹೇಳುವ ಮಾತುಗಳು.

ನತ್ವಾತ್ಮಾನಂ ಬಹುವಿಗಣಯನ್ನಾತ್ಮ ನೈವಾವಲಂಬೇ
ತತ್ಕಲ್ಯಾಣಿ ತ್ವಮಪಿ ನಿತರಾಂ ಮಾ ಗಮಃ ಕಾತರತ್ವಂ
ಕಸ್ಯಾತ್ಯಂತಂ ಸುಖಮುಪನತಂ ದುಃಖಮೇಕಾಂತತೋ ವಾ
ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರನೇಮಿಕ್ರಮೇಣ [2-49]

ಅಗತ್ಯವಿರುವೆಡೆಯಲ್ಲಿ 'ಕಾತರ', 'ಕಲ್ಯಾಣಿ', 'ಚಕ್ರನೇಮಿಕ್ರಮ' ಮುಂತಾದ ಮೂಲ ಶಬ್ದಗಳನ್ನು ಹಾಗೆಯೇ ಉಳಿಸಿಕೊಂಡು ಕನ್ನಡಿಸಿರುವ ಈ ಸಾಲುಗಳು ಮೂಲದಷ್ಟೇ ಸತ್ವಯುತವೂ ಸುಂದರವೂ ಆಗಿವೆ.

ಬಹುವಿಧದೆ ಚಿಂತಿಸುತೆ ನಾನೆ ನನ್ನಾತ್ಮವನು
ಸಂತಯಿಸಿ ಜೀವವನು ಧರಿಸಿರುವೆನು
ನನ್ನ ಕುಶಲವ ಕೇಳಿ ಇನ್ನಾದರೂ ನೀನು
ಕಾತರಂಗೊಳ್ಳದಿರು ಕಲ್ಯಾಣಿಯೆ!
ಅತ್ಯಂತ ಸುಖವಿರುವುದಾರಿಗೀ ಲೋಕದಲಿ
ಅತ್ಯಂತ ದುಃಖವಿನ್ನಾರಿಗಿಹುದು
ಒಂದಾದ ಮೇಲೊಂದು ಸುಖದುಃಖಗಳು ಬಂದು
ಚಕ್ರ ನೇಮಿಕ್ರಮದೆ ಪೊರಳುತಿಹವು

ಭಟ್ಟರದು ಎಂದಿನಂತೆ ಮೂಲನಿಷ್ಠವಾದ ಅನುವಾದ. ಛಂದಸ್ಸಿನ ಅನುಕೂಲಕ್ಕಾಗಿ ಕೆಲವೊಮ್ಮೆ ಕೆಲವೊಂದು ಶಬ್ದಗಳನ್ನು ಬಿಡುವುದೋ ಸೇರಿಸುವುದೋ ನಡೆಯುತ್ತದೆ. ಕಾವ್ಯದ ಅನುವಾದವಂತೂ ಮೂಲದಲ್ಲಿರುವ ಪದಕ್ಕೆ ಇಲ್ಲೊಂದು ಪದವಿಡುವುದು ಎನ್ನುವಂಥ ಲೆಕ್ಕಾಚಾರದ ಅನುವಾದವಲ್ಲ. ಹಾಗೊಂದು ವೇಳೆ ಆದರೆ ಅದು ಹೃದ್ಯವಾಗದಿರುವುದೇ ಹೆಚ್ಚು. ಈ ಹಿನ್ನೆಲೆಯಲ್ಲಿ ಎಸ್.ವಿ.ಪಿ. ಅವರದು ಸಾರ್ಥಕ ಅನುವಾದವೆಂದೇ ಹೇಳಬಹುದು.

ಕುಮಾರ ಸಂಭವ

ರಘುವಂಶ, ಕುಮಾರ ಸಂಭವ, ಕಿರಾತಾರ್ಜುನೀಯ, ಶಿಶುಪಾಲವಧ ಮತ್ತು ನೈಷಧ ಇವುಗಳು ಸಂಸ್ಕೃತ ಸಾಹಿತ್ಯದಲ್ಲಿ ಪಂಚಮಹಾಕಾವ್ಯಗಳೆಂದು ಹೆಸರಾಗಿವೆ. ಇವುಗಳಲ್ಲಿ ಕುಮಾರಸಂಭವವು ಕಾಳಿದಾಸ ರಚಿತ ಮೊದಲ ಮಹಾಕಾವ್ಯವಾದರೆ, ರಘುವಂಶ ಅವನ ಪರಿಣತ ಪ್ರತಿಭೆಯ ಫಲ.

ಹೆಸರೇ ಸೂಚಿಸುವಂತೆ ಕುಮಾರಸ್ವಾಮಿಯ ಜನನ ಕಾವ್ಯದ ವಸ್ತು. ಶಿವಪುರಾಣದ ಪಾರ್ವತೀ ಖಂಡದಲ್ಲಿ ಅಳವಟ್ಟಿರುವ ಕಥೆಯನ್ನಾಧರಿಸಿ ಕುಮಾರಸಂಭವ ಕಾವ್ಯ ಬರೆದನೆಂದು ಹೇಳುತ್ತಾರೆ. ದೇವತೆಗಳ ಕೋರಿಕೆಯಂತೆ ಅವರಿಗೆ ಕಾಟಕೊಡುತ್ತಿದ್ದ ತಾರಕಾಸುರನನ್ನು ಸಂಹರಿಸುವ ಉದ್ದೇಶದಿಂದ ದೇವಸೇನೆಯನ್ನು ಮುನ್ನಡೆಸಬಲ್ಲ ಸೇನಾನಿಯನ್ನು ಪಡೆಯುವ ಸಲುವಾಗಿ ಶಿವನು ಗಿರಿಜೆಯ ಕೈಹಿಡಿದು ಸಂಸಾರಿಯಾಗಿ ಕುಮಾರಸ್ವಾಮಿಯನ್ನು ಪಡೆದುದು ಕುಮಾರ ಸಂಭವದ ವಸ್ತು.

ಕಾವ್ಯದಲ್ಲಿ 1096 ಶ್ಲೋಕಗಳೂ ಹದಿನೇಳು ಸರ್ಗಗಳೂ ಇವೆ. ಆದರೆ ಮೊದಲಿನ 'ಏಳು' ಸರ್ಗಗಳನ್ನು ಮಾತ್ರ ಕಾಳಿದಾಸನು ರಚಿಸಿದನೆಂದೂ, ಉಳಿದ ಸರ್ಗಗಳು ಕಾಳಿದಾಸ ರಚಿತವಲ್ಲವೆಂದೂ ಬಹುಜನ ವಿದ್ವಾಂಸರ ಅಭಿಪ್ರಾಯ. ಅದಕ್ಕೆ ಕಾರಣ ಮೊದಲು ಏಳೇ ಸರ್ಗಗಳು ಸಿಕ್ಕಿದ್ದು, ಎಂಟನೇ ಸರ್ಗ ಕೆಲವು ಕಾಲದ ಮೇಲೆ ಸಿಕ್ಕಿತು. ಅಲ್ಲದೆ ಎಂಟನೇ ಸರ್ಗದಲ್ಲಿ ಪಾರ್ವತಿ–ಪರಮೇಶ್ವರರ ಸುರತಲೀಲೆಯ ವರ್ಣನೆ ಇದೆ. ಕಾಳಿದಾಸನ ಬೇರೆ ಯಾವ ಕಾವ್ಯಗಳಲ್ಲೂ ಇಂಥ ವರ್ಣನೆ ಇಲ್ಲದಿರುವುದು ಹಾಗೂ ಕಥಾವಸ್ತು ಮುಂದುವರಿಯದೆ ಸಭ್ಯತೆಯ ಎಲ್ಲೆಗೆರೆದಾಟಿದ ಶೃಂಗಾರ ವರ್ಣನೆ ಇದಾಗಿರುವ ಕಾರಣ, ಕಾಳಿದಾಸರಚಿತವಲ್ಲವೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಹೆಸರಾಂತ ಅಲಂಕಾರಿಕರು 8ನೆಯ ಸರ್ಗದ ಕಾವ್ಯಭಾಗಗಳನ್ನು ಉದ್ಧರಿಸುವ ಕಾರಣಕ್ಕೆ ಇದು ಕೂಡ ಕಾಳಿದಾಸ ಕೃತವೆಂದೇ ಬಹಳಷ್ಟು ಜನರ ಅಭಿಪ್ರಾಯ. 9 ರಿಂದ 17ರವರೆಗಿನದಂತೂ ಕಾಳಿದಾಸ ಕೃತಲ್ಲವಲ್ಲವೆಂದೇ ಬಹಳಷ್ಟು ಜನರ ದೃಢ ಅಭಿಪ್ರಾಯ. ಏನೇ ಆಗಲಿ ಭಟ್ಟರು ಅನುವಾದ ಮಾಡಿರುವುದು ಮೊದಲ ಎಂಟು ಸರ್ಗಗಳನ್ನು ಮಾತ್ರ – ಉಮೋತ್ಪತ್ತಿ, ಬ್ರಹ್ಮಾಭಿಗಮನ, ಮದನದಹನ, ರತಿವಿಲಾಸ, ಪಾರ್ವತೀ ಫಲೋದಯ, ಉಮಾಪ್ರದಾನ, ಉಮಾಪರಿಣಯ ಮತ್ತು ಉಮಾಸುರತವರ್ಣನೆ–ಎಂಬುವು ಆಯಾ ಕಥೆಗನುಸಾರವಾದ ಶೀರ್ಷಿಕೆಗಳು.

ಮನುಷ್ಯಹೃದಯದ ಭಾವನೆಗಳನ್ನು, ಪ್ರಕೃತಿ ಸೌಂದರ್ಯದ ಅನನ್ಯತೆಯನ್ನು ಮರೆಯಲಾಗದ ಮಾತುಗಳಲ್ಲಿ ಬಣ್ಣಿಸುವುದರಲ್ಲಿ ಕಾಳಿದಾಸ ಅಗ್ರಗಣ್ಯ. ಈ ಬಣ್ಣನೆಗಳಲ್ಲಿ ಉಪಮೆಯನ್ನು ಬಳಸುವುದರಲ್ಲಿ ಅವನು ಸಿದ್ಧಹಸ್ತ. ಸನ್ನಿವೇಶ ನಿರ್ಮಾಣದಲ್ಲಿ ಮತ್ತು ವ್ಯಕ್ತಿಸ್ವಭಾವಗಳ ಚಿತ್ರಣದಲ್ಲಿ ಅವನದು ಎತ್ತಿದ ಕೈ. ಇನ್ನು ಭಾಷೆಯಂತೂ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಕೋಮಲಕಾಂತ ಪದಾವಳಿಗಳೊಂದಿಗೆ ಕೂಡಿಕೊಂಡು ಇನ್ನಿಲ್ಲದ ರಮ್ಯತೆಯನ್ನು ಪಡೆದುಕೊಳ್ಳುವುದನ್ನು ಸಾಹಿತ್ಯ ಪ್ರೇಮಿಗಳು ಬಲ್ಲರು. ಕುಮಾರಸಂಭವದ ಕೆಲವೊಂದು ಸನ್ನಿವೇಶಗಳು ಚಿತ್ರಿತವಾಗಿರುವ ರೀತಿಯನ್ನರಿಯುತ್ತಲೇ ಕನ್ನಡದಲ್ಲಿ ಅದೇ ಪದ್ಯಗಳು ಮೈತಾಳಿರುವ ವಿಧಾನವನ್ನು ಅವಲೋಕಿಸುವುದು ಸದ್ಯದಲ್ಲಿ ನಮಗಿರುವ ದಾರಿ.

ನಮ್ಮ ದೇಶದ ಉತ್ತರ ದಿಕ್ಕಿಗೆ ಅಡಿಚಾಚಿ ನಿಂತಿರುವ ಮಹಾ ಪರ್ವತ ಹಿಮಾಲಯವನ್ನು

ಅದ್ಭುತವಾದ ಉಪಮೆಯೊಂದಿಗೆ ವರ್ಣಿಸುವ ಈ ಪದ್ಯವನ್ನು ಭಟ್ಟರು ಅಷ್ಟೇ ಸೊಗಸಾಗಿ ಕನ್ನಡಿಸಿದ್ದಾರೆ.

ಅಸ್ತ್ಯುತ್ತರಸ್ಯಾಂ ದಿಶಿದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ
ಪೂರ್ವಾಪರೌ ತೋಯನಿಧೀವಗಾಹ್ಯ ಸ್ಥಿತಃ ಪೃಥಿವ್ಯಾ ಇವ ಮಾನದಂಡಃ

ಅಲ್ಲಿ ಉತ್ತರ ದಿಶಿಯೊಳಿರುವನು ಹಿಮಾಲಯನು
ದೇವತಾತ್ಮನು ತಾನು ಪರ್ವತೇಶ್ವರನು
ಪೂರ್ವ ಪಶ್ಚಿಮ ಶರಧಿಗಡಿಚಾಚಿ ನಿಂದಿಹನು
ಪೃಥ್ವಿಯ ಮಾನದಂಡದಂತಹನು

ಮೂಲದ ದೀರ್ಘ ಸ್ವರಗಳೂ, ದೀರ್ಘ ಸಮಾಸ ಪದಗಳೂ ಹಿಮಾಲಯದ ಎತ್ತರ ಬಿತ್ತರಗಳಿಗನುಗುಣವಾಗಿ ಬಂದಿದ್ದರೆ ಕನ್ನಡದಲ್ಲಿ ಮೂಲದ ಮುಖ್ಯವಾದ ಶಬ್ದಗಳನ್ನು ಹಾಗೆಯೇ ಉಳಿಸಿಕೊಳ್ಳುವ ಮೂಲಕ ಸರಳವಾಗಿ ಅದರ ಸೌಂದರ್ಯ ಹಿಡಿಯುವಲ್ಲಿ ಯಶಸ್ಸು ಸಾಧಿಸಲಾಗಿದೆ.

ಪಾರ್ವತಿ ಹುಟ್ಟಿದ ದಿನ ಹೇಗೆ ಎಲ್ಲರಿಗೂ ಮಂಗಲವುಂಟು ಮಾಡಿತು ಎಂದು ವರ್ಣಿಸುವ ಈ ಪದ್ಯವನ್ನು ನೋಡಬಹುದು.

ಪ್ರಸನ್ನ ದಿಕ್ಪಾಂಸು ವಿವಿಕ್ತವಾತಂ ಶಂಖಸ್ವನಾನಂತರ ಪುಷ್ಪವೃಷ್ಟಿ
ಶರೀರಿಣಾಂ ಸ್ಥಾವರ ಜಂಗಮಾನಾಂ ಸುಖಾಯ ತಜ್ಜನ್ಮದಿನಂ ಬಭೂವ [1–23]

ಇದನ್ನು ಎಸ್.ವಿ.ಪಿ. ಅವರು ಕನ್ನಡಕ್ಕೆ ವಿಶಿಷ್ಟವಾದ ಅರ್ಥಯತಿಯನ್ನು ಬಳಸಿಕೊಂಡು ಅತ್ಯಂತ ಸೊಗಸಾಗಿ ಅನುವಾದಿಸಿದ್ದಾರೆ.

ದಿಕ್ಕುಗಳು ತೊಳತೊಳಗೆ ಗಾಳಿ ನಿರ್ಮಲವಾಗೆ
ಅಲರಮಳೆ ಸೂಸುತಿರೆ ಶಂಖಮೊಳಗೆ
ಪರಮ ಸುಖಕರವಾದುದವಳು ಹುಟ್ಟಿದ ದಿನವು
ಸ್ಥಾವರಕೆ ಜಂಗಮಕೆ ಸಕಲಾತ್ಮಕೆ.

ಕನ್ನಡದಲ್ಲಿರುವುದು ಅರ್ಥಕ್ಕನುಸಾರವಾದ ಯತಿ. ಸಂಸ್ಕೃತ ಅರ್ಥದ ಯತಿಯಲ್ಲ. ಅವಶ್ಯಕವೆನಿಸಿದರೆ ಪ್ರತಿಗಣಕ್ಕೂ ಯತಿ ಬರುವುದುಂಟು. ಇಲ್ಲಿ ಕೊನೆಯ ಸಾಲಿನಲ್ಲಿ ಹಾಗೆ ಬಂದು ಪದ್ಯಕ್ಕೆ ಅತಿಶಯವಾದ ಬೆಡಗು ಉಂಟಾಗಿದೆ. ಕೊನೆಯ ಸಾಲಿನಲ್ಲಿ ರಸದ ಗುಂಡುಗಳನ್ನು ಉರುಳಿಸುವ ಹಾಗೆ ಶಬ್ದಗಳು ಅಳವಟ್ಟು ಕಕಾರದ ಆವರ್ತನೆಯಿಂದ ಅಪೂರ್ವ ಸೊಗಸು ಉಂಟಾಗಿದೆ.

ಪಾರ್ವತಿಯ ಬಾಲ್ಯವನ್ನು ವರ್ಣಿಸುತ್ತ, ಪಾರ್ವತಿಯದು ಹಂಸದಂತೆ ಅಲಸನಡೆ ಎಂದು ಹೇಳುವ ರೀತಿ ಬಹಳ ಚೆಲುವಾಗಿದೆ. ಅವಳ ಕಾಲಂದುಗೆಯ ದನಿಯನ್ನು ಕಲಿಯಲು ಅವಳ ಜೊತೆಯಲ್ಲೇ ಹಂಸ ತಾನೂ ನಡೆಯುತ್ತ ತನ್ನಲಸ ಗಮನವನ್ನು ಪಾರ್ವತಿಗೆ ಕಲಿಸಿತೋ ಎನ್ನುವಂತಿದೆ.

ಸಾ ರಾಜಹಂಸೈರಿವ ಸಂನತಾಂಗಿ ಗತೇಷು ಲೀಲಾಂಚಿತ ವಿಕ್ರಮೇಷು
ವ್ಯನೀಯತ ಪ್ರತ್ಯುಪದೇಶಲುಬ್ಧೈರಾದಿತ್ಸುಭಿರ್ನೂಪುರಸಿಂಜಿತಾನಿ [1–34]

ನಸುಬಾಗಿ ಬಳುಬಳುಕಿ ಲೀಲೆಯಿಂದಡಿಯಿಡುವ
ಆಕೆಯಂದುಗೆ ದನಿಯ ಕಲಿಯೆ ತಾನು

ಚೆಲುನಡೆಯ ಬೆಡಗೆಸೆವ ತನ್ನಲಸಗಮನವನು
ಅರಸಂಚೆ ಪಾರ್ವತಿಗೆ ಕಲಿಸಿತೇನು

ಭಟ್ಟರ ಅನುವಾದ ಅತ್ಯಂತ ಸುಲಲಿತವಾಗಿ ಸಾಗುತ್ತದೆ. ನೂಪುರ ಸಿಂಜಿತಾನಿ – ಅಂದುಗೆದನಿ ಎಂದು, ಸಂನತಾಂಗಿ – ನಸುಬಾಗಿ ಎಂದು, ಲೀಲಾಂಚಿತ ವಿಕ್ರಮ – ಲೀಲೆಯಿಂದಡಿಯಿಡುವ ಎಂದಾಗಿದೆ. ಮೂಲದಲ್ಲಿಲ್ಲದ ಒಂದೆರಡು ಶಬ್ದಗಳು ಹೆಚ್ಚಿಗೆ ಸೇರಿದ್ದರೂ ಅದರಿಂದ ಪದ್ಯದ ಸೊಗಸು ಹೆಚ್ಚಿದೆಯೇ ಹೊರತು ಕಡಿಮೆಯಾಗಿಲ್ಲ.

ಈಶ್ವರನು ಪಾರ್ವತಿಯ ಮೇಲೆ ಮನಸ್ಸುಮಾಡಿ, ಅವಳ ಕೈಹಿಡಿಯುವುದು ದೇವತೆಗಳಿಗೆ ಬೇಕಾಗಿರುವುದು. ಆದರೆ ಶಿವನೋ ತಪೋನಿರತ. ಶಿವನ ತಪಸ್ಸನ್ನು ಭಂಗಗೊಳಿಸಲೆಂದೇ ಮನ್ಮಥನು ತನ್ನ ಪರಿವಾರದೊಂದಿಗೆ ಹೈಮಾಶ್ರಮಕ್ಕೆ ದಾಳಿ ಇಟ್ಟಿದ್ದಾನೆ. ಕಾಲವಲ್ಲದ ಕಾಲದಲ್ಲಿ ವಸಂತದ ವೈಭವ ಈ ಇಡೀ ಪ್ರದೇಶವನ್ನಾವರಿಸಿದೆ. ಅದರ ಪರಿಣಾಮ ಸಕಲ ಚರಾಚರ ಪ್ರಕೃತಿಯ ಮೇಲಾಗಿದೆ.

ಮಧುದ್ವಿರೇಫಃ ಕುಸುಮೈಕ ಪಾತ್ರೇ
ಪಪೌಪ್ರಿಯಾಂ ಸ್ವಾಮನುವರ್ತಮಾನಃ
ಶೃಂಗೇಣಚ ಸ್ಪರ್ಶ ನಿಮೀಲಿತಾಕ್ಷೀಂ
ಮೃಗೀಯಮಕಂಡೂಯುತ ಕೃಷ್ಣಸಾರಃ [3–36]

ಒಂದೆ ಹೂವಟ್ಟಲಿನೊಳನುಸರಿಸುತಿನಿಯಳನು
ತುಂಬಿಯುಂಡುದು ಬಂಡನೊಲಿದು ಬಂದು
ಸೋಂಕು ಸೊಗದಿಂದೆವೆಯನರೆ ಮುಚ್ಚಿದೆರಳೆಯನು
ಕೃಷ್ಣಮೃಗ ಶೃಂಗದಲಿ ತುರಿಸಿದುದು

ಕುಸುಮೈಕ ಪಾತ್ರೇ– ಎಂಬುದು 'ಒಂದೆ ಹೂಬಟ್ಟಲಿನೊಳು' ಎಂದು, ಪ್ರಿಯಾಂ ಸ್ವಾಮನುವರ್ತಮಾನಃ–ಎಂಬುದು ಅನುಸರಿಸುತಿನಿಯಳನು ಎಂದು ಹಾಗೂ 'ಸ್ಪರ್ಶನಿಮೀಲಿತಾಕ್ಷೀ–ಎಂಬುದು –ಸೋಂಕು ಸೊಗದಿಂದೆವೆಯನರೆಮುಚ್ಚಿದೆರಳೆ.' ಎಂದು. ಹಾಗೆಯೇ ಮಧು ದ್ವಿರೇಫಃ ಪಪೌ–ಎಂಬುದು–ತುಂಬಿಯುಂಡುದು ಬಂಡನು ಎಂದು ಅನುವಾದಿಸಿರುವುದು ಅತ್ಯಂತ ಸೂಕ್ತವಾದ ರೀತಿ ಎಂದು ಯಾರಿಗಾದರೂ ಅನಿಸುತ್ತದೆ.

ಹರ ಗಾಢವಾದ ತಪಸ್ಸಿನಲ್ಲಿ ಮುಳುಗಿದ್ದಾನೆ. ಅವನ ತಪಸ್ಸಿಗೆ ಕಿಂಚಿತ್ತೂ ವಿಘ್ನವೊದಗಕೂಡದು. ಚರಾಚರ ಪ್ರಕೃತಿ ನಿಸ್ತಬ್ಧವಾಗಿರಬೇಕು. ಅದರ ನಿರ್ವಹಣೆ ನಂದಿಯದು. ಅವನು ಬಂಗಾರದ ಬೆತ್ತ ಹಿಡಿದು ಲತಾಗೃಹದ ದ್ವಾರದಲ್ಲಿ ನಿಂತು ಕೈಸನ್ನೆಯಿಂದ ಗಣಗಳು ಚಪಲತೆಯನ್ನು ಬಿಡಬೇಕೆಂದು ತಾಕೀತು ಮಾಡುತ್ತಿದ್ದಾನೆ. ಆ ವಾತಾವರಣವನ್ನು ಬಣ್ಣಿಸುವ ಈ ಪದ್ಯದ ಕನ್ನಡ ಅವತರಣಿಕೆ ಅದೆಷ್ಟು ಚೆಲುವಾಗಿದೆ ಎಂದರೆ ಅದಕ್ಕಿಂತ ಚೆನ್ನಾಗಿ ಅನುವಾದಿಸಲು ಸಾಧ್ಯವೇ ಇಲ್ಲ ಎನ್ನುವಷ್ಟು:

ನಿಷ್ಕಂಪ ವೃಕ್ಷಂ ನಿಭೃತ ದ್ವಿರೇಫಂ
ಮೂಕಾಂಡಜಂ ಶಾಂತ ಮೃಗಪ್ರಚಾರಂ
ತತ್‌ಶಾಸನಾತ್ ಕಾನನಮೇವ ಸರ್ವಂ
ಚಿತ್ರಾರ್ಪಿತಾರಂಭಮಿವಾವತಸ್ಥೇ. [3–42]

ವೃಕ್ಷ ಕಂಪನ ನಿಂತು ಭ್ರಮರ ಸಂಭ್ರಮ ನಿಂತು
ಅಂಡಜ ಧ್ವನಿ ನಿಂತು ಮೃಗಚಲನೆ ನಿಂತು

ಆತನಾಣತಿ ಸಂದು ಸರ್ವಕಾನನಮಂದು
ನಿಶ್ಚೇಷ್ಟಿತಾರಂಭ ಮಾಗಿರ್ದುದಂದು

ಇಲ್ಲಿಯ ಅನುವಾದದ ಸೊಗಸನ್ನು ಕುರಿತು ಪ್ರೊ. ಅ.ರಾ.ಮಿತ್ರ ಅವರು "ಇಲ್ಲಿ ನಿಂತು, ಅಂದು, ಸಂದು, ಈ ಮೂರು ಶಬ್ದಗಳನ್ನು ಕುಣಿಸಿ, ಎಂಥ ಅಪೂರ್ವ ಸನ್ನಿವೇಶ ನಿರ್ಮಾಣ ಮಾಡಿದ್ದಾರೆಂಬುದನ್ನು ನೆನೆದರೆ, ವಿಸ್ಮಯವಾಗುತ್ತದೆ. ಈ ಭಾಗಗಳನ್ನು ಇದಕ್ಕಿಂತ ಪ್ರಭಾವಪೂರ್ಣವಾಗಿ ಅನುವಾದಿಸಲು ಸಾಧ್ಯವಿಲ್ಲ" ಎಂದು ಹೇಳಿರುವುದು ಯಥಾರ್ಥವಾಗಿದೆ. ಅಷ್ಟೇ ಅಲ್ಲದೆ ಕನ್ನಡಕ್ಕೆ ಸಹಜವಾದ ಅರ್ಥಯತಿಯನ್ನು ಪ್ರಾಸಸಹಿತವಾಗಿ ಒಂದು ಸಮತೂಕವುಂಟಾಗುವಂತೆ ಅಳವಡಿಸಿರುವುದು ಅದ್ಭುತವಾಗಿದೆ.

ಆದರೆ ಪಾರ್ವತಿ ಎಷ್ಟೆಲ್ಲ ಅಲಂಕರಿಸಿಕೊಂಡು ಬಂದರೂ, ಮನ್ಮಥನು ತನ್ನ ಮೋಹನಾಸ್ತ್ರವನ್ನು ಬೀರಿದಾಗ ಹರನು ಒಲಿಯುವುದು ಹಾಗಿರಲಿ, ಮನ್ಮಥನನ್ನೇ ತನ್ನ ಉರಿಗಣ್ಣಿನಿಂದ ಸುಟ್ಟುಬಿಟ್ಟನು. ಬಾಹ್ಯಸೌಂದರ್ಯದಿಂದ ಶಿವನನ್ನು ಒಲಿಸಲಾಗುವುದಿಲ್ಲವೆಂದು ತಿಳಿದ ಉಮೆ ತಪಸ್ಸಿನಿಂದ ಒಲಿಸಿಕೊಳ್ಳಲು ಕಠಿಣ ತಪಶ್ಚರ್ಯೆಗೆ ತೊಡಗಿದಳು.

ಉಮೆ ಪದ್ಮಾಸನಸ್ಥಳಾಗಿ ನಿಶ್ಚಲಳಾಗಿ ಕಣ್ಮುಚ್ಚಿ ತಪೋನುಷ್ಠಾನದಲ್ಲಿರುವ ಚಿತ್ರವನ್ನು ಅತ್ಯಂತ ಚಿತ್ರವತ್ತಾಗಿ ಕೊಡುತ್ತಿದ್ದಾನೆ. ಮೊದಲ ಮಳೆಹನಿ ಹೇಗೆ ಅವಳ ಕಣ್ಣೆವೆಯ ಮೇಲಿನಿಂದ ಕೆಳಗಿಳಿಯಿತೆಂಬುದನ್ನು ನೀಡುತ್ತಿದ್ದಾನೆ.

ಸ್ಥಿತಾಃ ಕ್ಷಣಂ ಪಕ್ಷ್ಮಸು ತಾಡಿತಾಧರಾಃ ಪಯೋಧರೋತ್ಸೇಧ ನಿಪಾತ ಚೂರ್ಣಿತಾಃ
ವಲೀಷು ತಸ್ಯಾಃ ಸ್ಖಲಿತಾಃಪ್ರಪೇದಿರೇ ಚಚಿರೇಣ ನಾಭಿಂ ಪ್ರಥಮೋದ ಬಿಂದವಃ

ಎವೆಯೊಳರೆಚಣವಿರುತೆ ಸಿಡಿದು ಕೆಳತುಟಿಗಿಳಿದು
ಬಟ್ಟಿತಹ ಮೊಲೆದುದಿಯೊಳೊಡೆದೊಡೆದು ಮತ್ತೆ
ವಳಿಗಳಲಿ ಜಗುಳಿಳಿದು ತಡೆತಡೆದು ಪುಗುತಂದು
ಹೊಕ್ಕುಳೊಳು ಮೊದಲ ಮಳೆವನಿಯಿಳಿದುದಲ್ತೆ

ಗಾಢ ತಪೋನುಷ್ಠಾನದ ಅನುಭವವಿಲ್ಲದೆ ಇಂಥ ಚಿತ್ರ ನೀಡಲು ಸಾಧ್ಯವಿಲ್ಲ.

ಭಟ್ಟರ ಅನುವಾದ ಅದನ್ನು ಮೂರ್ತಿಮತ್ತಾಗಿ ನೀಡಿದೆ. 'ಸ್ಖಲಿತಾಃ' ಎಂಬುದಕ್ಕೆ 'ಜಗುಳಿಳಿದು' ಎಂದು 'ಪ್ರಥಮೋದಬಿಂದವಃ' ಎಂಬುದಕ್ಕೆ– 'ಮೊದಲಮಳೆವನಿ' ಎಂದು ಅಚ್ಚಗನ್ನಡ ಶಬ್ದಗಳಲ್ಲಿ ಅನುವಾದಿಸಿರುವುದು ಅತ್ಯಂತ ಸೂಕ್ತವಾಗಿದೆ.

ಪಾರ್ವತಿಯ ತಪದ ಉದ್ದೇಶ, ದೃಢತೆಯನ್ನು ಪರೀಕ್ಷಿಸುವ ಸಲುವಾಗಿ ಶಿವನು ಕಪಟ ಬ್ರಹ್ಮಚಾರಿಯ ವೇಷದಲ್ಲಿ ಅಲ್ಲಿಗೆ ಬಂದು, ಅವಳ ಸಖಿಯರಿಂದ ಪರಶಿವನನ್ನು ಪತಿಯಾಗಿ ಪಡೆಯುವುದೇ ಅವಳ ತಪದ ಉದ್ದೇಶವೆಂದು ಅರಿತು, ಶಿವನನ್ನು ವಿಧವಿಧವಾಗಿ ನಿಂದಿಸತೊಡಗುತ್ತಾನೆ. ಕುಮಾರಸಂಭವದ ಅತ್ಯಂತ ಸ್ವಾರಸ್ಯಕರವಾದ ಪ್ರಸಂಗವಿದು. ವಟುವೇಷದ ಶಿವ, ಪಾರ್ವತಿಗೆ ಇಂಥ ಯೌವನದಲ್ಲಿ ತಪದಲ್ಲಿ ತೊಡಗಲು ಏನು ಕಾರಣ ಎನ್ನುತ್ತಾನೆ.

ಕಿಮಿತ್ಯಪಾಸ್ಯಾಭರಣಾನಿ ಯೌವನೇ ಧೃತಂ ತ್ವಯಾ ವಾರ್ಧಕಶೋಭಿ ವಲ್ಕಲಮ್
ವದಪ್ರದೋಷೇ ಸ್ಫುಟಚಂದ್ರ ತಾರಕಾ ವಿಭಾವರೀ ಯದ್ಯರುಣಾಯಕಲ್ಪತೇ॥

[5–44]

ಹರಯದೊಳು ನೀನಿಂತು ತೊಡವುಗಳನುಳಿದುಂತೆ
ಏಕೆ ಮುಪ್ಪಿಗೆ ತಗುವ ನಾರುಡೆಯನಾಂತೆ
ಚಂದ್ರತಾರೆಗಳಿಂದಲೆಸೆದು ಶೋಭಿಸುವಿರುಳು
ಅರುಣನನು ಬಯಸುವುದೆ ಆ ಪ್ರದೋಷದೊಳು

ಒಂದು ಅಕ್ಷರ ಕಮ್ಮಿ ಇಲ್ಲ, ಒಂದು ಅಕ್ಷರ ಹೆಚ್ಚಿಲ್ಲವೆನ್ನುವಂಥ ಅತ್ಯಂತ ಸಾರ್ಥಕವಾದ ಅನುವಾದ. ಹೆಚ್ಚಾಗಿ ಸೇರಿರುವ ಶೋಭೆಯೆಂದರೆ ಪಾದಾಂತ್ಯಪ್ರಾಸದ ಮಾಧುರ್ಯ.

ಪಿನಾಕಿಯನ್ನೊಲಿಸಿಕೊಳ್ಳಲು ತಪಗೈಯುತ್ತಿದ್ದಾಳೆ–ಎಂದು ಸಖಿಯರಿಂದ ತಿಳಿದ

ಕಪಟವಟು–ಪಾರ್ವತಿಯ ಚೆಲುವಿಗೂ, ಶ್ಮಶಾನವಾಸಿ ಶಿವನಿಗೂ ಎಲ್ಲಿಂದೆಲ್ಲಿಯ ಹೋಲಿಕೆ ಎಂದು ಶಿವನನ್ನು ಮಾತುಮಾತಿಗೂ ಜರಿಯುತ್ತಾನೆ.

ಕಾಳಿದಾಸ ಮನುಷ್ಯ ಹೃದಯದ ಭಾವನೆಗಳನ್ನು ಎಷ್ಟು ಸ್ವಾರಸ್ಯ ಪೂರ್ಣವಾಗಿ ವರ್ಣಿಸಬಲ್ಲನೋ ಹಾಗೆಯೇ ಒಂದು ಚಿತ್ರವನ್ನು ಅಷ್ಟೇ ಸೊಗಸಾಗಿ ಮನದಟ್ಟು ಮಾಡಿಕೊಡಬಲ್ಲನೆಂಬುದಕ್ಕೆ ಈ ಭಾಗ ಉತ್ಕೃಷ್ಟ ನಿದರ್ಶನವಾಗಿದೆ. ಕಪಟವಟುವಿನ ಕಟುವಾದ ಶಿವನಿಂದೆ ಸಹಿಸಲಾರದೆ ಪಾರ್ವತಿ ಸ್ಥಳಬಿಟ್ಟು ಓಡಲು ಮೊದಲು ಮಾಡಿದಳು. ಅಷ್ಟರಲ್ಲಿ ಪಾರ್ವತಿಯನ್ನು ಒಲಿದ ಶಿವನು ತನ್ನ ನಿಜರೂಪವನ್ನು ತಳೆದು ಆಕೆಯ ಕೈಹಿಡಿದಿದ್ದಾನೆ. ಪಾರ್ವತಿ ಹಿಂತಿರುಗಿ ನೋಡಿದರೆ ಎದುರಿಗೆ ಸಾಕ್ಷಾತ್ ಶಿವ. ಅದೂ ತಾನು ಯಾರನ್ನು ಒಲಿಸಿಕೊಳ್ಳಲು ಇಷ್ಟೆಲ್ಲ ಕಠೋರ ತಪಸ್ಸನ್ನಾಚರಿಸಿದಳೋ ಆ ಶಿವ. ಪಾರ್ವತಿ ಥಟ್ಟನೆ ನಿಂತಳು. ಹೊರಡಬೇಕೆಂದು ಒಂದು ಕಾಲನ್ನೆತ್ತಿ ಹೆಜ್ಜೆ ಮುಂದಿಡುವಷ್ಟರಲ್ಲೇ ಶಿವನನ್ನು ಕಂಡದ್ದರಿಂದ ಎತ್ತಿದ ಪಾದವನ್ನು ಕೆಳಗಿಡದೆ ಶಿವನನ್ನು ನೋಡುತ್ತ ಸ್ತಬ್ಧಳಾಗಿ ನಿಂತುಬಿಟ್ಟಳಂತೆ. ಅದನ್ನು ಮನವರಿಕೆ ಮಾಡಿಕೊಡಲು ಕಾಳಿದಾಸ ಒಂದು ದೃಷ್ಟಾಂತವನ್ನು ನೀಡುತ್ತಾನೆ. ವೇಗವಾಗಿ ಓಡಿ ಬರುವ ನದಿಯ ಪ್ರವಾಹ, ಮಾರ್ಗಮಧ್ಯದಲ್ಲಿ ಪರ್ವತವೊಂದನ್ನು ತಾಗಿದರೆ ಹೇಗೆ ಮುಂದೆ ಸಾಗಲಾಗಲಿ, ಹಿಂದೆ ಹೋಗಲಾಗಲಿ ಸಾಧ್ಯವಾಗದೆ ತತ್ತರಿಸುತ್ತದೋ ಹಾಗೆ ಪಾರ್ವತಿ ಹಿಂದೆ ಹೋಗಲಾಗಲಿ, ಮುಂದುವರಿಯಲಾಗಲಿ ಸಾಧ್ಯವಾಗದೆ ದಿಕ್ಕುತೋಚದಂತೆ ನಿಂತ ಚಿತ್ರ ಇದು. "ವರ್ಣನೆಯಲ್ಲಿ ಕ್ರೋಧ, ಆನಂದ, ಔತ್ಸುಕ್ಯ, ಲಜ್ಜೆ ಮತ್ತು ಕಿಂಕರ್ತವ್ಯ ಮೂಢತೆ ಎಲ್ಲವೂ ಧ್ವನಿತವಾಗಿದೆ"[2]

ತಂ ವೀಕ್ಷ್ಯವೇಪಥುಮತೀ ಸರಸಾಂಗಯಷ್ಟಿ–
ರ್ನಿಕ್ಷೇಪಣಾಯ ಪದಮುದ್ಧೃತಮುದ್ವಹಂತೀ ।
ಮಾರ್ಗಾಚಲವ್ಯತಿಕರಾಕುಲಿತೇವ ಸಿಂಧುಃ
ಶೈಲಾಧಿರಾಜತನಯಾ ನಯಯೌ ನ ತಸ್ಥೌ ॥ [5–85]

ಭಟ್ಟರು ಅಚ್ಚಗನ್ನಡ ಶಬ್ದಗಳಲ್ಲಿ ಪಾರ್ವತಿಯ ಈ ಸ್ಥಿತಿಯನ್ನು ಅಷ್ಟೇ ಸೊಗಸಾಗಿ ಹಿಡಿದಿರಿಸಿದ್ದಾರೆ. "ನಯಯೌ ನ ತಸ್ಥೌ"ಗೆ ಅಷ್ಟೇ ಚಟುಕಾಗಿ– 'ನಿಲ್ಲಲಿಲ್ಲ ಆಹ ನಡೆಯಲಿಲ್ಲ' ಎಂದು ಅನುವಾದಿಸಿರುವುದು ಅತ್ಯಂತ ಯುಕ್ತವಾಗಿದೆ.

ಆತನನು ಕಂಡೊಡನೆ ಸಲೆನಡುಗಿ ಮೈಬೆವರಿದಂದು
ಹೆಜ್ಜೆಯಿಡಲೆಂದೆತ್ತಿದೊಂದಡಿಯನಂತೆತ್ತಿ ನಿಂದು
ದಾರಿಯೊಳಗರೆಬಂಡೆಗುರೆನೊಂದ ತೊರೆಯಾದಳಲ್ಲ
ಶೈಲಾಧಿರಾಜಸುತೆ ನಿಲಲಿಲ್ಲ ಆಹ ನಡೆಯಲಿಲ್ಲ.

ರಘುವಂಶ

ರಘುವಂಶವು ಕಾಳಿದಾಸನ ಅತ್ಯಂತ ಶ್ರೇಷ್ಠ ಕೃತಿ. ಅವನ ಪರಿಣತ ಪ್ರತಿಭೆಯ ಫಲಸ್ವರೂಪವಾಗಿ ಮೂಡಿದ ಕೃತಿ. ಪಾಂಡಿತ್ಯ ಪ್ರತಿಭೆಗಳು ಸಮಸಮವಾಗಿ ಮೇಳೈಸಿದ ಕೃತಿ. ರಘುವಂಶದ ರಾಜರುಗಳ ವಿಸ್ತಾರವಾದ ಕತೆಯನ್ನು 19 ಸರ್ಗಗಳಲ್ಲಿ 1564 ಪದ್ಯಗಳಲ್ಲಿ ರಮ್ಯೋಜ್ವಲವಾಗಿ ಬಣ್ಣಿಸಿದ್ದಾನೆ. ಕಾಳಿದಾಸನ ಪ್ರತಿಭೆಯ ವಿಲಾಸದ ವಿವಿಧ ಮುಖಗಳ ಸಕೃದ್ದರ್ಶನ ರಘುವಂಶದಲ್ಲಿ ಆಗುತ್ತದೆ. ಪ್ರಾರಂಭದ 9 ಸರ್ಗಗಳಲ್ಲಿ ರಾಮನ ಪೂರ್ವಜರ ಕಥೆ, 10 ರಿಂದ 15ರವರೆಗಿನ 6 ಸರ್ಗಗಳಲ್ಲಿ ರಾಮನ ಕಥೆ, ಕೊನೆಯ ನಾಲ್ಕು ಸರ್ಗಗಳಲ್ಲಿ ರಾಮನ ಅನಂತರದ ರಾಜರ ಕಥೆಯನ್ನು ನಿರೂಪಿಸಲಾಗಿದೆ.

ರಘುವಂಶದ ಕೆಲವು ಸ್ವಾರಸ್ಯಕರವಾದ ಪ್ರಸಂಗಗಳ ಆಸ್ವಾದನೆಯ ಮೂಲಕವೇ ಅನುವಾದದ ಸ್ವಾರಸ್ಯವನ್ನು ಸವಿಯಬಹುದು. ವಾಕ್ ಮತ್ತು ಅರ್ಥಗಳು ಪಾರ್ವತಿ ಪರಮೇಶ್ವರರಂತೆ ಪರಸ್ಪರ ಹೊಂದಿಕೊಳ್ಳಬೇಕು. ಆಗಲೇ ವಾಗರ್ಥ ಪ್ರತೀತಿ. ಪ್ರತಿಯೊಂದು ಶಬ್ದಕ್ಕೂ ಅದರದೇ ಆದ ಧ್ವನ್ಯರ್ಥ ಮತ್ತು ಸೂಚನಾರ್ಥಗಳಿರು . ಒಂದು ಶಬ್ದದ ಬದಲಿಗೆ ಕೆಲವೊಮ್ಮೆ ಬೇರೆ ಶಬ್ದ ಹಾಕಲಾಗುವುದೇ ಇಲ್ಲ. ಅನುವಾದಕ ಇಂಥ ಕಡೆ ತೀರ ಎಚ್ಚರ ವಹಿಸಬೇಕಾಗುತ್ತದೆ. ಇದು ಅಂಥದೊಂದು ಸಂದರ್ಭ.

ಸುರಧೇನುವಿನ ಶಾಪ ಕಾರಣವಾಗಿ ದಿಲೀಪನಿಗೆ ಮಕ್ಕಳಾಗಲಿಲ್ಲವೆಂದು ವಸಿಷ್ಠರು ಹೇಳಿದರು. ಶಾಪನಿವಾರಣೆಗಾಗಿ ನಂದಿನಿಯನ್ನು ಪೂಜಿಸಿ ಅದರ ವರಪ್ರಸಾದ ಪಡೆಯಲು ಉಪದೇಶಿಸುತ್ತಾರೆ. ನಿದ್ರೆ ತಿಳಿದೆದ್ದ ಮೇಲೆ ರಾಜನು–

ಅಥಪ್ರಜಾನಾಮಧಿಪಃ ಪ್ರಭಾತೇ
ಜಾಯಾ ಪ್ರತಿಗ್ರಾಹಿತ ಗಂಧಮಾಲ್ಯಾಮ್ ।
ವನಾಯ ಪೀತಪ್ರತಿಬದ್ಧವತ್ಸಾಂ
ಯಶೋಧನೋ ಧೇನುಮೃಷೇರ್ಮುಮೋಚ [2–1]

ಎಸ್.ವಿ.ಪಿ.ಯವರ ಅನುವಾದ :

ಪೊಳ್ತರೆಯೊಳಾ ಬಳಿಕ ಗಂಧಮಾಲೆಯ ತಂದು
ಜಾಯೆ ಗೋಪೂಜೆಯನು ಮಾಡಿದಂದು ।
ಮೊಲೆಯುಂಡ ಕರುಕಟ್ಟಿ ಅದನಡವಿಗಟ್ಟಿದನು
ಜನಪನು ಯೋಶಧನನು ಮೇಯಲೆಂದು ॥

ಇಲ್ಲಿ ಕವಿ ಉದ್ದೇಶ ಪೂರ್ವಕವಾಗಿಯೇ 'ಜಾಯಾ' ಶಬ್ದವನ್ನು ಬಳಸಿದ್ದಾನೆ. ಮುಂದೆ ಸಂತಾನವನ್ನು ಪಡೆಯುವವಳು ಎನ್ನುವ ಅರ್ಥ ಸೂಚಕ ಪದವಾದ ಇದರ ಬದಲಿಗೆ ಇದೇ ಅರ್ಥವುಳ್ಳ ಭಾರ್ಯಾ, ಪತ್ನೀ ಮೊದಲಾದ ಬೇರೆ ಯಾವುದೇ ಶಬ್ದ, ಛಂದಸ್ಸು ಮತ್ತು ವಾಚ್ಯಾರ್ಥ ದೃಷ್ಟಿಯಿಂದ ಸರಿ ಎನಿಸಿದರೂ ಉದ್ದಿಷ್ಟ ಅರ್ಥ ಅದರಿಂದ ಹೊರಡಲಾರದು. ಅನುವಾದಕರು ಆ ಶಬ್ದವನ್ನು ಹಾಗೆಯೇ ಉಳಿಸುವ ಮೂಲಕ ಔಚಿತ್ಯವನ್ನು ಮೆರೆದಿದ್ದಾರೆ.

ರಘುವಿನ ಯೌವನೋದಯವನ್ನು ವರ್ಣಿಸುವ ಈ ಪದ್ಯವನ್ನು ಕನ್ನಡದ ದೇಸಿ ನುಡಿಗಳಿಂದ ತುಂಬಿ ಬಿಟ್ಟಿದ್ದಾರೆ.

ಮಹೋಕ್ಷತಾಂ ವತ್ಸತರಃ ಸ್ಪೃಶನ್ನಿವ
ದ್ವಿಪೇಂದ್ರ ಭಾವಂ ಕಲಭಃ ಶ್ರಯನ್ನಿವ

ರಘುಃ ಕ್ರಮಾದ್ಯೌವನ ಭಿನ್ನ ಶೈಶವಃ
ಪುಪೋಷ ಗಾಂಭೀರ್ಯ ಮನೋಹರಂ ವಪುಃ [3–32]

ಪೇರೆತ್ತು ತಾನಾಗುವೆಳೆಹೋರಿಯಂತೆ
ಪೇರಾನೆಯಾಗಲಿರುವಾನೆಮರಿಯಂತೆ
ಹರೆಯವನು ಪಡೆದ ರಘು ಶೈಶವವನುಳಿದು
ಚೆಲುವೆಸೆವ ಮೈಯಂದವನು ತಳೆದನಂದು

ರಘುವಂಶದ ಸ್ವಾರಸ್ಯಕರವಾದ ಇನ್ನೊಂದು ಸಂದರ್ಭ, ಕಾಳಿದಾಸನಿಗೆ 'ದೀಪಶಿಖಾ ಕಾಳಿದಾಸ' ಎಂಬ ಬಿರುದು ತಂದಿತ್ತ ಇಂದುಮತೀ ಸ್ವಯಂವರದ ಸಂದರ್ಭ. ವರಣ ಮಾಲಿಕೆಯನ್ನು ಕೈಯಲ್ಲಿ ಹಿಡಿದು 'ಇಂದುಮತಿ' ರಾಜಕುಮಾರರ ಸಾಲಿನಲ್ಲಿ ಮುಂದೆ ಸಾಗುತ್ತ ಹೋದಂತೆ, ರಾಜಕುಮಾರರ ಮುಖಭಾವದಲ್ಲಾದ ವ್ಯತ್ಯಾಸಗಳನ್ನು ಈ ಸುಂದರ ಉಪಮೆಯ ಮೂಲಕ ಕಾಳಿದಾಸ ಹೊಮ್ಮಿಸುತ್ತಿದ್ದಾನೆ.

ಸಂಚಾರಿಣೀ ದೀಪ ಶಿಖೇವ ರಾತ್ರೌ
ಯಂ ಯಂ ವ್ಯತೀಯಾಯ ಪತಿಂ ವರಾ ಸಾ ।
ನರೇಂದ್ರ ಮಾರ್ಗಾಟ್ಟ ಇವ ಪ್ರಪೇದೇ
ವಿವರ್ಣ ಭಾವಂ ಸ ಸ ಭೂಮಿ ಪಾಲಃ [6–67]

ದೀವಟಿಗೆ ಹಿಡಿದ ಆಳೊಬ್ಬನು ರಾಜ ಬೀದಿಯಲ್ಲಿ ಹೋಗುತ್ತಿದ್ದಾಗ ದೀವಟಿಗೆಯ ಬೆಳಗು ಸೌಧದ ಮೇಲೆ ಬಿದ್ದಾಗ, ಆ ಸೌಧ ಬೆಳಗಿ, ದೀವಟಿಗೆ ಮತ್ತೆ ಮುಂದೆ ಸಾಗಿದಾಗ ಆ ಸೌಧ ಕಳೆಗುಂದುವ ಹಾಗೆ; ಇಂದುಮತಿ ಹತ್ತಿರ ಬಂದಾಗ, ಆ ರಾಜಕುಮಾರರ ಮುಖವು ಬೆಳಗಿ, ಅವಳು ಮುಂದೆ ಸರಿದಾಗ ಬಾಡುತ್ತಿತ್ತು ಎಂಬುದು ಕವಿಯ ವರ್ಣನೆ. ಇದು ಕವಿಯ ಉಪಮಾ ಸಾಮರ್ಥ್ಯಕ್ಕೆ ನಿದರ್ಶನವಷ್ಟೇ ಆಗಿರದೆ, ಕಾಳಿದಾಸನಿಗೆ 'ಸಂಚಾರಿಣೀ ದೀಪಶಿಖಾ' ಎಂಬ ಬಿರುದನ್ನು ತಂದ ಉಪಮೆಯೂ ಆಗಿದೆ. ಭಟ್ಟರ ಕನ್ನಡ ಅನುವಾದ ಪದ್ಯದ ಮೂಲದ ಭಾವವನ್ನು ತುಂಬ ಸಮರ್ಥವಾಗಿಯೇ ಹಿಡಿದಿರಿಸಿದೆ. ಕನ್ನಡಕ್ಕೆ ಸಹಜವಾದ 5 ಮಾತ್ರೆಗಳ ಗಣಗಳಿಂದ ಕೂಡಿದ ಪದ್ಯದ ಕೊನೆಯಲ್ಲಿ ಸಾಮಾನ್ಯವಾಗಿ ಪ್ರಾಸ ಬರುತ್ತದೆ.

ಇರುಳಿನಲಿ ಸಂಚರಿಪ ದೀಪಾಂಕುರಂಬೋಲು
ಆವಾವ ದೊರೆಗಳನು ಅವಳುಳಿದಳು
ಆ ಆ ನೃಪೋತ್ತಮರು ಕುಸಿದರು ವಿವರ್ಣದೊಳು
ರಾಜಪಥದಿರ್ಕೆಲದ ಸೌಧಗಳೊಲು!

ರಘುವಂಶದಲ್ಲಿ ಬರುವ ದಶರಥನ ಮೃಗಯಾ ವಿಹಾರವಿರುವ 9ನೇ ಸರ್ಗದ ಮೊದಲ 54 ಪದ್ಯಗಳಲ್ಲಿ ಕೊನೆಯ ಸಾಲಿನಲ್ಲಿ ಯಮಕಗಳು ಇರುವಂತೆ ಕಾಳಿದಾಸ ಯೋಜಿಸಿದ್ದಾನೆ. ಕಾಳಿದಾಸನಂಥ ಕವಿ ಕೂಡ ಈ ಶಬ್ದಾಲಂಕಾರದ ವ್ಯಾಮೋಹಕ್ಕೆ ಬಿದ್ದಿರುವುದು ಸಂಪ್ರದಾಯದ ಹಿಡಿತ ಎಷ್ಟು ಬಲಿಷ್ಠ ಎಂಬುದರ ದ್ಯೋತಕ. ಇದು ಸಂಸ್ಕೃತದ ಭಾಷಾ ರೂಢಿಗೆ ಸಹಜವೇ ಇರಬಹುದಾದರೂ ಕನ್ನಡದ ಜಾಯಮಾನಕ್ಕಂತೂ ಕಿಂಚಿತ್ತೂ ಒಗ್ಗುವಂಥದಲ್ಲ. ಹಾಗಾಗಿ ಕನ್ನಡ ರಘುವಂಶದಲ್ಲಿ ಎಸ್.ವಿ.ಪಿ. ಅವರು ಅದನ್ನು ಪ್ರಯೋಗಿಸುವ ಗೊಡವೆಗೆ ಹೋಗದಿರುವುದು ಸರಿಯಾಗಿಯೇ ಇದೆ.

11ನೆಯ ಸರ್ಗದಲ್ಲಿ ತಾಟಕಿಯ ಸಂಹಾರ, ರಾಕ್ಷಸ ಸಂಹಾರಕ್ಕೆ ದಾರಿಮಾಡಿ ಕೊಟ್ಟ ಬಗೆಯನ್ನು ಹೇಳುವ ಈ ಕನ್ನಡ ಪದ್ಯ, ಕನ್ನಡದ ದೇಸಿ ನುಡಿಗಳನ್ನು ಬಳಸಿಕೊಂಡು

(ಬಿಲ, ಕದ) ತುಂಬ ಸುಂದರವಾಗಿ ಮೂಡಿಬಂದಿದೆ. 'ಶಿಲಾಘನೇತಾಡಕೋರಸಿ' ಎಂಬ ಸಂಸ್ಕೃತ ಪದಕ್ಕೆ "ತಾಟಕಿಯ ಕಲ್ಲೆದೆ" ಎಂಬುದು ಸೊಗಸಾದ ಅನುವಾದ.

ಯಚ್ಚಕಾರ ವಿವರಂ ಶಿಲಾಘನೇ
ತಾಡಕೋರಸಿ ಸ ರಾಮ ಸಾಯಕಃ
ಅಪ್ರವಿಷ್ಟವಿಷಯಸ್ಯ ರಕ್ಷಸಾಂ
ದ್ವಾರತಾಮಗಮದನ್ತ ಕಸ್ಯ ತತ್!

ತಾಟಕಿಯ ಕಲ್ಲೆದೆಯೊಳಾ ರಾಮ ಸಾಯಕವು
ಆ ತೆರದೆ ಪೊಕ್ಕಿರಿದು ಕೊರೆದೊಂದು ಬಿಲವು
ರಾಕ್ಷಸರ ಕೊಲುವಂದು ದಾರಿಕಾಣದೆ ತೊಳಲು
ವಂತಕನಿಗಾದತ್ತು ಕದ ತೆರೆದವೊಲು [11–18]

ರಾವಣಸಂಹಾರದ ನಂತರ ರಾಮನು ಸೀತೆಯೊಂದಿಗೆ ಪುಷ್ಪಕ ವಿಮಾನವನ್ನೇರಿ ಅಯೋಧ್ಯೆಗೆ ಹಿಂತಿರುಗುತ್ತಿದ್ದಾಗ, ಕಾಡಿನಲ್ಲಿ ಒಂದೆಡೆ ಇಳಿದು ಸೀತೆಯ ವಿರಹದಿಂದ ತನಗಾದ ವೇದನೆಯನ್ನು ವಿವರಿಸುತ್ತಿದ್ದಾನೆ.

"ರಾವಣ ನಿನ್ನನ್ನು ಯಾವ ಮಾರ್ಗವಾಗಿ ಅಪಹರಿಸಿಕೊಂಡು ಹೋದನೋ ಅದನ್ನು ಈ ಲತೆಗಳು, ಸ್ತ್ರೀ ಸ್ವಭಾವಕ್ಕನುಗುಣವಾದ ಆರ್ದ್ರ ಹೃದಯದವರಾದ್ದರಿಂದ, ತಮ್ಮ ಬಳಗಕ್ಕೆ ಸೇರಿದವಳೊಬ್ಬಳು ವೇದನೆಯಿಂದ ನರಳುತ್ತಿರುವುದನ್ನು ಕಂಡು ಕರುಣೆ ಉಕ್ಕಿ ಕೃಪದೋರಿ ಮಾರ್ಗವನ್ನು ಸೂಚಿಸಿದವು ಹೇಗೆಂದರೆ – ಎಲೆಗಳಿಂದ ಕೂಡಿದ ಅವುಗಳ ಶಾಖೆಗಳನ್ನು ಒಂದು ಕಡೆಗೆ ಬಾಗಿಸುವ ಮೂಲಕ. ವಾಗಿಂದ್ರಿಯದ ಅಭಾವದಿಂದಾಗಿ, ಮಾತನಾಡಲಾರದ ಅವು ಸೀತೆಯನ್ನು ರಾವಣ ಕೊಂಡೊಯ್ದ ದಿಕ್ಕಿನತ್ತ ತಮ್ಮ ಕರಪಲ್ಲವಗಳಿಂದ ಕೂಡಿದ ಬಾಹುಗಳನ್ನು ಚಾಚಿ ಸ್ಪಷ್ಟವಾಗಿ ಸೂಚಿಸಿದವು" ಎನ್ನುತ್ತಾನೆ. ಇದು ಮೂಲ ಪದ್ಯ ಮತ್ತು ಅದರ ಅನುವಾದ :

ತ್ವಂ ರಕ್ಷಸಾಭೀರು ಯತೋಽಪನೀತಾ
ತಂ ಮಾರ್ಗಮೇತಾಃ ಕೃಪಯಾ ಲತಾಮೇ
ಅದರ್ಶಯನ್ ವಕ್ತುಮಶಕ್ನುವತ್ಯಃ
ಶಾಖಾಭಿರಾವರ್ಜಿತ ಪಲ್ಲವಾಭಿಃ [11–18]

ರಾಕ್ಷಸನದೇ ಮಾರ್ಗದಿಂದೊಯ್ದನೆನುವುದನು
ಎಲೆ ಭೀರು ಮಾತಿನಿಂದರುಹಲರಿಯದವು
ದಯೆಗೈದು ಪೇಳಿದವು ಈ ಲತೆಗಳೆನಗಂದು
ಚಿಗುರುಗಳ ಭಾರದಿಂದೊದೆಡೆಗೆ ತೊನೆದು

ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದ ಮಾರ್ಗವನ್ನು ರಾಮನಿಗೆ ಸೂಚಿಸಿದ್ದು, ಹೆಣ್ಣು ಜಿಂಕೆಗಳು, ರಾಮನಿಗೆ ಮಾರ್ಗ ತೋರಿದ ಬಗೆ ಅತ್ಯಂತ ಹೃದಯ ಸ್ಪರ್ಶಿಯಾಗಿದೆ.

ಮೃಗ್ಯಶ್ಚ ದರ್ಭಾಂಕುರ ನಿರ್ವ್ಯಪೇಕ್ಷಾಃ
ತವಾಗತಿಜ್ಞಂ ಸಮಬೋಧಯನ್ಮಾಮ್
ವ್ಯಾಪಾರಯಂತ್ಯೋ ದಿಶಿದಕ್ಷಿಣಸ್ಯಾಂ
ಉತ್ಪಕ್ಷ್ಮ ರಾಜೀನಿ ವಿಲೋಚನಾನಿ [13–25]

ಭಟ್ಟರ ಅನುವಾದ ಇದು:

ಎಳೆಯ ಕುಶಸೂಚಿಯನು ನಲಿದು ಮೇವುದನುಳಿದು
ನಿನ್ನ ಗತಿಯರಿಯದೆನಗೆರಳೆಗಳುಮಂದು
ತಿಳಿಪುವೋಲರುಹಿದುವು ಮೇಲೆತ್ತಿ ಕಣ್ಣೆವೆಯ
ತಿರುಗಿಸುತೆ ದಿಟ್ಟಿಯನು ತೆಂಕಣತ್ತರಿಯ

ಹರಿಣಿಗಳು ಲತೆಗಳಿಗಿಂತಲೂ ಹೆಚ್ಚು ತಿಳಿವಳಿಕೆಯುಳ್ಳವಾದ ಕಾರಣ, ಅವು ಇನ್ನೂ ಸ್ಪಷ್ಟವಾಗಿ ಸೂಚಿಸಿದವು. ಹೆಣ್ಣು ಜಿಂಕೆಗಳು ಆ ರೀತಿಯ ದುಃಖದ ದೃಶ್ಯವನ್ನು ನೋಡಿ ವೇದನೆಗೊಳಗಾದ ಕಾರಣ, ಗರುಕೆ ಚಿಗುರನ್ನು ತಿನ್ನುವುದನ್ನು ಬಿಟ್ಟು, ನೀನು ಹೋದ ದಿಕ್ಕಿನೆಡೆಗೆ, ಮೇಲಕ್ಕೆ ಎತ್ತಿದ ರೆಪ್ಪೆಯ ಕಣ್ಣುಗಳನ್ನು ಕೀಲಿಸಿದ್ದುವು. ಹೀಗೆ ಕಣ್ಣಿವೆಗಳನ್ನು ಮೇಲೆತ್ತಿ, ದಕ್ಷಿಣಕ್ಕೆ ಮುಖ ಮಾಡುವ ಮೂಲಕ ಆಕಾಶ ಮಾರ್ಗವಾಗಿ ನಿನ್ನನ್ನು ದಕ್ಷಿಣಕ್ಕೆ ಕೊಂಡೊಯ್ದನೆಂಬುದನ್ನು ಸೂಚಿಸಿದವು.

ಈ ಎರಡೂ ಉದಾಹರಣೆಗಳಲ್ಲಿ ಪ್ರತೀಯಮಾನ ವೃತ್ತಿಯ ಉತ್ಪ್ರೇಕ್ಷೆಯ ಮೂಲಕ ಈ ಭಾವವನ್ನು ಅಭಿವ್ಯಕ್ತಿಸುವುದು ಕವಿಯ ಅಪೇಕ್ಷೆ. ಜೊತೆಗೆ 'ಲತಾ' ಶಬ್ದ ಬದಲಿಗೆ 'ವೃಕ್ಷ' ಹಾಗೂ 'ಮೃಗೀ' ಶಬ್ದದ ಬದಲಿಗೆ 'ಮೃಗ' ಎಂಬ ಪುಲ್ಲಿಂಗ ರೂಪಗಳು ಇದ್ದರೂ ವರ್ಣಿತ ವಸ್ತುವಿನ ಔಚಿತ್ಯಕ್ಕನುಸಾರವಾಗಿ ಹಾಗೂ ಸಹೃದಯರಿಗೆ ಆಹ್ಲಾದ ಉಂಟುಮಾಡುವ ಸಲುವಾಗಿ ಸ್ತ್ರೀಲಿಂಗರೂಪಗಳನ್ನೇ ಬಳಸುವುದು ಕವಿಯ ಅಭೀಪ್ಸ. ಭಟ್ಟರ ಅನುವಾದದಲ್ಲೂ 'ಲತೆಗಳು' ಮತ್ತು 'ಎರಳೆಗಳು' (ಹೆಣ್ಣು ಜಿಂಕೆಗಳು) ಎಂಬ ಶಬ್ದಗಳ ಬಳಕೆಯಾಗಿರುವುದರಿಂದ ಮೂಲ 'ಭಾವ' ಮತ್ತು ಕವಿಯ ಆಶಯ ನೆರವೇರಿದೆ.

ಇನ್ನು 'ಸೀತಾ ಪರಿತ್ಯಾಗ'ದ ಪ್ರಸಂಗವಂತೂ ವಾಲ್ಮೀಕಿಯ ಕಾಲದಿಂದ ಹಿಡಿದು 20ನೇ ಶತಮಾನದ ಕುವೆಂಪು ಅವರ ತನಕ ಅನೇಕ ಸಂಸ್ಕೃತ, ಕನ್ನಡ ಅಷ್ಟೇ ಏಕೆ ಅನೇಕ ಭಾರತೀಯ ಕವಿಗಳ ಕಾವ್ಯ, ನಾಟಕಗಳಿಗೆ ಇಷ್ಟದ ವಸ್ತುವಾಗಿದೆ. ಇದಕ್ಕೆ ಅದು ಅತ್ಯಂತ ಮರ್ಮಭೇದಕವೂ ಹೃದಯಸ್ಪರ್ಶಿಯೂ ಆದ ಪ್ರಸಂಗವಾಗಿರುವುದೇ ಕಾರಣ.

ರಾಮನು ತನ್ನನ್ನು ತೊರೆದನೆಂದು ಲಕ್ಷ್ಮಣನ ಬಾಯಿಂದ ಕೇಳಿದ ಸೀತೆಯ ಮೊದಲ ಪ್ರತಿಕ್ರಿಯೆ– ಮೈ ಮೇಲಿನ ಎಚ್ಚರವನ್ನು ಕಳೆದುಕೊಂಡಳು. ಎಚ್ಚೆತ್ತ ಮೇಲೆ ರಾಮನು ತನ್ನನ್ನು ತ್ಯಜಿಸಲು ತನ್ನಲ್ಲೇ ಏನೋ ದೋಷವಿರಬೇಕೆಂದು ಚಿಂತಿಸುವ ಜಾನಕಿಯ ಸ್ಥಿತಿ ಅತ್ಯಂತ ಕರುಣರಸಭರಿತವಾಗಿದೆ.

ನಚಾವದದ್ಭರ್ತುರವರ್ಣಮಾರ್ಯಾ
ನಿರಾಕರಿಷ್ಣೋರ್ವೃಜಿನಾದೃತೇಽಪಿ
ಆತ್ಮಾನಮೇವ ಸ್ಥಿರ ದುಃಖ ಭಾಜಂ
ಪುನಃ ಪುನಃ ದುಷ್ಕೃತಿನಂ ನಿನಿಂದ [14–57]

ಇದನ್ನು ಅಷ್ಟೇ ಸರಳ ಮಾತುಗಳಲ್ಲಿ ಕರುಣರಸವುಕ್ಕುವಂತೆ ಅನುವಾದಿಸಿದ್ದಾರೆ. ಮೂಲದಲ್ಲಿರುವ 'ದುಷ್ಕೃತಿ' ಶಬ್ದ 'ದುರಿತ' ಎಂದಾಗಿರುವುದು, 'ಸ್ಥಿರ' ದುಃಖಕ್ಕೆ ಬದಲಾಗಿ 'ಚಿರಕ್ಲೇಶಕರ' ಎಂದಾಗಿರುವುದು ಸೂಕ್ತವಾದ ಅನುವಾದವೇ ಆಗಿದೆ.

ದೋಷಮಿನಿತಿಲ್ಲದೊಡಮುಳಿದನೆಂದಿನಿಯನನು
ಆರ್ಯೆ ಸೀತಾದೇವಿ ನಿಂದಿಸಿದಳಿಲ್ಲ
ತಾಂ ಚಿರಕ್ಲೇಶಕರ ದುರಿತ ಭಾಜನೆಯೆಂದು
ತನ್ನನೇ ಸಲಸಲಕೆ ಜರೆದುಕೊಳುತಿಹಳು

ಆದರೂ ಮನಸ್ಸಿನ ತನ್ನ ದುಃಖ, ಅಸಮಾಧಾನಗಳು ಒತ್ತರಿಸುತ್ತಿವೆಯಾಗಿ ಅವು ಲಕ್ಷ್ಮಣನ ಮೂಲಕ ರಾಮನಿಗೆ ಕಳಿಸುವ ಸಂದೇಶ ರೂಪದಲ್ಲಿ ಪ್ರಕಟಗೊಳ್ಳುತ್ತದೆ.

ಕಾಳಿದಾಸನ ಜಗದ್ವಿಖ್ಯಾತಿ ನಿಂತಿರುವುದು ಅವನ ಕಾವ್ಯಗಳಿಗಿಂತ ಹೆಚ್ಚಾಗಿ ನಾಟಕಗಳು, ಅದರಲ್ಲೂ ಮುಖ್ಯವಾಗಿ ಶಾಕುಂತಲದಿಂದ. ಕಾಳಿದಾಸನ ನಾಟಕಗಳು, ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ ಮತ್ತು ಅಭಿಜ್ಞಾನ ಶಾಕುಂತಲ ಎಂದು ಮೂರು. ಈ ಮೂರೂ ನಾಟಕಗಳ ವಸ್ತು ಪ್ರಣಯಕತೆ. ಮೂರೂ ನಾಟಕಗಳ ಕಥೆಗಳ ಮಾದರಿ ಹೆಚ್ಚು ಕಡಿಮೆ ಒಂದೇ. ಪ್ರೇಮ ಪಲ್ಲವಿಸುವುದು, ನಡುವೆ ಅಗಲಿಕೆ ಮತ್ತು ಕೊನೆಗೆ ಸಮಾಗಮ–ಇದು ಈ ಎಲ್ಲ ನಾಟಕಗಳ ಸ್ಥೂಲ ರೂಪುರೇಷೆ. ಆದರೆ ಅವುಗಳ ನಿರ್ವಹಣೆಯ ರೀತಿಯಿಂದಾಗಿ ಮೂರೂ ಭಿನ್ನವಾಗಿವೆ. ನಾಟಕಗಳಲ್ಲಿ ಮುಖ್ಯವಾಗಿ ಗದ್ಯರೂಪದ ಸಂಭಾಷಣೆಯ ಜೊತೆಗೆ ಅಡಿಗಡಿಗೆ ಪದ್ಯಗಳು ಬರುವುದು ಸಂಸ್ಕೃತ ನಾಟಕಗಳ ವಿಶಿಷ್ಟತೆ. ಪದ್ಯಭಾಗಗಳ ಅನುವಾದದಲ್ಲಿ ಪ್ರೊ. ಭಟ್ಟರ ಕೌಶಲವೆಂಥದೆಂಬುದರ ಒಂದು ಸ್ಥೂಲ ಕಲ್ಪನೆ, ಅವರ ಕಾವ್ಯಭಾಗಗಳ ಅನುವಾದದಲ್ಲಿ ನಮಗೀಗಾಲೇ ಸಿಕ್ಕಿದೆ. ನಿದರ್ಶನಕ್ಕೆ ಮಾತ್ರ ಒಂದೆರಡನ್ನು ನೋಡಬಹುದು ಮುಖ್ಯವಾಗಿ ನಾವು ಗಮನಿಸಬೇಕಾದ್ದು ನಾಟಕದ ಸಂಭಾಷಣಾ ಭಾಗಗಳು ಕನ್ನಡಗದ್ಯದಲ್ಲಿ ರೂಪುತಾಳಿರುವ ಬಗೆಯನ್ನು.

ಮಾಳವಿಕಾಗ್ನಿಮಿತ್ರ

ಕಾಳಿದಾಸನ ನಾಟಕತ್ರಯದಲ್ಲಿ ಇದು ಮೊತ್ತ ಮೊದಲಿನ ನಾಟಕ. ಗುಣಮಟ್ಟದ ದೃಷ್ಟಿಯಿಂದ ಅನಂತರದ ನಾಟಕಗಳಾದ ವಿಕ್ರಮೋರ್ವಶೀಯ ಮತ್ತು ಶಾಕುಂತಲದ ಜೊತೆ ಪರಿಗಣನೆಗೆ ಅರ್ಹವಲ್ಲ ಎಂದು ವಿಮರ್ಶಕರ ಅಭಿಪ್ರಾಯ. ಸಂಭೋಗ ಶೃಂಗಾರದ ಅತಿಯಿಂದಾಗಿ ಇದು ಹಲವರಿಗೆ ಅಪಥ್ಯ. ಆದರೆ ಮೊದಮೊದಲಿನ ಕೃತಿಯಾದ ಕಾರಣಕ್ಕೆ ಅನಂತರದ ಕೃತಿಗಳಲ್ಲಿ ಕಂಡುಬರುವ ಪ್ರತಿಭೆಯ ಪರಿಣತಿ ಇದರಲ್ಲಿ ಕಂಡುಬರುವುದಿಲ್ಲ ಎಂದು ಹೆಚ್ಚು ಜನ ವಿಮರ್ಶಕರ ಅಭಿಪ್ರಾಯ.

ಪುಷ್ಯಮಿತ್ರ ಶುಂಗನ ಮಗ ಅಗ್ನಿಮಿತ್ರನಿಗೆ ಧಾರಿಣಿಯೆಂಬ ಧರ್ಮಪತ್ನಿ; ವಸ್ತುಮಿತ್ರನೆಂಬ ಮಗ ಇದ್ದರೂ ಯಾವುದೋ ಒಂದು ಗಳಿಗೆಯಲ್ಲಿ ಇರಾವತಿಯೆಂಬುವಳಲ್ಲಿ ಒಲವು ಉಂಟಾಗಿ ಅವಳು ರಾಣಿ ವಾಸಕ್ಕೆ ಸೇರಿದಳು. ಆದರೆ ಈ ಪ್ರಣಯ ವ್ಯವಹಾರ ಇಷ್ಟಕ್ಕೆ ನಿಲ್ಲದ ಧಾರಿಣಿಯ ದಾಸಿಯಾಗಿದ್ದ ಮಾಲವಿಕೆಯ ಅಂದಕ್ಕೆ ಮನಸೋತು, ನಾಟಕದ ಕೊನೆಯಲ್ಲಿ ಅವಳನ್ನೂ ಮದುವೆಯಾಗುತ್ತಾನೆ. ಇಬ್ಬರು ಹೆಂಡತಿಯರ ನಡುವೆ ಸಿಕ್ಕಿದ ಅಗ್ನಿಮಿತ್ರ. ಮಾಲವಿಕೆಯರ ಪ್ರೇಮ ಪಲ್ಲವಿಸಿ ಅದು ಬೆಳೆದು ಅವರಿಬ್ಬರ ಮದುವೆಯಲ್ಲಿ ಪರ್ಯವಸಾನವಾಗುವುದೇ ಈ ನಾಟಕದ ಮುಖ್ಯ ಕಥಾವಸ್ತು.

ಇದು ಹೇಳಿಕೇಳಿ ಪ್ರಾಚೀನ ಸಂಸ್ಕೃತ ನಾಟಕ. ಇದರ ಸಂಭಾಷಣೆಯ ಗದ್ಯ ಈ ಹೊತ್ತಿನ ಗದ್ಯವಂತೂ ಆಗಿರಲು ಸಾಧ್ಯವಿಲ್ಲ. ಅದು ಇಂದಿನ ನಮ್ಮ ಆಡುಮಾತಿಗೂ, ಪ್ರಾಚೀನಕಾಲದ ಮಾತಿನ ಧಾಟಿಗೂ ನಡುವಿನ ಒಂದು ರೂಪವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಮಾಲವಿಕಾಗ್ನಿಮಿತ್ರದ ಎರಡನೆ ಅಂಕದ ಪ್ರಾರಂಭದಲ್ಲಿ, ರಾಜ, ಪರಿವ್ರಾಜಿಕೆ, ಕಂಚುಕಿ ಗಣದಾಸ ಇದರೆಲ್ಲ ಸಂಗೀತ ಶಾಲೆಯಲ್ಲಿ ಸೇರಿದ್ದಾರೆ.

ರಾಜ: ಭಗವತಿ, ಪೂಜ್ಯರಾದ ಈ ಆಚಾರ್ಯರಿಬ್ಬರಲ್ಲಿ ಮೊದಲು ಯಾರ ಉಪದೇಶವನ್ನು ನೋಡೋಣ?

ಪರಿವ್ರಾಜಿಕೆ : ಇಬ್ಬರೂ ಜ್ಞಾನದಲ್ಲಿ ಸಮಾನ ವೃದ್ಧರೇ ಆದರೂ ವಯಸ್ಸಿನಲ್ಲಿ ಗಣದಾಸನು, ವೃದ್ಧನಾದುದರಿಂದ ಮೊದಲ ಸನ್ಮಾನಕ್ಕೆ ಅವನೇ ಅರ್ಹನಾಗಿದ್ದಾನೆ.

ರಾಜ: ಹಾಗಾದರೆ, ಏ ಮೌದ್ಗಲ್ಯ! ಆ ಪೂಜ್ಯರಿಗೆ ಈ ವಿಷಯವನ್ನು ತಿಳಿಸಿ, ನಿನ್ನ ಕೆಲಸಕ್ಕೆ ನೀನು ಹೋಗು.

ಕಂಚುಕಿ : ಅಪ್ಪಣೆ, ಮಹಾಸ್ವಾಮಿ (ತೆರಳುವನು)

ಗಣದಾಸ : (ಪ್ರವೇಶಿಸಿ) ದೇವ, ಮಧ್ಯಲಯದಲ್ಲಿ ಹಾಡುವ ಶರ್ಮಿಷ್ಠೆಯಿಂದ ರಚಿತವಾಗಿರುವ ನಾಲ್ಕು ಖಂಡಗಳ ಚಲಿತ ನಾಟ್ಯವಿದೆ. ಮಹಾಸ್ವಾಮಿಯವರು ಅದರಲ್ಲಿ ನಾಲ್ಕನೆಯ ಖಂಡದ ಪ್ರಯೋಗವನ್ನು ಈಗ ಸಾವಧಾನವಾದ ಮನಸ್ಸಿನಿಂದ ಪರಾಮರ್ಶಿಸಬೇಕು.

ಅಭಿಜ್ಞಾನ ಶಾಕುಂತಲ

ಈಗಾಗಲೇ ಪ್ರಸ್ತಾಪಿಸಿರುವಂತೆ ಕಾಳಿದಾಸನ ಕೃತಿ ಸಮುಚ್ಚಯದಲ್ಲಿ ಅಭಿಜ್ಞಾನ ಶಾಕುಂತಲವು ಶ್ರೇಷ್ಠ ಕೃತಿರತ್ನ. "ಕಾವ್ಯೇಷು ನಾಟಕಂ ರಮ್ಯಂ ತತ್ರರಮ್ಯಾ ಶಕುಂತಲಾ" ಎಂಬುದು ಗಾದೆ ಮಾತಿನಂತಾಗಿ ಬಿಟ್ಟಿದೆ. ವಿಶ್ವಸಾಹಿತ್ಯದ ಅಮೂಲ್ಯ ನೂರು ಗ್ರಂಥಗಳಲ್ಲಿ ಇದು ಒಂದೆಂದು ಮಾನ್ಯವಾಗಿದೆ. ಭಾರತದ ಎಲ್ಲ ಭಾಷೆಗಳಿಗೆ ಅನುವಾದಿತವಾಗಿರುವುದಲ್ಲದೆ ರಷ್ಯನ್, ಜರ್ಮನ್, ಫ್ರೆಂಚ್, ಇಂಗ್ಲಿಷ್, ಇಟಾಲಿಯನ್, ಸ್ವೀಡಿಷ್, ಡಚ್ ಮುಂತಾದ ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದಿತವಾಗಿದೆ. ಜರ್ಮನಿಯ ವಿಖ್ಯಾತ ಕವಿ ಗೈಟೆಯಂತೂ ಶಾಕುಂತಲವು ಸ್ವರ್ಗ ಮತ್ತು ಭೂಮಿಗಳು ಸಂಧಿಸುವ 'ಸಂಗಮ ಭೂಮಿ' ಎಂದು ಕೊಂಡಾಡುತ್ತಾನೆ.

ಮಹಾಭಾರತದ ಶಕುಂತಲೋಪಾಖ್ಯಾನದಿಂದ ವಸ್ತುವನ್ನಾರಿಸಿಕೊಂಡಿದ್ದರೂ, ದುರ್ವಾಸಶಾಪ ಮತ್ತು ಉಂಗುರದ ಪ್ರಸಂಗಗಳನ್ನು ಕಲ್ಪಿಸುವ ಮೂಲಕ; ತನ್ನ ಅದ್ಭುತ ಪ್ರತಿಭೆಯ ಸುವರ್ಣಸ್ಪರ್ಶದಿಂದ ಅದಕ್ಕೆ ಬೇರೆಯದೇ ಆದ ತಿರುವನ್ನು ಕೊಟ್ಟು ಅಮೂಲ್ಯ ಕೃತಿರತ್ನವಾಗಿಸಿರುವುದು ಸಹೃದಯರಿಗೆಲ್ಲಾ ತಿಳಿದಿರುವ ಸಂಗತಿಯೇ ಆಗಿದೆ. ಇಂಥ ನಾಟಕವನ್ನು ಅತ್ಯುಜ್ವಲವಾಗಿ ಕನ್ನಡಕ್ಕೆ ಮೊದಲು ಅನುವಾದಿಸುವ ಮೂಲಕ ವಿದ್ವಜ್ಜನರ ಮೆಚ್ಚಿಗೆ ಗಳಿಸಿದ್ದೇ ಅಲ್ಲದೆ, "ಅಭಿನವ ಕಾಳಿದಾಸ" ಎಂಬ ಬಿರುದಿಗೆ ಸಹಜವಾಗಿಯೇ ಪಾತ್ರರಾದವರು ಶ್ರೀ ಬಸವಪ್ಪಶಾಸ್ತ್ರಿಗಳು. ಅದು ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ, ಹಾಗೆ ಸಾರ್ಥಕವಾಗಿ ಶಾಸ್ತ್ರಿಗಳು ಅನುವಾದಿಸಿದ ಮೇಲೆ ಇನ್ನೊಬ್ಬರು ಅನುವಾದಿಸಲು ಹೊರಡುವುದಕ್ಕೆ 'ಎಂಟೆದೆಯೇ" ಬೇಕು.

ಅದು ಮೊದಲು ಬಂದ ಅನುವಾದಕ್ಕಿಂತ ಉತ್ಕೃಷ್ಟವಲ್ಲದಿದ್ದರೂ ಭಿನ್ನವಂತೂ ಖಂಡಿತ ಆಗಿರಲೇ ಬೇಕಾಗುತ್ತದೆ. ಸವಾಲೆನ್ನಿಸುವಂಥ ಈ ಸಾಹಸವನ್ನು ಭಟ್ಟರು ಸವಾಲೇ ಅಲ್ಲವೆನ್ನುವ ರೀತಿಯಲ್ಲಿ ನಿರ್ವಹಿಸಿದ್ದಾರೆ. ಭಟ್ಟರ ಭಿನ್ನತೆ ಇರುವುದು ಎದ್ದುಕಾಣುವ ಹಾಗೆ, ನಾಟಕದ ಪದ್ಯಗಳ ಅನುವಾದದಲ್ಲಿ. ಬಸವಪ್ಪಶಾಸ್ತ್ರಿಗಳು ಖ್ಯಾತ ಕರ್ನಾಟಕಗಳು ಮತ್ತು ಕಂದ ವೃತ್ತಗಳನ್ನು ಬಳಸಿದ್ದರೆ ಭಟ್ಟರು ಹೊಸಗನ್ನಡದ ಛಂದೋಲಯಗಳಲ್ಲಿ ಅನುವಾದಿಸಿದ್ದಾರೆ ಹಾಗೂ ಅದಕ್ಕನುಸಾರವಾಗಿಯೇ ಪದ್ಯಗಳ ಭಾಷೆ ಬಹುಮಟ್ಟಿಗೆ ಈಗಿನ ಕನ್ನಡವಾಗಿದೆ. ಬಹುಮಟ್ಟಿಗೆ ಎಂಬುದರ ಅರ್ಥ ಕೆಲವು ಸಂದರ್ಭಗಳಲ್ಲಿ ಹಳೆಯ ರೂಪಗಳು, ಸಮಾಸ ಶಬ್ದಗಳು ಬಂದುಬಿಟ್ಟಿವೆ. ಆದರೆ ಸಂಭಾಷಣೆಯ ಗದ್ಯವಂತೂ

ಬಹುಮಟ್ಟಿಗೆ ತನ್ನ ಗ್ರಾಂಥಿಕತೆಯನ್ನು ಬಿಟ್ಟುಕೊಟ್ಟಿದೆ. ಬಸವಪ್ಪಶಾಸ್ತ್ರಿಗಳ ಅನುವಾದದೊಂದಿಗೆ ಹೋಲಿಸಿದಾಗ ಇದು ಮನದಟ್ಟಾಗುತ್ತದೆ.

ಭೃಂಗಬಾಧೆಗೆ ಸಿಲುಕಿರುವ ಶಕುಂತಳೆಯನ್ನು ನೋಡುತ್ತಿರುವ ಸಂದರ್ಭದಲ್ಲಿ ದುಷ್ಯಂತನ ಮನಸ್ಸಿನಲ್ಲಿ ಮೂಡಿದ ಭಾವಗಳನ್ನು ಬಸವಪ್ಪಶಾಸ್ತ್ರಿಗಳು ಹೀಗೆ ಅನುವಾದಿಸಿದ್ದಾರೆ.

ನಡುಕಂ ಬೆತ್ತಿರ್ಪಳಂ ಸೋಂಕುವೆಯಡಿಗಡಿಗಂ ಚೆಲ್ಲವೆತ್ತೋರೆನೋಟ
ಕ್ಕೆಡೆಯಾಗೇಕಾಂತಮಂಪೇಳ್ವವೊಲೆ ಜಿನುಗುತ್ತಿರ್ದಪ್ಪೆ ಕರ್ಣಾಂತದೊಳ್ ಕೈ
ಗೊಡಹುತ್ತಿರ್ಪಬ್ಜಪತ್ರಾಕ್ಷಿಯ ನವರತಿ ಸರ್ವಸ್ವ ಬಿಂಬೋಷ್ಠಮಂ ಮು
ದ್ದಿಡುವೈ ರೋಲಂಬ ನೀನೆ ಕೃತಿ ನಿಜವರಸುತ್ತಾವಣಂ ಕೆಟ್ಟೆವಲ್ತೇ.

ಭಟ್ಟರು ಇದನ್ನು ಅನುವಾದಿಸಿರುವ ರೀತಿ ಇದು:

ಕಿವಿಯ ಬಳಿಯೊಳು ಗುಟ್ಟನೊರೆಯುವ ತೆರದೊಳಿನಿದನಿ
ಗೈಯುತೋವೋ ಜಿನುಗುವೆ
ನಡುಗುವೀಕೆಯ ಚೆಲ್ಲವೆತ್ತಿರುವೋರೆದಿಟ್ಟಿಯ
ಮತ್ತೆ ಮತ್ತಿದೊ ಸೋಂಕುವೆ
ಕೈಯ ಕೊಡಹುವಳಾದರೂ ಮುದ್ದಿಡುವೆ ರತಿಸ–
ರ್ವಸ್ವವಾಗಿಹ ತುಟಿಯನು
ನೋಡೆಮಧುಕರ ನೀನೆ ದಿಟ ಕೃತಿ ನಾವೆ ಕೆಟ್ಟಿಹೆವರಸಿ ತತ್ವವನಿನಿತನು

ಮೂಲದಲ್ಲಿರುವ 'ರಹಸ್ಯ' ಎಂಬ ಶಬ್ದಕ್ಕೆ ಶಾಸ್ತ್ರಿಗಳ ಅನುವಾದದಲ್ಲಿ 'ಏಕಾಂತ' ಎಂದಿದ್ದರೆ, ಭಟ್ಟರು 'ಗುಟ್ಟು' ಎಂದು ಬಳಸಿದ್ದಾರೆ. ಅದೇ ಹೆಚ್ಚು ಯುಕ್ತವೆನಿಸುತ್ತದೆ. ಮೂಲದಲ್ಲಿ 'ಮೃದು ಸ್ವನಸಿ' ಎಂದಿರುವುದಕ್ಕೆ ಭಟ್ಟರು 'ಇನಿದನಿಗೈಯುತ ಜಿನುಗುವೆ' ಎಂದು ಅನುವಾದಿಸಿದ್ದರೆ ಶಾಸ್ತ್ರಿಗಳ ಅನುವಾದದಲ್ಲಿ 'ಇನಿದನಿ' (ಮೃದು) ಬಿಟ್ಟು ಹೋಗಿದೆ. 'ತ್ವಂ.ಖಲುಕೃತಿ' ಎಂಬ ಮೂಲದ ಶಬ್ದ ಶಾಸ್ತ್ರಿಗಳಲ್ಲಿ 'ನೀನೆಕೃತಿ' ಎಂದು ಆಗಿದ್ದರೆ ಭಟ್ಟರಲ್ಲಿ 'ನೀನೆ ದಿಟಕೃತಿ' ಎಂದು ಆಗಿ 'ಖಲು' ಎಂಬ ಮಾತು ಅನುವಾದದಲ್ಲಿ ಉಳಿದುಕೊಂಡಿದೆ. 'ತತ್ವಾನ್ವೇಷ' ಎಂಬ ಮೂಲ ಶಬ್ದ 'ನಿಜವರಸುತ್ತ' ಎಂದು ಶಾಸ್ತ್ರಿಗಳಲ್ಲಿ ರೂಪ ತಾಳಿದ್ದರೆ, ಭಟ್ಟರಲ್ಲಿ 'ಅರಸಿ ತತ್ವವನು' ಎಂದು ಮೂಲಕ್ಕೆ ನಿಷ್ಠವಾಗಿ ಅನುವಾದಿತವಾಗಿದೆ.

ನಾಲ್ಕನೇ ಅಂಕದಲ್ಲಿ ಬರುವ ನಾಲ್ಕು ಶ್ಲೋಕಗಳು ತುಂಬ ಪ್ರಸಿದ್ಧವಾದವು. ಅದನ್ನು ಈ ಇಬ್ಬರು ವಿದ್ವಾಂಸರು ಅನುವಾದಿಸಿರುವುದನ್ನು ಗಮನಿಸಿದಾಗ, ಇಬ್ಬರ ನಡುವಿನ ವ್ಯತ್ಯಾಸ ತಿಳಿಯುತ್ತದೆ.

ಇದು ಶಕುಂತಲೆ ಗಂಡನ ಮನೆಯಲ್ಲಿ ಹೇಗಿರಬೇಕೆಂದು ಕಣ್ವರು ಮಾಡುತ್ತಿರುವ ಉಪದೇಶವನ್ನೊಳಗೊಂಡಿರುವ ಪದ್ಯ.

ಬಸವಪ್ಪ ಶಾಸ್ತ್ರಿಗಳ ಅನುವಾದ

ಪಿರಿಯರ ಸೇವೆಗೆಯ್ ಸವತಿಯರ್ಕಳೊಳಿಷ್ಟ ವಯಸ್ಯೆಯಂದದಿಂ
ದಿರು ಪತಿಯೊರ್ಮೆ ಹೇವಗೊಳಿಸಲ್ ಮುಳಿಸಿಂ ಪ್ರತಿಕೂಲೆಯಾಗದಿರ್
ಪರಿಜನವಂ ಕರಂ ಸಲಹು ಭಾಗ್ಯದೆ ಬಾಗಿರು ಪೆಣ್ಗಳಿಂತಿರಲ್
ಗರತಿಯಪ್ಪರಿಂತಿರದರನ್ವಯಕಾಧಿಯನುಂಟು ಮಾಳ್ಪರೌ. [4–19]

ಭಟ್ಟರ ಅನುವಾದ

ಹಿರಿಯರನು ಓಲೈಸು ಮತ್ತೆ ನೀಂ ಪ್ರಿಯಸಖಿಯ ತೆರದೊಳಿರು ಸವತಿಯರೊಳು
ಮುಳಿದು ನೀಂ ಪ್ರತಿಕೂಲೆಯಾಗದಿರು ಅಪಚಾರವೆಸಗದಿರು ಪತಿಯ ಹಳಿದು
ಪರಿಜನರ ವಿಷಯದೊಳು ದಾಕ್ಷಿಣ್ಯವಶಳೆನಿಸು ಭಾಗ್ಯದೊಳು ಬೀಗದಿರು ನೀನು
ಪೆಣ್ಗಳಿಂತಿರ್ಪವರು ಗರತಿಯರು ತಾವಹರು ಕುಲಪೀಡರಿನ್ನನ್ಯರು.

ಮೂಲದಲ್ಲಿರುವ 'ಶುಶ್ರೂಸಸ್ವ' ಎಂಬ ಮಾತಿಗೆ ಬಸವಪ್ಪ ಶಾಸ್ತ್ರಿಗಳ ಅನುವಾದದಲ್ಲಿರುವ 'ಸೇವೆಗೆಯ್' ಎಂಬುದು ಅತ್ಯಂತ ಸರಿಯಾದ ಅನುವಾದ. ಭಟ್ಟರ ಅನುವಾದದಲ್ಲಿರುವ "ಓಲೈಸು" ಎಂಬ ಕನ್ನಡ ಶಬ್ದಕ್ಕೆ "ಸೇವೆ" ಎಂಬುದಕ್ಕಿಂತ ತೀರ ಬೇರೆಯದೇ ಆದ ಅರ್ಥ. 'please, appease' ಈ ಎಲ್ಲಾ ಅರ್ಥವಿರುವುದರಿಂದ ಅಷ್ಟು ಸರಿಹೊಂದುವುದಿಲ್ಲ. ಆದರೆ ಮೂಲದಲ್ಲಿರುವ "ಅನುತತ್ಸೇಕಿನೀ" ಎಂಬ ಮಾತಿಗೆ "ಬಾಗಿರು" ಎಂಬ ಶಾಸ್ತ್ರಿಗಳ ಅನುವಾದದಲ್ಲಿನ ಶಬ್ದಕ್ಕಿಂತ "ಬೀಗದಿರು" ಎಂಬ ಶಬ್ದವೇ ಹೆಚ್ಚು ಯುಕ್ತವೆನಿಸುತ್ತದೆ. ಹಾಗೆಯೇ ಮೂಲದ "ದಕ್ಷಿಣಾ ಪರಿಜನೇ" ಎಂಬ ಶಬ್ದಕ್ಕೆ ಶಾಸ್ತ್ರಿಗಳ "ಪರಿಜನವಂ ಕರಂ ಸಲಹು" ಎಂಬುದಕ್ಕಿಂತ, "ದಾಕ್ಷಿಣ್ಯವಶಳೆನಿಸು" ಎಂಬುದೇ ಹೆಚ್ಚು ಯುಕ್ತವೆನಿಸುತ್ತದೆ. ಆದರೆ ಒಟ್ಟಾರೆ ಹೇಳಬೇಕೆಂದರೆ ಶಾಸ್ತ್ರಿಗಳ ಅನುವಾದ ಅನುಕೂಲ ಪದಮೈತ್ರಿಯಿಂದ ಬಿಕ್ಕಟ್ಟಾದ ರಚನೆಯಾಗಿದ್ದರೆ, ಪರಮೇಶ್ವರ ಭಟ್ಟರ ಅನುವಾದ ಬಿಡಿಬಿಡಿಯಾದ ಶಬ್ದಗಳಿಂದ ಕೂಡಿದ್ದು ಹೆಚ್ಚು ಸರಳವಾಗಿದೆ.

ದೀರ್ಘ ಅಗಲಿಕೆಯ ನಂತರ, ದುಷ್ಯಂತ, ಶಕುಂತಲೆಯರು ಸಂಧಿಸುತ್ತಾರೆ. ಅಷ್ಟು ಹೊತ್ತಿಗೆ ಅವರ ಪ್ರೇಮದ ಫಲವಾದ ಪುತ್ರ ಸರ್ವದಮನನು ಬೆಳೆದು ಬಾಲಕನಾಗಿದ್ದಾನೆ. ಅವರ ಸಮಾಗದ ಸನ್ನಿವೇಶವನ್ನೊಳಗೊಂಡಿರುವ ಏಳನೆಯ ಅಂಕ ಕೂಡ, ನಾಲ್ಕನೇ ಅಂಕದಷ್ಟೇ ಸ್ವಾರಸ್ಯ ಹಾಗೂ ಮಹತ್ವದಿಂದ ಕೂಡಿರುವಂಥದು. ಅಲ್ಲಿಯ ಒಂದೆರಡು ಪದ್ಯ ಮತ್ತು ಸಂಭಾಷಣೆಯ ಭಾಗ ಹೇಗೆ ಬಂದಿದೆಯೆಂಬುದಕ್ಕೆ ಒಂದು ನಿದರ್ಶನವನ್ನು ನೋಡಬಹುದು.

ದುಷ್ಯಂತನು ಮಾರೀಚಾಶ್ರಮಕ್ಕೆ ಬಂದಿದ್ದಾನೆ. ಸರ್ವದಮನನು ತುಂಟತನದಿಂದ ಸಿಂಹದಮರಿಯೊಂದಿಗೆ ಆಡುತ್ತಿದ್ದಾನೆ. ಆ ತುಂಟ ಬಾಲಕನನ್ನು ನೋಡಿ ಅವನ ಮೇಲೆ ತುಂಬ ಆಸೆ ಉಂಟಾಗುತ್ತದೆ. ಆಗ ಅವನಿಗೆ ಅನ್ನಿಸಿದ ಭಾವ ಇದು: (ಬಸವಪ್ಪಶಾಸ್ತ್ರಿಗಳ ಅನುವಾದ);

ಮೊಳೆವಲ್ ಶೋಭಿಸೆ ನಿರ್ನಿಮಿತ್ತ ಹಸಿತಂ ಚೆಲ್ವಾಗೆ ಲಾಲಾಜಲಂ
ತುಳುಕಲ್‌ಬರ್ಪತೊದಳ್ ಮನಂಗೊಳಿಸಲಂಕಾರೋಹಕಿಚ್ಛೈಪ ಮ
ಕ್ಕಳನಿರ್ಕೈಗಳಿನೆತ್ತಿಕೊಂಡು ನಲವಿಂ ತದ್ದೇಹ ಚಂಚದ್ರಜೋ
ಮಳಿನಾಂಗರ್ಕಳೆನಿಪ್ಪ ಮಾನವರೆ ತಾಂ ಧನ್ಯರ್ ವಲಂ ಧಾತ್ರಿಯೊಳ್

ಇದು ಯುಕ್ತವಾದ ಶಬ್ದಗಳಿಂದ ಕೂಡಿಕೊಂಡಿದ್ದು ತನಗೆ ತಾನೇ ಸುಂದರವಾಗಿದೆ. ಭಟ್ಟರ ಅನುವಾದ ಹೀಗಿದೆ.

ನಿರ್ನಿಮಿತ್ತದ ಹಸಿತದಿಂ ನಸು ತೋರ್ಪ ಪಲ್ಮುಗುಳೆಸೆದಿರೆ
ಅಸ್ಫುಟಾಕ್ಷರದುಚ್ಚರಂ ಬೆರೆದೊಂದು ತೊದಲುಲಿ ಮೆರೆದಿರೆ
ತೊಡೆಯನೇರುವ ಬಯಕೆಯನು ತಳೆದಣುಗ ಕೂಸುಗಳೈತರೆ
ಧನ್ಯರಹದಿಟ ಅವರ ಮೈಧೂಳಂಟಿ ಕೊಳೆಯಹ ಜನಕರೆ [7–18]

ಮೂಲದಲ್ಲಿನ 'ದಂತಮುಕುಲಾನ್' ಎಂಬ ಶಬ್ದದ ನೇರ ಅನುವಾದ 'ಪಲ್ಮುಗುಳ್' ಎಂಬ ಭಟ್ಟರ ಅನುವಾದ. ಆದರೆ ಅದಕ್ಕಿಂತ ತುಂಬ ಸುಂದರವಾದ ಸಹಜವಾದ ಶಬ್ದವೆಂದರೆ 'ಮೊಳೆವಲ್' ಎಂಬ ಶಾಸ್ತ್ರಿಗಳ ಅನುವಾದದಲ್ಲಿರುವ ಶಬ್ದ. "ಲಾಲಾಜಲಂ ತುಳುಕಲ್ ಬರ್ಪ ತೊದಳ್" ಎಂಬ ಮಾತು ಮೂಲದ "ಅವ್ಯಕ್ತ ವರ್ಣ ರಮಣೀಯ ವಚಃ" ಎಂಬುದಕ್ಕೆ ಬಂದಿರುವ ಮಾತಾಗಿದೆ. ಅದು ಮೂಲದ ಯಥಾವತ್ತಾದ ಅನುವಾದವಲ್ಲ. ಆದರೆ ಆ ಸಂದರ್ಭಕ್ಕೆ ತುಂಬ ಸರಿಯಾಗಿ ಹೊಂದಿಕೊಳ್ಳುತ್ತದೆ. ಭಟ್ಟರಲ್ಲಿ ಅದು ಅಸ್ಫುಟಾಕ್ಷರದುಚ್ಚರಂ–ಬೆರೆದೊಂದು ತೊದಲುಲಿ" ಎಂದಾಗಿದ್ದು ಮೂಲಕ್ಕೆ ಹತ್ತಿರವಾಗಿದೆ. "ಅಂಕಾರೋಹಕಿಚ್ಛೈಪ" ಎಂಬುದು ಮೂಲದ ಸಂಸ್ಕೃತ ಮಾತನ್ನೇ ಬಳಸಿಕೊಂಡಿರುವುದಾಗಿದೆ. ಅದೇ ಭಟ್ಟರಲ್ಲಿ "ತೊಡೆಯನೇರುವ ಬಯಕೆಯನು ತಳೆದಣುಗಕೂಸುಗಳೈತರೆ" ಎಂಬ ಸಾಲು ಪೂರ್ತಿ ಕನ್ನಡ ಶಬ್ದಗಳಿಂದ ಕೂಡಿದ್ದು ತುಂಬ ಹೃದ್ಯವಾಗಿದೆ. ಕೊನೆಯಲ್ಲಿ ಬರುವ "ತದ್ದೇಹ ಚಂಚದ್ರಜೋಮಲಿನಾಂಗ್ರ್ಗಳು" ಎಂಬ ಸಮಾಸ ಶಬ್ದವಷ್ಟೂ ಸಂಸ್ಕೃತ ಮೂಲದ "ಧನ್ಯಾಸ್ತದಂಗರಜಸಾಮಲಿನೀಭವಂತೀ" ಎಂಬುದರ ಛಾಯೆಯೇ ಆಗಿದೆ. ಆದರೆ ಭಟ್ಟರಲ್ಲಿ ಅದು, "ಮೈಧೂಳಂಟಿಕೊಳೆಯಹ" ಎಂದು ಅಚ್ಚಗನ್ನಡರೂಪ ತಾಳಿದೆ.

ಹೀಗೆ ಎಸ್.ವಿ.ಪಿ. ಅವರ ಅನುವಾದ ಬಸವಪ್ಪಶಾಶ್ತ್ರಿಗಳ ಅನುವಾದಕ್ಕಿಂತ ಭಿನ್ನವಾಗಿ, ಹೆಚ್ಚು ಸರಳವಾಗಿ, ಹೊಸ ಛಂದಸ್ಸಿನ ವಿಭಿನ್ನ ಲಯಗಳಲ್ಲಿ ಅರ್ಥಯತಿ ಮತ್ತು ಅಂತ್ಯಪ್ರಾಸ, ಅನುಪ್ರಾಸಗಳಿಂದ ಕೂಡಿಕೊಂಡು ಹೊಸ ಕಾಲಕ್ಕೆ ಹತ್ತಿರವಾಗಿದೆ.

9. ಕನ್ನಡ ಭಾಸ ಮಹಾ ಸಂಪುಟ

ನಿವೃತ್ತಿಯ ಅನಂತರದಲ್ಲಿ ಭಟ್ಟರು ಕೈಗೆತ್ತಿಕೊಂಡ ಅನುವಾದ ಸಾಹಸಗಳನ್ನು ನೆನೆದರೇ ಅಬ್ಬಾ ಎನಿಸುತ್ತದೆ. ಒಂದೊಂದೂ ಬೃಹತ್ ಹಾಗೂ ಮಹತ್ ಕೃತಿಗಳೇ. ಕಾಳಿದಾಸನ ಕೃತಿ ಸಂಪುಟವನ್ನು ಮೂಲ ಸಮೇತ ನಾಡಿನ ಜನತೆಗೆ ಸಮರ್ಪಿಸಿದ ನಂತರ, ಅವರು ಹೀಗೆ ಸಮಗ್ರ ಕೃತಿಗಳನ್ನು ಅನುವಾದಿಸಿ ಮೂಲ ಸಮೇತ ನೀಡಲು ಸಂಕಲ್ಪಿಸಿದ್ದು: (1) ಭಾಸ ಮಹಾ ಸಂಪುಟ (2) ಹರ್ಷ ಮಹಾ ಸಂಪುಟ (3) ಭವಭೂತಿ ಮಹಾ ಸಂಪುಟ ಮತ್ತು ಬುದ್ಧ ಚರಿತೆ. ಅದರಲ್ಲಿ ಮೊದಲು ಬಂದದ್ದು ಭಾಸನ ಹದಿನಾಲ್ಕು ನಾಟಕಗಳನ್ನೊಳಗೊಂಡ ಮಹಾ ಸಂಪುಟ.

ಭಾಸನ ನಾಟಕಗಳು ತಮ್ಮ ವಸ್ತು ವಿಶೇಷದಿಂದ ಮತ್ತು ಸ್ವರೂಪ ವಿಶೇಷದಿಂದ ಸಂಸ್ಕೃತ ನಾಟಕಗಳಲ್ಲೇ ಅತ್ಯಂತ ವಿಶಿಷ್ಟವೆನಿಸಿವೆ. ಭಾಸನು ತನ್ನ ನಾಟಕಗಳಿಗೆ ವಸ್ತುವನ್ನು ಬೇರೆ ಬೇರೆ ಆಕರಗಳಿಂದ ತೆಗೆದುಕೊಂಡನಾದರೂ, ಅವು ಭಾಸ ಪ್ರತಿಭೆಯ ಮೂಸೆಯಿಂದ ಹೊರಬಂದ ಅನಂತರದಲ್ಲಿ ತಳೆದ ಆಕೃತಿ ತೀರ ಬೇರೆಯವೇ ಆಗಿವೆ. ಭಾಸನ ನಾಟಕಗಳನ್ನು; ಇವುಗಳಿಗೆ ಆಕರಗಳನ್ನೊದಗಿಸಿದ ಗ್ರಂಥಗಳ ಆಧಾರದ ಮೇಲೆ, ನಾಲ್ಕು ವಿಧವಾಗಿ ವರ್ಗೀಕರಿಸಬಹುದು.

1. ರಾಮಾಯಣವನ್ನು ಆಧರಿಸಿದವು
2. ಮಹಾಭಾರತವನ್ನಾಧರಿಸಿದವು
3. ಬೃಹತ್ಕಥೆಯನ್ನಾಧರಿಸಿದವು
4. ಭಾಗವತವನ್ನಾಧರಿಸಿದವು

1. ಯಜ್ಞಫಲ, ಅಭಿಷೇಕ ಮತ್ತು ಪ್ರತಿಮಾ ನಾಟಕಗಳು ರಾಮಾಯಣ ಕಥಾ ಮೂಲದವು.
2. ಪಂಚರಾತ್ರ, ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತ ಘಟೋತ್ಕಚ, ಕರ್ಣಭಾರ ಮತ್ತು ಊರುಭಂಗಗಳು ಮಹಾಭಾರತ ಕಥಾ ಮೂಲದವು.
3. ಸ್ವಪ್ನ ವಾಸವದತ್ತ, ಪ್ರತಿಜ್ಞಾಯೌಗಂಧರಾಯಣ, ಅವಿಮಾರಕ ಮತ್ತು ಚಾರುದತ್ತ ಇವು–ಬೃಹತ್ಕಥೆಯನ್ನಾಧರಿಸಿದವು. ಬಾಲಚರಿತವು ಭಾಗವತದ ಆಧಾರದ ಮೇಲೆ ರಚಿತವಾದ್ದು. ಭಾಸನ ನಾಟಕಗಳಲ್ಲಿ ಮಹಾಭಾರತವನ್ನಾಧರಿಸಿರುವ ಮಧ್ಯಮವ್ಯಾಮೋಗವೊಂದನ್ನು ಹೊರತುಪಡಿಸಿದರೆ, ಬಾಕಿ ನಾಲ್ಕು ಏಕಾಂಕ ನಾಟಕಗಳು.

ಪ್ರತಿಮಾ, ಯಜ್ಞಫಲ, ಸ್ವಪ್ನ ವಾಸವದತ್ತ ಇವು ದೊಡ್ಡ ನಾಟಕಗಳು. ಇನ್ನು ಉಳಿದವು ಅಷ್ಟು ದೊಡ್ಡ ನಾಟಕಗಳಲ್ಲ.

ಭಾಸನ ನಾಟಕ ಚಕ್ರದಲ್ಲಿ ಭಾಸನ ಕಲಾಕೌಶಲವನ್ನು ಸಮಗ್ರ ರೂಪದಲ್ಲಿ ಹಿಡಿದಿಟ್ಟಿರುವ ನಾಟಕಗಳೆಂದರೆ ಪಂಚರಾತ್ರ, ಪ್ರತಿಮಾ ಮತ್ತು ಸ್ವಪ್ನವಾಸವದತ್ತ. ಇವುಗಳ ಜೊತೆಗೆ ಭಾಸನ ಏಕಾಂಕವಾದ ಊರುಭಂಗವನ್ನೂ ನೋಡಿದರೆ ಭಾಸನ ನಾಟಕ ಸಿದ್ಧಿಯ ಜೊತೆಗೆ **ಭಾಸ ಮಹಾಸಂಪುಟ**ದ ಅನುವಾದ ಸಿದ್ಧಿಯ ಪರಿಚಯವೂ ತಕ್ಕಮಟ್ಟಿಗೆ ಆಗುತ್ತದೆ.

ಭಾಸನ ನಾಟಕಗಳಲ್ಲಿ **ಸ್ವಪ್ನವಾಸವದತ್ತವು** ವಿದ್ವಾಂಸರ ಮುಕ್ತ ಪ್ರಶಂಸೆಗೆ ಎಂದಿನಿಂದಲೂ ಪಾತ್ರವಾದ ನಾಟಕ. ಭಾಸನ ನಾಟಕಗಳನ್ನು ವಿದ್ವಾಂಸರು ಪರೀಕ್ಷಿಸುವ ಸಲುವಾಗಿ ಬೆಂಕಿಗೆ ಎಸೆಯುತ್ತ ಬಂದಾಗ, ಅವುಗಳಲ್ಲಿ ಸ್ವಪ್ನ ವಾಸವದತ್ತವನ್ನು ಬೆಂಕಿ ಕೂಡ ದಹಿಸಲಿಲ್ಲ ಎಂಬುದೇ ಆ ಪ್ರಶಂಸೆಯ ಮಾತು. ಸಹೃದಯರ ಇಂಥ ಮುಕ್ತ ಪ್ರಶಂಸೆಗೆ ಪಾತ್ರವಾದ ಈ ನಾಟಕ ಮತ್ತು ಇದರ ಪೂರ್ವಭಾಗವೆನ್ನಬಹುದಾದ 'ಪ್ರತಿಜ್ಞಾಯೌಗಂಧರಾಯಣ' ಗಳೆರಡೂ ಬೃಹತ್ಕಥೆಯಲ್ಲಿ ಬರುವ ಉದಯನನ ಕಥೆಗೆ ಸಂಬಂಧಿಸಿದವು. ಉದಯನ ಚಾರಿತ್ರಿಕ ವ್ಯಕ್ತಿ ಆಗಿದ್ದನೋ ಇಲ್ಲವೋ ಎಂಬ ವಿಷಯದಲ್ಲಿ ಸಂದೇಹವಿದ್ದರೂ ಅವನ ಕಥೆ ಅತ್ಯಂತ ಜನಪ್ರಿಯತೆಯನ್ನು ಪಡೆದುಕೊಂಡು ಬಿಟ್ಟಿತ್ತೆಂಬುದಕ್ಕೆ ಕಾಳಿದಾಸನ ಮೇಘದೂತದಲ್ಲಿ ಬರುವ – 'ಪ್ರಾಪ್ಯವಂತೀನುದಯನ ಕಥಾ ಕೋವಿದ ಗ್ರಾಮ ವೃದ್ಧಾನ್'– ಎಂಬ ಮಾತೇ ಸಾಕ್ಷಿ. 'ಪ್ರತಿಜ್ಞಾ' ನಾಟಕ ಉದಯನ–ವಾಸವದತ್ತೆಯರ ಪ್ರೇಮ ಅಂಕುರಿಸಿ ಗಂಡಹೆಂಡಿರಾದ್ದನ್ನು ಹೇಳುವ ನಾಟಕವಾದರೂ ಅದರಲ್ಲಿ ಪ್ರಾಮುಖ್ಯವಿರುವುದು ಯೌಗಂಧರಾಯಣನ ಪ್ರತಿಜ್ಞಾ ಪಾಲನೆ, ತಂತ್ರ ಕುಶಲತೆ, ಧೈರ್ಯ, ಶೌರ್ಯ ಮತ್ತು ಸ್ವಾಮಿ ಭಕ್ತಿಗಳಿಗೆ. ಆದರೆ ಅದೇ ಸ್ವಪ್ನ ವಾಸವದತ್ತದಲ್ಲಿ ಪ್ರಾಧಾನ್ಯವಿರುವುದು ವಾಸವದತ್ತೆ ಮತ್ತು ವತ್ಸರಾಜರ ಪ್ರೇಮ ಚಿತ್ರಣಕ್ಕೆ. ಅದು ಎಂಥ ತ್ಯಾಗಕ್ಕಾದರೂ ಸಿದ್ಧರಾಗಿರುವ ಸತಿ–ಪತಿಯರ ಪ್ರೇಮ. ಗಂಡನು ರಾಜ್ಯವನ್ನು ಮತ್ತೆ ಸಂಪಾದಿಸಿಕೊಳ್ಳಲು ಪದ್ಮಾವತಿಯ ತಂದೆಯ ನೆರವು ಪಡೆಯಲುನುಕೂಲವಾಗುವಂತೆ ತನ್ನ ಗಂಡ ಪದ್ಮಾವತಿಯನ್ನು ಮದುವೆಯಾಗಲು ತಾನೇ, ತತ್ಕಾಲವಾದರೂ ಸರಿ, ಸುಟ್ಟು ಹೋದಳೆಂಬ ಸಂದರ್ಭ ಸೃಷ್ಟಿಯಾಗಲು ಒಪ್ಪುತ್ತಾಳೆ. ಉದಯನನು ಸಂದರ್ಭದ ಅನಿವಾರ್ಯತೆಗೆ ಒಳಗಾಗಿ ಪದ್ಮಾವತಿಯನ್ನು ಮದುವೆಯಾದರೂ ವಾಸವದತ್ತೆಯ ಅನುರಾಗದಲ್ಲೇ ಮುಳುಗಿ ಹೋಗಿರುವನು. ಇಂಥ ಈ ಲಲಿತ ಮಧುರ ಪ್ರೇಮದ ಸುತ್ತ ಹಬ್ಬಿರುವ ಈ ನಾಟಕದ ಕೆಲವು ಸಂದರ್ಭಗಳನ್ನು ಪರಿಶೀಲಿಸುವ ಮೂಲಕ ಭಾಸನ

ನಾಟಕದ ಸ್ವಾರಸ್ಯ ಮತ್ತು ಭಟ್ಟರ ಅನುವಾದದ ಕೌಶಲ್ಯಗಳ ಪರಿಚಯವನ್ನು ಒಟ್ಟಿಗೇ ಮಾಡಿಕೊಳ್ಳಬಹುದು.

ಮುದ್ರಾಲಂಕಾರ

ಭಾಸನ ನಾಟಕಗಳ ವಿಶಿಷ್ಟತೆಯೆಂದರೆ, ಅವಿಮಾರಕ ಮತ್ತು ಚಾರುದತ್ತ ಎಂಬ ಎರಡು ನಾಟಕಗಳನ್ನು ಹೊರತುಪಡಿಸಿದರೆ, ಉಳಿದೆಲ್ಲ ನಾಟಕಗಳೂ ಮುದ್ರಾಲಂಕಾರ ರೂಪವಾದ ಮಂಗಳಪದ್ಯದಿಂದ ಪ್ರಾರಂಭವಾಗುತ್ತವೆ. ನಾಟಕದ ಪ್ರಮುಖ ಪಾತ್ರಗಳನ್ನು, ತನ್ನ ಅಭೀಷ್ಟ ದೈವವನ್ನು ಮತ್ತು ಕಾವ್ಯವಸ್ತುವನ್ನು ಏಕಕಾಲಕ್ಕೆ ಸೂಚಿಸುವ ಪದ್ಯವೇ ಈ ಮುದ್ರಾಲಂಕಾರದ ಪದ್ಯ. ಇದು ಅನುವಾದಕನಿಗೆ ನಿಜಕ್ಕೂ ಒಂದು ಸವಾಲೇ ಸರಿ. ಉದಾಹರಣೆಗೆ ಸ್ವಪ್ನ ವಾಸವದತ್ತ ನಾಟಕದ ಮಂಗಳ ಪದ್ಯವನ್ನು ನೋಡಬಹುದು.

ಉದಯನವೇಂದು ಸವರ್ಣಾ ವಾಸವದತ್ತಾ ಬಲೌ ಬಲಸ್ಯತ್ವಾಮ್ ।
ಪದ್ಮಾವತೀರ್ಣ ಪೂರ್ಣೌ ವಸಂತಕಮ್ರೌಭುಜೌಪಾತಾಮ್॥ [1–1]

ಎಸ್.ವಿ.ಪಿ. ಅವರು ಇದನ್ನು ಹೀಗೆ ಅನುವಾದಿಸಿದ್ದಾರೆ

ಆವುದು ಉದಯನವೇಂದುವ ಪೋಲ್ವೆಯ ಬಣ್ಣವನಾಂತಿಹುದು
ಆವುದು ಸಲೆ ಮೆರೆವಾಸವದತ್ತಾ ಬಲಯುತಮೆನಿಸಿಹುದು
ಆವುದು ಪದ್ಮಾವತಿಯವತರಣದೆ ಪೂರ್ಣತೆ ಪಡೆದಿಹುದು
ಆವುದು ಮಿಸುಪವಸಂತಕ ಕಾಂತಿಯ ತಳದೆಸೆದಿಹುದು
ಪೊರೆಯಲಿ ನಿಮ್ಮನು ಆ ಬಲಭದ್ರನ ವರಭುಜಯುಗ್ಮವದು

ಮೂಲದಲ್ಲಿ ಎರಡು ಸಾಲಿನ ಶ್ಲೋಕ ಅನುವಾದದಲ್ಲಿ 4 ಮಾತ್ರೆಗಳ 6 ಗಣ + 1 ಗುರುವಿನ ಆರು ಸಾಲಿಗೆ ಹಿಗ್ಗಿದೆ. ಕನ್ನಡ ಭಾಷಾ ಮರ್ಯಾದೆ, ಛಂದೋಬಂಧದ ನಿಯಮ ಪಾಲನೆ ಮತ್ತು ಮುದ್ರಾಲಂಕಾರದ ಲಕ್ಷಣ ನಿರ್ವಹಣೆಗಳ ದೃಷ್ಟಿಯಿಂದ ಹೀಗೆ ಹಿಗ್ಗಲಿಕೆ ಅನಿವಾರ್ಯವಾಗಿತ್ತೆನಿಸುತ್ತದೆ. ಆದೇ ಗದ್ಯದಲ್ಲಿ ಇಂಥ ಹಿಗ್ಗುವಿಕೆ ಅಥವಾ ಕುಗ್ಗುವಿಕೆಗಳಾಗುವುದಿಲ್ಲ ಎಂಬುದನ್ನು ನೆನೆಯಬಹುದು. ಒಟ್ಟಾರೆ ಈ ಮುದ್ರಾಲಂಕಾರದ ನಾಂದೀ ಪದ್ಯದ ಕನ್ನಡ ರೂಪ ಸಾರ್ಥಕವಾಗಿದೆ.

'ಸ್ವಪ್ನ ವಾಸವದತ್ತ'ದ ಐದನೆಯ ಅಂಕ ನಾಟಕದ ಹೃದಯವೆನ್ನಬಹುದು. ಇದನ್ನು ಸ್ವಪ್ನಾಂಕವೆಂದೂ ಕರೆಯುತ್ತಾರೆ. ಉದಯನ ವಾಸವದತ್ತೆಯರ ಮನಸ್ಸಿನ ತುಮುಲಗಳು, ಹೊಳೆದು ತೋರುವ ಅಂಕ. ತಲೆನೋವಿನಿಂದ ನರಳುತ್ತಿರುವ ಪದ್ಮಾವತಿ ಸಮುದ್ರ ಗೃಹದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಳೆಂದು ತಿಳಿದು, ಅವಳ ಕ್ಷೇಮ ವಿಚಾರಿಸಲು, ರಾಜ ಉದಯನನು ವಸಂತಕನೊಡನೆ ಅಲ್ಲಿಗೆ ಬರುತ್ತಾನೆ. ಆ ಸಮಯದಲ್ಲಿ ಪದ್ಮಾವತಿ ಅಲ್ಲಿಂದ ಎದ್ದು ಹೋಗಿರುತ್ತಾಳೆ. ರಾಜನು ಹಾಸಿಗೆ ಮೇಲೊರಗಿ ವಿಶ್ರಮಿಸಲು ಬಯಸಿ ಕತೆ ಹೇಳೆಂದು ಹೇಳುತ್ತಾನೆ. ಅವನು 'ಉಜ್ಜಯಿನಿ ಎಂಬ ಪಟ್ಟಣ ಇದೆ ಎಂದು ಪ್ರಾರಂಭಿಸುತ್ತಾನೆ. ಏನು ಉಜ್ಜಯಿನಿಯೆ–ಎಂದು ಪರ್ಯುತ್ಸುಕನಂತಾದ ರಾಜನಿಗೆ ಬೇರೊಂದು ಹೇಳುವುದಾಗಿ ಹೇಳುತ್ತಾನೆ. ಆದರೆ 'ಉಜ್ಜಯಿನಿ' ಎಂದು ಹೇಳಿದ ತಕ್ಷಣ ರಾಜನಿಗೆ ವಾಸವದತ್ತೆಯ ನೆನಪು ಉಕ್ಕಿ ಬರುತ್ತಿದೆ. ಅವನ ಮನಸ್ಸಿನ ಆ ವೇದನೆ ಮೂಲದಲ್ಲಿ ಹೀಗಿದೆ :

ಸ್ಮರಾಮ್ಯವಂತ್ಯಾಧಿಪತೇಃ ಸುತಾಯಾಃ
ಪ್ರಸ್ಥಾನ ಕಾಲೇ ಸ್ವಜನಂ ಸ್ಮರಂತ್ಯಾಃ

ಬಾಷ್ಪ ಪ್ರವೃತ್ತಂ ನಯನಾಂತಲಗ್ನಂ
ಸ್ನೇಹಾನ್ಮಮೈವೋರಸಿ ಪಾತಯಂತ್ಯಾಃ [5–5]

ಭಟ್ಟರ ಅನುವಾದ ಎಂದಿನಂತೆ ಮೂಲಕ್ಕೆ ನಿಷ್ಠವಾಗಿ ಸೊಗಸಾಗಿ, ಕನ್ನಡಕ್ಕೆ ಸಹಜವಾದ ಅಂತ್ಯ ಪ್ರಾಸ ಅನುಪ್ರಾಸಗಳನ್ನು ಒಳಗೊಂಡು 3/4/3/4 ಮಾತ್ರೆಗಳ ಭಾಮಿನಿ ಲಯದಲ್ಲಿ ಅನುವಾದಿತಗೊಂಡಿದೆ.

ನೆನೆಯುತಿರುವೆನು ಆ ಅವಂತಿಯ ದೊರೆಯ ಕುವರಿಯನೀಗಳು
ನನ್ನ ಜತೆಯೊಳು ಬರುವ ಸಮಯದೆ ತನ್ನ ಬಂಧುವ ನೆನೆದಳು
ಸ್ನೇಹ ಭರದೊಳು ಕಣ್ಣ ಕೊನೆಯೊಳು ನೀರು ತುಂಬಿದುದಾಗಳು
ಅಪ್ಪಿ ಭರದೊಳು ಕಣ್ಣ ನೀರನು ಸುರುವಿದಳು ಎನ್ನೆದೆಯೊಳು

ಮೂಲದಲ್ಲಿ ಇಲ್ಲದೆ ಇರುವುದೆಂದರೆ – "ಅಪ್ಪಿಭರದೊಳು" ಎಂಬ ಮಾತು. ಆದರೆ ಅದು ಸಂದರ್ಭಕ್ಕೆ ಪೋಷಕವಾಗಿಯೇ ಇದೆ.

ವತ್ಸರಾಜನು ಕನಸಿನಲ್ಲಿ ವಾಸವದತ್ತೆಯನ್ನು ಕಂಡು ಮಾತಾಡಿಸಿದ್ದಾನೆ. ಹೋಗುವಾಗ ಜೋತುಬಿದ್ದಿದ್ದ ಅವನ ಕೈಯನ್ನು ಎತ್ತಿಡುವ ವ್ಯತಿಕರದಲ್ಲಿ ಅವಳ ಕರಸ್ಪರ್ಶ ಇವನಿಗಾಗಿದೆ. ತಾನು ಕಂಡದ್ದು ಕನಸಲ್ಲವೆಂದು ರಾಜನ ಮನಸ್ಸು ಹೇಳುತ್ತಿದೆ. ಆದರೆ ವಿದೂಷಕ ಬಹಳ ಹಿಂದೆಯೇ ಸತ್ತು ಹೋದಳಲ್ಲ, ನೀನು ನೋಡಿದ್ದು ಅವಂತಿ ಸುಂದರಿ ಎಂಬ ಯಕ್ಷಿಣಿಯನ್ನಿರಬೇಕು–ಎನ್ನುತ್ತಾನೆ. ರಾಜನು ಅದನ್ನು ನಿರಾಕರಿಸುತ್ತ ತಾನು ಕಂಡದ್ದು ವಾಸವದತ್ತೆಯನ್ನೇ ಎಂದು ದೃಢಪಡಿಸಲು ಅವಳ ಸ್ಪರ್ಶದಿಂದ ಉಂಟಾದ ರೋಮಾಂಚ ಈಗಲೂ ತೋಳಲ್ಲಿ ಉಳಿದಿದೆ–ಎಂದು ಹೇಳಿದ ಸಂದರ್ಭ ಇದು :

ಯೋಽಯಂ ಸಂತ್ರಸ್ತಯಾ ದೇವ್ಯಾತಯಾ ಬಾಹುರ್ನಿಪೀಡಿತಃ ।
ಸ್ವಪ್ನೇಪ್ಯುತ್ಪನ್ನ ಸಂಸ್ಪರ್ಶೋ ರೋಮಹರ್ಷಂ ನ ಮುಂಚತಿ ॥ [5–11]

ಭಟ್ಟರು ಇದನ್ನು ಅನುವಾದಿಸಿರುವ ರೀತಿ ಇದು :

ಹೆದರಿದಾಸತಿ ಮೆಲ್ಲನೀಗಳೆ ಎತ್ತಿ ಇರಿಸಿದ ನನ್ನ ತೋಳನು ನೋಳ್ಪುದು
ಕನಸೆ ಆದರು ಸೋಂಕು ಸೊಗದಿಂದೊಗೆದ ಪುಳಕವು ಇನ್ನುಮುಳಿದಿದೆ ನೋಳ್ಪುದು

"ಸಂಸ್ಪರ್ಶೋರ್ರೋಮಹರ್ಷಃ" ಎನ್ನುವ ಮಾತಿಗೆ "ಸೋಂಕುಸೊಗದಿಂದೊಗೆದ ಪುಳಕ"–ಎಂಬುದು ಅತ್ಯಂತ ಯುಕ್ತವಾದ ಹಾಗೂ ಸೊಗಸಾದ ಅನುವಾದ. ಹಾಗೆಯೇ 'ಸಂತ್ರಸ್ತಯಾ'ಕ್ಕೆ ಹೆದರಿದಾಸತಿ' ಕೂಡ ಸೂಕ್ತವಾಗಿದೆ.

ಪ್ರತಿಮಾನಾಟಕ

ಭಾಸನ ರಾಮಾಯಣ ನಾಟಕಗಳ ಸರಣಿಯಲ್ಲಿ ಪ್ರತಿಮಾ ನಾಟಕ ಅತ್ಯಂತ ಶ್ರೇಷ್ಠವೂ, ಸ್ವಾರಸ್ಯ ಪೂರ್ಣವೂ ಆದ ನಾಟಕ. ಇದರ ವಸ್ತು, ರಾಮಾಯಣದ ಅಯೋಧ್ಯಾ ಕಾಂಡ ಮತ್ತು ಅರಣ್ಯಕಾಂಡಗಳ ಕಥೆಯೇ ಆದರೂ ನಾಟಕಕ್ಕೆ ಒಂದು ಪೂರ್ಣತೆಯನ್ನು ತಂದುಕೊಡಲೋ ಏನೋ, ಏಳನೇ ಅಂಕದಲ್ಲಿ ರಾವಣನ ಸಂಹಾರದ ಪ್ರಸ್ತಾಪವನ್ನು ಮಾಡಿ ರಾಮ ಪಟ್ಟಾಭಿಷೇಕದಿಂದ ನಾಟಕಕ್ಕೆ ಮಂಗಳ ಹಾಡಿದ್ದಾನೆ ಕವಿ. ಪತಿಯ ವಿಷಯಕ್ಕೆ ಅತ್ಯಂತ ಪ್ರೇಮಮಯಿಯೂ, ಮೈದುನರ ವಿಷಯಕ್ಕೆ ತೀರ ವಾತ್ಸಲ್ಯಮಯಿಯೂ ಆದ ಸೀತೆ, ಕರ್ತವ್ಯ ಪಾಲನೆಯನ್ನು ವ್ರತದಂತೆ ಮಾಡುವ ಆದರ್ಶ ಪುತ್ರ ರಾಮ, ಭರತನ ಬಗೆಗೆ ಇರುವುದಕ್ಕಿಂತ ರಾಮನಲ್ಲಿ ಹೆಚ್ಚು ಪ್ರೀತಿ ಹೊಂದಿರುವ ಕೈಕೆ,

ವಿಧಿವಿಲಾಸದಿಂದ ಎಲ್ಲರ ನಿಂದೆ, ಧಿಕ್ಕಾರಗಳನ್ನು ಸಹಿಸಬೇಕಾಗಿ ಬಂದದ್ದು, ಪುತ್ರವಾತ್ಸಲ್ಯದ ಪ್ರತಿಮೂರ್ತಿಯಂತಿರುವ ದಶರಥ, ಇಂಥ ಪಾತ್ರಗಳ ರೂಪುರೇಖೆಗಳನ್ನು ಅತ್ಯಂತ ಕೌಶಲದಿಂದ ಕಡೆದು ನಿಲ್ಲಿಸಿರುವ ರೀತಿ ಅನ್ಯಾದೃಶ. ಈ ನಾಟಕದ ಕೆಲವು ಸ್ವಾರಸ್ಯಕರವಾದ ಸಂದರ್ಭಗಳನ್ನು ಅವಲೋಕಿಸುವ ಮೂಲಕ ಭಟ್ಟರ ಅನುವಾದದ ಸೊಗಸು, ಸಿದ್ಧಿಗಳನ್ನು ಮನಗಾಣಬಹುದು.

ಪಿತೃವಾಕ್ಯ ಪರಿಪಾಲನೆಯ ಸಲುವಾಗಿ ರಾಮನು ಸೀತಾ, ಲಕ್ಷ್ಮಣ ಸಮೇತನಾಗಿ ವನಕ್ಕೆ ತೆರಳಿದ ಗಳಿಗೆಯಿಂದ ದಶರಥನಂತೂ ದುಃಖದಿಂದ ಉಮ್ಮಳಿಸುತ್ತಿದ್ದಾನೆ. ಅವನ ಹಾಗೆಯೇ ಅಯೋಧ್ಯೆಗೆ ಅಯೋಧ್ಯೆಯೇ, ಅಯೋಧ್ಯೆಯ ಯಾವತ್ತೂ ಜನತೆ, ಅಷ್ಟೇ ಏಕೆ ಅರಮನೆಯ ಆನೆ ಕುದುರೆಗಳೂ ಕಣ್ಣೀರ್ಗರೆಯುತ್ತಿವೆ ಎಂಬುದನ್ನು ಹೇಳುವ ಕರುಣ ರಸಭರಿತವಾದ ಈ ಪದ್ಯವನ್ನು ಅನುವಾದಿಸುವಲ್ಲಿ ಭಟ್ಟರು ತೋರಿಸಿರುವ ಕೌಶಲ– ಕೃಷ್ಣಮೂರ್ತಿಗಳ ಇದೇ ನಾಟಕದ ಅನುವಾದದೊಂದಿಗೆ ಹೋಲಿಸಿ ನೋಡಿದಾಗಿ ವಿಶದವಾಗುತ್ತದೆ. ಭಾಸನ ಮೂಲ ಸಂಸ್ಕೃತ ರಚನೆ ಹೀಗಿದೆ:

> ನಾಗೇಂದ್ರಯವಸಾಭಿಲಾಷವಿಮುಖಾಃ ಸಾಸ್ರೇಕ್ಷಣಾ–ವಾಜಿನೋ
> ಹೇಷಾಶೂನ್ಯಮುಖಾಃ ಸವೃದ್ಧವನಿತಾಬಾಲಾಶ್ಚ ಪೌರಾ ಜನಾಃ ।
> ತ್ಯಕ್ತಾಹಾರಕಥಾಃ ಸುದೀನವದನಾಃ ಕ್ರಂದಂತ ಉಚ್ಚೈರ್ದಿಶಾ
> ರಾಮೋಯಾತಿ ಯಯಾ ಸದಾರ ಸಹಜಾಸ್ತಾಮೇವ ಪಶ್ಯಂತ್ಯಮೀ ॥ [2–2]

ಭಟ್ಟರ ಅನುವಾದ :

> **ಮೇವಿನ ಮೇಲಿನ ಆಸೆಯ ತೊರೆದಿವೆ ಪೇರಾನೆಗಳು**
> **ಕೆನೆಯದೆ ನಿಂತಿವೆ ಕಣ್ಣೀರ್ಗರೆಯುತಲಿದೊ ಈ ಕುದುರೆಗಳು**
> **ಮುದುಕರು ಮಕ್ಕಳು ಹೆಂಗಸರೆಲ್ಲರ ಜತೆಯೊಳು ಇದೊ ಪೌರವರು**
> **ಮಾತನು ಆಡದೆ ಉಣ್ಣದೆ ಮಲಗದೆ ಎತ್ತಿದ ದನಿಯೊಳು ಅಳುತಿಹರು**
> **ರಾಮನು ಸೀತಾ ಲಕ್ಷ್ಮಣ ಸಹಿತನು ಹೋದಾ ದಿಕ್ಕನೆ ನೋಡುವರು**

ಭಟ್ಟರ ಅನುವಾದ ಅತ್ಯಂತ ಸರಳವೂ ಲಲಿತವೂ ಆದ ಯುಕ್ತ ಕನ್ನಡ ಶಬ್ದಗಳಿಂದ ಕೂಡಿ ಮೂಲಕ್ಕೆ ಅತ್ಯಂತ ಹತ್ತಿರವಾಗಿದ್ದರೆ, ಕೃಷ್ಣಮೂರ್ತಿಯವರ ಅನುವಾದ ಹಳಗನ್ನಡದ ರೀತಿಯ ಧಾಟಿಯಲ್ಲಿದ್ದು ಸಂಸ್ಕೃತ ಶಬ್ದಗಳ ಹೆಚ್ಚಳದಿಂದ ಕೂಡಿದೆ.

ಕೃಷ್ಣಮೂರ್ತಿಗಳ ಅನುವಾದ :

> **ಮೇವಿನೊಳಾಸೆಯಿಲ್ಲ ಕರಿಗಳ್ಗೆನೆ ಕಂಬನಿದೋರಿವಾಜಿಗಳ್**
> **ಗೈಯವು ಹೇಷೆಯಂ ಪುರಜನರ್ ತರುಣೀ ಶಿಶು ವೃದ್ಧರೆಲ್ಲರುಂ**
> **ಭೋಜನ ವಾರ್ತೆಯಂ ತೊರೆದು ದೀನಮುಖರ್ ದನಿಯೆತ್ತಿ ರೋದಿಸು**
> **ತ್ತಂಗನೆ ಸೋದರರ್ವೆರಸು ರಾಘವನೈದುವ ದಿಕ್ಕನೀಕ್ಷಿಪರ್**

ಸಾಧಾರಣವೆನ್ನಬಹುದಾದ ಒಂದು ಸಂಗತಿಯನ್ನು ಅದರ ಸಕಲ ವಿವರಗಳಲ್ಲಿ ಮನಸ್ಸಿನಲ್ಲಿ ಖಚಿತವಾಗಿ ನಿಲ್ಲುವಂತೆ ವರ್ಣಿಸುವ ಮೂಲಕ ಹೇಗೆ ಅಸಾಧಾರಣವಾಗಿಸಬಹುದೆಂಬುದಕ್ಕೆ ಐದನೆಯ ಅಂಕದಲ್ಲಿ ಬರುವ ಈ ಪದ್ಯವನ್ನು ನೋಡಬಹುದು.

> ಭ್ರಮತಿ ಸಲಿಲಂ ವೃಕ್ಷಾವರ್ತೇ ಸಫೇನಮವಸ್ಥಿತಂ
> ತೃಷಿತಪತಿತಾ ನೈತೇಕ್ಲಿಷ್ಟಂ ಪಿಬಂತಿ ಜಲಂ ಖಗಾಃ ।

ಸ್ಥಲಮಭಿಪತಂತ್ಯಾರ್ದ್ರಾಃ ಕೀಟಾ ಬಿಲೇ ಜಲಪೂರಿತೇ
ನವವಲಯಿನೋ ವೃಕ್ಷಾಮೂಲೇ ಜಲಕ್ಷಯ ರೇಖಯಾ ॥ [5–2]

ಇದನ್ನು ಅಷ್ಟೇ ಸೊಗಸಾಗಿ ಬಳಕೆಯ ತಿಳಿಗನ್ನಡ ಶಬ್ದಗಳನ್ನು ಬಳಸಿ 4 ಮಾತ್ರೆಗಳ ಲಯದಲ್ಲಿ ಅಂತ್ಯಪ್ರಾಸ ಸಹಿತವಾಗಿ ಕನ್ನಡಿಸಿದ್ದಾರೆ.

ಮರಗಳ ಪಾತಿಯೊಳಹ ನೊರೆಗೂಡುತೆ ತಂಗಿದ ನೀರಿದೊ ಸುತ್ತುತಿದೆ
ನೀರಡಸುತೆ ಕೆಳಗಿಳಿದೀ ಖಗತತಿ ಕದಡಿದ ನೀರನು ಕುಡಿಯದಿದೆ
ಬಿಲದೊಳು ತುಂಬಿದ ನೀರೊಳು ನಾಂದಿಹ ಕೀಟಗಳೊಟ್ಟಿಗೆ ಬರುತಲಿವೆ
ನೀರಿಳಿಯುತ್ತಿರೆ ಮರಗಳ ಬುಡದೊಳು ಹೊಸಹೊಸ ವಲಯಗಳಾಗುತಿದೆ

ಇನ್ನೊಂದು ತೀರ ಸರಳವೆ ಎನ್ನಬಹುದಾದ ಸನ್ನಿವೇಶ. ರಾಮನ ಪಿತೃಪ್ರೇಮ, ದಶರಥನ ಪುತ್ರ ವಾತ್ಸಲ್ಯ ಎರಡೂ ಒಂದೇ ಬಾರಿಗೆ ಅಭಿವ್ಯಕ್ತಗೊಂಡಿರುವ ಸಂದರ್ಭ.

ಸಮಂ ಬಾಷ್ಪೇಣ ಪತತಾ ತಸ್ಯೋಪರಿಮಮಾಪ್ಯಧಃ ।
ಪಿತುರ್ಮೇ ಕ್ಲೇದಿತೌ ಪಾದೌ ಮಮಾಪಿ ಕ್ಲೇದಿತಂ ಶಿರಃ ॥ [1–6]

ಭಟ್ಟರ ಅನುವಾದ ನಾಲ್ಕು ಸಾಲುಗಳಿಗೆ ಹಿಗ್ಗಲಿಸಿದ್ದರೂ, ಭಾವ ಸಮಸ್ತವೂ ಇಳಿದು ಬಂದಿದೆಯೇ ಹೊರತು, ಅನಗತ್ಯವಾದದ್ದೇನೂ ಬಂದಿಲ್ಲ.

ಅತ್ತ ಮೇಗಡೆ ಅವನ ಕಣ್ಣೀರಿಳಿದು ಹರಿಯಿತು
ನನ್ನ ಮುಡಿ ಸಲೆ ತೊಯ್ದಿತು
ಇತ್ತ ಕೆಳಗಡೆ ನನ್ನ ಕಣ್ಣೀರಿಳಿದು ಹರಿಯಿತು
ಅವನ ಅಡಿ ಸಹ ತೊಯ್ದಿತು–

ಅನುವಾದದಲ್ಲಿ 'ಮೇಗಡೆ' 'ಮುಡಿ', ಶಬ್ದಗಳಿಗೆದುರಾಗಿ ಸಮಜೋಡಿಯಾಗಿ 'ಕೆಳಗಡೆ' 'ಅಡಿ' ಎಂಬ ಶಬ್ದಗಳನ್ನು ಬಳಸಿರುವುದು ಹಾಗೂ 'ಅತ್ತ'ಕ್ಕೆ ಪ್ರತಿಯಾಗಿ 'ಇತ್ತ' ಎಂದು ಬಳಸಿರುವುದು, ಇವೆಲ್ಲದರಿಂದಾಗಿ ಅನುವಾದ ಕಳೆಗಟ್ಟುವಂತಾಗಿ ಮೂಲಕ್ಕೆ ಸರಿಮಿಗಿಲಾಗಿದೆ.

ಪಂಚರಾತ್ರ

ಭಾಸನ ಭಾರತ ಕಥಾ ಸರಣಿಯ ರೂಪಕಗಳು ಆರು. ಅವುಗಳೆಂದರೆ ಪಂಚರಾತ್ರ, ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತಘಟೋತ್ಕಚ, ಕರ್ಣಭಾರ ಮತ್ತು ಊರುಭಂಗ. ಇವುಗಳಲ್ಲಿ ಪಂಚರಾತ್ರವನ್ನು ಹೊರತುಪಡಿಸಿದರೆ, ಉಳಿದವು ಏಕಾಂಕಗಳು. ಪಂಚರಾತ್ರವೊಂದೇ ಮೂರು ಅಂಕಗಳ ನಾಟಕ. 'ಉದಯನ ಕಥಾನಾಟಕಗಳಲ್ಲಿ ಸ್ವಪ್ನ ವಾಸವದತ್ತವು ಹೇಗೋ, ರಾಮಾಯಣ ಕಥಾನಾಟಕಗಳಲ್ಲಿ ಪ್ರತಿಮಾ ನಾಟಕವು ಹೇಗೋ, ಭಾರತ ಕಥಾನಾಟಕಗಳಲ್ಲಿ ಪಂಚರಾತ್ರವು ಹಾಗೆ ಭಾಸನ ಕಲಾಕೌಶಲ್ಯವನ್ನು ಸಮಗ್ರ ರೂಪದಲ್ಲಿ ಪ್ರಕಟಿಸುವ ನಾಟಕ. ಭಾಸನ ಕಲ್ಪನೆಯ ಪ್ರಕಾರ, ಈ ನಾಟಕದಲ್ಲಿ ಭಾರತ ಯುದ್ಧ ನಡೆಯುವುದೇ ಇಲ್ಲ. ಬದಲಿಗೆ ಪಾಂಡವರ ಅಜ್ಞಾತವಾಸದ ಕೊನೆಗೆ ಉತ್ತರಗೋಗ್ರಹಣ ನಡೆದು, ಅದರ ಅಂತ್ಯದಲ್ಲಿ ದುರ್ಯೋಧನ, ತಾನು ದ್ರೋಣಾಚಾರ್ಯರಿಗೆ ಕೊಟ್ಟ ಮಾತಿನ ಪ್ರಕಾರ ಅರ್ಧ ರಾಜ್ಯವನ್ನು ಕೊಡಲೊಪ್ಪುತ್ತಾನೆ. ಅದಕ್ಕೆ ಕಾರಣವಾದ ಸಂದರ್ಭ ಹೀಗಿದೆ. ದುರ್ಯೋಧನನು ಒಂದು ಯಾಗ ಮಾಡಿ, ಅದರ ಕೊನೆಯಲ್ಲಿ ದ್ರೋಣಾಚಾರ್ಯರಿಗೆ ಆಚಾರ್ಯ ಪೂಜೆ ಮಾಡಿ, ಅವರಿಗೆ ಇಷ್ಟವಾದ ದಕ್ಷಿಣೆಯನ್ನು ಕೊಡುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಅದರ ಪರಿಣಾಮವೆಂದರೆ, ದ್ರೋಣರು ಪಾಂಡವರಿಗೆ ಅರ್ಧ ರಾಜ್ಯ ಕೊಡಬೇಕೆಂದು ಕೇಳುತ್ತಾರೆ. ಮಧ್ಯೆ ಶಕುನಿ

ಅಡ್ಡ ಬಂದು, ಅಲ್ಲಿಂದ ಐದು ರಾತ್ರಿಗಳೊಳಗಾಗಿ ದ್ರೋಣರು ಪಾಂಡವರ ಸಮಾಚಾರವನ್ನು ತರುವುದಾದರೆ ಮಾತ್ರ ಅರ್ಧ ರಾಜ್ಯವನ್ನು ಕೊಡುವುದೆಂಬ ಷರತ್ತಿಗೆ ಸಮ್ಮತಿಸುತ್ತಾನೆ. ಭೀಷ್ಮನ ಪ್ರೇರಣೆಯ ಮೇರೆಗೆ ದ್ರೋಣರು ಆ ಷರತ್ತಿಗೆ ಒಪ್ಪುತ್ತಾರೆ. ಹಳೆಯ ವೈರದ ಕಾರಣ ಹೇಳಿ, ವಿರಾಟನ ಮೇಲೆ ಯುದ್ಧಕ್ಕೆ ಹೋಗಿ ಗೋವುಗಳನ್ನು ಹಿಡಿಯುತ್ತಾರೆ. ಮುಂದೆ ಮಹಾಭಾರತದ ಕಥೆಯಂತೆಯೇ ನಡೆದು, ಭೀಮನು ಅಭಿಮನ್ಯುವನ್ನು ಸೆರೆಹಿಡಿದು ತಂದು, ನಿಜಸ್ಥಿತಿ ತಿಳಿದ ಮೇಲೆ ಉತ್ತರೆಯೊಂದಿಗೆ ಮದುವೆ ಎಂಬ ಸಮಾಚಾರವನ್ನು ಕೌರವ ಶಿಬಿರಕ್ಕೆ ಕಳುಹಿಸುವುದರೊಂದಿಗೆ ಮತ್ತು ದುರ್ಯೋಧನನು ಪಾಂಡವರಿಗೆ ಅರ್ಧ ರಾಜ್ಯ ಕೊಡಲು ಸಮ್ಮತಿಸುವದರೊಂದಿಗೆ ನಾಟಕ ಮುಗಿಯುತ್ತದೆ.

ಇಡೀ ನಾಟಕವೇ ತುಂಬ ಸೊಗಸಾಗಿದೆ. ಕರ್ಣ, ದುರ್ಯೋಧನರ ದುಷ್ಟ ಚತುಷ್ಟಯದ ಮುಖ ಇಲ್ಲಿ ಕಾಣಬರುವುದಿಲ್ಲ. ಪಾಂಡವರಿಗೆ ಮಾತುಕೊಟ್ಟಂತೆ, ಅರ್ಧ ರಾಜ್ಯ ಕೊಡಬೇಕೋ ಬೇಡವೋ ಎಂಬ, ದುರ್ಯೋಧನ ಪ್ರಶ್ನೆಗೆ ಶಕುನಿ ಖಂಡಿತಾ ಕೂಡದೆಂದು ಹೇಳುತ್ತಾನೆ. ನೀನೇಕೆ ಏನೂ ಹೇಳದೆ, ಸುಮ್ಮನಿದ್ದೀಯೆ ಎಂಬ ಪ್ರಶ್ನೆಗೆ ಕರ್ಣನು ಹೇಳುವ ಮಾತು – ಸೋದರ ಸ್ನೇಹದ ವಿಷಯಕ್ಕೆ ಅವನ ಭಾವನೆಗಳು ಎಷ್ಟು ನವುರು ಎಂಬುದರ ದ್ಯೋತಕ ಈ ಪದ್ಯ :

ರಾಮೇಣ ಭುಕ್ತಾಂ ಪರಿಪಾಲಿತಾಂ ಚ
ಸುಭ್ರಾತೃತಾಂ ನ ಪ್ರತಿಷೇಧಯಾಮಿ ।
ಕ್ಷಮಾಕ್ಷಮತ್ವೇ ತು ಭವಾನ್ ಪ್ರಮಾಣಂ
ಸಂಗ್ರಾಮ ಕಾಲೇಷು ವಯಂ ಸಹಾಯಾ [1–45]

ಭಟ್ಟರು ಇದಕ್ಕೆ ನೀಡಿರುವ ಕನ್ನಡ ರೂಪವು ಹೀಗಿದೆ :

ರಾಮನಾವುದನನುಭವಿಸಿದನು ಮತ್ತೆ ಪರಿಪಾಲಿಸಿದನು
ಆ ಒಡಹುಟ್ಟಿನೊಲುಮೆಯ ನಾನೆಂದುಂ ತಡೆಯೆನು
ಕ್ಷಮೆಯೊ ವೈರವೊ ಅದರ ವಿಷಯಕೆ ನೀನೆ ಗಡ ನಿರ್ಣಾಯಕ
ಯುದ್ಧವೊದಗಿದರಂಥ ಕಾಲಕೆ ನಿನಗೆ ನಾನು ಸಹಾಯಕ

ಮೂಲಕ್ಕೆ ಅತ್ಯಂತ ನಿಷ್ಠವಾಗಿ ಅಲ್ಲಿರುವ ಭಾವ ಸಮಸ್ತವೂ ಅನುವಾದದಲ್ಲಿ ಇಳಿದು ಬಂದಿದೆ. "ಸುಭ್ರಾತೃತಾಂ" ಎಂಬ ಪದಕ್ಕೆ "ಒಡಹುಟ್ಟಿನೊಲುಮೆ" ಎಂಬ ಅಚ್ಚಗನ್ನಡಪದ ಬಳಸಿರುವುದು, 'ನಿರ್ಣಾಯಕಕ್ಕೆ' 'ಸಹಾಯಕ' ಪ್ರಾಸವಾಗಿ ಒಂದು ಇಡೀ ಪದ್ಯವನ್ನು ಒಂದು ಸಮತೂಕದಲ್ಲಿ ಹಿಡಿದಿಟ್ಟಿರುವ ಕಾರಣ ಅಪೂರ್ವ ಸೌಂದರ್ಯ ಉಂಟಾಗಿದೆ.

ಭಾಸನ ಮನೋಭಾವವೇ ಯುದ್ಧವಿರೋಧಿಯಾದುದು, ಅದನ್ನು ಅವನು ಆಯ್ದುಕೊಂಡಿರುವ ವಸ್ತುವೇ ಸೂಚಿಸಿರುತ್ತದೆ. ಮಹಾಭಾರತ ಯುದ್ಧವನ್ನೇ ತಪ್ಪಿಸಿ ದುರ್ಯೋಧನನು ಅರ್ಧ ರಾಜ್ಯ ಕೊಡಲು ಮುಂದಾಗುತ್ತಾನೆನ್ನುವುದೇ ಭಾಸನ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ನಾಟಕದಲ್ಲಿ ಅಲ್ಲಲ್ಲಿ ಸಂದರ್ಭ ಬಂದಾಗಲೆಲ್ಲ ಈ ಯುದ್ಧ ವಿರೋಧಿ ನಿಲುವು ಪ್ರಕಟವಾಗುತ್ತ ಹೋಗುತ್ತದೆ.

ಕೌರವರು ವಿರಾಟನ ಗೋವುಗಳನ್ನು ಹಿಡಿದಿದ್ದಾರೆ. ಉತ್ತರ ಕುಮಾರನು ಯುದ್ಧಕ್ಕೆ ತೆರಳಿದನೆಂಬ ಸುದ್ದಿಯಿಂದ ರಾಜನು ಆತಂಕಗೊಂಡಿದ್ದಾನೆ. ಸಂನ್ಯಾಸಿಯ ವೇಷದಲ್ಲಿರುವ ಧರ್ಮರಾಯನು (ಭಗವನ್) ಕುಮಾರನನ್ನು ಹಿಂದಿರುಗಿಸು ಎಂದು ವಿರಾಟನಿಗೆ ಹೇಳುವಾಗ, ಯುದ್ಧದ ದೋಷವನ್ನು ಹೀಗೆ ಹೇಳುತ್ತಾನೆ.

ಅಗಣಿತಗುಣದೋಷೋ ಯುದ್ಧ ತೀಕ್ಷ್ಣಶ್ಚ ಬಾಲ್ಯಾತ್
ನ ಚ ದಹತಿ ನ ಕಿಂಚಿತ್ ಸಂನಿಕೃಷ್ಟೋ ರಣಾಗ್ನಿಃ
ಅಥಚ ಪರಿಹರಂತೇ ಧಾರ್ತರಾಷ್ಟ್ರಾ ನ ಕಿಂಚಿತ್
ನಖಲು ಪರಿಭವಾತ್ ತೇ ಯುದ್ಧದೋಷಾನ್ ಬ್ರವೀಮಿ [2–15]

ತೀಕ್ಷ್ಣ ಯುದ್ಧದ ಗುಣವ ದೋಷವನರಿಯದೆಯೆ ಸಲೆ ಕಾದುವನು ಗಡ ಬಾಲನು
ಬಳಿಗೆ ಬಂದವರಾರನಾದರು ಸುಟ್ಟು ಉರುಹದೆ ಬಿಡ ರಣಾನಲನು
ತೋರರವರುಂ ಧಾರ್ತರಾಷ್ಟ್ರರು ಆಜಿರಂಗದೊಳಿನಿಸನಾದರು ದಯೆಯನು
ನಿನ್ನ ಭಂಗಿಸಲೊರೆದೆನಿಲ್ಲವು ಯುದ್ಧದೋಷವನಷ್ಟನೆಯೆ ನಾಂ ಪೇಳ್ದೆನು

ಮೂಲದಲ್ಲಿರುವ ನಾಲ್ಕು ಸಾಲುಗಳಿಗೆ, ಅನುವಾದದಲ್ಲೂ ನಾಲ್ಕು ಸಾಲುಗಳೇ ಇವೇ. ಹಾಗಾಗಿ ಅಲ್ಲಿರುವ ಶಬ್ದಗಳಿಗೆ ಕಿಂಚಿತ್ತೂ ಹೆಚ್ಚು ಕಡಿಮೆ ಆಗದಂತೆ ಅನುವಾದಿಸಿದ್ದಾರೆ. ಮೂಲದಲ್ಲಿಲ್ಲದೆ ಇರುವ ಅಂತ್ಯಪ್ರಾಸವನ್ನು – (ಬಾಲನು/ರಣಾನಲನು, ದಯೆಯನು/ ಪೇಳ್ದೆನು) ತಂದಿರುವುದು ಅನುವಾದದ ಸೊಗಸನ್ನು ಹೆಚ್ಚಿಸಿದೆ ಮತ್ತು ಅದು ಕನ್ನಡದ್ದೇ ಆದ ವಿಶೇಷವೆಂಬುದು ಸ್ಪಷ್ಟವೇ ಇದೆ.

ಭೀಮನದು ಹೆಂಗರುಳು. ಪಾಂಚಾಲಿಯು ವನವಾಸ ಮತ್ತು ಅಜ್ಞಾತವಾಸದ ಸಂಕಷ್ಟಗಳಿಂದ ಬಹಳಷ್ಟು ನೊಂದಿದ್ದಾಳೆಂದು ಬಲ್ಲ ಭೀಮನು, ಅವಳು ತನ್ನ ನೋವನ್ನು ಕಿಂಚಿತ್ತಾದರೂ ಮರೆಯುವಂತಾಗಲಿ ಎಂಬ ಉದ್ದೇಶದಿಂದ ತಾನು ಅಭಿಮನ್ಯುವನ್ನು ಸೆರೆಹಿಡಿದು ತಂದುದಾಗಿ ಭೀಮನು ಅರ್ಜುನನಿಗೆ ಗುಟ್ಟಾಗಿ ಹೇಳುತ್ತಾನೆ.

ಜಾನಾಮ್ಯೇತಾನ್ ನಿಗ್ರಹಾದಸ್ಯದೋಷಾನ್
ಕೋ ವಾ ಪುತ್ರಂ ಮರ್ಷಯೇತ್ ಶತ್ರುಹಸ್ತೇ ।
ಇಷ್ಟಾಪತ್ತ್ಯಾ ಕಿಂತು ದುಃಖೇ ಹಿ ಮಗ್ನಾ
ಪಶ್ಯತ್ವೇಸಂ ದ್ರೌಪದೀತ್ಯಾ ಹೃತೋಽಯಮ್ [2–46]

ಎಸ್.ವಿ.ಪಿ.ರವರ ಈ ಅನುವಾದ ಮೂಲಕ್ಕೆ ಹತ್ತಿರವಾಗಿದ್ದರೂ ಮೂಲದ ಯಥಾವತ್ ಆಗಿಲ್ಲ. ಆದರೆ ಅದರ ಭಾವವನ್ನು ಇನ್ನಷ್ಟು ಉತ್ತಮ ಪಡಿಸಲಾಗಿದೆ.

ಇವನ ತಂದುದರಿಂದ ದೋಷಗಳಪ್ಪುವೆಂಬುದ ಬಲ್ಲೆನು
ಹಗೆಯ ಕೈಯೊಳು ಮಗುವು ಸಿಕ್ಕರೆ ಕೆಮ್ಮನಿರ್ದಪನಾವನು
ಪುತ್ರವತ್ಸಲೆ ನಮ್ಮ ಆ ಪಾಂಚಾಲಿ ತನ್ನುರು ನೋವನು
ತಣಿಸಿಕೊಳ್ಳಲಿ ಇವನ ಕಾಣುತಲೆಂದು ನಾ ಹಿಡಿತಂದೆನು

"ದುಃಖದಲ್ಲಿಯೇ ಮುಳುಗಿರುವ ದ್ರೌಪದಿ ತನ್ನ ಪ್ರೀತಿಯ ಮಗನನ್ನು ಕಾಣಲಿ' ಎಂಬ ಅರ್ಥದ ಮಾತುಗಳು – "ಇವನ ಕಾಣುತ–ತನ್ನುರು ನೋವನು ತಣಿಸಿಕೊಳ್ಳಲಿ"– ಎಂದಾಗಿರುವುದು ಹೆಚ್ಚು ಅರ್ಥಪೂರ್ಣವಾಗಿದೆ.

ಊರುಭಂಗ

ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತಘಟೋತ್ಕಚ, ಕರ್ಣಭಾರ ಮತ್ತು ಊರುಭಂಗ. ಈ ಐದೂ ಒಂದು ಅಂಕದ ಭಾರತ ಕಥಾ ರೂಪಕಗಳು. ಪಂಚರಾತ್ರವೂ ಸೇರಿದಂತೆ ಇವುಗಳಿಂದ ಭಾರತ ನಾಟಕ ಚಕ್ರವು ಪೂರ್ಣಗೊಂಡಂತಾಗಿದೆ.

'ಊರುಭಂಗ' ಅದರ ಹೆಸರೇ ಸೂಚಿಸುವಂತೆ ಮಹಾಭಾರತ ಯುದ್ಧದ ಕೊನೆಯ ದಿನದ ಸಂಗತಿಗಳಾದ–ಭೀಮ ದುರ್ಯೋಧನರ ಗದಾಯುದ್ಧ, ಬಲರಾಮನ ಕೋಪ

ಮತ್ತು ತದನಂತರದಲ್ಲಿ ತೊಡೆಮುರಿದ ಮಗನನ್ನು ತಂದೆ ತಾಯಿಗಳು, ದುರ್ಯೋಧನನ ಕಡೆಯ ಮಗ ಮತ್ತು ರಾಣಿಯರು ಭೇಟಿ ಮಾಡಲು ಬರುವುದು, ಇದಿಷ್ಟನ್ನು ಒಳಗೊಂಡಿದೆ. ಇಲ್ಲಿಯ ದುರ್ಯೋಧನ ತನ್ನ ತಪ್ಪನ್ನು ಅರಿತು, ತನ್ನ ದುಷ್ಕೃತ್ಯಕ್ಕಾಗಿ ಪಶ್ಚಾತ್ತಾಪ ಪಡುತ್ತಿರುವ ದುರ್ಯೋಧನ. ಅತ್ಯಂತ ದಾರುಣ ಸ್ಥಿತಿಯಲ್ಲಿ ತನ್ನವರನ್ನು ಭೇಟಿ ಮಾಡುತ್ತಿರುವ ದುರ್ಯೋಧನನ ಈ ಚಿತ್ರಣದಲ್ಲಿ ಕರುಣ ರಸ ಕೋಡಿವರಿದಿದೆ.

ಭೀಮನು ದುರ್ಯೋಧನನ ತೊಡೆಗೆ ಗದಾ ಪ್ರಹಾರ ಮಾಡಿದ ಸಂದರ್ಭವನ್ನು ವರ್ಣಿಸುವ ಈ ಪದ್ಯ:

ಭೂಮೌ ಪಾಣಿತಲೇ ನಿಘೃಷ್ಯ ತರಸಾ ಬಾಹೂ ಪ್ರಮೃಜ್ಯಾಧಿಕಂ
ಸಂದಷ್ಟೋಷ್ಟ ಪುಟೇನ ವಿಕ್ರಮ ಬಲಾತ್ ಕ್ರೋಧಾಧಿಕಂ ಗರ್ಜಿತಾ
ತ್ಯಕ್ತ್ವಾ ಧರ್ಮಘೃಣಾಂ ವಿಹಾಯ ಸಮಯಂ ಕೃಷ್ಣಸ್ಯ ಸಂಜ್ಞಾಸಮಂ
ಗಾಂಧಾರೀ ತನಯಸ್ಯ ಪಾಂಡು ತನಯೇನೋರ್ವೋರ್ವಿ ಮುಕ್ತಾ ಗದಾ ॥ [1–24]

ಕನ್ನಡ ಸಂಸ್ಕೃತ ಶಬ್ದಗಳ ಹದವಾದ ಮಿಶ್ರಣದಿಂದ ಹೃದ್ಯವಾದ ರೀತಿಯಲ್ಲಿ, ಕಣ್ಣಿಗೆ ಕಟ್ಟುವಂತೆ ಅನುವಾದದ ಸಾಲುಗಳು ಸಾಗುತ್ತವೆ.

ಪಾಣಿತಲವನು ನೆಲದೊಳುಜ್ಜುತೆ ತೋಳು ತೊಡೆಗಳ ತಟ್ಟುತೆ
ಬಲದ ದರ್ಪದ ಹಲ್ಲು ಮುಡಿಯನು ಕಚ್ಚಿ ರೋಷದಿ ಮೊರೆಯುತೆ
ಧರ್ಮವನು ಕಡೆಗಣಿಸುತೊಡನೆಯೆ ಮಲ್ಲ ಸಮಯವ ಮೀರುತೆ
ಪಾಂಡುಪುತ್ರನು ಧಾರ್ತರಾಷ್ಟ್ರನ ತೊಡೆಯನೆಯೆ ಗುರಿಗೈಯುತೆ
ತನ್ನ ಗದೆಯಿಂದುಡಿದನೋವೋ ಕೃಷ್ಣ ಸಂಜ್ಞೆಯ ನೆನೆಯುತೆ

ಮೂಲದಲ್ಲಿಯ 'ಗಾಂಧಾರೀ ತನಯ' ಎಂಬುದಕ್ಕೆ ಪರ್ಯಾಯವಾಗಿ ಬಳಸಿರುವ 'ಧಾರ್ತರಾಷ್ಟ್ರ' ಎಂಬ ಪದದಿಂದ ಅರ್ಥ ಸೌಂದರ್ಯಕ್ಕೇನೂ ಬಾಧಕ ಬಂದಂತಿಲ್ಲ.

ಗದ್ಯದ ಸಾಲುಗಳಾದರೂ ಅಷ್ಟೇ. ಸರಿ ದೊರೆಯಾಗಿ ಕನ್ನಡಕ್ಕೆ ಅವತರಿಸಿವೆ. ಬಾಲಕ ದುರ್ಜಯನು ತಂದೆಯ ತೊಡೆಯ ಮೇಲೆ ಕುಳಿತು ಕೊಳ್ಳಬಯಸಿದ್ದಾನೆ. ಆದರೆ ತೊಡೆಮುರಿದ ಸ್ಥಿತಿಯಲ್ಲಿರುವ ದುರ್ಯೋಧನನು ಈ ಪರಿಚಿತ ಪೀಠ ಇನ್ನು ಮೇಲೆ ನಿನಗೆ ಸಿಗದೆಂದು ಹೇಳಿದಾಗಿನ ಸಂದರ್ಭ :

ದುರ್ಜಯ : ಮಹಾರಾಜ, ಹಾಗಾದರೆ ಎಲ್ಲಿಗೆ ಹೋಗುವೆ ?

ದುರ್ಯೋಧನ : ನೂರು ಜನ ತಮ್ಮಂದಿರು ಎಲ್ಲಿಗೆ ಹೋದರೋ ಅಲ್ಲಿಗೆ.

ದುರ್ಜಯ : ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗು.

ದುರ್ಯೋಧನ : ಹೋಗು ಮಗು ಭೀಮನನ್ನು ಕೇಳು.

ದುರ್ಜಯ : ಮಹಾರಾಜ ಬಾ ನಿನ್ನನ್ನು ಹುಡುಕುತ್ತಿದ್ದಾರೆ.

ದುರ್ಯೋಧನ : ಯಾರು ಮಗು?

ದುರ್ಜಯ : ಅಜ್ಜ, ಅಜ್ಜಿ, ಅಮ್ಮ ಎಲ್ಲರೂ

ದುರ್ಯೋಧನ : ಹೋಗು ಮಗು ನಾನು ಬರಲಾರೆ

ದುರ್ಜಯ : ನಾನು ನಿನ್ನನ್ನು ಎತ್ತಿಕೊಂಡು ಹೋಗುತ್ತೇನೆ

ದುರ್ಯೋಧನ : ಮಗು ನೀನು ಇನ್ನೂ ಚಿಕ್ಕವನು.

ಮೂಲದಲ್ಲಿ "ವೃಕೋದರಂ ಬ್ರೂಹಿ" ಎದಿರುವುದನ್ನು – 'ವೃಕೋದರನನ್ನು ಕೇಳು' ಎಂದೇ ಇರಬೇಕಿತ್ತು. ಕಾರಣ 'ತೋಳದಂತಹ ಹೊಟ್ಟೆಯ, ನೂರು ಮಕ್ಕಳನ್ನು ನುಂಗಿದವನಿಗೆ ಯಾರ ವಿಷಯಕ್ಕೂ ಕರುಣೆ ಇರಲು ಸಾಧ್ಯವಿಲ್ಲ. – 'ದುರ್ಜಯನಂಥ ಮಗು'ವಿನ ವಿಷಯಕ್ಕೂ ಕರುಣೆ ತೋರಲಾರದ ವೃಕದಂಥವನು ಎಂದೆಲ್ಲಾ ಅರ್ಥ. ಪರಂಪರೆಗಳನ್ನು ಹೊರಡಿಸಲು ಸಮರ್ಥವಾದ 'ವೃಕೋದರ' ಕ್ಕೆ ಪರ್ಯಾಯವಾಗಿ 'ಭೀಮ' ಎಂಬ ಶಬ್ದ ಬಳಸಿರುವುದರಿಂದ ಆ ಧ್ವನಿಪರಂಪರೆಗೆ ಭಂಗ ಉಂಟಾಗಿದೆ. ತೀ.ನಂ.ಶ್ರೀ.ಯವರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಈ ಬಗ್ಗೆ ಚರ್ಚಿಸಿ, 'ವೃಕೋದರ' ಎಷ್ಟೊಂದು ಧ್ವನಿಪೂರ್ಣವೆಂದು ತೋರಿಸಿಕೊಟ್ಟಿದ್ದಾರೆ.

10. ಕನ್ನಡ ಭವಭೂತಿ ಮಹಾಸಂಪುಟ

ಮಹಾವೀರ ಚರಿತ, ಮಾಲತೀ ಮಾಧವ ಮತ್ತು **ಉತ್ತರ ರಾಮಚರಿತ**ಗಳೆಂಬ ಮೂರು ನಾಟಕಗಳನ್ನು ರಚಿಸಿರುವ ಭವಭೂತಿ ಹೆಸರಾಂತ ಸಂಸ್ಕೃತ ನಾಟಕಕಾರ. ಸು.ಕ್ರಿ.ಶ.700ರ ಸುಮಾರಿನಲ್ಲಿದ್ದ ಭವಭೂತಿ ವಿದರ್ಭದ ಸಮೀಪದಲ್ಲಿದ್ದ ಪದ್ಮಪುರವೆಂಬ ಊರಿನವನು. ಶ್ರೋತ್ರಿಯ ಬ್ರಾಹ್ಮಣನಾದ ಈತನು ಉದುಂಬರ ವಂಶದವನೂ ತೈತ್ತಿರೀಯ ಶಾಖೆಯ ಕಾಶ್ಯಪಗೋತ್ರದವನೂ ಆಗಿದ್ದು, ನೀಲಕಂಠ ಮತ್ತು ಜಾತುಕರ್ಣಿಯರ ಪುತ್ರನೆಂದು ಅವನೇ ಹೇಳಿಕೊಂಡಿರುವ ವಿವರಗಳಿಂದ ತಿಳಿದುಬರುತ್ತದೆ. ಪ್ರಕಾಂಡ ಪಂಡಿನಾದ ಇವನ ನಿಜನಾಮಧೇಯ 'ಶ್ರೀಕಂಠ' ಎಂದಿರಬೇಕೆಂದೂ 'ಭವಭೂತಿ' ಎಂಬುದು ಅವನ ಬಿರುದು ಆಗಿರಬೇಕೆಂದೂ ಊಹಿಸಲಾಗಿದೆ. ತನ್ನ ಬಗ್ಗೆ "ವಶ್ಯವಾಕ್" ಎಂದು ಹೇಳಿಕೊಂಡಿದ್ದಾನೆ. ತನ್ನ ಕಾಲದಲ್ಲಿ ತನ್ನ ಕೃತಿಯು ಮಹತ್ವವನ್ನು ಸರಿಯಾಗಿ ಕಂಡುಕೊಳ್ಳಲಾರದವರನ್ನು ಕುರಿತು – ನಿಮಗಾಗಿ ನಾನು ಬರೆಯುಲಿಲ್ಲ ನನ್ನ ಸಮಾನಧರ್ಮಿಯಾದವನು ಯಾರಾದರೊಬ್ಬ ಮುಂದೆ ಎಂದಾದರೂ ಹುಟ್ಟಿ ಬಂದಾನು, ಕಾರಣ ಕಾಲ ಅನಂತವಾಗಿದೆ, ಪೃಥ್ವಿ ವಿಶಾಲವಾಗಿದೆ – "ಕಾಲೋಹ್ಯಯಂ ನಿರವಧಿರ್ವಿಪುಲಾಚ ಪೃಥ್ವೀ"–ಎಂದು ಹೇಳಿದ ಮಾತು ಪ್ರಸಿದ್ಧವಾಗಿದೆ.

'ಮಹಾವೀರಚರಿತ' ಮತ್ತು 'ಉತ್ತರರಾಮಚರಿತ'ಗಳು ರಾಮಾಯಣದ ಕಥೆಯನ್ನಾಧರಿಸಿದ್ದರೆ, 'ಮಾಲತೀಮಾಧವ'ವು ಕವಿ ಕಲ್ಪಿತ. ಕವಿ ಕಲ್ಪಿತ ಎಂದು ಹೇಳಿದರೂ ಅದಕ್ಕೂ ಬೃಹತ್ಕಥೆ ಮೂಲವಾಗಿದ್ದಿರಬಹುದು ಎಂಬ ಮಾತಿದೆ. 'ಮಹಾವೀರ ಚರಿತ' ವೀರರಸಕ್ಕೆ ಪ್ರಾಧಾನ್ಯವಿರುವ ನಾಟಕವಾದರೆ, ಉತ್ತರ ರಾಮಚರಿತೆಯು ಕರುಣರಸ ಪ್ರಧಾನವಾದ್ದು. ಅದೇ 'ಮಾಲತೀ ಮಾಧವ'ವು ಶೃಂಗಾರ ರಸಕ್ಕೆ ಪ್ರಾಧಾನ್ಯವನ್ನಿತ್ತಿರುವ ನಾಟಕ. ಮುಖ್ಯವಾಗಿ ಉತ್ತರರಾಮ ಚರಿತೆಯನ್ನು ಪ್ರಾತಿನಿಧಿಕವೆಂದು ಪರಿಗಣಿಸಿ ನೋಡಬಹುದು.

'ಉತ್ತರ ರಾಮಚರಿತೆ' ಭವಭೂತಿಯ ನಾಟಕತ್ರಯದಲ್ಲಿ ಅತ್ಯಂತ ವಿಶಿಷ್ಟ, ಸ್ವಾರಸ್ಯಕರ ಹಾಗೂ ಶ್ರೇಷ್ಠ ನಾಟಕ ಎಂದಷ್ಟೇ ಅಲ್ಲ, ಸಂಸ್ಕೃತದ ಶ್ರೇಷ್ಠ ನಾಟಕಗಳಲ್ಲಿ ಒಂದೆಂದು ಪರಿಗಣಿತವಾಗಿದೆ. 'ಉತ್ತರೇ ರಾಮಚರಿತೇ ಭವಭೂತಿ ರ್ವಿಶಿಷ್ಯತೆ' ಎಂಬ ಹಾಗೂ 'ಏಕೋ ರಸಃ ಕರುಣ ಏವ' ಎನ್ನುವಷ್ಟು ಮಟ್ಟಿಗೆ ಅದು ಕರುಣರಸ ಪ್ಲಾವಿತವಾದುದು. ಕರುಣ ರಸದಷ್ಟೇ ಪ್ರಮುಖವಾಗಿ ನಾಟಕವನ್ನು ಆವರಿಸಿರುವ ಇನ್ನೊಂದು ರಸವೆಂದರೆ ವಿಪ್ರಲಂಭ ಶೃಂಗಾರ. ನಾಟಕದ ಹೆಸರೇ ಸೂಚಿಸುವಂತೆ, ರಾವಣವಧೆ ಮುಗಿದು ರಾಮ

ಪಟ್ಟಾಭಿಷೇಕವಾದ ತರುವಾಯದಲ್ಲಿ ನಡೆಯುವ ಕಥೆಯನ್ನು ವಸ್ತುವಾಗಿ ಉಳ್ಳದು. ವಾಲ್ಮೀಕಿ ರಾಮಾಯಣದ ಉತ್ತರಕಾಂಡವನ್ನೇ ಮುಖ್ಯವಾಗಿ ಆಧರಿಸಿದ್ದು ಅಲ್ಲಲ್ಲಿ ತನಗೆ ಬೇಕಾದಂತೆ ಬದಲಾವಣೆಗಳನ್ನು ಮಾಡಿಕೊಂಡು 7 ಅಂಕಗಳಲ್ಲಿ ನಾಟಕವನ್ನು ರಚಿಸಿದ್ದಾನೆ.

ಉತ್ತರರಾಮಾಯಣಕ್ಕೆ ಹೋಲಿಸಿದಾಗ, ಭವಭೂತಿ ಕೆಲವು ಹೊಸ ಪಾತ್ರಗಳು, ಸಂಗತಿಗಳು ಮತ್ತು ಸನ್ನಿವೇಶಗಳ ಸೃಷ್ಟಿಯ ಮೂಲಕ, ನಾಟಕಕ್ಕೆ ಬೇರೆಯದೇ ಆದ ರೂಪವನ್ನು ನೀಡಿದ್ದಾನೆ. ಭಾಗೀರಥಿ ತಮಸೆ, ಮರಲೆಗಳೆಂಬ ನದೀದೇವತೆಗಳು ಮತ್ತು ವಾಸಂತಿ ಎಂಬ ವನದೇವತೆಯನ್ನು ಪೃಥ್ವಿ ಆತ್ರೇಯಿ ಎಂಬ ಹೆಣ್ಣು ಪಾತ್ರಗಳನ್ನು ಕಲ್ಪಿಸಿದ್ದಾನೆ. ಹಾಗೆಯೇ ಚಂದ್ರಕೇತು, ಸೌಧಾತಕಿ ದಾಂಡಾಯನ, ವಿದ್ಯಾಧರ ದಂಪತಿಗಳೂ ನೂತನ ಪಾತ್ರಗಳು. ಋಷ್ಯಶೃಂಗನ ಯಜ್ಞ ವಿಚಾರ, 'ಶಾಂತೆ' ದಶರಥನ ಮಗಳೆಂಬ ಸಂಗತಿ. ಚಿತ್ರದರ್ಶನದ ಮೂಲಕ ರಾಮಾಯಣದ ಪೂರ್ವ ಘಟನೆಗಳಸ್ಮರಣೆ ಜೃಂಭಕಾಸ್ತ್ರಗಳ ಸಂಗತಿ, ಚಂದ್ರಕೇತು–ಲವರ ಯುದ್ಧ, ರಾಮನ ಮಧ್ಯ ಪ್ರವೇಶ, ಅದೃಶ್ಯ ಸೀತೆಯ ಸಂಗತಿ, ವಶಿಷ್ಠ, ಅರುಂಧತಿ ಮುಂತಾದವರು ವಾಲ್ಮೀಕಿ ಆಶ್ರಮಕ್ಕೆ ಬಂದದ್ದು. ಸೀತೆ, ಆತ್ಮಹತ್ಯೆ ಮಾಡಿಕೊಳ್ಳಲುದ್ಯೋಗಿಸಿದಾಗ, ಗಂಗೆ, ಪೃಥ್ವಿಯರು ತಡೆದದ್ದು, ವಾಲ್ಮೀಕಿ ರಚಿಸಿದ ಗರ್ಭನಾಟಕದ ಪ್ರಯೋಗ ಮತ್ತು ಅಯೋಧ್ಯೆಯ ಪ್ರಜೆಗಳಿಗೆ ಸೀತೆಯ ಶೀಲದ ಬಗೆಗೆ ಉಂಟಾಗಿದ್ದ ಸಂದೇಹ ನಿವಾರಣೆಯಾದ್ದು–ಎಲ್ಲಕ್ಕಿಂತ ಹೆಚ್ಚಾಗಿ ಸೀತಾರಾಮರ ಸಮಾಗಮದಿಂದ ನಾಟಕವು ದುರಂತದಲ್ಲಿ ಕೊನೆಗೊಳ್ಳದೆ, ಮಂಗಳದಲ್ಲಿ ಮುಕ್ತಾಯಗೊಳ್ಳುವುದು. ಈ ಕೆಲವು ಬದಲಾವಣೆಗಳಿಂದಾಗಿ ನಾಟಕಕ್ಕೆ ಅಪೂರ್ವವೂ, ವಿನೂತನವೂ ಅದೊಂದು ಸ್ವರೂಪ ಪ್ರಾಪ್ತವಾಗಿದೆ.

ಅದರಲ್ಲಿ ಬಹಳ ಮುಖ್ಯವಾದದ್ದೆಂದರೆ, ರಾಮನು ಸೀತೆಯನ್ನು ಕಾಡಿಗಟ್ಟಬೇಕಾಗಿ ಬಂದದ್ದು ತೀರಾ ಅನಿವಾರ್ಯವಾದ ರಾಜಧರ್ಮ ಪಾಲನೆಗೋಸ್ಕರ ಎಂದು ಮಾಡಿರುವುದು. ರಾಮನಿಗಂತೂ ತನ್ನ ಹೆಂಡತಿ ಗಂಗೆಯಷ್ಟೇ ಪರಿಶುದ್ಧಳೆಂದು ಗೊತ್ತಿದ್ದೂ, "ಪ್ರಜೆಗಳ ಸಂತೃಪ್ತಿಯೊಂದೇ ರಾಜನ ಗುರಿಯಾಗಿರಬೇಕೆಂಬ" ಕುಲಗುರು ವಸಿಷ್ಠರ ಮಾತನ್ನು ಪಾಲಿಸುವುದಕ್ಕೆ ಅವನು ನೀಡಿದ ಆದ್ಯತೆ. ಈ ಒಂದು ತಿರುವಿನ ಮೂಲಕ ರಾಮನ ಪಾತ್ರಕ್ಕೆ ಅಂಟಿದ್ದ ಕಳಂಕವನ್ನು ತೊಡೆದುಹಾಕಿದ್ದಾನೆ. ರಾಜಧರ್ಮ ಪಾಲನೆಯ ಮೂಲಕ ಆದರ್ಶ ರಾಜನನ್ನಾಗಿ ಚಿತ್ರಿಸಿರುವುದರ ಜೊತೆಗೆ ಅವನೊಬ್ಬ ಆದರ್ಶ ಪತಿಯೆಂದೂ ಚಿತ್ರಿಸಿರುವುದು ಭವಭೂತಿಯ ಹೆಗ್ಗಳಿಕೆ. "ರಾಜಧರ್ಮ ಮತ್ತು ಗೃಹಸ್ಥಧರ್ಮ ಇವುಗಳ ನಡುವಣ ಘರ್ಷಣೆಯೇ ನಾಟಕದ ಸರ್ವಸ್ವ ಮತ್ತು ಸ್ವಾರಸ್ಯ."

ಉತ್ತರ ರಾಮ ಚರಿತೆಯ ತುಂಬ ದಾಂಪತ್ಯ ಪ್ರೇಮದ ಚೇತೋಹಾರಿ ಚಿತ್ರಗಳನ್ನು ಕವಿ ತೆರೆತೆರೆಯಾಗಿ ಕೊಟ್ಟಿದ್ದಾನೆ. ಇದರ ಜೊತೆಜೊತೆಗೇ ಕರುಣರಸದ ಮತ್ತು ವಿಪ್ರಲಂಭ ಶೃಂಗಾರದ, ಹೃದಯ ಕರಗಿಸುವ ಗಾಢ ಚಿತ್ರಗಳು ನಾಟಕದ ಉದ್ದಕ್ಕೂ ಬಂದಿವೆ.

ಕನ್ನಡದಲ್ಲಿ ಉತ್ತರ ರಾಮಚರಿತವನ್ನು ಎಸ್.ವಿ.ಪಿ. ಅವರಿಗಿಂತ ಮುಂಚೆ ಡಾ॥ ಕೆ.ಕೃಷ್ಣಮೂರ್ತಿ ಮತ್ತು ಸಿ.ಪಿ.ಕೆ. ಅನುವಾದಿಸಿದ್ದರು. ಡಾ॥ ಕೃಷ್ಣಮೂರ್ತಿಯವರದು ಹೆಚ್ಚು ಸಂಸ್ಕೃತ ಭೂಯಿಷ್ಠವಾದುದು. ಅವರು ಕಂದ, ವೃತ್ತ ಮತ್ತು ಆಧುನಿಕ ಲಯಗಳಲ್ಲಿ ಅನುವಾದಿಸಿದ್ದಾರೆ. ಸಿ.ಪಿ.ಕೆ. ಮತ್ತು ಎಸ್.ವಿ.ಪಿ. ಯವರು, ಕಂದ, ವೃತ್ತಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಆಧುನಿಕ ಲಯಗಳಲ್ಲಿ ಅನುವಾದಿಸಿದ್ದಾರೆ. ಕೃಷ್ಣಮೂರ್ತಿಗಳ ಭಾಷಾರೂಢಿ ಮತ್ತು ಶೈಲಿಗಳು ಹಳೆಯ ರೀತಿಯದಾಗಿದ್ದರೆ, ಎಸ್.ವಿ.ಪಿ. ಮತ್ತು ಸಿ.ಪಿ.ಕೆ.ಯವರದು ಆಧುನಿಕ ರೀತಿಯದು. ಸಿ.ಪಿ.ಕೆ.ಯವರದಕ್ಕಿಂತ ಎಸ್.ವಿ.ಪಿ. ಅವರದು

ಹೆಚ್ಚು ಕಾವ್ಯಾತ್ಮಕವೂ ಲಲಿತವೂ ಆದುದು. ಕೆಲವೊಂದು ಸಂದರ್ಭಗಳ ಮೂಲಕ ಇದನ್ನು ಮನಗಾಣಬಹುದು.

ಮೊದಲನೇ ಅಂಕದ ಎರಡು ಸಾಲುಗಳ ಈ ಪದ್ಯವನ್ನು ಈ ಮೂರೂ ಜನ ಹೀಗೆ ಅನುವಾದಿಸಿದ್ದಾರೆ.

ಸ್ನೇಹಂ ದಯಾಂ ಚ ಸೌಖ್ಯಂ ಚ ಯದಿ ವಾ ಜಾನಕೀಮಪಿ ।
ಆರಾಧನಾಯ ಲೋಕಾನಾಂ ಮುಂಚತೋ ನಾಸ್ತಿ ಮೇ ವ್ಯಥಾ ॥ [1–12]

ಡಾ॥ ಕೆ. ಕೃಷ್ಣಮೂರ್ತಿಗಳ ಅನುವಾದ :

ಸ್ನೇಹಮನಂತೆಯ ದಯೆಯಂ ಸುಖಮಂ
ತೊರೆಯಲ್ ಸೀತೆಯನೇ ಕಡೆಗೆ
ಜನರಂ ರಂಜಿಪ ಕಾರ್ಯದೊಳೆನಗೆ
ಮನದಳಲೆಂತೂ ಸಮನಿಸದು

'ಆರಾಧನಾಯ ಲೋಕನಾಂ'– ಎಂಬುದಕ್ಕೆ 'ಜನರಂ ರಂಜಿಪ ಕಾರ್ಯ' ಎನ್ನುವುದು ಖಂಡಿತಾ ದೂರವಾದ ಅನುವಾದ. ಅಲ್ಲದೇ ಮೂಲದ ಎರಡು ಸಾಲು ನಾಲ್ಕು ಸಾಲಿಗೆ ಹಿಗ್ಗಲಿಸಿದೆ.

ಸಿ.ಪಿ.ಕೆ. ಅವರ ಅನುವಾದ :

ಸ್ನೇಹ, ದಯೆ, ಸೌಖ್ಯಗಳನಾಗಲಿ, ಜಾನಕಿಯನೇ ಆಗಲಿ
ಪ್ರಜೆಗಳಾರಾಧನೆಗೆ ತೊರೆಯಲು ನನಗೆ ವ್ಯಥೆಯಿನಿಸಾಗದು

ಮೂಲಕ್ಕೆ ಅತ್ಯಂತ ಹತ್ತಿರದ ಅನುವಾದ ಇದಾದರೂ 'ಗದ್ಯತನ'ವೇ ಮೆರೆಯುತ್ತಿದೆ. ಅಲ್ಲದೆ 'ಪ್ರಜೆಗಳಾರಾಧನೆ' – ಎಂಬ ಮೂಲದಲ್ಲಿರುವ ಶಬ್ದವನ್ನು ಯಥಾವತ್ತಾಗಿಯೇ ಉಳಿಸಿಕೊಂಡಿದ್ದರೂ ಕನ್ನಡಕ್ಕೆ ಅಷ್ಟು ಸರಿಹೊಂದದೆನಿಸುತ್ತದೆ.

ಎಸ್.ವಿ.ಪಿ. ಅವರ ಅನುವಾದ ಹೀಗಿದೆ :

ಕೆಳೆಯೆ ಆದರು ದಯೆಯೆ ಆದರು ಸುಖವೆ ಆದರು ಕಡೆಗೆ ಸೀತೆಯೆ ಆದರು
ಲೋಕಹಿತಕೆನೆ ಬಿಟ್ಟು ಬಿಡುವೆನು ಆಗದದರಿಂದೆನಗೆ ನೋವಿನಿಸಾದರು

'ಆರಾಧನಾಯ ಲೋಕಾನಾಂ' ಎಂಬ ಮಾತಿಗೆ 'ಜನರ ಹಿತ' ಎಂಬ ಅರ್ಥಕ್ಕೆ ಸಮೀಪವಾದ ಲೋಕಹಿತ ಹೆಚ್ಚು ಉಚಿತವೆನಿಸುತ್ತದೆ. ಜೊತೆಗೆ, ಇದು ಹೆಚ್ಚು ಲಯಬದ್ಧವೂ ಕಾವ್ಯಾತ್ಮಕವೂ ಆಗಿದೆ.

ರಾಮನು ಜನಸ್ಥಾನಕ್ಕೆ ಬಂದಿದ್ದಾನೆ. ಸೀತೆಯ ಪ್ರಿಯಸಖಿಯಾದ ವಾಸಂತಿ ಸೀತೆಯ ನೆನಪುಗಳನ್ನು ಕೊಡುತ್ತಿದ್ದಾಳೆ. ಅವಳ ಮಾತುಗಳನ್ನು ಕೇಳುತ್ತ, ಅಲ್ಲಿ ಕೆಲವು ವಸ್ತುಗಳನ್ನು ನೋಡುತ್ತ ರಾಮನಿಗೆ ಸೀತೆಯ ಗಾಢ ನೆನಪು ಉಕ್ಕಿಬಂದು ದುಃಖ ಕೋಡಿವರಿಯುತ್ತದೆ. ಆ ಸಂದರ್ಭದ ಪದ್ಯ. ಇದು ಕರುಣ ರಸದ ಪರಾಕಾಷ್ಠೆ.

ವೇಲೋಲ್ಲೋಲ ಕ್ಷುಭಿತ ಕರುಣೋಜ್ಜೃಂಭಣ ಸ್ತಂಭನಾರ್ಥಂ
ಯೋಯೋ ಯತ್ನಃ ಕಥಮಪಿ ಮಯಾ ಧೀಯತೇ ತಂತಮಂತಃ ।
ಭಿತ್ವಾ ಭಿತ್ವಾ ಪ್ರಸರತಿ ಬಲಾತ್ಕೋಽಪಿ ಚೇತೋ ವಿಕಾರ–
ಸ್ತೋಯಸ್ಯೇವಾ ಪ್ರತಿಹತರಯಃ ಸೈಕತಂ ಸೇತುಮೋಘಃ [3–36]

ಎಸ್.ವಿ.ಪಿ. ಅವರ ಅನುವಾದ ಹೀಗಿದೆ :

ಮೇರೆಮೀರುತೆ ಅಬ್ಬರವ ಗೈದುಬ್ಬುತೈತರುತಿಹುದು ದುಃಖದ ಹೊನಲಿದು
ನಾನು ಎಂತೋ ಕಷ್ಟದಿಂದೆನಿತೆನಿತೊ ಯತ್ನವ ಗೈದೆನಾದರು ಮತ್ತಿದು
ಅದನು ಒಳಗಿಂದೊಳಗೆ ಛಿದ್ರಿಸಿ ನುಚ್ಚು ನೂರಾಗಿಸುತೆ ಮುಂದಕೆ ಬರುತಿದೆ
ಉಸುಕಿನಿಂದಲೆ ಕಟ್ಟಿದಂತಹ ಅಣೆಯನೊಡೆಯುತೆ ಹರಿವ ವಾಹಿನಿ ತಾನಿದು

ಮೂಲದ ಭಾವಗಳನ್ನು ಸ್ವಲ್ಪ ವಿಸ್ತರಿಸಿದ್ದರೂ, ಎಲ್ಲವೂ ಚೆನ್ನಾಗಿ ಮೂಡಿವೆ. ಆದರೆ, 'ಕೋಽಪಿ ಚೇತೋ ವಿಕಾರ ಹಿ' ಎಂಬ ಮಾತು ಅನುವಾದದಲ್ಲಿ ಕಾಣೆಯಾಗಿದೆ. ಕೃಷ್ಣಮೂರ್ತಿಗಳ ಅನುವಾದದಲ್ಲಿ ಅದು ಸೊಗಸಾಗಿ ಮೂಡಿಬಂದಿದೆ.

ದಡವ ಮೀರಿ ಕೊಚ್ಚುತಿರುವ ಅಳಲ ಹುಚ್ಚುಹೊಳೆಯನು
ತಡೆಯಲೆನ್ನ ಗೈದ ಯತ್ನಗಳನು ಮುರಿಯುತೊಳಗಿನಿಂ,
ಭರದೆ ಮತ್ತೆ ಪರಿಯುತಿಹುದು ಬಗೆವಿಕಾರವಾವುದೋ
ಮರಳ ಸೇತುವೊಡೆಯೆ ವೇಗದಿಂದುರುಳ್ವ ಪೊನಲೆನಲ್

ರಾಮನ ಪರಿಪಾಪ, ಅಪರಾಧಿ ಭಾವ ಮತ್ತು ವಿರಹದ ನೋವು ಎಲ್ಲವನ್ನೂ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಪದ್ಯ ಹೀಗಿದೆ:

ಹಾಹಾ ದೇವಿ ಸ್ಫುಟತಿ ಹೃದಯಂ ಧ್ವಂಸತೇ ದೇಹಬಂಧಃ
ಶೂನ್ಯಂ ಮನ್ಯೇ ಜಗದವಿರಲಜ್ವಾಲಮಂತರ್ಜ್ವಲಾಮಿ।
ಸೀದನ್ನಂಧೇ ತಮಸಿ ವಿಧುರೋ ಮಜ್ಜತೀವಾಂತರಾತ್ಮಾ
ವಿಷ್ವಂ ಗ್ಮೋಹಃ ಸ್ಥಗಯತಿ ಕಥಂ ಮಂದಭಾಗ್ಯಃ ಕರೋಮಿ[3–38]

ಎಸ್.ವಿ.ಪಿ. ಅವರ ಅನುವಾದ ಹೀಗಿದೆ :

ನನ್ನ ಹೃದಯವು ಬಿರಿಯುತಿರುವುದು ಮೈಯ ನರ ನರ ಕಿತ್ತುಹೋಗುತಲಿರುವುದು
ನನಗೆ ಜಗವೇ ಶೂನ್ಯವಾಗಿದೆ ಒಳಗೆ ಒಳಗೇ ನಾನು ಉರಿಯುತಲಿರುವೆನು
ದೀನವಾದೆನ್ನಂತರಾತ್ಮವು ಮತ್ತೆ ಕತ್ತಲೆಯೊಳಗೆ ಮುಳುಗುತಲಿರುವುದು
ಭಾಗ್ಯಹೀನನು ಮರೆವು ಕವಿದಿದೆ ಅಯ್ಯೋ ದೇವಿಯೆ ನಾನು ಮತ್ತೇಗೈವುದು [3–38]

ಕೃಷ್ಣಮೂರ್ತಿಯವರ ಅನುವಾದ ಹೀಗಿದೆ :

ಹೃದಯ ಬಿರಿವುದು ದೇಹಬಂಧವೆ ಮುರಿದು ಬೀಳುತ್ತಿರ್ಪುದು
ಜಗವೆ ಶೂನ್ಯವು ಸತತವುರಿವುದು ಒಳಗೆ ಶೋಕಜ್ವಾಲೆಯು
ಅಂತರಾತ್ಮವು ವಿಕಲವಿಧುರವು ಮುಳುಗೆ ಕಾರ್ಗತ್ತಲೆಯೊಳು
ಎಲ್ಲದೆಸೆಯೊಳು ಮೋಹ ಕವಿದುದು, ಮಂದಭಾಗ್ಯನದೇವೆನು ।

ಮೂಲದಲ್ಲಿರುವ 'ದೇಹಬಂಧ' – ಶಬ್ದಕ್ಕೆ ಕೃಷ್ಣಮೂರ್ತಿ ಮತ್ತು ಸಿ.ಪಿ.ಕೆ. ಇಬ್ಬರೂ ಅನುವಾದದಲ್ಲೂ ಅದನ್ನೇ ಇಟ್ಟುಕೊಂಡಿದ್ದಾರೆ. ಆದರೆ ಕನ್ನಡದಲ್ಲಿ ಆ ಪದ ಪರಿಚಿತವೇ ಅಲ್ಲ.

ಎಸ್.ವಿ.ಪಿ. ಅವರು 'ಮೈಯನರನರ ಕಿತ್ತುಹೋಗುತಲಿರುವುದು' ಎಂದು ಮಾಡಿರುವುದು ಆ ಸಂದರ್ಭಕ್ಕೆ ಉಚಿತವೆನಿಸುತ್ತದೆ. 'ಸೀಧನ್ನಂಧೇ ತಮಸಿ ವಿಧುರೋ' ಎಂಬ ಮಾತು ಕೃಷ್ಣಮೂರ್ತಿಯವರಲ್ಲಿ 'ಅಂತರಾತ್ಮವು ವಿಕಲ ವಿಧುರವು ಮುಳುಗೆ ಕತ್ತಲೆಯೊಳು' ಎಂದಾಗಿದೆ. ವಿಕಲ–ವಿಧುರ– ಎಂಬುದು ಕನ್ನಡದಲ್ಲಿ ಪರಿಚಿತವಲ್ಲದ ಶಬ್ದ. 'ದೀನವಾದೆನ್ನಂತರಾತ್ಮವು' ಎಂಬ ಎಸ್.ವಿ.ಪಿ. ಅವರ ಅನುವಾದ ಶಬ್ದಶಃ ಅನುವಾದವೆನಿಸದಿದ್ದರೂ ಸಂದರ್ಭಕ್ಕೆ ಉಚಿತವೆನ್ನಿಸುತ್ತದೆ. ಅಲ್ಲದೇ ಎಸ್.ವಿ.ಪಿ. ಅವರಲ್ಲಿ

'ನನ್ನ, ನಾನು' – ಎಂಬ ಸರ್ವನಾಮಗಳು ಬಳಕೆಯಾಗಿರುವುದರಿಂದ ಪದ್ಯಕ್ಕೆ ಒಂದು ಆತ್ಮೀಯ ಸ್ಪರ್ಶ ಬಂದಿದೆ.

11. ಕನ್ನಡ ಹರ್ಷ ಮಹಾಸಂಪುಟ

ನಿಪುಣಕವಿ ಎಂದು ಹೆಸರಾದ ಶ್ರೀ ಹರ್ಷನ ಕೃತಿಗಳು ಮೂರು. ಅವು **ಪ್ರಿಯದರ್ಶಿಕಾ, ರತ್ನಾವಳಿ** ಮತ್ತು **ನಾಗಾನಂದ** ಎಂಬ ನಾಟಕಗಳು, ಸ್ಥಾಣೇಶ್ವರ ಮತ್ತು ಕನ್ಯಾಕುಬ್ಜಗಳಲ್ಲಿ ಆಳ್ವಿಕೆ ನಡೆಸಿದ ಶ್ರೀ ಹರ್ಷನ ಕಾಲ 7ನೆಯ ಶತಮಾನ (606–648). ಸಮಗ್ರ ಉತ್ತರಾಪಥದ ಚಕ್ರವರ್ತಿಯಾಗಿದ್ದನೆಂದು ಅವನ ಖ್ಯಾತಿ.

ಅವನ ಕೃತಿಗಳಲ್ಲಿ **ಪ್ರಿಯದರ್ಶಿಕಾ** ಮತ್ತು **ರತ್ನಾವಳಿ**– ಎರಡೂ ವತ್ಸರಾಜನ ಪ್ರಣಯ ವೃತ್ತಾಂತಕ್ಕೆ ಸಂಬಂಧ ಪಟ್ಟವು. ಈ ಎರಡರಲ್ಲೂ ವಾಸವದತ್ತೆಯ ಪತಿಯಾದ ವತ್ಸರಾಜನು ಅಂತಃಪುರದ ಪರಿಚಾರಿಕೆಯ ಹಾಗೆ ಇದ್ದ ರಾಜಪುತ್ರಿಯನ್ನು ಉದ್ಯಾನವನದಲ್ಲಿ ನೋಡಿ ಮೋಹಗೊಳ್ಳುವುದು, ಅವನ ಸ್ನೇಹಿತರು, ಅವರಿಬ್ಬರ ಸಮಾಗಮಕ್ಕೆ ಸಹಾಯಕರಾಗಿ ನಿಲ್ಲುವುದು, ಕುಪಿತಗೊಂಡ ವಾಸವದತ್ತೆ ಅವಳನ್ನು ಬಂಧನದಲ್ಲಿರಿಸುವುದು, ತದನಂತರದಲ್ಲಿ ಇನ್ನೇನು ಜೀವ ಹೋಗುತ್ತದೆಂಬ ಸ್ಥಿತಿಯಲ್ಲಿದ್ದಾಗ ಅವಳ ಪರಿಚತ ಜನರು ಬಂದು ಗುರುತಿಸುವುದು, ಹಿಂದೊಮ್ಮೆ ವತ್ಸರಾಜನಿಗೆ ಅವಳನ್ನು ಕೊಡಬೇಕೆಂಬ ಇರಾದೆಯಿದ್ದುದು ಅವಳು ಬೇರಿನ್ನಾರೂ ಆಗಿರದೆ ವಾಸವದತ್ತೆಯ ಬಂಧುವೇ ಎಂಬ ಸಂಗತಿಯು ಗೊತ್ತಾಗಿ ಕೊನೆಯಲ್ಲಿ ವಾಸವದತ್ತೆ ತಾನೇ ನಿಂತು ಸ್ವಯಿಚ್ಛೆಯಿಂದ ತನ್ನ ಗಂಡನಿಗೆ ಅವಳನ್ನು ಮದುವೆ ಮಾಡಿಸುವುದು ಇವೆಲ್ಲಾ ನಡೆಯುತ್ತವೆ.

ಹರ್ಷನ ಈ ಮೂರೂ ನಾಟಕಗಳನ್ನು ಕನ್ನಡದಲ್ಲಿ ಎಸ್.ವಿ.ಪಿ. ಅವರಿಗಿಂತ ಮುಂಚೆ ಪಂಡಿತ ಸಿ.ವೈ. ಕವಲಿ ಮತ್ತು ಸಿ.ಪಿ.ಕೆ. ಅವರು ಅನುವಾದಿಸಿದ್ದರು. ಕವಲಿಯವರ ಅನುವಾದ ಹಳಗನ್ನಡದ ಧಾಟಿಯಲ್ಲಿದ್ದು, ಪದ್ಯಗಳನ್ನು ವೃತ್ತ ಕಂದಗಳಲ್ಲಿ ಅನುವಾದಿಸಿದ್ದಾರೆ. ಸಂಭಾಷಣೆಯ ಭಾಷೆ ಕೂಡ ತೀರ ಗ್ರಾಂಥಿಕವಾಗಿದೆ. ಸಿ.ಪಿ.ಕೆ. ಮತ್ತು ಎಸ್.ವಿ.ಪಿ. ಯವರು ಆಧುನಿಕ ಲಯಗಳಲ್ಲಿ ಅನುವಾದಿಸಿದ್ದಾರೆ. ಸಂವಾದದ ಭಾಷೆ ಕೂಡ, ಒಂದು ರೀತಿಯ ಗಾಂಭೀರ್ಯವನ್ನು ಕಾಪಾಡಿಕೊಂಡ, ತೀರ ಗ್ರಾಂಥಿಕವಲ್ಲದ ಕನ್ನಡ. ಹಾಗಾಗಿ ಕೆಲವು ಸಂದರ್ಭಗಳನ್ನು ಪರಸ್ಪರ ಹೋಲಿಸಿ ನೋಡಬಹುದು.

'ಪ್ರಿಯದರ್ಶಿಕಾ' ನಾಟಕದ ಮೊದಲನೇ ಅಂಕದ ಕೊನೆಯಲ್ಲಿ ಬರುವ ಮಧ್ಯಾಹ್ನದ ನಿಸರ್ಗ ವ್ಯಾಪಾರದ ವರ್ಣನೆಯ ಪದ್ಯವನ್ನು ಎಸ್.ವಿ.ಪಿ. ಮತ್ತು ಸಿ.ಪಿ.ಕೆ. ಹೀಗೆ ಅನುವಾದಿಸಿದ್ದಾರೆ.

ಮೂಲ :

1. ಆಭಾತ್ಯರ್ಕಾಂಶು ತಾಪ ಕ್ವಥದಿವ ಶಫರೋದ್ವರ್ತನೈರ್ದೀರ್ಘಿಕಾಂಭ–
ಶ್ಛತ್ರಾಭಂ ನೃತ್ತಲೀಲಾ ಶಿಥಿತಮಪಿ ಶಿಖೀ ಬರ್ಹಭಾರಂ ತನೋತಿ।
ಛಾಯಾಚಕ್ರಂ ತರೂಣಾಂ ಹರಿಣಶಿಶುರುಪೈತ್ಯಾಲವಾಲಾಂಬುಲುಬ್ಧಃ
ಸದ್ಯಾಸ್ತ್ಯಕ್ತ್ವಾ ಕಪೋಲಂ ವಿಶತಿಮಧುಕರಃ ಕರ್ಣಪಾಲೀಂ ಗಜಸ್ಯ [1–12]

2. **ರವಿಕರದುಷ್ಣಕೆ ಕೊಳದೊಳು, ನೀರಿದೊ ಕುದಿವವೊಲಿರುವುದು**
ನೆಗೆನೆಗೆದುರುಳುವ ಕಿರು ಕಿರು ಮೀಂಗಳ ಉರು ಚಾಲನದೆ
ಕುಣಿಯುವ ಲೀಲೆಯೊಳಾಯಸಗೊಳ್ಳುತೆ ಬಿಸಿಲಿನ ಬೇಗೆಗೆ

ಕೊಡೆವೊಲು ತೋರುವ ತೋಕೆಯ ಬಿಚ್ಚುತಲಿದೆ ನವಿಲು
ನೋಡದೊ ಮರಗಳ ನೆಳಲಿನ ವರ್ತುಲಗಳಿಗೈತರುತಿದೆ
ಪಾತಿಯೊಳಿರುವಾ ನೀರನು ಬಯಸಿದ ಜಿಂಕೆಮರಿ
ಬಿಸಿಲುರಿ ತಡೆಯದೆ ಕರಿಯ ಕಪೋಲವನೊಡನೆಯೆ ತೊರೆಯುತೆ
ಕಿವಿಯೊಳ ಪುಗುತಿದೆ ಬಂಡುಣುತಿರ್ದಾ ತುಂಬಿಮರಿ (ಎಸ್.ವಿ.ಪಿ.)

3. **ಸೂರ್ಯಕಿರಣಗಳಿಂದ ಕುದಿಯುವಂದದಿಕೊಳದ**
ನೀರೆಸೆಯುತಿದೆ ಮೀನಚಲನದಿಂದ;
ವೃತ್ತಲೀಲೆಯಲಿ ನವಿಲಾಯಾಸಗೊಂಡರೂ
ಹರಡುತಿದೆ ಛತ್ರಸಮವಹ ಸೋಗೆಯ
ಪಾತ್ರೆಯೊಳಗಿನ ನೀರನೆಳಸಿ ತಾ ಹರಿಣಶಿಶು
ಸೇರುತಿದೆ ಮರದ ಛಾಯಾ ಚಕ್ರವ;
ಆನೆಯ ಕಪೋಲವನು ತೊರೆದು ಮಧುಕರ ತಾನು
ಹೊಗುತಿರುವುದದರ ಕಿವಿದುದಿಯ ! (ಸಿ.ಪಿ.ಕೆ.)

ಸಿ.ಪಿ.ಕೆ. ಅವರ ಅನುವಾದಕ್ಕೆ ಹೋಲಿಸಿದಾಗ ಎಸ್.ವಿ.ಪಿ. ಅವರದು ತುಂಬ ಲಯಬದ್ಧವಾಗಿದೆ. ಕೆಲವಕ್ಕೆ ಎಸ್.ವಿ.ಪಿ. 'ಸಂಸ್ಕೃತ ಶಬ್ದ'ಗಳನ್ನು ಬಳಸಿದ್ದರೆ ಸಿ.ಪಿ.ಕೆ, ಅಂಥ ಕೆಲವಕ್ಕೆ ಕನ್ನಡ ಶಬ್ದಗಳನ್ನು ಬಳಸಿದ್ದಾರೆ. 'ಅರ್ಕಾಂಶು ತಾಪ'– ಎಸ್.ವಿ.ಪಿ. ಅವರಲ್ಲಿ 'ರವಿಕರದುಷ್ಣ' ಆಗಿದ್ದರೆ, ಸಿ.ಪಿ.ಕೆ. ಅವರಲ್ಲಿ 'ಸೂರ್ಯ ಕಿರಣಗಳಿಂದ ಕುದಿಯುವಂದದಿ ಕೊಳದ' ಎಂದಾಗಿದೆ. ಮೂಲದ 'ನೃತ್ತಲೀಲಾ' ಎಸ್.ವಿ.ಪಿ. ಅವರಲ್ಲಿ 'ಕುಣಿವಲೀಲೆ' ಎಂದಾಗಿದ್ದರೆ ಸಿ.ಪಿ.ಕೆ. ಮೂಲದ ಶಬ್ದವನ್ನೇ ಉಳಿಸಿಕೊಂಡಿದ್ದಾರೆ 'ಶ್ವತ್ರಾಭಾಂ'–ಸಿ.ಪಿ.ಕೆ. ಅವರಲ್ಲಿ 'ಛತ್ರ ಸಮವಹ' ಎಂದಾಗಿದ್ದರೆ ಎಸ್.ವಿ.ಪಿ. ಅವರಲ್ಲಿ 'ಕೊಡೆವೊಲು ತೋರುವ' ಎಂದಾಗಿದೆ ಮೂಲದ 'ಹರಿಣಶಿಶು' ವನ್ನು ಸಿ.ಪಿ.ಕೆ. ಹಾಗೇ ಉಳಿಸಿಕೊಂಡಿದ್ದರೆ, ಎಸ್.ವಿ.ಪಿ. ಅವರಲ್ಲಿ 'ಜಿಂಕೆಮರಿ' ಎಂದಾಗಿದೆ. 'ಕಪೋಲಂ' 'ವಿಶತಿ ಮಧುಕರ' ಎಂಬುದು ಎಸ್.ವಿ.ಪಿ. ಅವರಲ್ಲಿ 'ಕಿವಿಯೊಳಪುಗುತಿದೆ ಬಂಡುಣುತಿರ್ದಾ ತುಂಬಿಮರಿ' ಎಂದು ಆಗಿದ್ದರೆ ಸಿ.ಪಿ.ಕೆ. ಅವರಲ್ಲಿ 'ಹೊಗುತಿರುವುದರು ಕಿವಿದುದಿಯ' ಎಂದು ಆಗಿದೆ. ಎಸ್.ವಿ.ಪಿ. ಅವರದೇ ಮೂಲಕ್ಕೆ ಹತ್ತಿರವಾಗಿದೆ ಎನ್ನಬಹುದು. 'ಬಂಡುಣುತಿರ್ದಾ' ಎಂಬುದು ಅಧಿಕವಾಗಿ ಸೇರಿದ್ದರೂ ಅದು ಮೂಲದಿಂದ ದೂರ ಹೋಗಿಲ್ಲ.

ನಾಗಾನಂದ ನಾಟಕ

'ರತ್ನಾವಳಿ' ಮತ್ತು 'ಪ್ರಿಯದರ್ಶಿಕಾ'ಗಳಿಗಿಂತ ತೀರಾ ವಿಭಿನ್ನವಾದ ಐದು ಅಂಕಗಳ ನಾಟಕ ನಾಗಾನಂದ. ಎ.ಆರ್. ಕೃಷ್ಣಶಾಸ್ತ್ರಿಗಳು ಹೇಳುವಂತೆ ಅದು ದಾನವೀರ ಪ್ರಧಾನವಾದ ನಾಟಕ. ದಾನವೀರ ಎಂದು ಹೇಳಿದರೂ ಅದರ ಮೂಲದಲ್ಲಿರುವುದು ದಯೆ. ಒಂದು ಸರ್ಪವನ್ನು ರಕ್ಷಿಸಲು ಮನುಷ್ಯನು ಆತ್ಮಾರ್ಪಣೆ ಮಾಡಿ ತ್ಯಾಗ ಮತ್ತು ಅಹಿಂಸಾ ತತ್ವ ಎತ್ತಿ ಹಿಡಿಯುವುದು ಈ ನಾಟಕದಲ್ಲಿ ನಡೆಯುತ್ತದೆ. ಬೌದ್ಧ ಮತ್ತು ಹಿಂದೂ (ವೈದಿಕ) ಧರ್ಮದ ಉದಾತ್ತ ತತ್ವಗಳ ಸಮನ್ವಯ.

ವಿದ್ಯಾಧರ ರಾಜಕುಮಾರ ಜೀಮೂತವಾಹನನು ತನ್ನ ತಂದೆ ತಾಯಿಗಳನ್ನು ಅನುಸರಿಸಿಕೊಂಡು, ಅರಣ್ಯಕ್ಕೆ ಬಂದು, ತಂದೆತಾಯಿಗಳ ಶುಶ್ರೂಷೆಯಲ್ಲಿ ತೊಡಗಿದ್ದ ಸಂದರ್ಭದಲ್ಲಿ ಅಲ್ಲಿನ ದೇವಾಲಯಕ್ಕೆ ಬಂದಿದ್ದ ವಿದ್ಯಾಧರ ರಾಜಕುಮಾರಿ ಮಲಯವತಿಯನ್ನು ಕಂಡು ಮನಸೋತನು. ಇಬ್ಬರಲ್ಲೂ ಪ್ರೇಮಾಂಕುರವಾಗುತ್ತದೆ.

ಮಲಯವತಿಯ ತಂದೆ ಅವನು ತನ್ನ ಮಗಳಿಗೆ ಯೋಗ್ಯವರನೆಂದು ತಿಳಿದು ಮದುವೆ ಮಾಡಿಕೊಡುವುದಾಗಿ ತಿಳಿಸುತ್ತಾನೆ. ಮುಂದೆ ಮಲಯವತಿಯೊಂದಿಗೆ ಜೀಮೂತವಾಹನನ ವಿವಾಹ ನೆರವೇರಿ ಎಲ್ಲರೂ ಆ ಸಂಭ್ರಮದಲ್ಲಿರುತ್ತಾರೆ.

ಅದೇ ಸಂದರ್ಭದಲ್ಲಿ ಜೀಮೂತವಾಹನನೂ ಮಲಯವತಿಯ ಸೋದರ ಮಿತ್ರಾವಸುವೂ ಸಮುದ್ರ ದಂಡೆಯಲ್ಲಿ ವಿಹರಿಸುತ್ತಿದ್ದಾಗ, ಸರ್ಪಗಳ ಎಲುಬಿನ ರಾಶಿ ಪರ್ವತಾಕಾರದಲ್ಲಿ ಬಿದ್ದದ್ದನ್ನು ನೋಡಿ ಅದಕ್ಕೆ ಕಾರಣವಾದ ವೃತ್ತಾಂತವನ್ನು ಮಿತ್ರಾವಸುವಿನಿಂದ ಕೇಳಿ ತಿಳಿಯುತ್ತಾನೆ. ಅದರಂತೆ ಪ್ರತಿದಿನವೂ ಒಂದೊಂದು ಹಾವನ್ನು ಗರುಡನಿಗೆ ಆಹಾರದ ರೂಪದಲ್ಲಿ ಕಳುಹಿಸುವುದಾಗಿ ವಾಸುಕಿಯು ಗರುಡನೊಂದಿಗೆ ಒಪ್ಪಂದ ಮಾಡಿಕೊಂಡ ಕಾರಣ, ಗರುಡ ತಿಂದ ಹಾವುಗಳ ಎಲುಬಿನ ರಾಶಿ ಪರ್ವತ ರೂಪದಲ್ಲಿ ಬೆಳೆದು ನಿಂತಿದೆ ಎಂದು ತಿಳಿದನು. ಸರ್ಪಗಳ ಕರುಣಾಜನಕ ಕಥೆಯಿಂದ ಮನಕರಗಿದ ಜೀಮೂತನು ತನ್ನ ದೇಹವನ್ನೇ ಗರುಡನಿಗೆ ಸಮರ್ಪಿಸಿ ಒಂದು ಸರ್ಪವನ್ನಾದರೂ ಉಳಿಸಬಹುದೆ ಎಂದು ಯೋಚಿಸುವನು.

ಅತ್ತ ಮಿತ್ರಾವಸು ಇಲ್ಲದಿದ್ದ ಸಂದರ್ಭದಲ್ಲಿ ಅಲ್ಲಿಯೇ ಉಳಿದಿದ್ದ ಜೀಮೂತವಾಹನನು, ತನ್ನ ಮಗನು ಗರುಡನಿಗೆ ಬಲಿಯಾಗಬೇಕಾದುದನ್ನು ನೆನೆದು ಕಣ್ಣೀರ್ಗರೆಯುತ್ತಿದ್ದ ಮುದಿ ತಾಯಿಯನ್ನು ಶಂಖಚೂಡನು ಸಂತೈಸುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಾನೆ. ಶಂಖಚೂಡನ ಬದಲಿಗೆ ತಾನು ವಧ್ಯಶಿಲೆಯಲ್ಲಿ ನಿಲ್ಲುವುದಾಗಿ ಅವರನ್ನು ಬಲವಂತದಿಂದ ಒಪ್ಪಿಸಿ ಅತ್ತೆಯು ಉಡುಗೊರೆಯೆಂದು ಕಂಚುಕಿಯ ಮೂಲಕ ಕಳಿಸಿದ್ದ ಕರವಸ್ತ್ರಗಳನ್ನು ತಲೆ, ಮುಖಗಳ ಮೇಲೆ ಹೊದ್ದು ವಧ್ಯಶಿಲೆಯ ಮೇಲೆ ನಿಲ್ಲುತ್ತಾನೆ. ಗರುಡನು ಅವನೇ ನಾಗನೆಂದು ತಿಳಿದು ಜೀಮೂತವಾಹನನನ್ನು ಹಿಡಿದೆತ್ತಿಕೊಂಡು ಮಲಯ ಶಿಖರದತ್ತ ಹಾರಿಹೋಗಿ ಅಲ್ಲಿ ಕೋಡುಗಲ್ಲಿನ ಮೇಲೆ ಕುಕ್ಕಿ ತಿನ್ನುತ್ತಿದ್ದಾಗ, ಶಂಖಚೂಡನೇ ಅಲ್ಲಿಗೆ ಹುಡುಕಿಕೊಂಡು ಬಂದು ಅವನು ನಾಗನಲ್ಲವೆಂಬ ನಿಜಸಂಗತಿ ತಿಳಿಸುವನು. ಗರುಡನಿಗೆ ತಾನು ತಿನ್ನುತ್ತಿದ್ದುದು ನಾಗನಲ್ಲ ಜೀಮೂತವಾಹನನೆಂದು ತಿಳಿದು, ತಾನು ಅಪಕೀರ್ತಿಗೆ ಗುರಿಯಾದೆನೆಂದು ಪಶ್ಚಾತ್ತಾಪ ಪಡುತ್ತಾನೆ. ಇನ್ನೂ ಪ್ರಾಣ ಹೋಗದೆ ಜೀವಂತವಾಗಿದ್ದ ಜೀಮೂತನು ಅಗ್ನಿಪ್ರವೇಶಕ್ಕೆ ಮುಂದಾಗಿದ್ದ ಗರುಡನನ್ನು ತಡೆದನು. ವಿಷಯ ತಿಳಿದ ತಂದೆ ತಾಯಿ ಎಲ್ಲರೂ ಅಗ್ನಿಪ್ರವೇಶ ಮಾಡಿ ಪ್ರಾಣತ್ಯಜಿಸಬೇಕೆಂದಿದ್ದಾಗ ಅವನ ವೃದ್ಧ ಮಾತೆ "ಲೋಕಪಾಲರು ಅಮೃತಸೇಚನದಿಂದ ನಮ್ಮ ಮಗುವನ್ನು ಬದುಕಿಸಬಾರದೆ" ಎಂದು ಹಲುಬಿದ ಮಾತು ಕೇಳಿ, ಸ್ವರ್ಗದಿಂದ ಅಮೃತ ತರಲು ಅತ್ತ ಹಾರಿದನು. ಇತ್ತ ಇವರೆಲ್ಲರೂ ಅಗ್ನಿ ಪ್ರವೇಶ ಮಾಡಬೇಕೆಂದಿದ್ದಾಗ ಗೌರಿ ಪ್ರತ್ಯಕ್ಷಳಾಗಿ ಜೀಮೂತನನ್ನು ಬದುಕಿಸುತ್ತಾಳೆ. ಅಷ್ಟರಲ್ಲಿ ಗರುಡನ ಪ್ರಾರ್ಥನೆಯ ಮೇರೆಗೆ ಸ್ವರ್ಗದಿಂದ ಅಮೃತವೃಷ್ಟಿಯಾಗಿ ಸತ್ತ ಸರ್ಪಗಳೆಲ್ಲ ಬದುಕುತ್ತವೆ. ಗರುಡನು ತಾನು ಹಿಂದೆ ಮಾಡಿದ್ದ ಸರ್ಪಗಳ ಕೊಲೆಗೆ ಪಶ್ಚಾತ್ತಾಪಪಟ್ಟು ಇನ್ನು ಮುಂದೆ ಸರ್ಪಗಳನ್ನು ಕೊಲ್ಲುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ.

ಜೀಮೂತವಾಹನನ ತ್ಯಾಗದಿಂದ ಗರುಡನ ಹೃದಯ ತುಂಬಿ ಬಂದಿದೆ. ಅದಕ್ಕೆ ಸರ್ಪಗಳೆಲ್ಲವೂ ತಮಗಾಗಿ ಇಂಥ ತ್ಯಾಗ ಮಾಡಿದ ನಿನ್ನ ಕೀರ್ತಿಯನ್ನು ಕೀರ್ತಿಸುತ್ತಿರಲಿ ಎಂದು ಹಾರೈಸುವ ಈ ಪದ್ಯ ಎಷ್ಟು ಸೊಗಸಾಗಿದೆ.

ಸ್ರಸ್ತಾ ನಾಪಾದಲಂಬಾನ್ ತಿಮಿರಚಯ ನಿಭಾನ್ ಕೇಶ ಹಸ್ತಾನ್ ವಹಂತ್ಯಃ
ಸಿಂಧೂರೇಣೇವ ದಿಗ್ಧೈಃ ಪ್ರಥಮರವಿಕರಸ್ಪರ್ಶ ತಾಮ್ರೈಃ ಕಪೋ ಲೈಃ ॥

ಆಯಾಸೇನಾಲಸಾಂಗ್ಯೋऽಪ್ಯವಗಣಿತರುಜಃ ಕಾನನೇ ಚಂದನಾನಾ
ಮಸ್ಮಿನ್ ಗಾಯಂತು ರಾಗಾದುರಗಯುವತಯಃ ಕೀರ್ತಿಮೇತಾಂ ತವೈವ ॥

ಎಸ್.ವಿ.ಪಿ. ಅವರ ಅನುವಾದ:

ಮುಡಿಯಿನಡಿವರೆಗಿಳಿದು ಬಂದಿಹ ಕಾಳಕತ್ತಲೆ–
ಗಪ್ಪಿನಂದದ ಕೇಶಪಾಶವ ತೊನೆಯುತೆ
ಮತ್ತೆ ಸಿಂಧೂರವನು ಬಳಿದೊಲು ಮೊದಲನೇಸರ
ಕದಿರ ಸೋಂಕಿಗೆ ಕೆನ್ನೆ ಕೆಂಪನು ತಳೆಯುತೆ
ದಣಿದು ಮೈಕೈ ನೋಯುತ್ತಿದ್ದರು ಅದನು ಗಣಿಸಿದೆ
ವಿಹರಿಸುತ್ತೀ ಚಂದನದ ಅರಣ್ಯದೆ
ದಿನವು ಹಾಡುತ್ತಿರಲಿ ರಾಗದಿನುರಗಯುವತಿಯ
ರೆಲ್ಲ ನಿನ್ನಯ ಕೀರ್ತಿಯನು ಸಮ್ಮೋದದೆ

'ತಿಮಿರಚಯನಿಭಾನ್' – 'ಕಾಳಕತ್ತಲೆಗಪ್ಪಿನ' ಎಂಬ, ಪ್ರಥಮರವಿಕರಸ್ಪರ್ಶ – 'ಮೊದಲ ನೇಸರ ಕದಿರ ಸೋಂಕು' ಎಂಬ 'ತಾಮ್ರೈಃ ಕಪೋಲೈಃ' 'ಕೆನ್ನೆ ಕೆಂಪು' ಎಂಬ ಆಯಾಸೇನಾಲಸಾಂಗೋಪ್ಯವಗಣಿತ ರುಜಃ – ದಣಿದು ಮೈ ಕೈ ನೋಯುತ್ತಿದ್ದರು ಅವನು ಗಣಿಸದೆ – ಇವೆಲ್ಲ ಸೊಗಸಾದ ಅನುವಾದ. ಕನ್ನಡಕ್ಕೆ ಸಹಜವಾದ ಅನುಪ್ರಾಸ ಪದ್ಯಕ್ಕೆ ಅನುಪಮ ಸೊಗಸು ನೀಡಿದೆ. ಉರಗ ಯುವತಯಃ ಎಂಬ ಮೂಲ ಶಬ್ದವನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. 'ನಾಗವನಿತೆಯರು' ಎಂದಿದ್ದರೆ (ಸಿ.ಪಿಕೆಯಲ್ಲಿದ್ದಂತೆ) ತುಂಬ ಉಚಿತವೆನಿಸುತ್ತಿತ್ತು.

ಜೀಮೂತವಾಹ ಮರಣಿಸಿದ್ದಾನೆ. ಅವನ ಮರಣದಿಂದ ಜಗತ್ತಿಗೆ ಆಗಿರುವ ನಷ್ಟವೆಂಥದು ಎಂಬುದನ್ನು ನೆನೆಸಿಕೊಂಡು ಅವನ ತಂದೆ ಜೀಮೂತಕೇತು ಶೋಕಿಸುವ ಈ ಪದ್ಯ ಕರುಣರಸಕ್ಕೆ ಆಶ್ರಯವಾಗಿರುವಂತೆ ಜೀಮೂತವಾಹನನ ವ್ಯಕ್ತಿತ್ವದ ಮೇಲೆ ಕೂಡಾ ಬೆಳಕು ಬೀರುತ್ತದೆ.

ಧೈರ್ಯದಾಶ್ರಯ ತಪ್ಪಿ ಹೋಯಿತು ವಿನಯಕಿನ್ನುಶ–
ರಣ್ಯವೆಂಬುದದಾವುದು
ಮತ್ತೆ ಸಹನೆಯ ಸಹಿಸಬಲ್ಲವರಾರು ಧರೆಯೊಳು
ದಾನವೆಲ್ಲಿಗೆಪೋಪುದು
ಸತ್ಯವಾಗಿಯು ಸತ್ಯವಳಿಯಿತು ಕೃಪಣೆ ಕೃಪೆಗಿ–
ನ್ನಾವನಾಶ್ರಯ ದೊರೆವುದು
ಓವೊ ಮಗುವೇ ನೀನು ಲೋಕಾಂತರಕೆ ನಡೆದರೆ
ಸರ್ವ ಶೂನ್ಯವು ಜಗವಿದು

ಅತ್ಯಂತ ಸುಲಲಿತವಾಗಿ ಸಾಗುವ ಸಮಾಸ ಶಬ್ದಗಳಿಲ್ಲದ ಕನ್ನಡ ಶಬ್ದಗಳ ಬಾಹುಳ್ಯವಿರುವ ಕರುಣ ರಸಭರಿತವಾದ ಈ ಪದ್ಯ ಭಟ್ಟರ ಅನುವಾದ ಸಿದ್ಧಿಗೊಂದು ಒಳ್ಳೆಯ ನಿದರ್ಶನ.

ನಾಟಕದ ಗದ್ಯದ ನಡೆಯಾದರೂ, ಸುಲಲಿತವಾದ ತೀರಗ್ರಾಂಥಿಕವಾಗದ, ಆದರೆ ತನ್ನ ಗಾಂಭೀರ್ಯವನ್ನು ಕಾಪಾಡಿಕೊಳ್ಳದ, ಅರ್ಥವ್ಯಕ್ತಿಯೇ ಗುಣವಾಗಿರುವ ಅನುವಾದ. ಯಾವ ನಾಟಕದ ಗದ್ಯ ಭಾಗವಾದರೂ ಇದಕ್ಕೆ ನಿದರ್ಶನವಾಗಬಲ್ಲದು.

12. ಕನ್ನಡ ಗೀತಗೋವಿಂದ

ತನ್ನ 'ಗೀತಗೋವಿಂದ'ದ ಮೂಲಕ, ಸಂಸ್ಕೃತ ಗೀತ ಕಾವ್ಯದಲ್ಲಿ ಹೊಸ ಸಂಪ್ರದಾಯವೊಂದನ್ನು ಪ್ರಾರಂಭಿಸಿದ ಕವಿ ಜಯದೇವ. ಬಂಗಾಳದ ಈ ಕವಿ 'ಕಿಂದು ಬಿಲ್ವ'ವೆಂಬ ಊರಿನವನು (ಈಗ ಅದು ಜಯದೇವಪುರ). ಈತನ ಕಾಲ ಕ್ರಿ.ಶ.ಸು. 12ನೇ ಶತಮಾನ. ಲಕ್ಷ್ಮಣಸೇನನ ಆಸ್ಥಾನ ಪಂಡಿತ. ಹನ್ನೆರಡು ಸರ್ಗಗಳ ಈ ಕಾವ್ಯವನ್ನು 'ಗೀತ ನಾಟಕ' (Lyric Drama) ಸಂಗೀತ ನಾಟಕ, ಸಂಗೀತ ರೂಪಕವೇ ಮೊದಲಾದ ಕಾವ್ಯ ಜಾತಿಗೆ ಸೇರಿಸುವ ಪ್ರಯತ್ನಗಳು ಪಾಶ್ಚಾತ್ಯರಿಂದ ನಡೆದಿವೆ. ಗದ್ಯ, ಗೀತ, ಶ್ಲೋಕಗಳಿಂದ ಕೂಡಿಕೊಂಡು, ಅಪೂರ್ವವಾದ ರಚನಾಮಾಧುರ್ಯದಿಂದ ಶೋಭಿಸುವ ಈ ಕಾವ್ಯ ತನ್ನ ಕೋಮಲಕಾಂತ ಪದಾವಳಿಯ ಸರಸ ನಡೆಯಿಂದ ಎಲ್ಲ ಕಾಲದ ಕಾವ್ಯ ಪ್ರೇಮಿಗಳ ಮನಗೆದ್ದಿದೆ. ರಾಧಾಕೃಷ್ಣರ ಕ್ರೀಡಾ ವಿನೋದಗಳು ಗೀತಗೋವಿಂದದ ವರ್ಣನಾವಿಷಯ. ರಾಧಾಕೃಷ್ಣರ ಪ್ರಣಯದ ನಾನಾ ಅವಸ್ಥೆಗಳಾದ ಆಶೆ, ನಿರಾಶೆ, ಉತ್ಕಂಠೆ, ಹುಸಿಮುನಿಸು, ಈರ್ಷ್ಯೆ, ಕೋಪ, ಅನುನಯವೇ ಮೊದಲಾದುವನ್ನು ಉಪಮೆ, ಉತ್ಪ್ರೇಕ್ಷೆಯೇ ಮೊದಲಾದ ಅಲಂಕಾರಗಳಿಂದ ಸಮನ್ವಿತವಾದ ಸುಂದರ ಶಬ್ದಗಳಲ್ಲಿ ಅಭಿವ್ಯಕ್ತಿಸಿರುವ ರೀತಿಯಿಂದಾಗಿ ಇದು ಅನನ್ಯ ಕಾವ್ಯವೆನಿಸಿದೆ. ಜೊತೆಗೆ ರಾಗ, ತಾಳ, ಲಯಬದ್ಧವಾದ ಅಷ್ಟಪದಿಗಳೆಂಬ ಎಂಟು ಪದಗಳ ಹಾಡುಗಳು ಇದರ ಶೋಭೆಯನ್ನು ಹೆಚ್ಚಿಸಿವೆ. ವರ್ಣನೆ, ಸಂವಾದ ಮತ್ತು ಗೀತ ಮೂರು ಎಳೆಗಳೂ ಸೇರಿ ಒಂದು ದಾರವಾಗಿದೆ. ರಾಧಾಕೃಷ್ಣರ ಮಧುರ ಬಾಂಧವ್ಯದ ಉತ್ಕರ್ಷವನ್ನು ಬಿಂಬಿಸುವ ಇದನ್ನು ಕೇವಲ ಲೌಕಿಕ ಪ್ರಣಯ ಕಾವ್ಯವೆಂದು ಪರಿಗಣಿಸದೆ, ಅದನ್ನು ಮೀರಿದ ಪರಮಾತ್ಮನನ್ನು ಕುರಿತ ಸತಿಪತಿಭಾವದ ಅಲೌಕಿಕ ಪ್ರೇಮ ಕಾವ್ಯವಾಗಿಯೇ ಪರಿಗಣಿಸುವ ರೂಢಿ ಇದೆ. ಕೃಷ್ಣನನ್ನು ಭಕ್ತಿಗೆ ಒಲಿಯುವ ಪರಮಾತ್ಮನ ರೂಪದಲ್ಲಿ ಗೋಪಿಯರು ಅವನನ್ನರಸುತ್ತಿರುವ ಜೀವಾತ್ಮಗಳೆಂದೇ ಭಾವಿಸುವ ರೂಢಿ ಇದೆ. ರಾಧಾಕೃಷ್ಣರ ಮಿಲನವು, ಜೀವ ಬ್ರಹ್ಮರ ಐಕ್ಯವೆಂದು ಭಾವಿಸುವ ಸಂಪ್ರದಾಯವಿದೆ.

ಈಗಾಗಲೇ ಬೇರೆಡೆಯೂ ಪ್ರಸ್ತಾಪಿಸಿದಂತೆ ಅನುವಾದಕ್ಕೆ ಅನೇಕ ಮಿತಿಗಳಿವೆ. ಅದರಲ್ಲಿ ಬಹಳ ಮುಖ್ಯವಾದ್ದು ಒಂದು ಭಾಷೆಯೊಂದಿಗೆ ಆಂತರಂಗಿಕವಾಗಿಯೇ ಬೆಸೆದುಕೊಂಡಿರುವ ನಾದವನ್ನು, ಸಂಗೀತವನ್ನು ಏನು ಮಾಡಿದರೂ ಇನ್ನೊಂದು ಭಾಷೆಗೆ ತರಲು ಸಾಧ್ಯವೇ ಇಲ್ಲ. ಅದೂ ಅಲ್ಲದೆ, ರಾಗ, ತಾಳ, ಲಯಬದ್ಧವಾಗಿರುವ ಗೀತಗೋವಿಂದದಂಥ ಕೋಮಲಕಾಂತ ಪದಾವಳಿಗಳ ರಚನೆಯನ್ನು ಇನ್ನೊಂದು ಭಾಷೆಗೆ ಯಥಾವತ್ತಾಗಿ ತರಲು ಸಾಧ್ಯವೇ ಇಲ್ಲ. ಎಸ್.ವಿ.ಪಿ. ಅವರ ಗೀತ ಗೋವಿಂದವನ್ನು ಆಸ್ವಾದಿಸುವಾಗ ನಾವು ಇದನ್ನು ಮನಸ್ಸಿನಲ್ಲಿಟ್ಟುಕೊಂಡಿರಲೇಬೇಕು. ಹಾಗಿದ್ದಾಗ್ಯೂ ಎಸ್.ವಿ.ಪಿ. ಅವರು ಭಾರತೀಯ ಪರಿಸರದ ಭಾಷೆಯಾದ, ಕನ್ನಡಕ್ಕೆ ಈ ಕೃತಿಯನ್ನು ತರುವಾಗ, ಕನ್ನಡಿಗರಿಗೂ ಪರಿಚಿತವೇ ಇರುವಂಥ ಅನೇಕ ಮೂಲ ಸಂಸ್ಕೃತ ಶಬ್ದಗಳನ್ನು ಹಾಗೆಯೇ ಇರಿಸಿಕೊಂಡಿರುವ ಕಾರಣದಿಂದ, ಮೂಲದ ಸೌಂದರ್ಯವನ್ನು, ನಾದ ಮಾಧುರ್ಯವನ್ನು ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿರುವುದು ಎದ್ದು ಕಾಣುತ್ತದೆ. ಆಧುನಿಕ ಕನ್ನಡದ ವಿವಿಧ ಲಯಗಳನ್ನು ಸಂದರ್ಭೋಚಿತವಾಗಿ ಅಳವಡಿಸಿಕೊಂಡಿರುವುದು ಕೂಡ ಇದಕ್ಕೆ ಸಹಕಾರಿಯಾಗಿದೆ ಹಾಗೂ ಕನ್ನಡಕ್ಕೇ ವಿಶಿಷ್ಟವಾದ ಅಂತ್ಯಪ್ರಾಸ, ಅನುಪ್ರಾಸಗಳು ಇದಕ್ಕೆ ಪುಟಗೊಟ್ಟಿವೆ.

ಎಲ್ಲರಿಗೂ ಚಿರಪರಿಚಿತವಾದ ಈ ಅಷ್ಟಪದಿಗಳ ಕೆಲವು ಶ್ಲೋಕಗಳ ಅನುವಾದ ಮೂಲವನ್ನು ನೆನಪಿಸುತ್ತಲೇ ಕನ್ನಡಿಗರನ್ನು ತಲುಪುವಲ್ಲಿ ಯಶಸ್ವಿಯಾಗಿದೆ.

1. ಲಲಿತ ಲವಂಗ ಲತಾ ಪರಿಶೀಲನ ಕೋಮಲ ಮಲಯ ಸಮೀರೇ
ಮಧುರ ನಿಕರ ಕರಂಬಿತ ಕೋಕಿಲ ಕೂಜಿತ ಕುಂಜ ಕುಟೀರೇ

ಲಲಿತ ಲವಂಗ ಲತೆಗಳ ತೊನೆ ತೊನೆದಾಡುವ ಕೋಮಲ ಮಲಯ ಸಮೀರನೊಳು
ಬಂಡುಣಿ ಎಂಡು ನಿರಂತರ ಮೊರೆದಿರೆ ಕುಕಿಲುತಲಿರೆ ಪಿಕ ಕುಂಜ ಕುಟೀರದೊಳು

2. ಉನ್ಮದ ಮದನ ಮನೋರಥ ಪಥಿಕ ವಧೂ ಜನ ಜನಿತ ವಿಲಾಪೇ
ಅಲಿಕುಲ ಸಂಕುಲ ಕುಸುಮ ಸಮೂಹ ನಿರಾಕುಲ ಬಕುಲ ಕಲಾಪೇ

ಮದನ ಮನೋರಥದೊಳು ಮದವೇರಿದ ಪಥಿಕ ವಧೂ ಜನರಳುವ ವಿಲಾಪದೊಳು
ಅಳಿಕುಲ ಸಂಕುಲಮೆರಗುವ ಕುಸುಮ ಸಮೂಹದಿನೊಪ್ಪುವ ಬಕುಲ ಕಲಾಪದೊಳು?

3. ಮೃಗಮದ ಸೌರಭ ರಭಸವಶಂವದ ನವದಲ ತಮಾಲ ತಮಾಲೇ
ಯುವ ಜನ ಹೃದಯ ವಿದಾರಣ ಮನಸಿಜ ನಖ ರುಚಿಕಿಂಶುಕ ಜಾಲೇ

ಮೃಗಮದ ಸುರಭಿ ಸಮೀರನ ಕತದೊಳು ಕಂಪಿಡಿದೊಪ್ಪುವ ತಳಿರ ತಮಾಲದೊಳು
ಯುವ ಜನರೆದೆಯನು ಸೀಳುವ ಕಾಮನ ಸೆಳ್ಳುಗುರೆನಲೀಗ ಕಿಂಶುಕ ಜಾಲದೊಳು

ಸಂಭಾಷಣೆಗಳು ಬರುವ ಸಂದರ್ಭಗಳು ಕೂಡ ಲಲಿತವಾದ ರೀತಿಯಲ್ಲಿ ಕನ್ನಡ ನುಡಿಯಲ್ಲಿ ಮೂಡಿ ಬಂದಿವೆ:

(2)

ಮಾರನನ್ನುಳಿದನ್ಯರೆನ್ನೀ ಮನವ ಪೊಗುವುದಕರಿದು ತಿಳಿವುದು ಕನ್ನೆಯೆ
ನಿನ್ನ ಘನ ಕುಚ ಜಘನ ವಿಷಯದಿನೆನ್ನ ಮನವಾಕ್ರಾಂತವಾಗಿದೆ ಚೆನ್ನೆಯೆ
ಓವೊ ಇನಿಯೆ ಮುರಾರಿ ಬೇರೊಬ್ಬಳನು ಒಲಿದವನೆನುವ ಶಂಕೆಯ ಬಿಡು ಬಿಡು
ಅಪ್ಪಿಕೊಳುವೆನು ಒಪ್ಪಿ ಬಿಡು ಬಾ ನಾ ನಾನು ನಿನ್ನಡಿದೊತ್ತು ಚಿಂತಿಸದೆಡೆಗುಡು

ಓವೊ ಮುಗ್ಧೆಯೆ ನೀನೆ ನಿರ್ದಯ ದಂತದಂಶಗಳಿಂದಲೆನ್ನನು ಬಾಧಿಸು
ನಿಬಿಡ ಕುಚಗಳಿನೊತ್ತಿ ಮರ್ದಿಸು ಬಳ್ಳಿದೋಳುಗಳಿಂದಲೆನ್ನನು ಬಂಧಿಸು
ಓವೋ ಚಂಡಿಯೆ ನೀನೆ ಮುದವನು ತಾಳುತೀಪರಿ ನನ್ನನೋವೋ ಶಿಕ್ಷಿಸು
ಕ್ರೂರನಾ ಚಾಂಡಾಲ ಮನ್ಮಥ ನೆಟ್ಟ ಬಾಣದೊಳಳಿಯದುಳಿಯಲಿ ಈ ಅಸು.

[ಗೀ.ಗೋ.ಪು.42)

ಇಲ್ಲೆಲ್ಲ ಸುಪರಿಚಿತವಾದ ಸಂಸ್ಕೃತ ಶಬ್ದಗಳೊಂದಿಗೆ ಲಲಿತವಹ ಅಚ್ಚಗನ್ನಡ ನುಡಿಗಳು ಸೇರಿಕೊಂಡು ಇವೆರಡರ ಹದವಾದ ಹೊಂದಾಣಿಕೆಯಿಂದ ಕನ್ನಡ ಗೀತಗೋವಿಂದ ಹೃದ್ಯವಾಗಿದೆ.

13. ಕನ್ನಡ ಬುದ್ಧ ಚರಿತೆ

ಜಗತ್ತಿನ ಮಹಾಮಾನವ ಮತ್ತು 'ಭಾರತದಲ್ಲಿ ವಿಚಾರಕ್ರಾಂತಿಗೆ ಆಚಾರ್ಯಪುರುಷ'ನೆಂದು ಹೆಸರಾದ ಗೌತಮ ಬುದ್ಧನ ಜೀವನವನ್ನು ಕಾವ್ಯವಸ್ತುವನ್ನಾಗಿ ಮಾಡಿಕೊಂಡು ಮಹಾಕಾವ್ಯ ರಚಿಸಿದ ಖ್ಯಾತಿ ಅಶ್ವಘೋಷನದು. ಆದಿಕವಿ ವಾಲ್ಮೀಕಿಯ ರಾಮಾಯಣ ಕಾವ್ಯದ ನಂತರದಲ್ಲಿ ನಮಗೆ ಸಿಗುವ ಮಹಾಕಾವ್ಯವೆಂದರೆ, ಅಶ್ವಘೋಷನ ಬುದ್ಧ ಚರಿತೆಯೇ. ಅಶ್ವಘೋಷ ಮತ್ತು ಕಾಳಿದಾಸರಲ್ಲಿ ಯಾರು ಮೊದಲು ಎಂಬ ವಿಚಾರದಲ್ಲಿ ವಿವಾದವಿದ್ದರೂ

ಬಹುಜನ ವಿದ್ವಾಂಸರು ಒಪ್ಪಿರುವ ಪ್ರಕಾರ ಅಶ್ವಘೋಷನೇ ಮೊದಲಿಗ. ಅವನ ಕಾಲ ಕ್ರಿ.ಶ. 1ನೆಯ ಶತಮಾನದ ಪೂರ್ವಾರ್ಧವಿರಬೇಕೆಂದು ತೀರ್ಮಾನಿಸಲಾಗಿದೆ. ಏನೇ ಆದರೂ ಕ್ರಿ.ಶ. 5ನೆಯ ಶತಮಾನಕ್ಕಿಂತ ಈಚಿನದಲ್ಲವೆಂಬುದು ಖಚಿತ. ಕಾಳಿದಾಸನು ಇವನನ್ನು ಅನೇಕ ಕಡೆ ಅನುಸರಿಸುತ್ತಾನೆ. ಕೆಲವೊಮ್ಮೆ ಅದೇ ಪದಗುಚ್ಛಗಳು ಇಬ್ಬರಲ್ಲೂ ಇರುವುದು ಕಂಡುಬರುತ್ತವೆ. ಅವನೊಬ್ಬ ಭಿಕ್ಷು ಮತ್ತು ಆಚಾರ್ಯ, ಭದಂತ. ಬುದ್ಧಚರಿತವಲ್ಲದೆ 'ಸೌಂದರನಂದ' ಎಂಬ ಇನ್ನೊಂದು ಮಹಾಕಾವ್ಯ. 'ಶಾರಿಪುತ್ರ ಪ್ರಕರಣ' ವೆಂಬ ನಾಟಕದ ಕೆಲವು ಭಾಗಗಳು ಮಾತ್ರ ಈಗ ಉಪಲಬ್ಧವಿರುವುದು. ಆಲಂಕಾರಿಕ ಮಹಾಕಾವ್ಯಕ್ಕೆ ಇವನ ಕಾವ್ಯಗಳು ಮಾದರಿಯನ್ನೊದಗಿಸಿದವು ಎಂದು ವಿದ್ವಾಂಸರು ಹೇಳುತ್ತಾರೆ.

ಬುದ್ಧ ಚರಿತೆ 28 ಸರ್ಗಗಳಿಂದ ಕೂಡಿದ ಮಹಾಕಾವ್ಯ. ಆದರೆ ಸಂಸ್ಕೃತ ಮೂಲ ಕಾವ್ಯದ 14 ಸರ್ಗಗಳು ಮಾತ್ರ ಸಿಕ್ಕಿದ್ದು ಅದರಲ್ಲೂ ಮೊದಲ ಸರ್ಗದ ಮೊದಲ ಏಳು ಶ್ಲೋಕಗಳೂ, 14ನೆಯ ಸರ್ಗದ ಕೊನೆಯ ಎಂಬತ್ತೆರಡು ಶ್ಲೋಕಗಳೂ ದೊರೆಯುತ್ತಿಲ್ಲ. ಈ ಎಂಬತ್ತೊಂಬತ್ತು ಶ್ಲೋಕಗಳನ್ನು ಶ್ರೀ ಮಹಂತ ರಾಮಚಂದ್ರ ಶಾಸ್ತ್ರಿ ಎಂಬುವವರು ಸ್ವತಃ ಸಂಸ್ಕೃತದಲ್ಲಿ ರಚಿಸಿ ಸೇರಿಸಿದ್ದಾರೆ. ಬುದ್ಧ ಚರಿತೆಯ ಉತ್ತರಾರ್ಧದ ಸಂಸ್ಕೃತ ಮೂಲ ಅಲಭ್ಯ. ಆದರೆ ಅಶ್ವಘೋಷನ ಇಡೀ ಮಹಾಕಾವ್ಯ ಐದನೇ ಶತಮಾನದಲ್ಲೇ ಚೀಣೀ ಭಾಷೆಗೂ, 8ನೆಯ ಶತಮಾನದಲ್ಲಿ ಟಿಬೇಟಿಯನ್ ಭಾಷೆಗೂ ಅನುವಾದಗೊಂಡಿತ್ತು. ಅವು ಈಗಲೂ ಲಭ್ಯವಿವೆ. ಟಿಬೆಟಿಯನ್ ಮತ್ತು ಚೀಣೀ ಭಾಷೆಯಲ್ಲಿರುವ ಕಾವ್ಯಭಾಗವನ್ನು 'ಜಾನ್‌ಸ್ಟನ್' ಅವರು ಇಂಗ್ಲಿಷಿಗೆ ಅನುವಾದಿಸಿಕೊಟ್ಟಿದ್ದಾರೆ. 'ಜಾನ್‌ಸ್ಟನ್' ಅವರ ಇಂಗ್ಲಿಷ್ ಅನುವಾದವನ್ನು ಅನುಸರಿಸಿ, ಚೌಧುರೀ ಮಹೋದಯರು ಹಿಂದೀ ಭಾಷೆಗೆ ಅನುವಾದಿಸಿರುವ ಕಾವ್ಯವನ್ನು ರಾಮಚಂದ್ರ ಶಾಸ್ತ್ರಿಯವರು ಸಂಸ್ಕೃತ ಪದ್ಯಕಾವ್ಯವಾಗಿ ಪರಿವರ್ತಿಸಿದ್ದಾರೆ.

ಪ್ರೊ. ಎಸ್.ವಿ.ಪಿ. ಅವರು ಕನ್ನಡ ಬುದ್ಧ ಚರಿತೆಗೆ ಪೂರ್ಣತೆಯನ್ನು ತಂದುಕೊಡುವುದರ ಸಲುವಾಗಿ, ಬುದ್ಧ ಚರಿತೆಯ ಉತ್ತರಾರ್ಧದ ಅನುವಾದಕ್ಕೆ ಮುಖ್ಯವಾಗಿ ರಾಮಚಂದ್ರಶಾಸ್ತ್ರಿಯವರ ಸಂಸ್ಕೃತ ಅನುವಾದವನ್ನು ಆಧಾರವಾಗಿಟ್ಟುಕೊಳ್ಳುವುದರ ಜೊತೆಗೆ ಜಾನ್‌ಸ್ಟನ್ ಅವರ "Buddha's Mission and Last Journey" ಎಂಬ ಇಂಗ್ಲಿಷ್ ಅನುವಾದದ ಮತ್ತು ರಾಮಚಂದ್ರಶಾಸ್ತ್ರಿಯವರ ಬುದ್ಧ ಚರಿತೆಯ ಹಿಂದೀ ವ್ಯಾಖ್ಯಾನದ ನೆರವು ಪಡೆದಿರುವುದಾಗಿ ಹೇಳಿಕೊಂಡಿದ್ದಾರೆ.

ಹೀಗೆ ಕನ್ನಡ ಬುದ್ಧ ಚರಿತೆಯ ಉತ್ತರಾರ್ಧ, ಅನುವಾದದ ಅನುವಾದವಾದರೂ, ಆ ಮೂಲಕ ಬುದ್ಧ ಚರಿತೆ ಇಡಿಯಾಗಿ ಕನ್ನಡಕ್ಕೆ ದೊರೆತಂತಾಗಿದೆ. ಇದರಲ್ಲಿ ಕನ್ನಡಕ್ಕೆ ಬುದ್ಧ ಚರಿತೆಯನ್ನು ಇಡಿಯಾಗಿ ದೊರಕಿಸಿಕೊಡಬೇಕೆಂಬ ಎಸ್.ವಿ.ಪಿ. ಅವರ ಕಾಳಜಿಯನ್ನು ನಾವು ಮನಗಾಣಬಹುದು.

ಬುದ್ಧಚರಿತೆಯ ಪೂರ್ವಾರ್ಧದ 14 ಸರ್ಗಗಳಲ್ಲಿ ನಮಗೆಲ್ಲರಿಗೂ ಈಗಾಗಲೇ ಪರಿಚಿತವಾದ ಬುದ್ಧದೇವನ ಜೀವನದ ಮುಖ್ಯ ಸಂಗತಿಗಳಾದ ಜನನ, ಬಾಲ್ಯ, ವಿದ್ಯಾಭ್ಯಾಸ, ವಿವಾಹ, ಪುತ್ರಜನನ, ಅವನ ವೈರಾಗ್ಯಕ್ಕೆ ಕಾರಣವಾದ ಮುದುಕ, ರೋಗಿ ಮತ್ತು ಶವವನ್ನು ಕಾಣುವುದು, ಜಗತ್ತಿನ ದುಃಖ ನಿವಾರಿಸಿಕೊಂಡು ಶಾಶ್ವತ ನೆಮ್ಮದಿಯನ್ನು ಪಡೆಯುವುದು ಹೇಗೆಂಬುದನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದ ಈಡೇರಿಕೆಗಾಗಿ ಅರಮನೆಯನ್ನು, ಹೆಂಡತಿ, ಮಗ, ಪರಿವಾರವನ್ನು ಬಿಟ್ಟು ಹೊರಡುವುದು, ವಿವಿಧ

ಸಾಧಕರೊಂದಿಗೆ ಭೇಟಿ, ಚರ್ಚೆ, ತನ್ನ ದೇಹ ದಂಡಿಸಿ, ಅವನು ಮಾಡುವ ಸಾಧನೆಗಳು.. ಕೊನೆಗೆ ಅವುಗಳಿಂದ ಏನೂ ಪ್ರಯೋಜನವಿಲ್ಲವೆಂದು ತಿಳಿದು ಅವುಗಳಿಂದ ವಿಮುಖನಾಗಿ ಸುಜಾತ ನೀಡಿದ ಪಾಯಸ ಕುಡಿದು ಉಪವಾಸ ತ್ಯಜಿಸಿ, ಅರಳಿಮರದಡಿ ಧ್ಯಾನಸ್ಥನಾಗಿದ್ದಾಗ ಮಾರನ ಆಕ್ರಮಣ, ಮಾರನನ್ನು ಸೋಲಿಸಿದ ನಂತರದಲ್ಲಿ ಜ್ಞಾನೋದಯವಾಗುವುದು. ಇವೆಲ್ಲ ವರ್ಣಿತವಾಗಿವೆ. ಹದಿನೈದನೆಯ ಸರ್ಗದಿಂದ ಮುಂದಕ್ಕೆ ಬುದ್ಧನು ದೇಶಾದ್ಯಂತ ಸಂಚರಿಸಿ ತನ್ನ ಧರ್ಮ ಪ್ರಚಾರ ಮಾಡುತ್ತ ಶಿಷ್ಯರನ್ನು ಸಂಪಾದಿಸುತ್ತ ಅವರಿಗೆ ಸನ್ಯಾಸದೀಕ್ಷೆ ನೀಡಿದ್ದು, ಸಂಘ ಸ್ಥಾಪನೆ, ಅನಾಥ ಪಿಂಡಿಕ, ಅಮ್ರಪಾಲಿಯರ ಕೊಡುಗೆ ಸ್ವೀಕಾರ, ಬುದ್ಧನ ಪರಿನಿರ್ವಾಣವೇ ಮೊದಲಾದ ಸಂಗತಿಗಳು ನಿರೂಪಿತವಾಗಿದೆ. ಬುದ್ಧೋತ್ತರದ ಘಟನೆಗಳನ್ನು ಕೊನೆಯ ಎರಡು ಸರ್ಗಗಳಲ್ಲಿ ನಿರೂಪಿಸಲಾಗಿದೆ.

ಪುರಾಣ ಪುರುಷರು, ಅವತಾರ ಪುರುಷರು ಎಂದು ಹೆಸರಾದ ರಾಮ ಕೃಷ್ಣರನ್ನು ಕೇಂದ್ರ ವ್ಯಕ್ತಿಗಳಾಗಿ ಮಾಡಿಕೊಂಡು ರಚಿತವಾದ ರಾಮಾಯಣ, ಮಹಾಭಾರತಗಳ ಅನಂತರದಲ್ಲಿ ಅಂಥದೇ ಮಹಾಕಾವ್ಯಕ್ಕೆ ಕೇಂದ್ರವ್ಯಕ್ತಿಯಾಗಬಲ್ಲವನೆಂದರೆ, ಭಗವಾನ್ ಬುದ್ಧನೇ ಎಂದು ಕಂಡುಕೊಂಡು ಹಿಂದಿನ ಕಾವ್ಯಗಳಂತೆಯೇ ಬುದ್ಧನ ಬದುಕಿನ ಕಥನವನ್ನು ವರ್ಣನೆಗಳಿಂದ ಸ್ವಾರಸ್ಯಭರಿತವಾಗುವಂತೆ ಮಾಡಿರುವುದೇ ಅಶ್ವಘೋಷನ ಹೆಚ್ಚುಗಾರಿಕೆ. ಮುಂದಿನ ಕಾಳಿದಾಸನಿಗೆ ಈ ವರ್ಣನಾ ಬಾಹುಲ್ಯದ ಸಂಪ್ರದಾಯವನ್ನು ಹಾಕಿದ ಕೀರ್ತಿ ಅಶ್ವಘೋಷನಿಗೆ ಸಲ್ಲಬೇಕು"[30] ಎನ್ನುವ ಮಟ್ಟಿಗೆ ಈ ವರ್ಣನೆಗಳು ಬಂದಿವೆ. ಇವುಗಳಲ್ಲಿ ಕೆಲವೊಂದು ಸಂದರ್ಭಗಳು ಮೂಲದಲ್ಲಿ ಮತ್ತು ಅನುವಾದದಲ್ಲಿ ಹೇಗೆ ಮೂಡಿಬಂದಿವೆಯೆಂಬುದನ್ನು ಕಂಡುಕೊಳ್ಳುವುದರ ಮೂಲಕ ಮೂಲ ಮತ್ತು ಕನ್ನಡ ಅನುವಾದಗಳ ಸೊಗಸನ್ನು ನೋಡಬಹುದು.

ಎಲ್ಲ ಕಾವ್ಯನಾಯಕರ ಹಾಗೆ, ಜಗತ್ತನ್ನು ಬೆಳಗುವ ತೇಜೋನಿಧಿಗಳೆನಿಸಿದ ಸೂರ್ಯ–ಚಂದ್ರರಂತೆಯೇ ಬಾಲಕ ಗೌತಮನೂ ತೇಜಸ್ವಿಯಾಗಿ ಇದ್ದ ಎಂದು ವರ್ಣಿಸುವ ಪದ್ಯ:

> ದೀಪ್ತ್ಯಾ ಚ ಧೈರ್ಯೇಣ ಚ ಯೋ ರರಾಜ ಬಾಲೋ ರವಿರ್ಭೂಮಿಮಿವಾವತೀರ್ಣಃ
> ತಥಾ ತ ದೀಪ್ತೋಽಪಿ ನಿರೀಕ್ಷ್ಯಮಾಣೋ ಜಹಾರ ಚಕ್ಷೂಂಷಿ ಯಥಾ ಶಶಾಂಕಃ
>
> **ದೀಪ್ತಿಯೊಳು ಧೈರ್ಯದೊಳು ಕಾಂತಿಯೊಳು ಬಾಲಕನು**
> **ರಂಜಿಸಿದನಿಳೆಗಿಳಿದು ಬಂದ ರವಿಯಂತೆ**
> **ಅಮಿತ ಕಾಂತಿಯಿನೆಸೆದು ಆತನುರೆ ನೋಳ್ಪರನು**
> **ತಣ್ಪಿನಿಂ ಸೆಳೆದನು ಶಶಾಂಕನೆಂತಂತೆ** [1–31]

ಮೂಲದಲ್ಲಿಲ್ಲದ, ಅನುವಾದದಲ್ಲಿ ಹೊಸದಾಗಿ ಸೇರಿರುವ ಶಬ್ದವೆಂದರೆ, 'ತಣ್ಪಿನಿಂ' ಎಂಬುದು. ಆದರೆ ಅದು ಶೀತಲಕಿರಣನೆನಿಸಿದ 'ಶಶಾಂಕ' ನಿಗೆ ಸೂಕ್ತವಾಗಿ ಹೊಂದಿಕೆಯಾಗುತ್ತದೆ. 'ಕಾಂತಿಯೊಳು ಎಂಬುದರ ಪ್ರಯೋಗಕ್ಕೆ ಮೂಲದ 'ದೀಪ್ತಿ' ಶಬ್ದ ಕಾರಣ.

ಮಹಾಪುರುಷನ ಜನನದ ಸುಳಿವರಿತು ಅರಮನೆಗೆ ಬಂದ ಅಸಿತ ಮುನಿ ಇವನೊಬ್ಬ ಕಾರಣಿಕ ಪುರುಷ, ಜಗತ್ತನ್ನು ಉದ್ಧರಿಸಲು ಹುಟ್ಟಿರುವ ಜ್ಞಾನ ಭಾಸ್ಕರನೀತ ಎಂದು ಹೇಳುವ ಸಂದರ್ಭವನ್ನು ರೂಪಕಗಳಲ್ಲಿ ಹೇಳುವ ಪದ್ಯ.

> ದುಃಖಾರ್ಣವಾದ್ ವ್ಯಾಧಿವಿಕೀರ್ಣಫೇನಾಜ್ಜರಾತರಂಗಾನ್ಮರಣೋಗ್ರವೇಗಾತ್ ।
> ಉತ್ತಾರಯಿಷ್ಯತ್ಯಯಮುಹ್ಯಮಾನಮಾರ್ತಂ ಜಗತ್ಜ್ಞಾನ ಮಹಾಪ್ಲವೇನ ॥

ಇದನ್ನು ಅಷ್ಟೇ ಸಮರ್ಥವಾದ ರೂಪಕಗಳಿಂದ ಎಸ್.ವಿ.ಪಿ ತುಂಬ ಸೊಗಸಾಗಿ ಕನ್ನಡಿಸಿದ್ದಾರೆ. ಅನುಪ್ರಾಸ ಮತ್ತು ಅಂತ್ಯಪ್ರಾಸಗಳು ಆ ಸೊಗಸನ್ನು ಇನ್ನಷ್ಟು ಹೆಚ್ಚಿಸಿವೆ.

ರುಜೆಯ ನೊರೆ ಜರೆಯ ತೆರೆ ಸಾವೆ ಓಘದ ವೇಗ
ವೆನಲು ಸಲೆ ಭೋರಿಡುವ ದುಃಖವಾರ್ಧಿಯೊಳು
ಎತ್ತಲೆತ್ತಲೊ ತೇಲುವಾರ್ತ ಜಗವನ್ನಿವನು
ಅರಿವೆಂಬ ತೆಪ್ಪದೊಳು ಕಡೆಹಾಯಿಸುವನು [1–75]

ಶುದ್ಧೋಧನನ ರಾಜ್ಯ ಹೇಗಿತ್ತು: ಎಂಥ ಸುಭಿಕ್ಷ ನೆಲಸಿತ್ತು ಎಂದು ಹೇಳುವ ಸಂದರ್ಭ. ಭಟ್ಟರ ಅನುವಾದದ ಸೊಗಸು ಮತ್ತು ಕನ್ನಡ ದೇಸಿಯ ವೈಭವ ಎರಡಕ್ಕೂ ಈ ಪದ್ಯಗಳನ್ನು ನೋಡಬಹುದು.

ತಥಾಸ್ಯ ಮಂದಾನಿಲ ಮೇಘಶಬ್ದ; ಸೌದಾಮಿನೀ ಕುಂಡಲಮಂಡಿತಾಭ್ರಃ ।
ವಿನಾಶವರ್ಷಾಶನಿಪಾತದೋಷೈಃ ಕಾಲೇ ಚ ದೇಶೇಪ್ರವವರ್ಷದೇವಃ ॥ [2–7]

ಮೆಲುಗಾಳಿಯೊಡವೆರೆದು ಮೊಳಗುಗಳದನಿಗೈದು
ಮಿಂಚಿನೋಲೆಯ ತೊಟ್ಟು ಮುಗಿಲ ಮೈ ಬಿಟ್ಟು
ಬೇಡಿದೊಡೆ ಕಾಲದೊಳು ದೇವಮಳೆಗರೆಯುವನು
ಆಲಿ ಕಲ್ಗಳ ಕಳೆದು ಸಿಡಿಲನುರೆಯುಳಿದು

ಸಿದ್ಧಾರ್ಥನು ನಗರ ಸಂಚಾರಕ್ಕೆ ಬರುತ್ತಿದ್ದಾನೆಂಬ ಸುದ್ದಿ ಕೇಳಿ ಆ ಊರ ಸುಂದರಿಯರು ಅವನನ್ನು ನೋಡಲು ಪಟ್ಟ ಸಂಭ್ರಮವನ್ನು ಕವಿ ತುಂಬ ಸೊಗಸಾಗಿ ವರ್ಣಿಸಿದ್ದಾನೆ. ಆ ಹೆಂಗಳೆಯರ ಚೆಲುವಿನ ವರ್ಣನೆ ಕೂಡ ಇದರಲ್ಲಿದೆ.

ವಾತಾಯನಾನಾಮ ವಿಶಾಲಭಾವಾದನ್ಯೋನ್ಯಗಂಡಾರ್ಪಿತಕುಂಡಲಾನಾಮ್ ।
ಮುಖಾನಿ ರೇಜುಃ ಪ್ರಮದೋತ್ತಮಾನಾಂ ಬದ್ಧಾಃ ಕಲಾಪಾ ಇವ ಪಂಕಜಾನಾಮ್ ॥

ಎಸ್.ವಿ.ಪಿ.ಯವರ ಅನುವಾದ:

ಸಣ್ಣ ಕಿಟಕಿಯದೆಸೆಯಿನೊರ್ವಳ ಕಪೋಲದೊಳು
ಪೆರತೊರ್ವಳೋಲೆ ಸಲೆ ಆಡುತಿರಲು
ಕಟ್ಟಿ ತೂಗಿದ ಕೆಂಪು ತಾವರೆಯ ತೊಂಗಲೊಲು
ಮೆರೆದವು ವರಾಂಗನೆಯರಾನನಗಳು

'ಅನ್ಯೋನ್ಯಗಂಡಾರ್ಪಿತಕುಂಡಲಾನಾಂ' ಎಂಬ ವಾಕ್ಯಭಾಗ "ಓರ್ವಳ ಕಪೋಲದೊಳು ಪೆರತೊರ್ವಳೋಲೆ ಸಲೆ ಆಡುತಿರಲು" ಎಂದು ಅತ್ಯಂತ ಯುಕ್ತವಾಗಿ ಸಮರ್ಪಕವಾಗಿ ಕನ್ನಡಕ್ಕೆ ಬಂದಿದೆ. ಹಾಗೆಯೇ 'ಕಟ್ಟಿ ತೂಗಿದ ಕೆಂಪು ತಾವರೆಯ ತೊಂಗಲೊಲು" ಯುವತಿಯರ ಮುಖಗಳು ಶೋಭಿಸಿದ್ದವು ಎಂದಿರುವುದು ಚೆಲುವಾಗಿದೆ.

'ಸ್ತ್ರೀ ವಿಘಾತನ' ಎಂಬ ನಾಲ್ಕನೆಯ ಸರ್ಗದಲ್ಲಿ ಶವದರ್ಶನದಿಂದ ಮನಸ್ಸು ಘಾಸಿಗೊಂಡಿರುವ ಸಿದ್ಧಾರ್ಥನನ್ನು, ಅವನ ಇಚ್ಛೆಗೆ ವಿರುದ್ಧವಾಗಿ ಸಾರಥಿ ಉದ್ಯಾನವನಕ್ಕೆ ಕೊಂಡೊಯ್ದಾಗ ಅಲ್ಲಿ ಅಂತಃಪುರ ಸುಂದರಿಯರು. ತಮ್ಮ ಹಾವಭಾಗಳಿಂದ ಓಲೈಸಿ, ಅರಮನೆಗೆ ಕರೆತರಲು ಹೋದ ಸಂಗತಿ ನಿರೂಪಿತವಾಗಿದೆ. ಇಡೀ ಸರ್ಗವನ್ನು ಚೆಲುವಾದ ಸಲ್ಲಕ್ಷಣವಾದ ಆದಿಪ್ರಾಸ ರಹಿತ ಅಚ್ಚಗನ್ನಡ ಸಾಂಗತ್ಯದಲ್ಲಿ ರಚಿಸಲಾಗಿದೆ. ಶೃಂಗಾರ ಭಾವಗಳ ಅಭಿವ್ಯಕ್ತಿಗೆ ಸಾಂಗತ್ಯದ ಬಳಕೆ ಅತ್ಯಂತ ಉಚಿತವೆಂದು ಹೇಳಬೇಕಾಗಿಯೇ ಇಲ್ಲ. ಪುರೋಹಿತ ಸುತನು ಆ ಸುಂದರಿಯರನ್ನು ಕುರಿತು ಹೇಳುವ ಮಾತು ತುಂಬ ಚೆಲುವಾಗಿದೆ:

ಭಾವದ ಹಾವದ ರೂಪಲಾವಣ್ಯದ
ಚಾತುರ್ಯ ಸಂಪದದಿಂದ
ಸ್ತ್ರೀಯರ ಸಹ ನೀವು ಸೆಳೆವಿರಿ ರಾಗಕೆ
ಪುರುಷರ ಕಥೆ ಹೇಳಲೇಕೆ

ಅವರು ಅವನನ್ನು ರಂಜಿಸಿದ ಬಗೆ ಕನ್ನಡ ಸಾಂಗತ್ಯದ ರೂಪ ತಾಳಿರುವುದು ಹೀಗೆ:

ತಾ ಭ್ರೂಭಿಃ ಪ್ರೇಕ್ಷಿತೈರ್ಹಾವೈರ್ಹಸಿತೈರ್ಲಡಿತೈರ್ಗತೈಃ ।
ಚಕ್ರುರಾಕ್ಷೇಪಿಕಾಶ್ಚೇಷ್ಟಾಭೀತ ಭೀತಾ ಇವಾಂಗನಾಃ ॥ [ಮೂಲ : 4–25]

ಹುಬ್ಬಿನ ಕುಣಿತದೆ ಕಣ್ಣಿನ ಮಣಿತದೆ
ಹಾಸ ವಿಲಾಸಾಭಿನಯದೆ
ಕುವರನ ಮನವನು ಸೆಳೆಯೆ ಯತ್ನಿಸಿದರು
ಸ್ತ್ರೀಯರು ಭಯಭರಿತೆಯರು

ಹುಬ್ಬಿನ ಕಣಿತ, ಕಣ್ಣಿನ ಮಣಿತ – ಇವು ಮೂಲದ ಒಂದು ಶಬ್ದಕ್ಕೆ ಕ್ನಡದ ಒಂದು ಶಬ್ದವನ್ನಿಡುವುದಾಗಿರದೆ, ಅತ್ಯಂತ ಸೃಜನಶೀಲವಾದ ಅನುವಾದವಾಗಿ ಪುನಃಸೃಷ್ಟಿಯೆನಿಸಿದೆ.

ಸಿದ್ಧಾರ್ಥನು ತಪೋವನ ಪ್ರವೇಶಮಾಡಿದಾಗ, ಅವನನ್ನು ಕಂಡು ಅಲ್ಲಿದ್ದ ಪಶುಪಕ್ಷಿಪ್ರಾಣಿ ಮನುಷ್ಯರಾದಿಯಾಗಿ ಎಲ್ಲರೂ ಮಂತ್ರಮುಗ್ಧರಾದರು. ಹಾಗೆ ಅವರ ಸ್ಥಿತಿ ಇನ್ನೂ ಏನೇನಾಯಿತೆಂಬುದನ್ನು ಭಾಮಿನಿಯ ನರ್ತನದ ಲಯದಲ್ಲಿ ಎಸ್.ವಿ.ಪಿ. ಕನ್ನಡಿಸಿದ್ದಾರೆ.

ಹೃಷ್ಟಾಶ್ಚ ಕೇಕಾ ಮುಮುಚುರ್ಮಯೂರಾ ದೃಷ್ಟ್ವಾಂಬುದಂ ನೀಲಮಿವೋನ್ನಮಂತಃ ।
ಶಷ್ಪಾಣಿ ಹಿಂತ್ವಾಭಿಮುಖಾಶ್ಚ ತಸ್ಥುರ್ಮೃಗಾಶ್ಚಲಾಕ್ಷಾಮೃಗಚಾರಿಣಶ್ಚ ॥ [7–5]

ತೋಷಗೊಂಡವು ಕೇಕೆಗೈದವು ಕುಣಿಯತೊಡಗಿದವಾ ನವಿಲ್ಗಳು
ನೀಲಮೇಘವ ಕಂಡ ತೆರದೊಳು ಮೇಲೆ ಬಾನಂಗಳದೊಳು
ಚಂಚಲಾಕ್ಷಿಯ ಪುಲ್ಲೆಗರುಗಳುಮಂತೆ ದಿಟ್ಟಿಸಿನೋಳ್ಪುರುಗಳು
ತಮ್ಮ ಪುಲ್ಗಗಳ ಕೆಡವಿಸಿರ್ದರು ನೆಟ್ಟನೋಟದೊಳಾಗಳು

ಕನ್ನಡದಲ್ಲಿ ಪ್ರಾಸ ಹುಲುಸು. ಅದನ್ನು ಭಟ್ಟರು ಎಷ್ಟು ಸಹಜವಾಗಿ ಲೀಲಾಜಾಲವಾಗಿ ಬಳಸುತ್ತಾರೆಂಬುದಕ್ಕೆ ಸಿದ್ಧಾರ್ಥನ ನಿರ್ಗಮನದ ನಂತರದಲ್ಲಿ ಸಿದ್ಧಾರ್ಥನನ್ನು ಸಾಕಿ ಬೆಳೆಸಿದ ಗೌತಮೀ ಸತಿಯ ಸ್ಥಿತಿಯನ್ನು ವರ್ಣಿಸುವ ಸಂದರ್ಭದ ನಿದರ್ಶನ ನೋಡಬಹುದು.

ಶೋಕಗಾತ್ರೆ ಕರುಣಪಾತ್ರೆ ಅಶ್ರುನೇತ್ರೆ ತಾನಧೀರಳಾಗಿ ಗೌತಮೀಸತಿ
ತನ್ನ ಮರಿಯ ಕಳೆದುಕೊಂಡ ಕುರರಿಯಂತೆ ಕೂಗುತಿರ್ದಳಕಟ ಪೋದವೋಲ್ಮತಿ

ತನ್ನನ್ನು ತೊರೆದುಹೋದ ಪತಿಯನ್ನು ನೆನೆದು ಯಶೋಧರೆ ಪ್ರಲಾಪಗೈಯುವುದು ಎಂಥವರನ್ನಾದರೂ ಕರಗಿಸುವಂತಿದೆ. ನಾನು ಕೂಡ ಕಠಿಣಳಾದೆ.

ಮಮಾಪಿ ಕಾಮಂ ಹೃದಯಂ ಸುದಾರುಣಂ ಶಿಲಾಮಯಂವಾಪ್ಯಯಕೋಽಪಿವಾಕೃತಂ
ಅನಾಥವಚ್ಛೀರಹಿತೆ ಸುಖೋಚಿತೇ ವನಂಗತೇ ಭರ್ತರಿಯತ್ನದೀರ್ಯತೇ (ಮೂಲ)

ಸಿರಿಯ ಶಿಲಾಮಯವೊ ಅಯೋಮಯವೋ ನನ್ನ ಹೃದಯವರಿಯೆನು
ಬಿರಿಯದೆನ್ನ ಎದೆಯುಮಿಂದು ತೊರೆದು ತಬ್ಬಲಿಯವೊಲಡವಿಗೈದಲಿನಿಯನು

ಶುದ್ಧೋಧನನ ಸಂದೇಹ, ಸಂತಾಪ ಮತ್ತು ಅದಕ್ಕೆ ಸಿದ್ಧಾರ್ಥನ ಉತ್ತರ ಹಾಗೂ ಮಂತ್ರಿಯ ವಾದ ಮತ್ತು ಮಗಧೇಶನ ವಚನ ಇವು ಸಂಸ್ಕೃತ ಸಾಹಿತ್ಯದಲ್ಲಿಯೇ ತುಂಬ ಸುಂದರವೆನಿಸುವ ಭಾಗಗಳಲ್ಲಿ ಕೆಲವು ಎಂದು ಹೆಸರಾಗಿವೆ.

"ಕುಮಾರಾನ್ವೇಷಣವೆಂಬ 9ನೆಯ ಸರ್ಗದಲ್ಲಿ, ಸಿದ್ಧಾರ್ಥನನ್ನು ಮನೆಗೆ ಮರಳಿಸಲು ಶುದ್ಧೋಧನನ ಕಡೆಯಿಂದ ಬಂದ ಗುಂಪಿನ ಮುಖ್ಯಸ್ಥನಾದ ಪುರೋಹಿತನು ಶುದ್ಧೋಧನನ ಮಾತುಗಳೆಂದು ಹೇಳುವ ಈ ನುಡಿಯಲ್ಲಿ ಅವನ ಹೃದಯದ ನೋವು ಘನೀಭೂತವಾಗಿದೆ.

ಮೇಘಾಂಬುಕಕ್ಷಾದ್ರಿಷು ಯಾಹಿವೃತ್ತಿಃ ಸಮೀಕರಣಾರ್ಕಾಗ್ನಿಮಹಾಶನೀನಾಮ್
ತಾಂ ವೃತ್ತಿಮಸ್ಮಾಸು ಕರೋತಿ ಶೋಕೋ ವಿಕರ್ಷಣೋಚ್ಛೋಷಣಾಹಭೇದ್ಯೈಃ[9–16]

ಗಾಳಿ ಮುಗಿಲನು ಸೂರ್ಯ ನೀರನು ಬೆಂಕಿ ಹುಲ್ಲನು ಸಿಡಿಲು ಗಿರಿಯನು
ಎಂತು ನಶಿಯಿಸುತಿರ್ಪುವು
ಚದುರಿಸೊಣಗಿಸಿ ಉರಿಸಿ ಭಿದ್ರಿಸಿ ಅಂತು ನನ್ನನು ನಶಿಸುತಿರ್ಪುದು
ನಿನ್ನನಗಲಿದ ಶೋಕವು

ಇಲ್ಲಿ ಗಾಳಿ, ಸೂರ್ಯ, ಬೆಂಕಿ ಇವುಗಳ ಕಾರ್ಯವನ್ನು ಬೇರೆಬೇರೆಯಾಗಿ ಹೇಳಿರುವುದರಿಂದ ಪ್ರಭಾವಪೂರ್ಣವಾಗಿದೆ.

ಇಡೀ ಊರು, ಅಂತಃಪುರ, ದುಗುಡದಲ್ಲಿ ಬೇಯುತ್ತಿದೆ. ಹಿಂತಿರುಗಿ ಬಾ ಎಂದು ಹೇಳುವ ಮಾತು ಒಂದು ಅದ್ಭುತ ರೂಪಕ.

ಬೆಂಕಿದುಗುಡವು ಸೌದೆ ವಿರಹವು ಸುಯ್ಲು ಧೂಮವು
ಮೋಹಸೋಜ್ವಲದುರಿಯು ತಾನೆನೆ ಒಮ್ಮೆಗೆ
ಹೊತ್ತಿಕೊಂಡಿದೆ ಪುರವುಮಂತಃಪುರವುಮೊಟ್ಟಿಗೆ ಜನವು
ಕಾದಿದೆ ನಿನ್ನ ದರ್ಶನವಾರಿಗೆ

ಶುದ್ಧೋಧನನ ಈ ಸಂದೇಹಕ್ಕೆ ಸಿದ್ಧಾರ್ಥನು ಕೊಡುವ ಉತ್ತರವೂ ಅಷ್ಟೇ ಸಮರ್ಥವೂ, ಸುಂದರವೂ ಆದ ರೂಪಕದಲ್ಲಿದೆ. ಎಸ್.ವಿ.ಪಿ. ಮೂಲದ ಮಾತುಗಳಿಗೆ ಅತ್ಯಂತ ಯುಕ್ತವಾದ ಕನ್ನಡ ರೂಪ ನೀಡಿದ್ದಾರೆ.

ಕಥಂನು ಮೋಹಾಯತನಂ ನೃಪತ್ವಂ ಕ್ಷಮಂ ಪ್ರಪತ್ತುಂ ವಿದುಷಾ ನರೇಣ ।
ಸೋದ್ವೇಗತಾ ಯತ್ರಮದಃಶ್ರಮಶ್ಚ ಪರಾಪಚಾರೇಣ ಚ ಧರ್ಮಪೀಡಾ॥

ಆಹ ಮೋಹಾಯತನ ಮಾಗಿಪ್ಪರಸುತನವನು ಬುಧರು
ಒಪ್ಪುವುದೆಂದು ಸಮ್ಮತವಪ್ಪುದು
ಶ್ರಮದ ಬೀಡದು ಮದದಗೂಡದು ಭಯದ ಕಾಡದು,
ಅಘದ ವೀಡದು ಸಲೆ ಅಧರ್ಮದ ಗೊತ್ತು

ಆಯತನ– ಎಂಬುದಕ್ಕೆ ಪರ್ಯಾಯವಾಗಿ ಬೀಡು, ಗೂಡು, ಕಾಡು, ವೀಡು ಗೊತ್ತು ಎಂಬ ಐದು ಪರ್ಯಾಯಗಳನ್ನು ಬಳಸಿದ್ದಾರೆ.

ಸಂಸಾರತ್ಯಾಗ ಮಾಡಿ ಸಂನ್ಯಾಸಿವೇಷದಲ್ಲಿ ಕಾಡಿಗೆ ನಡೆದಿರುವ ಸಿದ್ಧಾರ್ಥನಿಗೆ ಶ್ರೇಣಿಕ ಮಹಾರಾಜನು ಯೌವನದಲಿ ಸುಖ ಅನುಭವಿಸು ಮುಪ್ಪು ಬಂದಾಗ ಧರ್ಮವನ್ನು ಸಾಧಿಸು ಎಂದು ಬುದ್ಧಿ ಹೇಳಿದಾಗ –

ಅವನ ಪ್ರತಿಜ್ಞೆಯ ದೃಢತೆಯೂ ಅಷ್ಟೇ ಮನೋಜ್ಞವಾಗಿ ವ್ಯಕ್ತವಾಗಿದೆ.

ರವಿಯೆ ಭೂಮಿಗೆ ಕಳಚಿ ಬಿದ್ದರು ತನ್ನ ದೃಢತೆಯ ಕಳೆದುಕೊಂಡರು
ಆ ಹಿಮಾಲಯ ಪರ್ವತ
ಬೋಧವಾಗದೆ ವಿಷಯ ಸುಖಮುಖನಾಗಿ ಬಾರೆನು ಆವನೊಬ್ಬನ
ಹಾಗೆ ಮರಳೆನು ನಿಶ್ಚಿತ

ಬಿಂಬಸಾರನ ಮಾತಿಗೆ ಸಿದ್ಧಾರ್ಥ ನೀಡುವ ಉತ್ತರ ಅಷ್ಟೇ ಚುರುಕೂ ಸಮರ್ಥವೂ ಆಗಿದೆ.

ಸಮುದ್ರ ವಸ್ತ್ರಾಮಪಿಗ್ರಾಮವಾಪ್ಯಪಾರಂ ಜಿಗೀಷಂತಿ ಮಹಾರ್ಣವಸ್ಯ ।
ಲೋಕಸ್ಯ ಕಾಮೈರ್ನ ವಿತೃಪ್ತಿರಸ್ತಿ ಪತದ್ಭಿರಂಭೋಭಿರಿವಾರ್ಣವಸ್ಯ [11–12]

ಇದನ್ನು ಅಷ್ಟೇ ಸೊಗಸಾಗಿ ಅರ್ಥಪೂರ್ಣ ರೂಪಕಗಳಲ್ಲಿ ಅನುವಾದಿಸಿದ್ದಾರೆ.

ಸಾಗರಾಂಬರೆ ಧರೆಯ ಗೆಲ್ದರು ಸಾಗರೋತ್ತರೆ
ಧರೆಯ ಆಸೆಯುಂಟೀ ಜನರಿಗೆ
ವಿಷಯ ಭೋಗವನೆಷ್ಟು ಸವಿದರು ತೃಷ್ಣೆಯಾರದು
ಎಷ್ಟು ನೀರೀಂಟಿದರು ತೃಪ್ತಿಯೆ ಕಡಲಿಗೆ

'ಸಾಗರೋತ್ತರೆ' ಎಂಬ ಮಾತು ಮೂಲದಲ್ಲಿಲ್ಲದಿದ್ದರೂ, 'ಸಾಗರಾಂಬರೆಗೆ' ಸಮಪ್ರಾಸವಾಗಿ, ಸಮತೂಕವಾಗಿ ಬಂದು ಸೊಗಸಿನ ಹೆಚ್ಚಳಕ್ಕೆ ಕಾರಣವಾಗಿದೆ. ಗೌತಮನು ಬೋಧಿವೃಕ್ಷದಡಿಯಲ್ಲಿ ತಪಸ್ಸಿಗೆ ಕುಳಿತಾಗ ಅವನ ಮೇಲೆ ಮಾರ ಮತ್ತು ಅವನ ಗಣ ವಿಧವಿಧವಾಗಿ ಆಕ್ರಮಣಮಾಡುತ್ತಿದ್ದಾಗ, ಅವನು ತೋರುವ ಸಾಮರ್ಥ್ಯ ದೃಢತೆಗಳು ಅಸದೃಶ.

ಅಂಥ ಬೊಬ್ಬಾಟವನು ಜೀವಲೋಕವು ಅಂತು
ಕೇಳ್ದು ನಡನಡ ನಡುಗಿ ತಲ್ಲಣಿಸಿತು
ಕಾಗೆ ಕಾಕಾ ಎನಲು ಗರುಡ ಬೆವರುವನೇನು
ಗರುಡನೊಲು ಧೀರ ಮುನಿಕುಳಿತಿರ್ದನು [13–54]

ಸಿದ್ಧಾರ್ಥನು ದಿವ್ಯಜ್ಞಾನ ಪಡೆದು ಬುದ್ಧನಾದದ್ದನ್ನು ಈ ದ್ವಿಪದಿಯಲ್ಲಿ ಚುಟುಕಾಗಿ ಹೇಳಿದೆ: ಅದರಲ್ಲಿ ಶಬ್ದ ಚಮತ್ಕಾರವಿದೆ. ಭಟ್ಟರ ಅನುವಾದದಲ್ಲೂ ಶಬ್ದಚಮತ್ಕಾರ ಉಳಿದು ಬಂದಿದೆ. ಅಷ್ಟೇ ಅಲ್ಲ ಯಮಕಾಲಂಕಾರವನ್ನೂ ಸಾಧಿಸಲಾಗಿದೆ.

ದ್ವಿತೀಯೇ ತ್ವಾಗತೇ ಯಾಮೇ ಸೋಽದ್ವಿತೀಯ ಪರಾಕ್ರಮಃ ।
ದಿವ್ಯಂ ಲೇಭೇ ಪರಂ ಚಕ್ಷುಃ ಸರ್ವಚಕ್ಷುಷ್ಮತಾಂ ವರಃ ॥

ಆ ದ್ವಿತೀಯ ಯಾಮದೊಳು ದಿವ್ಯಚಕ್ಷುವನಾಂತನು
ಅದ್ವಿತೀಯನು ಚಕ್ಷುವಂತರಿಗೆಲ್ಲ ಮಿಗಿಲಾದನು..

4. ಸಂಸ್ಕೃತ ಮುಕ್ತಕ ಕಾವ್ಯಗಳು

ಎಸ್.ವಿ.ಪಿ. ಅವರು ಸಂಸ್ಕೃತದಿಂದ ಮಹಾಕಾವ್ಯ, ಖಂಡಕಾವ್ಯ, ನಾಟಕಗಳನ್ನೇ ಅಲ್ಲದೆ ಮುಕ್ತಕ ಕಾವ್ಯಗಳನ್ನು ಕೂಡ ಅನುವಾದಿಸಿದ್ದಾರೆ. ಅವುಗಳೆಂದರೆ, ಹಾಲನ **ಗಾಥಾ ಸಪ್ತಶತಿ,** ಅಮರುಕ ಕವಿಯ **ಅಮರು ಶತಕ,** ಭರ್ತೃಹರಿಯ **ಶತಕತ್ರಯ** ಮತ್ತು ಕಲ್ಯ ಲಕ್ಷ್ಮೀನರಸಿಂಹ ಕವಿಯ **'ಕವಿ ಕೌಮುದಿ'**

ಇವುಗಳಲ್ಲಿ **'ಗಾಥಾ ಸಪ್ತಶತಿ'** ಮತ್ತು **'ಅಮರು ಶತಕ'** ಇವೆರಡೂ ಪ್ರೇಮ ಗೀತೆಗಳ ಮುಕ್ತಕ ಸಂಕಲನಗಳು.

14. ಕನ್ನಡ 'ಗಾಥಾ ಸಪ್ತಶತಿ'

ಅದರ ಹೆಸರೇ ಸೂಚಿಸುವಂತೆ ಏಳು ನೂರು ಮುಕ್ತಕಗಳ ಸಂಕಲನ. ಇದರ ಕರ್ತೃ ಸಾತವಾಹನ ಅಥವಾ ಹಾಲ. ಇವನೊಬ್ಬ ದೊರೆ. ಕುಂತಲೇಶ್ವರದ ಅಧಿಪತಿ, ಪ್ರತಿಷ್ಠಾನಪುರದ ಅರಸು ಎಂದು ಹೆಸರಾದವನು. ಈತನ ಕಾಲ ಖಚಿತವಿಲ್ಲ. ಪೌರಾಣಿಕ ವಂಶಾವಳಿ ಪ್ರಕಾರ ಕ್ರಿ.ಶ. 1 ಅಥವಾ 2ನೇ ಶತಮಾನ. ಅಂದರೆ ಇಂದಿಗೆ ಈ ಕೃತಿ ರಚಿತವಾಗಿ ಸುಮಾರು ಎರಡು ಸಾವಿರ ವರ್ಷಗಳಾಗಿವೆ. ಪ್ರಾಕೃತ ಭಾಷೆಯ ಸಾಹಿತ್ಯದಲ್ಲಿ ಗಾಥಾ ಸಪ್ತಶತಿಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಇದು ಹಾಲನೊಬ್ಬನ ರಚನೆಯಾಗಿರದೆ, ಜನಪದರ ಹಾಗೂ ಅನೇಕ ಬೇರೆ ಬೇರೆ ಕವಿಗಳ ರಚನೆಗಳ ಸಂಕಲನ ಗ್ರಂಥ. ಹಾಲನು ಸ್ವತಃ ಕವಿ ಮತ್ತು ಅನೇಕ ಕವಿಗಳಿಗೆ ಆಶ್ರಯ ಕೊಟ್ಟಿದ್ದನು.

ಅವನ ಕಾಲದಲ್ಲಿ ಪ್ರಾಕೃತವೇ ಜನವ್ಯವಹಾರದ ಭಾಷೆಯಾಗಿದ್ದರಿಂದ ಅದರಲ್ಲೇ ಕವಿಗಳು ಕಾವ್ಯರಚಿಸುತ್ತಿದ್ದರು. 'ಗಾಥಾ ಸಪ್ತಶತಿ'ಯ ಮಹತ್ವವನ್ನು ಕೊಂಡಾಡುತ್ತ ಬಾಣ ಕವಿ ಹೇಳಿರುವ ಮಾತು

ಅವಿನಾಶಿನಮಗ್ರಾಮ್ಯಮಕರೋತ್ ಸಾತವಾಹನಃ
ವಿಶುದ್ಧ ಜಾತಿಭಿಃ ಕೋಶಂ ರತ್ನೈರಿವ ಸುಭಾಷಿತೈಃ

[ಶ್ರೇಷ್ಠವಾದ, ರತ್ನಗಳಂಥ ಸುಭಾಷಿತಗಳ ಅವಿನಾಶಿಯಾದ, ಗ್ರಾಮ್ಯವಲ್ಲದ ಕೋಶವನ್ನು ಸಾತವಾಹನನು ರಚಿಸಿದ್ದಾನೆ]

ಗಾಥಾ ಸಪ್ತಶತಿಯು "ಸಂಸ್ಕೃತ ಭಾಷೆಯ ವ್ಯಾಮೋಹವನ್ನು ತ್ಯಜಿಸಿ ಲೋಕ ಭಾಷೆಯ ಸೌಂದರ್ಯವನ್ನು ಅನುಭವಿಸಿ ಆ ಭಾಷೆಯಲ್ಲೇ ತಮ್ಮ ಭಾವನೆಗಳನ್ನು ಪ್ರಕಟಿಸಲು

ಪ್ರಯತ್ನ ಮಾಡಿದ ಯುಗದ ರಚನೆ."[30ಅ] ಕವಿಗಳಿಗೆ ಲೋಕಜೀವನದ ನೈಜ ಅನುಭವವಿದ್ದಿತು. ಜನಜೀವನವನ್ನು ತೆರೆದ ಕಣ್ಣುಗಳಿಂದ ಅವಲೋಕಿಸಿದ್ದ ಕಾರಣದಿಂದ ಜನಸಾಮಾನ್ಯರ, ಸುಖದುಃಖಗಳು, ರಾಗದ್ವೇಷಗಳು, ದಾಂಪತ್ಯದ ಸರಸ ವಿರಸಗಳು, ಶೃಂಗಾರ ವಿನೋದಗಳು, ಗ್ರಾಮೀಣ ಮಹಿಳೆಯರ ಪ್ರಣಯ ಚಾತುರ್ಯಗಳು ಇವುಗಳಿಗೆ ಅಭಿವ್ಯಕ್ತಿ ನೀಡಿದ್ದಾನೆ. 'ಭಾವ ಪ್ರಖರತೆ, ರಸಾರ್ದ್ರತೆ, ಧ್ವನಿ ಪ್ರಖರತೆಗೆ ಇವು ಹೆಸರಾಗಿವೆ.[31] ಇದಕ್ಕೆ ಹಿನ್ನೆಲೆಯಾಗಿರುವ ಗ್ರಾಮೀಣ ಪರಿಸರದ, ದೇವಾಲಯ, ಗದ್ದೆ, ತೋಟ, ಮನೆ, ಕೆರೆ ಇತ್ಯಾದಿಗಳ ಚಿತ್ರಗಳೂ ತಮ್ಮ ಸುಳುಹುದೋರಿವೆ.

'ಗಾಥಾ ಎನ್ನುವುದು ಪ್ರಾಕೃತದ ಜನಪ್ರಿಯ ಛಂದಸ್ಸು. ಎರಡು ಸಾಲಿನ ಇಂಥ ಗಾಥೆಗಳು ಏಳು ನೂರು ಇರುವ ಕಾರಣ ಇದು ಗಾಥಾಸಪ್ತಶತೀ. ಇದರ ಸಂಸ್ಕೃತ ಛಾಯೆಯನ್ನು ಆಧರಿಸಿ ಇವುಗಳನ್ನು ಅನುವಾದಿಸಲಾಗಿದೆ. ಕನ್ನಡದಲ್ಲಿ ಎಲ್ಲರಿಗಿಂತ ಮೊದಲು ದಿವಂಗತ ತೀನಂಶ್ರೀಯವರು "ತಮ್ಮ ಒಲುಮೆ" ಎಂಬ ಪ್ರೇಮಗೀತೆಗಳ ಸಂಕಲನದಲ್ಲಿ (1932) ಇದರ ಎಂಟು ಪದ್ಯಗಳನ್ನು ಸಾಂಗತ್ಯದ ಧಾಟಿಯಲ್ಲಿ ಸೊಗಸಾಗಿ ಅನುವಾದಿಸಿ ಪ್ರಕಟಿಸಿದರು. ಅದರ ಎರಡನೇ ಮುದ್ರಣದಲ್ಲಿ (1953) ಮತ್ತೆ ಹತ್ತು ಪದ್ಯಗಳನ್ನು ಅನುವಾದಿಸಿ ಕೂಡಿಸಿಕೊಟ್ಟರು. ಅನಂತರದಲ್ಲಿ ಶ್ರೀ ಮಂಜುನಾಥ ಭಟ್ಟರು ಇದರ ಮೊದಲ ಮುನ್ನೂರು ಪದ್ಯಗಳನ್ನು ಅನುವಾದಿಸಿ 'ಪ್ರೇಮ ಪೂಜೆ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ (1966).[32]

ಆದರೆ ಇಡೀ ಕೃತಿಯನ್ನು ಸಮಗ್ರವಾಗಿ 'ಸಾಂಗತ್ಯದ ಧಾಟಿ'ಯಲ್ಲಿ ಸೊಗಸಾಗಿ ಅನುವಾದಿಸಿರುವವರು ಪ್ರೊ.ಎಸ್.ವಿ.ಪಿ. ಮಾತ್ರ.

ಇವುಗಳ ಕಾವ್ಯ ಸೌಂದರ್ಯ, ರಸಸಂಪನ್ನತೆ ಧ್ವನಿಪ್ರಚುರತೆಗೆ ಮಾರುಹೋದ, ಆನಂದವರ್ಧನ, ಮಮ್ಮಟನೇ ಮೊದಲಾದ ಪ್ರಸಿದ್ಧ ಆಲಂಕಾರಿಕರು ತಮ್ಮ ಪ್ರಸಿದ್ಧವಾದ ಲಕ್ಷಣ ಗ್ರಂಥಗಳಲ್ಲಿ ಉತ್ತಮ ಉದಾಹರಣೆಗಾಗಿ ಈ ಕಾವ್ಯದ ಪದ್ಯಗಳನ್ನು ಎತ್ತಿಕೊಂಡಿರುವುದೇ ಇದರ ಶ್ರೇಷ್ಠತೆಗೆ ಸಾಕ್ಷಿ.

ನಲ್ಲ ನಲ್ಲೆಯರ ಸಂಸಾರದ ನವುರಾದ ಚಿತ್ರಗಳನ್ನು ಈ ಸರಳ ಮಾತುಗಳಲ್ಲಿ ತುಂಬ ಸುಂದರವಾಗಿ ಹಿಡಿದಿಟ್ಟಿರುವ ರೀತಿಗೆ

ಅಡಿಗೆಯ ಕೆಲಸದೆ ಮಸಿಯಾದ ಕೈಯಿಂದೆ
ಮುಖವನು ಸತಿ ಮುಟ್ಟಿಕೊಳ್ಳಲು
ಮಡದಿಯ ನೋಡುತ ಚಂದ್ರನಿಗೆಣೆಯಾದೆ
ಎಂದಿನಿಯನು ನಗುತಿಹನು

ಪ್ರಣಯ ಕಲಹದಲ್ಲಿ ಒಬ್ಬರ ಮೇಲೊಬ್ಬರು ಮುನಿಸಿಕೊಂಡಿರುವ ಗಂಡ ಹೆಂಡಿರ ಒಂದು ನವುರು ಸಂಭಾಷಣೆ ಹೀಗಿದೆ.

'ಕರುಣಿಸು ಕಾಂತೆಯೆ' 'ಕುಪಿತಳದಾವಳು'
'ನೀನು' 'ಮುನಿಸನ್ಯರೊಳೇಕೆ'
'ಅನ್ಯನದಾವನು' 'ನೀನು' 'ಹೇಗಿಹೆ ಹೇಳು'
'ಕರ್ಮವೆನ್ನದು' ಎಂದಳಾಕೆ

ತರುಣಿಯ ಚೆಲುವಿಗೆ ಮನಸೋತ ಹರೆಯದ ಪಥಿಕ, ಅಂತೇ ತರುಣ ಪಥಿಕನಿಗೆ ಮನಸೋತ ತರುಣಿ ಇವರಿಬ್ಬರ ಚಿತ್ರ ಹೀಗಿದೆ:

ಊರ್ಧ್ವಾಕ್ಷಃ ಪಿಬತಿ ಜಲಂ ಯಥಾಯಥಾ ವಿರಲಾಂಗುಲಿ ಪಥಿಕಃ ।
ಪ್ರಪಾಪಾಲಿಕಾಪಿ ತಥಾ ತಥಾ ಧಾರಾಂ ತನು ಕಾಮಪಿ ತನೂ ಕರೋತಿ ॥

(ಸಂಸ್ಕೃತ ಛಾಯೆ)

ಇದನ್ನು ಅಷ್ಟೇ ಚೆಲುವಾಗಿ ಅನುವಾದಿಸಿರುವ ಎಸ್.ವಿ.ಪಿ. ಅವರ ರಚನೆ:

ಎತ್ತಿ ಕಣ್ಣನು ಬೆರಳಗಲಿಸಿ ಪಥಿಕನು
ತಡೆ ತಡೆದೀಂಟುವನೆಂತು
ತೆಳ್ಳನೆ ಧಾರೆಯ ತೆಳುಗೈದು ಬಿಡುವಳು
ಅರವಟಿಗೆಯ ಬಾಲೆ ಉಂತು

ಇದೇ ಪದ್ಯವನ್ನು ತೀನಂಶ್ರೀ ಹೀಗೆ ಅನುವಾದಿಸಿದ್ದಾರೆ:

ಎತ್ತಿ ಕಣ್ಣನು ಬೆರಳಗಲಿಸಿ ದಾರಿಗ
ನೆಂತೆಂತು ನೀರೀಂಟುವನೊ ತಡೆದು
ಅರವಟ್ಟಿಗೆಯ ಬಾಲೆಯಂತಂತು ಬಿಡುವಳು
ಇನ್ನೂ ತೆಳ್ಳಗೆ ತೆಳುಧಾರೆಯನು

ತೀನಂಶ್ರೀಯವರ ಅನುವಾದ ಅಕ್ಷರಶಃ ಮೂಲದ್ದಾಗಿದ್ದರೆ ಎಸ್.ವಿ.ಪಿಯವರದು ಕಿಂಚಿನ್ಮಾತ್ರ ವ್ಯತ್ಯಸ್ತವಾಗಿದ್ದರೂ, ತೀನಂಶ್ರೀಯವರದಕ್ಕಿಂತ ಹೆಚ್ಚು ಕಾವ್ಯಾತ್ಮಕವಾಗಿದ್ದು ಚೆಲುವಾಗಿದೆ.

ಗ್ರಾಮೀಣ ತರುಣನೊಬ್ಬ ಹೂವಾಡಗಿತ್ತಿಯ ತೋಳ ಚೆಲುವಿಗೆ ಮನಸೋತು ಮತ್ತೆ ಮತ್ತೆ ಅಲ್ಲಿಯೇ ಸುಳಿದಾಡುತ್ತಿದ್ದ ಚಿತ್ರ ಹೀಗಿದೆ:

ಹೂವಾಡಗಿತ್ತಿಯ ನಳಿತೋಳ ಚೆಲುವನು
ತರುಣ ನೋಡುವ ಚಪಲದೊಳು
ಹೂವಿನ ಬೆಲೆಯನು ಕೇಳುವ ನೆಪದೊಳು
ಮತ್ತೆ ಅಲ್ಲಿಯೆ ಸುಳಿಯುವನು.

ಪ್ರವಾಸದಲ್ಲಿರುವ ಪತಿಯು ಪತ್ನಿಯೊಬ್ಬಳು, ತಮ್ಮ ಮನೆಯಲ್ಲಿ ಆಶ್ರಯ ಪಡೆದುಕೊಂಡಿರುವ ಪಾಂಥನ ಕೋರಿಕೆಯನ್ನು ಪರೋಕ್ಷವಾಗಿ ಅಂಗೀಕರಿಸುವ, ಆದರೆ ಪ್ರತ್ಯಕ್ಷದಲ್ಲಿ ಬೇಡ ಎನ್ನುವ ಭಂಗಿಯಿಂದ ಹೀಗೆ ಹೇಳುತ್ತಿದ್ದಾಳೆ:

ಅತ್ತಾವತ್ಥಣಿ ಮಜ್ಜಏವತ್ಥ ಅಹಂ ದಿಅಸಹಂ ಪಲೋ ಏಹಿ ।
ಮಾಪಹಿ ಅರತ್ತಿ ಅಂಧ ಅಸೆಜ್ಜಾವ ಮಹಣಮಜ್ಜಹಿಸಿ ॥

ಅತ್ತೆ ಮಲಗುವರಿಲ್ಲಿ ನಾನು ಮಲಗುವೆನಿಲ್ಲಿ
ಉಳಿದೆಲ್ಲ ಸೇವಕರಿಲ್ಲಿ
ಪಥಿಕನೆ ಕಾಣದೆ ಕಣ್ಣು ನಿನಗಿರುರೊಳು
ಕೆಡೆಯದಿರೆನ್ನ ಸೆಜ್ಜೆಯೊಳು

ಆನಂದವರ್ಧನನು ಇದನ್ನು ತನ್ನ ಧ್ವನ್ಯಾಲೋಕದಲ್ಲಿ 'ಪ್ರತೀಯ ಮಾನ'ಕ್ಕೆ ಉದಾಹರಣೆಯಾಗಿ ಉಲ್ಲೇಖಿಸಿದ್ದಾನೆ. ಅಂದರೆ ತಾನು ಮಲಗುವ ಜಾಗ ಇಂಥದು ಎಂಬುದನ್ನು ಅವನಿಗೆ ದೃಢಪಡಿಸುವ ರೀತಿ ಇದು.

ಪಶ್ಯ ನಿಶ್ಚಲ ನಿಷ್ಪಂದಾ ಬಿಸಿನೀ ಪತ್ರೇ ರಾಜತೇ ಬಲಾಕಾ ।
ನಿರ್ಮಲ ಮರಕತ ಭಾಜನಪರಿಸ್ಥಿತಾ ಶಂಖಶುಕ್ತಿರಿವಾ ॥

ತಾವರೆ ಎಲೆಯ ಮೇಲಿಹುದದೋ ಬೆಳ್ಳಕ್ಕಿ
ಅಲುಗದಲ್ಲಾಡದೆ ಉಂತೆ
ತೊಳೆದೊಂದು ಪಚ್ಚೆಯ ತಟ್ಟೆಯ ಮೇಲಿಟ್ಟ
ಶಂಖದ ಚಿಪ್ಪೆನುವಂತೆ

ಪ್ರಶಾಂತವಾದ ವಾತಾವರಣದಲ್ಲಿ ತಾವರೆ ಎಲೆಯ ಮೇಲಿರುವ ನಿಶ್ಚಲ ಸ್ಥಿತಿಯಲ್ಲಿರುವ ಬಲಾಕಾ ಪಕ್ಷಿಗೆ ಕೊಟ್ಟಿರುವ ಉಪಮೆ ಕೂಡಾ ಸೊಗಸಾಗಿದೆ.

ಹಾಗೆಯೇ ಪಾಡ್ಯದ ಸಂಜೆಯಲ್ಲುದಿಸಿದ ಚಂದ್ರನಿಗೆ ಹೋಲಿಕೆ ಚೆಂಗಾವಿ ರವಿಕೆಯ ತೊಟ್ಟ ನವವಧುವಿನ ಮೊಲೆಯಲ್ಲಿ ಮೂಡಿದ ಉಗುರೊತ್ತಿನ ಹಾಗೆ

ಸಂಜೆಯ ಕೆಂಜಾಯೆ ಮುಸುಕಿದ ಬಾನೊಳು
ಮೆರೆವನು ಪಾಡಿವದಿಂದು
ಚೆಂಗಾವಿ ರವಿಕೆಯ ತೊಟ್ಟ ನವವಧುವೊಳು
ಮೊಲೆಯೊಳಾದುಗುರೊತ್ತಿನಂತೆ

ಗಾಥಾಸಪ್ತಶತಿಯಲ್ಲಿ ಲೋಕನೀತಿಯ ಗಾಹೆಗಳೂ ಇವೆ.

ಸೋಥೋರ್ಽ ಯೋ ಹಸ್ತೇ ತನ್ಮಿತ್ರಯನ್ನಿರಂತರಂ ವಸನೇ ।
ತದ್ರೂಪಂ ಯತ್ರ ಗುಣಾಸ್ತದ್ವಿಜ್ಞಾನಂ ಯತ್ರಧರ್ಮಃ ॥

ಆಪತ್ತಿಗಾದವನಾತನೆ ಬಂಧುವು
ಕೈಯೊಳಗಿರುವುದೆ ಹಣವು
ಧರ್ಮದಿಂದದೊಡಗೂಡಿದರಿವೆ ವಿಜ್ಞಾನವು
ಗುಣವಿರುವಾತನೆ ಚೆಲುವು

–ಇದು ಮೂಲಕ್ಕೆ ತಕ್ಕ ಚುರುಕಾದ ಸಂಕ್ಷಿಪ್ತ ಅನುವಾದ.

ಮನುಷ್ಯ ಸ್ವಭಾವದ ವಿವಿಧ ಬಗೆಗಳು, ಬದುಕಿನ ನೂರೆಂಟು ಚಿತ್ರಗಳು ಹೀಗೆ ತಮ್ಮೆಲ್ಲ ರಾಗಚ್ಛಾಯೆಗಳೊಂದಿಗೆ ಒಡಮೂಡಿರುವ ಪ್ರಾಕೃತ ಗಾಥಾ ಸಪ್ತಶತಿಯ ಈ ಕನ್ನಡ ಸಾಂಗತ್ಯ ರೂಪಗಳು ತುಂಬ ಚೆಲುವಾಗಿವೆ. ದ್ವಿತೀಯಾಕ್ಷರ ಪ್ರಾಸವನ್ನು ಬಿಟ್ಟುಕೊಟ್ಟಿರುವ ಈ ಸಾಂಗತ್ಯಗಳು ಲಕ್ಷಣ ಬದ್ಧವಾದ ಸಾಂಗತ್ಯಗಳೇ. ಎಲ್ಲೋ ಅಲ್ಲೊಂದು ಇಲ್ಲೊಂದು ಸಾಂಗತ್ಯಗಳಲ್ಲಿ ವಿಷ್ಣು ಗಣಗಳ ಬದಲಿಗೆ ಬ್ರಹ್ಮಗಣ ರುದ್ರಗಣಗಳು ಬರುವುದುಂಟು. ಅದಕ್ಕಾಗಿಯೇ ಅವರು ಇವನ್ನು ಸಾಂಗತ್ಯವೆಂದು ಹೇಳದೆ ಸಾಂಗತ್ಯದ ಧಾಟಿ ಎಂದು ಹೇಳಿದ್ದಾರೆ. ಏಳು ನೂರು ಸಾಂಗತ್ಯಗಳಲ್ಲಿ ಬೆರಳೆಣಿಕೆಯ ಸಾಂಗತ್ಯಗಳಲ್ಲಿ ಮೂಲದ ಸಂಸ್ಕೃತ ಸಮಾಸಭೂಯಿಷ್ಠ ಶಬ್ದಗಳು ಹಾಗೆಯೇ ಉಳಿದು ಹೋಗಿವೆ.

1. **ಹೇಲಾಕರಾಕೃಷ್ಟ ಜಲರಿಕ್ತ ಸಾಗರ**
   ವನು ಸಲೆಹೊಳೆಯಿಸಿ ಮುದದೆ
   ಅವಿಹತ ಬಡಬಾಗ್ನಿ ಭರಿತಮಾದಂಬರ
   ವಿಹಗಣಪತಿ ಗೆಲ್ಗೆ ಭರದೆ –5–3

2. **ತಾನನುಮರಣ ಘನಾಲಿಂಗನ ಪ್ರಿಯ**
   ತಮ ಸುಖ ಸ್ವೇದಶೀತಾಂಗಿ
   ನಂದಿಪಳುಜ್ವಲಮಾದಂಥ ಬೆಂಕಿಯ
   ನಾಹಾಹ ಗೃಹಪತಿಯಣುಗಿ –5–7

15. ಕನ್ನಡ ಅಮರು ಶತಕ

ಅಮರುಕನ ಕಾಲ ಕ್ರಿ.ಶ. 7ನೇ ಶತಮಾನವಿರಬಹುದು ಎಂದು ಊಹಿಸಲಾಗಿದೆ. ಅತ್ಯಂತ ಮನೋಹರವಾದ ಅಮರುಕನ ಕಾವ್ಯಕ್ಕೆ ಸಂಸ್ಕೃತ ಕಾವ್ಯಗಳಲ್ಲಿ ಹಿರಿದಾದ ಸ್ಥಾನವಿದೆ. "ಅಮರುಕ ಕವೇರೇಕಃಶ್ಲೋಕಃಪ್ರಬಂಧಶತಾಯತೇ" (ಅಮರುಕನ ಒಂದು ಶ್ಲೋಕ ನೂರು ಪ್ರಬಂಧಕ್ಕೆ ಸಮ) ಎಂಬ ಪ್ರಶಂಸೆಗೆ ಅವನ ಕಾವ್ಯ ಭಾಜನವಾಗಿದೆ. ಆನಂದ ವರ್ಧನನಂಥ ಆಚಾರ್ಯನು ತನ್ನ ಧ್ವನ್ಯಾಲೋಕದಲ್ಲಿ- "ಮುಕ್ತಕೇಷು ಪ್ರಬಂಧೇಷ್ವಿವ ರಸಬಂಧಾಭಿನಿವೇಶಿನಃಕವಯೋ ದೃಶ್ಯಂತೇ, ತಥಾ ಅಮರುಕಸ್ಯಾ ಕವೇಃ ಮುಕ್ತಾಕಾಃ ಶೃಂಗಾರರಸಂಸ್ಯಂದಿನಃ ಪ್ರಬಂಧಾಯಮಾಣಾಃ ಪ್ರಸಿದ್ಧಾ ಏವ" ಎಂದು ಹೇಳಿದ್ದಾನೆ.

ಅಂದರೆ, "ಶೃಂಗಾರ ರಸಸ್ಯಂದಿಯಾದ ಅಮರುಕನ ಮುಕ್ತಕಗಳು ಪ್ರಬಂಧಗಳಂತಿರುವುದು ಪ್ರಸಿದ್ಧವಾಗಿಯೇ ಇದೆ" ಎಂಬ ಆನಂದವರ್ಧನನ ಅಭಿಪ್ರಾಯ ಯಥಾರ್ಥವಾದ್ದು ಎನ್ನುವುದು ಅವನ ಮುಕ್ತಕಗಳನ್ನೋದಿದಾಗ ತಿಳಿದುಬರುತ್ತದೆ. ಪ್ರೇಮದ ಜೀವಂತವಾದ ಚಿತ್ರಣಗಳನ್ನು ನೀಡುವುದರಲ್ಲಿ ಅವನು ಸಿದ್ಧಹಸ್ತ. ಇವು ಒಂದೊಂದೂ ಪ್ರಣಯ ಪೀಡಿತರ ಒಂದೊಂದು ಪ್ರಣಯ ಸಂದರ್ಭದ ಭಾವ ಮುಕ್ತಕಗಳು. "ಶುದ್ಧವಾದ ಭಾವಗೀತೆಯಲ್ಲಿ ಕಾಣಬರುವ ಗುಣವಿಶೇಷಗಳೆಲ್ಲ ಈ ಅಮರುಕವಿಯ ಪದ್ಯಗಳಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಂಡಿವೆ" ಎಂಬ ಎಸ್.ವಿ. ಪರಮೇಶ್ವರಭಟ್ಟರ ಮಾತುಗಳು ಉತ್ಪ್ರೇಕ್ಷೆಯವಲ್ಲ.[33] ಡಾ॥ ಕೆ.ಕೃಷ್ಣಮೂರ್ತಿಯವರು ಅಭಿಪ್ರಾಯ ಪಟ್ಟಿರುವಂತೆ "ಪ್ರಣಯ ಪ್ರಪಂಚದ ಅನೇಕಾನೇಕ ಆಕಾರ-ಪ್ರಕಾರಗಳು, ಆಶೆ-ನಿರಾಶೆಗಳು, ವಿರಹ-ವಿಕಲ್ಪಗಳು, ಕೋಪ-ತಾಪಗಳು, ಆನಂದ-ಉನ್ಮಾದಗಳು ಇಲ್ಲಿ ಒಂದೊಂದು ಶ್ಲೋಕದಲ್ಲಿ ಒಂದೊಂದು ಹೊಸರೀತಿಯಿಂದ ಅಭಿವ್ಯಕ್ತಿಯನ್ನು ಪಡೆದಿವೆ."[34] ಬಿಂದುವಿನಲ್ಲಿ ಸಿಂಧುವನ್ನು ತುಂಬುವ ಹಾಗೆ ಸಣ್ಣ ಕವಿತೆಯಲ್ಲಿ ಅರ್ಥಸಂಪತ್ತು ತುಂಬಿದ್ದಾನೆ. "ಇಲ್ಲಿಯ ಶೃಂಗಾರ ಪ್ರಪಂಚ, ಗಾಥಾ ಸಪ್ತಶತಿಯಂತೆ ಗ್ರಾಮೀಣ ಜನರದ್ದಲ್ಲ. ಭರ್ತೃಹರಿಯ ಶೃಂಗಾರ ಶತಕದಂತೆ ಸಾಮಾನ್ಯ ಜನತೆಯದೂ ಅಲ್ಲ. ನಗರದ ಅಂತಃಪುರಗಳಲ್ಲೂ, ವಿಲಾಸಭವನಗಳಲ್ಲೂ ರಸಿಕತೆಯನ್ನೊಂದು ಕತೆಯಾಗಿ ಬಳಸಿದ್ದ ನಾಗರೀಕರದು..... ಕಾಮತಂತ್ರ ನಿಪುಣರಾದ ನಾಯಕರು, ಮುಗ್ದೆಯರನ್ನೂ, ಪ್ರೌಢೆಯರನ್ನೂ ಒಲಿಸಿಕೊಳ್ಳುವ ವಿಧಾನ ವೈಚಿತ್ರಗಳೇ ಈ ಶತಕದ ವಸ್ತು."[35] ನಾಯಕ ನಾಯಕಿಯರ ನಾನಾ ಅವಸ್ಥೆಗಳಲ್ಲಿನ ವಿಭಿನ್ನ ಮನೋವೃತ್ತಿಗಳನ್ನು ಬಹುಸೂಕ್ಷ್ಮವಾಗಿ ಚಿತ್ರಿಸಿದ್ದಾನೆ.

1953ರಷ್ಟು ಹಿಂದೆಯೇ ಇದನ್ನು ತುಂಬ ಸೊಗಸಾಗಿ ಕನ್ನಡಕ್ಕೆ ತಂದ ಎಸ್.ವಿ.ಪಿ.ಯವರು ಇದಕ್ಕೊಂದು ಸುದೀರ್ಘವೂ, ಉದ್ಬೋಧಕವೂ ಆದೊಂದು ಪ್ರಸ್ತಾವನೆಯನ್ನು ಬರೆದಿದ್ದಾರೆ. ಅವರು ಅಭಿಪ್ರಾಯಪಟ್ಟಿರುವಂತೆ ಇದು ಪ್ರಣಯಿ ಜನರ ವಿವಿಧ ಬಗೆಯ ಮನೋ ವ್ಯಾಪಾರಗಳನ್ನು ಅತ್ಯಂತ ಸುಂದರವಾದ ಶಬ್ದಚಿತ್ರಗಳಲ್ಲಿ ಒಡಮೂಡಿಸಿರುವ ಅದ್ಭುತ ಚಿತ್ರಶಾಲೆ. ಇಲ್ಲಿಯ ಒಂದೊಂದೂ ಪದ್ಯಕ್ಕೆ ಕೊಟ್ಟಿರುವ ಶೀರ್ಷಿಕೆಗಳೇ ಸಾಕು. ಅದರ ವೈವಿಧ್ಯವನ್ನು ಸೂಚಿಸಲು, -ಅಭಿಸಾರಿಕೆ, ಮುಗ್ಧೆ, ದೀನೆ, ಕಲಹಾಂತರಿತೆ, ವಿರಹಾರ್ತೆ, ವಿರಹೋತ್ಕಂಠಿತೆ, ಪ್ರೋಷಿತ ಭರ್ತೃಕೆ, ರತಿಕಾತರೆ, ಮಾನವಿಹ್ವಲೆ, ಉತ್ಸುಕೆ ಇತ್ಯಾದಿ. ಇವೆಲ್ಲ ಈ ಪದ್ಯಗಳ ನಾಯಿಕೆಯರ ಸ್ವಭಾವ ಮತ್ತು ವ್ಯಕ್ತಿತ್ವ ಸೂಚಿಗಳಾದರೆ, ನಾಯಕನು ಸಾಮಾನ್ಯವಾಗಿ ಶಠನೋ, ಧೃಷ್ಟನೋ ಅನುಕೂಲನೋ ಆಗಿರುತ್ತಾನೆ. ಇಲ್ಲಿರುವ ಒಂದೊಂದು

ಪದ್ಯಕ್ಕೂ ಒಂದು ಚೌಕಟ್ಟು, ಒಂದು ಹಿನ್ನೆಲೆಯನ್ನು ಕಲ್ಪಿಸಿಕೊಳ್ಳಬೇಕು. ಆಗ ಮಾತ್ರ ಅವುಗಳ ಸ್ವಾರಸ್ಯವನ್ನು ಸಂಪೂರ್ಣವಾಗಿ ಸವಿಯಲು ಸಾಧ್ಯ. ಸಾಮಾನ್ಯವಾಗಿ ನಮ್ಮಲ್ಲಿ ಮಹಾಕಾವ್ಯ, ನಾಟಕಗಳ ಅಂಗವಾಗಿ ನಾಯಕ, ನಾಯಕಿಯರ ಶೃಂಗಾರ ಚಿತ್ರಿತವಾಗಿರುವುದಕ್ಕಿಂತ ತೀರ ಬೇರೆಯದೇ ಆದ ರೀತಿಯಲ್ಲಿ, ತುಂಬ ನವುರಾಗಿ, ಆಪ್ತವಾಗಿ ಕಥೆಯ ಹಂಗಿಲ್ಲದೆ ಎಲ್ಲಿ, ಯಾವಾಗ ಬೇಕೆಂದರೆ ಆಗ, ಓದಿ ನಲಿಯಬಹುದಾದ ರೀತಿಯಲ್ಲಿ ಚಿತ್ರಿತವಾಗಿರುವ ಇಲ್ಲಿಯ ಪದ್ಯಗಳು ನಮ್ಮ ಮನಸ್ಸನ್ನು ಆವರಿಸಿಕೊಂಡು, ಹೃದಯವನ್ನು ಆರ್ದ್ರಗೊಳಿಸುವುದನ್ನು ಸಾಹಿತ್ಯದ ಓದುಗರೆಲ್ಲರೂ ಕಂಡುಕೊಳ್ಳಬಹುದು. ಇಂಥ ಕೆಲವು ಚಿತ್ರಗಳನ್ನು ಅಮರುಕನು ಚಿತ್ರಿಸಿರುವ ರೀತಿಯನ್ನು ಕನ್ನಡದಲ್ಲಿ ಎಸ್.ವಿ.ಪಿ.ಯವರು ಪ್ರಸ್ತುತ ಪಡಿಸುವ ಬಗೆಯನ್ನು ನೋಡಬಹುದು.

ನಲ್ಲನ ಅಗಲಿಕೆಯನ್ನು ನೆನೆದು ಕೃಶವಾದ ಕೈಗಳಿಂದ ಅವಳ ಸಖಿಯರೆನಿಸಿದ ಬಳೆಗಳು ಜಾರಿ ಉರುಳಿವೆ. ಕಂಬನಿಗಳಾದರೋ ಎಡಬಿಡದೆ ಸುರಿಯುತ್ತಿವೆ. ಅವಳ ಜೊತೆಯಿರಬೇಕಾದ ಧೈರ್ಯ ಸಖಿಯೂ ಆ ಕ್ಷಣವೇ ಹೊರಟು ಬಿಟ್ಟಿದ್ದಾಳೆ. ಹೋಗಲಿ ಮನಸ್ಸಾಗಲಿ ಜೊತೆಯಿರುವುದೆ ಎಂದರೆ, ಅದು ಮುಂದೆ ಸಾಗಲು ನಿಶ್ಚಯಿಸಿದೆ. ಹೀಗೆ ಪ್ರಿಯನು ಪ್ರಯಾಣ ಹೊರಟಿರುವಾಗ, ಅವಳ ಸಖಿಯರೆಲ್ಲರೂ ಪ್ರಯಾಣ ಹೊರಟಿದ್ದಾರೆ. ಅವರ ಜೊತೆಯೇ ತೆರಳಬೇಕಾಗಿರುವ ಹೇ ಪ್ರಾಣವೇ, ನೀನು ಮಾತ್ರ, ನಿನ್ನ ಪ್ರಾಣ ಮಿತ್ರರ ಸಂಗ ತೊರೆದು ನನ್ನೊಂದಿಗೆ ನೀನು ಉಳಿಯಬಹುದೆ ಎಂದು ಕೇಳುವ ವಿರಹಾರ್ತೆಯ ಸ್ಥಿತಿಯನ್ನು ಮುಂದಿಟ್ಟಿದ್ದಾನೆ.

ಮೂಲ: ಪ್ರಸ್ಥಾನಂ ವಲಯೈಃಕೃತಂ ಪ್ರಿಯಸಖೈರಸ್ರೈರಜಸ್ರಂ ಗತಂ
ಧೃತ್ಯಾ ನ ಕ್ಷಣ ಮಾಸಿತಂ ವ್ಯವಸಿತಂ ಚಿತ್ತೇನ ಗಂತುಂ ಪುರಃ(।)
ಯಾತುಂ ನಿಶ್ಚಿತ ಚೇತಸಿ ಪ್ರಿಯತಮೇ ಸರ್ವೇಸಮಂ ಪ್ರಸ್ಥಿತಾಃ
ಗಂತವ್ಯೇ ಸತಿ ಜೀವಿತ ಪ್ರಿಯಸುಹೃತ್ ಸಾರ್ಥಃ ಕಿಮು ತ್ಯಜ್ಯತೇ (॥)

ಡಾ॥ ಕೆ.ಕೃಷ್ಣಮೂರ್ತಿ ಅವರು ಇದನ್ನು ಹೀಗೆ ಅನುವಾದಿಸಿದ್ದಾರೆ:

ಬಳೆಗಳ್ ಪೋದುವು ನೆಚ್ಚಿನಾ ಸಖರೆನಲ್ ಕಣ್ಣೀರ್ಗಳೋಡಲ್ಕೆ ಮೇಣ್
ಚಣಮುಂ ನಿಲ್ಲದು ಧೈರ್ಯಮಂತೆ ಮನಮುಂ ಮುಂದಾದುದಿಂತಕ್ಕಟಾ
ಪ್ರಿಯನೀಗಳ್ ಪೊರಮಟ್ಟಿರಲ್ ಜತೆಗೆ ತಾಮೆಲ್ಲರ್ ಪ್ರಯಾಣೋನ್ಮುಖರ್
ಮಿಗೆ ನೀಂ ಪ್ರಾಣನೆ ಪೋಗದಿಂತುಳಿವರೇ ಸ್ವಾಪ್ತೇಷ್ಟರಂ ಬಿಟ್ಟಹಾ॥

ಕಾವ್ಯ ಪ್ರಕಾಶಕ್ಕಾಗಿ 1956 ರಲ್ಲಿ ಮಾಡಿದ ಈ ಅನುವಾದಕ್ಕಿಂತ 1953ರಷ್ಟು ಹಿಂದೆಯೇ ಎಸ್.ವಿ.ಪಿ.ಯವರು ಮಾಡಿರುವ ಈ ಅನುವಾದ ತುಂಬ ಲಲಿತವಾಗಿದ್ದು ಚೆಲುವಾಗಿರುವುದನ್ನು ಯಾರು ಬೇಕಾದರೂ ಕಂಡುಕೊಳ್ಳಬಹುದು:

ಪಯಣಗೈದವು ಬಳೆಗಳೆಡವಿಡದುದುರಿದವು ಕಂ
ಬನಿಗಳೊಲುಮೆಯ ಸಖಿಯರು
ಕ್ಷಣವುಮಿರದಿಹುದಿಂದು ಧೃತಿಯು, ಮುಂದೆ ನಡೆಯಲು
ಮನವು ನಿಶ್ಚಯಿಸಿರುವುದು
ಇಂತು ನಿಶ್ಚಿತಮನನು ನಲ್ಲನು ತೆರಳುವಂದವ–
ನೊಡನೆ ಹೊರಟಿಹರೆಲ್ಲರು
ತೆರಳಬೇಕಾಗಿರುವ ಜೀವವೆ? ಒಲುಮೆಗೆಳೆಯರ
ಗುಂಪನೇತಕೆ ತೊರೆಯುವೆ!

'ಪ್ರಸ್ಥಾನ' ಎಂಬುದಕ್ಕೆ 'ಪೋದುವು" ಎಂಬುದಕ್ಕಿಂತ 'ಪಯಣಗೈದವು' ಎಂಬುದು ಹೆಚ್ಚು ಸೂಕ್ತ., ಹಾಗೆಯೇ 'ಕಣ್ಣೀರು' ಓಡುವುದಿಲ್ಲ, ಉದುರುತ್ತವೆ. 'ಪ್ರಿಯಸುಹೃತ್' ಎಂಬ ಮೂಲ ಶಬ್ದಕ್ಕೂ, 'ಒಲುಮೆ ಗೆಳೆಯರು' ಯುಕ್ತ.

ಔತ್ಸುಕ್ಯ, ಹರ್ಷ, ಲಜ್ಜೆ, ಮುನಿಸು, ಪ್ರೀತಿ ಮೊದಲಾದ ಅನೇಕ ಸಂಚಾರಿ ಭಾವಗಳ ಹೆಣ್ಣಿನ ಸಂಕೀರ್ಣ ಚಿತ್ರ ಈ ಪದ್ಯದಲ್ಲಿದೆ.

ದೂರಾದುತ್ಸುಕಮಾಗತೇ ವಿವಲಿತಂ ಸಂಭಾಷಿಣಿ ಸ್ಫಾರಿತಂ
ಸಂಶ್ಲಿಷ್ಯತ್ಯರುಣಂ ಗೃಹೀತವಸನೇ ಕಿಂಚಾಂಚಿತ ಭ್ರೂಲತಾಂ
ಮಾನಿನ್ಯಾಶ್ಚರಣಾನತಿವ್ಯತಿಕರೇ ಬಾಷ್ಪಾಂಬು ಪೂರ್ಣೇಕ್ಷಣಂ
ಚಕ್ಷುರ್ಜಾತಮಹೋ ಪ್ರಪಂಚ ಚತುರಂ ಜಾತಾಗಸಿ ಪ್ರೇಯಸಿ ॥

ದೂರದಿಂದೌತ್ಸುಕ್ಯಗೊಳ್ಳುತೆ ಬರಲು ತಿರುಗುತೆ
ಮಾತನಾಡಿಸಲರಳುತೆ
ತಬ್ಬಿಕೊಳ್ಳಲು ಕೆಂಪಗಾಗುತೆ ಬಟ್ಟೆ ಹಿಡಿಯಲು
ಮುನಿದು ಹುಬ್ಬನು ಬಿಗಿಯುತೆ
ಕಾಲಿಗೆರಗಿರುವ ಪದದೊಳು ಕಣ್ಣ ನೀರನು
ನೋಟದೊಳು ಸಲೆ ತುಂಬುತೆ
ಕಣ್ಗಳೆಸೆದವು ತಪ್ಪನೆಸಗಿದ ನಲ್ಲನೊಳು ಜಗ
ದಗಲ ಚತುರತೆಯಾನುತೆ

ಎಸ್.ವಿ.ಪಿ. ಅವರ ಈ ಅನುವಾದದ ಸೊಗಸು ಸ್ವಾರಸ್ಯಗಳು, ಕನ್ನಡ ನುಡಿಯ ಬಾಗು ಬಳುಕುಗಳು, ಲಾಲಿತ್ಯ ಮನವರಿಕೆಯಾಗುವುದು ಡಾ.ಕೆ. ಕೃಷ್ಣಮೂರ್ತಿಯವರ ಇದೇ ಪದ್ಯದ ಅನುವಾದದೊಂದಿಗೆ ಹೋಲಿಸಿದಾಗ.

ದೂರವಿರೆ ಕಾತರಿಸಿ, ಕೆಲಕೆ ಬರೆ ಬಾಗುತ್ತ ನುಡಿಯಿಸಲು ಹೊಳೆಯುತ್ತಲು
ಅಪ್ಪುವೆಡೆ ಕೆಂಪಾಗಿ ಸೀರೆಯನು ಪಿಡಿದೊಡನೆ ಭ್ರೂಲತೆಯನಿಳಿಸುತ್ತಲು
ಮಾನಿನಿಯ ಕಾಲ್ಗೆರಗೆ ಬಾಷ್ಪಾಂಬುವಿಂ ತುಂಬಿ ಕುಡಿನೋಟವಿನಿದಾದುದು
ತಪ್ಪುಗೈದಿರೆ ಪ್ರಿಯನು ಮತ್ತರಳಿತದೆ ಕಣ್ಣು ಪೇಳಲೇನಚ್ಚರಿಯನು

'ಸ್ಫಾರತೇ' ಎನ್ನುವ ಮೂಲ ಶಬ್ದಕ್ಕೆ ಎಸ್.ವಿ.ಪಿ 'ಅರಳುತೆ' ಎಂದು ಅನುವಾದಿಸಿದ್ದರೆ ಡಾ॥ ಕೃಷ್ಣಮೂರ್ತಿಗಳು 'ಹೊಳೆಯುತೆ' ಎಂದು ಅನುವಾದಿಸಿದ್ದಾರೆ. ಮೂಲದಲ್ಲಿಲ್ಲದ 'ಮುನಿದು' ಎಸ್.ವಿ.ಪಿ ಅವರ ಅನುವಾದದಲ್ಲಿದೆ. 'ಕಿಂಚ ಅಂಚಿತ ಭ್ರೂಲತಾಂ ಎಸ್.ವಿ.ಪಿ ಅವರಲ್ಲಿ 'ಹುಬ್ಬನು ಬಿಗಿಯುತೆ' – ಎಂದು ಇದ್ದರೆ ಕೃಷ್ಣಮೂರ್ತಿಯವರು 'ಇಳಿಸುತ್ತ' ಎಂದು ಮಾಡಿದ್ದಾರೆ. ಎಸ್.ವಿ.ಪಿ. 'ಕಣ್ಣನೀರನು ನೋಟದೊಳು ತುಂಬುತೆ' ಎಂದು ವಿಸ್ತರಿಸಿದ್ದರೂ, 'ಬಾಷ್ಪಾಂಬುವಿಂ" ಎಂಬುದಕ್ಕಿಂತ ಹೆಚ್ಚು ಆಪ್ತವಾಗಿದೆ. ಕೊನೆಯ ಸಾಲಿನಲ್ಲಿ ಅವಳ ಕಣ್ಣು 'ಚಕ್ಷುರ್ಜಾತ ಮಹೋ ಪ್ರಪಂಚ' ಎಂಬ ಸಂಸ್ಕೃತ ಮಾತಿಗೆ ಕಣ್ಗಳೆಸೆದವು ಜಗದಗಲ' ಎಂದಾಗಿದೆ. ಕೃಷ್ಣಮೂರ್ತಿಯವರು ಅದನ್ನು 'ಅರಳಿತದೆ' ಎಂದು ಸೂಚ್ಯವಾಗಿ ಮಾಡಿದ್ದಾರೆ. ಕೃಷ್ಣಮೂರ್ತಿಯವರ ಅನುವಾದ ಮೂಲಕ್ಕೆ ತುಂಬ ಹತ್ತಿರವಾಗಿದ್ದರೂ ಎಸ್.ವಿ.ಪಿ. ಅವರ ಅನುವಾದದಲ್ಲಿ ಕನ್ನಡ ಪದಗಳ ಲಾಲಿತ್ಯ ಎದ್ದು ಕಾಣುತ್ತಿದೆ.

ನವುರಾದ ಪ್ರೇಮ ಭಾವಗಳ ಇನ್ನೊಂದು ಪದ್ಯ. 'ಮಾನವಿಪ್ರಲಂಭ' ವೆಂಬ ಶೃಂಗಾರ ಪ್ರಕಾರದ ಈ ಪದ್ಯ ನಲ್ಲ–ನಲ್ಲೆಯರ ಸಲ್ಲಾಪದ ರೂಪದಲ್ಲಿ ಆಕೃತಿ ಪಡೆದಿದೆ. ತನ್ನ

ಪ್ರಿಯನು ಮಾಡಿದ ಯಾವುದೋ ತಪ್ಪಿನಿಂದ ಪ್ರಿಯೆ ಮುನಿಸಿಕೊಂಡಿದ್ದಾಳೆ. ಅವರ ನಡುವಿನ ಮಾತುಕತೆ ಹೀಗೆ ಸಾಗುತ್ತದೆ.

ಬಾಲೇ ನಾಥ ವಿಮುಂಚ ರುಷಂ ರೋಷಾನ್ಮಯಾ ಕಿಂಕೃತಂ
ಖೇದೋಽಸ್ಮಾಸು ನಮೇಽಪರಾಧ್ಯತಿ ಭವಾನ್ ಸರ್ವೇಽಪರಾಧಾ ಮಯಿ ।
ತತ್ಕಿಂ ರೋದಿಷಿ ಗದ್ಗದೇನ ವಚಸಾ ಕಸ್ಯಾಗ್ರತೋ ರುದ್ಯತೇ
ನನ್ವೇತನ್ಮಮ ಕಾ ತವಾಸ್ಮಿ ದಯಿತಾ ನಾಸ್ಮೀತ್ಯತೋ ರುದ್ಯತೇ ॥

ಎಸ್.ವಿ.ಪಿ. ಅವರ ಅನುವಾದ

"ಬಾಲೆ !" "ನಾಥನೆ!" "ಕೋಪವನು ಮಾನಿನಿಯೆ ಬಿಡು!" "ನಾ
ರೋಷದಿಂದೇಗೈದುದು?"
"ಖೇದವೆಸಗಿದೆ ನಮಗೆ" "ನಿನ್ನಿಂದಿಲ್ಲ ತಪ್ಪೆನ-
ಗೆಲ್ಲ ತಪ್ಪೂ ನನ್ನದು"
"ಆದರೇತಕೆ ಮತ್ತೆ ಗದ್ಗದ ದನಿಯೊಳಳುತಿಹೆ?"
"ಆರ ಮುಂದಿಂದತ್ತುದು?"
"ಅಲ್ಲವೇ ನನ್ನಿದಿರು" ನಿನಗಾನಾರು" "ಕಾದಲೆ"
"ಅಲ್ಲವೆಂದೇ ಅತ್ತುದು"

ನಲ್ಲನಲ್ಲೆಯರ ನಡುವಣ ಸಲ್ಲಾಪ ಸುಂದರವಾಗಿಯೇ ಕನ್ನಡದಲ್ಲಿ ಮೂಡಿದೆ ಎನ್ನಬೇಕು. ಆದರೆ ಇದಕ್ಕಿಂತ ಲಲಿತವಾಗಿ, ಸ್ಪಷ್ಟವಾಗಿ ಸೊಗಸಾಗಿ ಮೂಡಿರುವುದು ಇದಕ್ಕಿಂತ ಮುಂಚೆಯೇ ಇದನ್ನು ಅನುವಾದಿಸಿದ ತೀನಂಶ್ರೀಯವರ ಅನುವಾದದಲ್ಲಿ. ಅದು ಹೀಗಿದೆ

ಬಾಲೆ ! ಏನದು ನಾಥ ? ಮುನಿಸ ತೊರೆ ಮಾನಿನಿ !
'ಮುನಿದು ಮಾಡಿರುವುದೇನು?
'ಎದೆ ಬೇಗೆ ನಮ್ಮಲ್ಲಿ!' ನಿಮ್ಮ ತಪ್ಪೇನಿಲ್ಲಿ?
ತಪ್ಪೆಲ್ಲವೂ ನನ್ನದು
"ಅಂತಿರಲು ಬಿಕ್ಕಳಿಸುತೇಕಳುವೆ?"
"ಆರಮುಂದಳುತಿರುವುದು?"
ನನ್ನ ಮುಂದಿದೊ! ನಿನಗೆ ನಾನಾರು? 'ನಲ್ಲೆ' ನಾ-
ನಲ್ಲವೆಂದಳು ತಿರುವುದು

ಹೀಗೆ ಪ್ರೇಮಿಗಳ ನೂರೆಂಟು ಚಿತ್ತ ವೃತ್ತಿಗಳ ಅನುಪಮ ಚಿತ್ರ ಶಾಲೆಯನ್ನು ನಿರ್ಮಿಸುವ ಮೂಲಕ ಅಮರುಕನು ಶೃಂಗಾರದ ವಿಶ್ವ ಮೋಹಕತೆಯನ್ನು ಅದರೆಲ್ಲ ಬಣ್ಣ ಬೆಡಗುಗಳೊಂದಿಗೆ ನಮ್ಮ ಮನಂಬುಗುವಂತೆ ಮಾಡಿರುವುದನ್ನು ಕನ್ನಡದ ಕನ್ನಡಿಯಲ್ಲಿ ಅಷ್ಟೇ ಸೊಗಸಾಗಿ ಅರ್ಧಶತಮಾನಕ್ಕೂ ಹಿಂದೆಯೇ ಬಿಂಬಿಸಿಕೊಟ್ಟಿರುವ ಪ್ರೊ. ಎಸ್.ವಿ. ಪರಮೇಶ್ವರಭಟ್ಟರ ಕಾರ್ಯ ಕೂಡ ಅಷ್ಟೇ ಅನನ್ಯವಾದ್ದು. ಎಲ್ಲೋ ಒಂದು ಕಡೆಯೋ ಎರಡು ಕಡೆಯೋ, ಅನಿವಾರ್ಯವೆಂದೆನಿಸಿದ ಸಂದರ್ಭದಲ್ಲಿ ಮೂಲದ ಸಂಸ್ಕೃತ ಸಮಾಸ ಭೂಯಿಷ್ಠ ಶಬ್ದಗಳನ್ನು ಹಾಗೆ ಹಾಗೆಯೇ ಇಟ್ಟು ಕೊಂಡಿರುವುದನ್ನು ಹೊರತು ಪಡಿಸಿದರೆ, ಉಳಿದಂತೆ ಅತ್ಯಂತ ನವುರಾದ ಲಲಿತವಾದ ಹಾಗೂ ಚೆಲುವಾದ ಕನ್ನಡ ಶಬ್ದಗಳು ಈ ಶತಕದ ಉದ್ದಕ್ಕೂ ತಮ್ಮ ಲಾಸ್ಯವನ್ನು ಮೆರೆದಿರುವುದನ್ನು ಕಾಣಬಹುದಾಗಿದೆ.

16. ಕನ್ನಡ ಭರ್ತೃಹರಿಯ ಶತಕತ್ರಯ

ಸಂಸ್ಕೃತ ಕವಿಗಳಲ್ಲಿ ಭರ್ತೃಹರಿಗೆ ವಿಶೇಷ ಸ್ಥಾನವಿದೆ. ಅವನ ಕಾಲ, ದೇಶ ಮತ್ತು ವೈಯಕ್ತಿಕ ಸಂಗತಿಗಳ ಬಗ್ಗೆ ಇದಮಿತ್ಥಂ ಎಂದು ಖಚಿತವಾಗಿ ಯಾವುದೂ ತಿಳಿದು ಬಂದಿಲ್ಲ. ಸುಮಾರು 7ನೇ ಶತಮಾನದವನಾಗಿದ್ದಿರಬೇಕೆಂದು ಊಹಿಸಲಾಗಿದೆ. ಹಾಗಾಗಿ ಎಲ್ಲವೂ ಊಹೆಗಳನ್ನೇ ಆಧರಿಸಿದೆ. ಪ್ರಸಿದ್ಧವಾದ 'ವಾಕ್ಯಪದೀಯದ' ಕರ್ತೃವೂ ಶತಕತ್ರಯದ ಕರ್ತೃವೂ ಒಬ್ಬನೋ ಅಥವಾ ಬೇರೆ ಬೇರೆಯೋ ಎಂಬುದೂ ಖಚಿತವಿಲ್ಲ. ಆದರೆ, ಅವನು ದಾಕ್ಷಿಣಾತ್ಯನಾಗಿದ್ದಿರಬೇಕೆಂಬ ಊಹೆಯಲ್ಲಿ ಸತ್ಯಾಂಶ ಹೆಚ್ಚಿರುವಂತಿದೆ. ಶಕಪುರುಷ ವಿಕ್ರಮಾದಿತ್ಯನ ಅಣ್ಣನಾಗಿದ್ದನೆಂಬ ಮತ್ತು ಅವನು ರಾಜನಾಗಿದ್ದನೆಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಅಲ್ಲದೆ ಶತಕತ್ರಕಯವು ಭರ್ತೃಹರಿಯ ಸ್ವಂತ ರಚನೆಯೋ ಅಥವಾ ಅವನು ಕೇವಲ ಸಂಕಲನಕಾರನೋ ಎಂಬುದು ಕೂಡ ಖಚಿತವಿಲ್ಲ. ಆದರೆ ಈ ಮೂರೂ ಶತಕಗಳನ್ನು ಓದಿದರೆ ಇದು ಒಬ್ಬನ ಸ್ವಂತ ರಚನೆಯೇ ಇರಬೇಕೆನಿಸುತ್ತದೆ. ಅವನು ಮೊದಲಿಗೆ ವೈದಿಕ ಧರ್ಮಾವಲಂಬಿಯಾಗಿದ್ದು ಕಾಲಾಂತರದಲ್ಲಿ ಬೌದ್ಧ ಮತಾವಲಂಬಿಯಾಗಿರಬೇಕೆಂಬ ಊಹೆ ಕೂಡ ಇದೆ.

ಭರ್ತೃಹರಿಯ ಶತಕಗಳು ಮೂರು. ವೈರಾಗ್ಯ ಶತಕ, ಶೃಂಗಾರ ಶತಕ ಮತ್ತು ನೀತಿ ಶತಕ. ಇವೆಲ್ಲವೂ ಮುಕ್ತಕಗಳಾಗಿದ್ದು ಕತೆಯ ಹಂಗನ್ನು ತ್ಯಜಿಸಿವೆ. ಗಹನವಾದ ತತ್ವಚಿಂತನೆಯಿಂದ ಕೂಡಿರುವ ಈ ಮೂರೂ ಶತಕಗಳು ಕವಿಯ ಜೀವಾನುಭವ ಮತ್ತು ಲೋಕದೃಷ್ಟಿಗೆ ನಿದರ್ಶನಗಳಾಗಿವೆ. ಉಪಮೆ ರೂಪಕಗಳೇ ಮೊದಲಾದ ಅಲಂಕಾರಗಳಿಂದ ಕೂಡಿಕೊಂಡಿರುವ ಇವು ಲಲಿತವಾಗಿಯೂ ಸ್ಫೂರ್ತಿಯುತವಾಗಿಯೂ ಇವೆ. ಸ್ತ್ರೀ ಹೃದಯವನ್ನು ಚೆನ್ನಾಗಿ ಬಲ್ಲ ಈ ಕವಿ ಶೃಂಗಾರದ ಸೂಕ್ಷ್ಮ ಚಿತ್ರಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನೀಡುತ್ತಾನೆ. ಪ್ರೇಮ ಪೀಡಿತ ನಾಯಕ ನಾಯಿಕೆಯರ ವಿವಿಧ ಪ್ರವೃತ್ತಿ ಮನೋವೃತ್ತಿಗಳ ನವುರಾದ ಚಿತ್ರಣವಿದೆ. ಬೇರೆ ಕವಿಗಳಿಗೂ ಇವನಿಗೂ ಇರುವ ವ್ಯತ್ಯಾಸವೆಂದರೆ ಉಳಿದ ಕವಿಗಳು ಶೃಂಗಾರದ ಲೋಕಮೋಹಕತೆಯನ್ನು ವರ್ಣರಂಜಿತವಾಗಿ ಬಣ್ಣಿಸಿದರೆ ಭತೃಹರಿ ಆ ವಿಶ್ವಮೋಹಕವಾದಂಥ ರೂಪು ಕೂಡ ನಶ್ವರ ಅನುಪಾದೇಯ ಎಂದು ಹೇಳುತ್ತ ಅದರ ಕ್ಷಣಭಂಗುರತೆಯನ್ನು ಇನ್ನಿಲ್ಲದಂತೆ ನಿರೂಪಿಸುತ್ತಾನೆ. 'ಶೃಂಗಾರಕ್ಕೂ ವೈರಾಗ್ಯದ ದೀಕ್ಷೆ ಕೊಟ್ಟ ಕವಿ ಈತ' ಎಂಬ ಮಾತಿದೆ.

ಉದಾ: ಭ್ರೂ ಚಾತುರ್ಯಾ ಕುಂಚಿತಾಕ್ಷಾಃ ಕಟಾಕ್ಷಾಃ
ಸ್ನಿಗ್ಧಾ ವಾಚೋಽಲಜ್ಜಿತಾಶ್ಚೈವ ಹಾಸಾಃ॥
ಲೀಲಾಮಂದಂ ಪ್ರಸ್ಥಿತಂ ಚ ಸ್ಥಿತಂ ಚ
ಸ್ತ್ರೀಣಾಮೇತದ್ಭೂಷಣಂ ಚಾಯುಧಂ ಚ

ಇದನ್ನು ಅತ್ಯಂತ ಸೊಗಸಾಗಿ ಕನ್ನಡದ ದೇಸಿ ನುಡಿಕಟ್ಟಿನಲ್ಲಿ ಕನ್ನಡಿಸಿಕೊಟ್ಟಿದ್ದಾರೆ:

ಮುರಿದ ಪುರ್ವಿನ ಮೊಗ್ಗುಗಣ್ಣಿನ ಓರೆನೋಟದ ಕಿಡಿಗಳು
ಲಜ್ಜೆ ಯೊಡವೆರೆದಿರುವ ನಸುನಗೆ ಸವಿಯ ಸೂಸುವ ನುಡಿಗಳು
ಲೀಲೆಯಿಂದೆನೆ ಮೆಲ್ಲಮೆಲ್ಲನೆ ನಡೆದು ನಿಲ್ಲುವ ನಡೆಗಳು,
ತೊಡವು ಕೈದುಗಳೆರಡುಮಪ್ಪುವು ನಾರಿಯರಿಗಿವು ಜಗದೊಳು .

ಕಿಡಿಗಳು, ನುಡಿಗಳು ಎಂದು ಪಾದಾಂತ್ಯದಲ್ಲಿ ತಂದಿರುವ ಪ್ರಾಸಗಳು, ಮುರಿದಪುರ್ವು, ಮೊಗ್ಗುಗಣ್ಣು, ತೊಡವು, ಕೈದು ನಸುನಗೆ – ಇಂಥ ಕನ್ನಡ ಶಬ್ದಗಳ ಉಚಿತ ಪ್ರಯೋಗದಿಂದ ಪದ್ಯ ಕಳೆಗಟ್ಟಿದೆ.

ಅವನ ಈ ಶತಕತ್ರಯದಲ್ಲಿ ಶೃಂಗಾರ ಶತಕಕ್ಕಿಂತ ನೀತಿ ಮತ್ತು ವೈರಾಗ್ಯ ಶತಕಗಳು ಕಾಲದೇಶಗಳಿಂದ "ಅಬಾಧಿತವಾದ ಹಲವು ಮಾನವೀಯ ಭಾವಗಳನ್ನು ಕಲಾತ್ಮಕವಾಗಿ ಕಟ್ಟಿ ಕೊಡುವುದರಿಂದ ಲೋಕೋತ್ತರವಾದ ಮನ್ನಣೆ ಮತ್ತು ಖ್ಯಾತಿಯನ್ನು ಗಳಿಸಿವೆ"[36] ಅವನ ಸೂಕ್ಷ್ಮವಾದ ದೃಷ್ಟಿಯು ಸಂಸಾರದಲ್ಲಿ ಸಣ್ಣ ಸಣ್ಣ ವಸ್ತುಗಳನ್ನು ಪರೀಕ್ಷಿಸಿ, "ಅವುಗಳಿಂದ ಉದಾತ್ತವಾದ ಜ್ಞಾನವನ್ನು ಹೊಂದುವುದರಲ್ಲಿ ಸಮರ್ಥವಾಗುತ್ತದೆ"[37] ಮನುಷ್ಯನು ಯಶಸ್ವೀ ಜೀವನವನ್ನು ಬಾಳಲು ಬೇಕಾದ ಅರಿವನ್ನು ಈ ಶತಕದ ಶ್ಲೋಕಗಳಲ್ಲಿ ನೀಡಿದ್ದಾನೆ. ನೀತಿಶತಕದಲ್ಲಿ ಉಕ್ತವಾದ ವಿಚಾರಗಳನ್ನು ಅಜ್ಞ ಪದ್ಧತಿ, ವಿದ್ವತ್ಪದ್ಧತಿ, ಮಾನಶೌರ್ಯಪದ್ಧತಿ, ಅರ್ಥಪದ್ಧತಿ, ದುರ್ಜನಪದ್ಧತಿ, ಸುಜನಪದ್ಧತಿ, ಪರೋಪಕಾರ ಪದ್ಧತಿ, ಧೈರ್ಯ ಪದ್ಧತಿ, ದೈವ ಪದ್ಧತಿ, ಕರ್ಮಪದ್ಧತಿ ಮೊದಲಾದ ನಾನಾ ಶೀರ್ಷಿಕೆಗಳಲ್ಲಿ ವಿಭಾಗಿಸಲಾಗಿದೆ. ಭರ್ತೃಹರಿಯ ಶತಕದ ಕೆಲವು ಮೂಲ ಪದ್ಯಗಳನ್ನೂ ಅವುಗಳ ಕನ್ನಡ ರೂಪಗಳನ್ನು ಪರಿಶೀಲಿಸುವ ಮೂಲಕ ಅವುಗಳ ಮೌಲ್ಯ ಮತ್ತು ಸ್ವಾರಸ್ಯವನ್ನು ಮನಗಾಣಬಹುದು.

ಮೂರ್ಖರೊಂದಿಗೆ ಹೇಗೆ ಸಹಬಾಳ್ವೆ ಮಾಡಬೇಕು? ಸ್ವಭಾವತಃ ಮೂರ್ಖರಾದವರನ್ನು ಮನಸ್ಸಂತೋಷಗೊಳಿಸಿ, ಅವರ ಬುದ್ಧಿಗೆ ನೀರೆರೆದು ಜಾಣರನ್ನಾಗಿ ಮಾಡಿ ಅವರೊಂದಿಗೆ ಬದುಕುತ್ತೇವೆಂದು ತಿಳಿಯುವುದು ಅವಿಚಾರವೇ. ಜಗತ್ತಿನಲ್ಲಿ ಎಂಥ ಅಸಾಧ್ಯವನ್ನು ಬೇಕಾದರೂ ಸಾಧ್ಯ ಮಾಡಬಹುದು. ಆದರೆ ಮೂರ್ಖರನ್ನು ತಿದ್ದುವುದು ಎಂದಿಗೂ ಸಾಧ್ಯವಿಲ್ಲ ಎಂಬ ಅರ್ಥದ ಶ್ಲೋಕ

ಲಭೇತ ಸಿಕತಾಸು ತೈಲಮಪಿ ಯತ್ನತಃ ಪೀಡಯನ್
ಪಿಬೇಚ್ಚ ಮೃಗತೃಷ್ಣಿಕಾಸು ಸಲಿಲಂ ಪಿಪಾಸಾರ್ದಿತಃ ।
ಕದಾಚಿದಪಿ ಪರ್ಯಟನ್ ಶಶವಿಷಾಣಮಾಸಾದಯೇತ್
ನ ತು ಪ್ರತಿನಿವಿಷ್ಟಮೂರ್ಖಜನ ಚಿತ್ತಮಾರಾಧಯೇತ್

ಎಸ್.ವಿ.ಪಿ. ಅವರ ಅನುವಾದ ಹೀಗಿದೆ:

ಮಳಲಕಣದೊಳುಮೆಣ್ಣೆಯನು ಹಿಳಿದೆಂತೊ ದೊರಕಿಸಿಕೊಳ್ಳಬಹುದತಿಯತ್ನದೆ.
ಬಿಸಿಲದೊರೆಯೊಳು ಮೀಂಟುತುದಕವನು ನೀರಡಿಕೆಯನು ನೀಗಬಹುದತಿಯತ್ನದೆ
ಅಲೆಯುವಂದೆಂದಾದರೂ ಸಹ ಮೊಲದ ಕೊಂಬನು ಕಾಣಬಹುದಿನ್ನಿಳೆಯೊಳು
ಚಲದೆ ಬೀಗಿದ ಮೂರ್ಖ ಜನ ಮಾನಸವನಾರಾಧಿಸುವುದರಿದಹುದಿಳೆಯೊಳು

ವಿದ್ಯೆ ಜಗತ್ತಿನಲ್ಲಿ ಅತ್ಯಂತ ಬೆಲೆಬಾಳುವಂಥದು. ಅದಕ್ಕೆ ಸಮನಾದ ಸಂಪತ್ತೇ ಇಲ್ಲ. ಯಾವುದೇ ರಾಷ್ಟ್ರದ ಸಂಪತ್ತೆಂದರೆ ಅಲ್ಲಿಯ ವಿದ್ವಜ್ಜನರು. ಅದರ ಮಹತ್ವವನ್ನು ಎಷ್ಟು ಕೊಂಡಾಡಿದರೂ ಸಾಲದೆನ್ನುವಷ್ಟು ಮೌಲ್ಯಯುತವಾದ್ದು. ವಿದ್ಯೆಯ ಮಹತ್ತನ್ನು ಅದರ ಗರಿಮೆಯನ್ನು, ಮೌಲ್ಯವನ್ನು ಪ್ರತಿಪಾದಿಸುವ ಮೂಲ ಸಂಸ್ಕೃತ ಪದ್ಯಗಳಿಗೆ ಅತ್ಯಂತ ಸರಿದೊರೆಯೆನ್ನುವ ಹಾಗೆ ಎಸ್.ವಿ.ಪಿ ಕನ್ನಡಿಸಿದ್ದಾರೆ.

ವಿದ್ಯಾನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನ ಗುಪ್ತಂ ಧನಂ
ವಿದ್ಯಾಭೋಗಕರೀ ಯಶಃ ಸುಖಕರೀ ವಿದ್ಯಾಗುರೂಣಾಂ ಗುರುಃ।
ವಿದ್ಯಾಬಂಧು ಜನೋ ವಿದೇಶ ಗಮನೇ ವಿದ್ಯಾಪರಂ ದೈವತಂ
ವಿದ್ಯಾ ರಾಜುಸು ಪೂಜ್ಯತೇ ನಹಿ ಧನಂ ವಿದ್ಯಾವಿಹೀನಃ ಪಶುಃ

ಇದನ್ನು ಅತ್ಯಂತ ಸುಲಲಿತವಾಗಿ ಎಸ್.ವಿ.ಪಿ. ಕನ್ನಡಿಸಿದ್ದಾರೆ.

ವಿದ್ಯೆ ಮನುಜನಿಗಧಿಕ ರೂಪವು ವಿದ್ಯೆಯದುವೆ ನಿಗೂಢ ರಕ್ಷಿತವಿತ್ತವು
ಗುರುವಿಗದು ಗುರು ಅದುವೆ ಭೋಗವ ಕುಡುವುದದುವೆ ಯಶಃ ಸುಖಂಗಳನೀವುದು.
ವಿದ್ಯೆ ಬಂಧು ವಿದೇಶಗಮನದೆ ಮತ್ತೆ ನೋಳ್ಪೊಡೆ ವಿದ್ಯೆಯೇ ಪರದೇವತೆ
ರಾಜಪೂಜ್ಯವು ವಿದ್ಯೆಯೇ ಧನವಲ್ಲ ಲೋಕದೆ ಪಶುವು ವಿದ್ಯಾಹೀನನು

ಲೋಕದಲ್ಲಿ ಹಣದ ಮಹತ್ವವನ್ನು ಅರಿಯದವರಿಲ್ಲ. ಹಣವಿಲ್ಲದಿದ್ದರೆ ಮನುಷ್ಯ ಅನುಭವಿಸಬೇಕಾಗಿ ಬರುವ ದೈನ್ಯ ಒಂದೊಡೆಯಾದರೆ ಹಣಕ್ಕೆ ಸಮಾಜ ಕೊಡುವ ಪುರಸ್ಕಾರ ಎಲ್ಲ ಕಾಲದಲ್ಲೂ ಒಂದೇ ಆಗಿದೆ. ಲೋಕದ ಈ ಸ್ವಭಾವವನ್ನು ವರ್ಣಿಸುವ ಈ ಪದ್ಯ ತುಂಬ ಪ್ರಸಿದ್ಧವಾದುದು:

ಯಸ್ಯಾಸ್ತಿವಿತ್ತಂ ಸ ನರಃ ಕುಲೀನಃ
ಸ ಪಂಡಿತಃ ಸ ಶ್ರುತವಾನ್ ಗುಣಜ್ಞಃ ।
ಸ ಏವ ವಕ್ತಾ ಸ ಚ ದರ್ಶನೀಯಃ
ಸರ್ವೇ ಗುಣಾಃ ಕಾಂಚನಮಾಶ್ರಯಂತಿ ॥

ಅಷ್ಟೇ ಸೊಗಸಾಗಿ ಅರ್ಥ ಸಮಸ್ತವನ್ನೂ ಹಿಡಿದಿಟ್ಟಿರುವುದು ಅದರ ಈ ಕನ್ನಡ ರೂಪ.

ಲೋಕದೊಳು ಹಣವಾರ ಬಳಿಯಿಹುದವನೆ ನಿಜ ಅಭಿಜಾತನು
ಅವನೆ ಪಂಡಿತನವನೆ ಸದ್ಗುಣಿ ಶಾಸ್ತ್ರ ಕೋವಿದನಾತನು
ವಾಗ್ಮಿಯಾತನೆ ಮತ್ತೆ ನೋಳ್ಪೊಡೆ ದರ್ಶನೀಯನುಮಾತನೆ
ಸರ್ವಗುಣವೂ ಜಗದೊಳಾಶ್ರಯಿಸಿರ್ಪುದು ಕಾಂಚನವನೆ.

ಪರೋಪಕಾರಿಗಳಾದವರ ಸ್ವಭಾವ ಎಂಥದೆಂಬುದನ್ನು ಹೇಳುತ್ತಲೇ ಲೋಕ ನೀತಿಯನ್ನು ವರ್ಣಿಸುವ ಈ ಮಾತುಗಳು ಕೂಡ ಅಷ್ಟೇ ಸೊಗಸಾದವೂ ಸುಪ್ರಸಿದ್ಧವೂ ಆಗಿವೆ. ಉಪಮಾಲಂಕಾರ ಅದರ ಸೊಗಸನ್ನು ಹೆಚ್ಚಿಸಿದೆ.

ಬಾಗಿ ಕೊಳವುದು ತನ್ನ ಹಣ್ಣಿನ ಭಾರದೊಳು ಸಲೆ ವೃಕ್ಷವು
ತಗ್ಗಿನೊಳೆ ಸಲೆ ತೂಗುವುದು ಹೊಸ ನೀರನಾಂತಿಹ ಮೋಡವು
ತಲೆಯ ತಗ್ಗಿಸಿ ಸಿರಿಯೊಳುಂ ಸಲೆ ವಿನಯಯುತರಹರಾರ್ಯರು
ನೋಳ್ಪೊಡಿಳೆಯೊಳು ಹೆರರಿಗುಪಕಾರವನು ಮಾಳ್ಪವರಿರವಿದು

ಎಲ್ಲ ಕಾಲಕ್ಕೂ ಎಂದೆಂದೂ ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾದಂಥ ಅನೇಕ ಮಾತುಗಳು ಭರ್ತೃಹರಿಯ ಈ ಶತಕಗಳಲ್ಲಿ ನಿಧಿಯ ಹಾಗೆ ಅಡಗಿದೆ. 'ಧೀರರು' ಎಂದರೆ ಯಾರು? ಅದನ್ನು ಭರ್ತೃ ಹರಿ ಈ ಮಾತುಗಳಲ್ಲಿ ಅದ್ಭುತವಾಗಿ ಹಿಡಿದಿಟ್ಟಿದ್ದಾನೆ.

ನಿಂದಂತು ನೀತಿ ನಿಪುಣಾ ಯದಿ ವಾ ಸ್ತುವಂತು
ಲಕ್ಷ್ಮೀ ಸಮಾವಿಶತು ಗಚ್ಛತು ವಾ ಯಥೇಚ್ಛಮ್ ।
ಅದ್ಯೈವ ವಾ ಮರಣಮಸ್ತು ಯುಗಾಂತರೇವಾ
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನಧೀರಾಃ ॥

ಎಸ್.ವಿ.ಪಿ ಅವರು ಅದೇ ನಾಲ್ಕು ಪಾದಗಳಲ್ಲಿ ಭಾಮಿನಿಯ ಲಯದಲ್ಲಿ ಗುಂಜಿಯಷ್ಟೂ ಕಡಮೆ ಇಲ್ಲದಂತೆ ಸಮತೂಕದಲ್ಲಿ ಅನುವಾದಿಸಿದ್ದಾರೆ.

ನೀತಿ ನಿಪುಣರು ನಿಂದೆಗೈಯಲಿ ತಮ್ಮನಥವಾ ನುತಿಸಲಿ
ಲಕ್ಷ್ಮಿಯೊಲಿಯಲಿ ತಮ್ಮನಥವಾ ಸ್ವೇಚ್ಛೆಯೊಳು ತೊರೆದೋಡಲಿ

ಮರಣವಿಂದೇ ಬರಲಿ ಅಥವಾ ಯುಗಯುಗಾಂತರಕಾಗಲಿ
ನ್ಯಾಯಮಾರ್ಗವನೆಂದುಮವರುಳಿದತ್ತ ಚಲಿಸರು ಧೀರರು

ವೈರಾಗ್ಯ ಶತಕ

ಭರ್ತೃಹರಿಯ ಮೂರು ಶತಕಗಳಲ್ಲಿ ಚಿಂತನೆಯ ಗಾಢತೆ, ಬದುಕಿನ ಅನುಭವಗಳ ಮಂಥನ ಮತ್ತು ಅಭಿವ್ಯಕ್ತಿಯ ಕೌಶಲಗಳ ದೃಷ್ಟಿಯಿಂದ ವೈರಾಗ್ಯ ಶತಕವು ಕವಿಯ ಸರ್ವಸ್ವವೆನ್ನಬಹುದು. ಕಾರಣ ಕವಿಯ ಆತ್ಮೀಯ ಭಾವಗಳು ಹೆಚ್ಚು ಪ್ರಭಾವಶಾಲಿಯಾದ ಅಭಿವ್ಯಕ್ತಿಯನ್ನು ಪಡೆದುಕೊಂಡಿರುವುದು ವೈರಾಗ್ಯ ಶತಕದಲ್ಲೆಂದು ಹೇಳುತ್ತಾರೆ[38] "ಕಾಲದೇಶಗಳಿಂದ ಅಬಾಧಿತವಾಗಿ ಹಲವು ಮಾನವೀಯ ಭಾವಗಳನ್ನು ಕಲಾತ್ಮಕವಾಗಿ ಕಟ್ಟಿ ಕೊಡುವುದರಿಂದಾಗಿ[39] ಈಗ ಎರಡೂ ಶತಕಗಳು (ನೀತಿ ಶತಕ, ವೈರಾಗ್ಯ ಶತಕಗಳು) ಲೋಕೋತ್ತರ ಮನ್ನಣೆ ಮತ್ತು ಖ್ಯಾತಿಯನ್ನು ಗಳಿಸಿವೆ." ಲೋಕ ಮೋಹಕವಾದ ಶೃಂಗಾರವನ್ನು ಚಿತ್ರಿಸಿದ ಚಿತ್ರಿಸಿರುವ ಹಾಗೂ ಚಿತ್ರಿಸುವ ಕವಿಗಳು ಬೇಕಾದಷ್ಟಿದ್ದಾರೆ. ಆದರೆ ಶೃಂಗಾರಕ್ಕೆ ವಿರುದ್ಧವಾದ, ಸಂಸಾರ ವಿರಕ್ತಿಯನ್ನೇ ಪ್ರಧಾನವಾಗಿ ಎತ್ತಿ ಹಿಡಿಯುವ ನಿವೃತ್ತಿಪರ ಗೀತೆಗಳಾದ ಇವು ಓದುಗರನ್ನು ತೀವ್ರ ಚಿಂತನೆಗೆ ಹಚ್ಚುವಲ್ಲಿ ಸಮರ್ಥವಾಗಿವೆ. ಇದರ ಪದ್ಯಗಳನ್ನು ಕೂಡ, ಅವುಗಳ ವಿಷಯಾನುಗುಣವಾಗಿ ತೃಷ್ಣಾದೂಷಣೆ, ವಿಷಯ ಪರಿತ್ಯಾಗ ವಿಡಂಬನೆ, ಯಾಚ್ನಾದೂಷಣೆ, ಭೋಗಾಸ್ಥೈರ್ಯ, ಕಾಲಮಹಿಮೆ, ಯತಿ ನೃಪತಿ ಸಂವಾದ, ಮನಃಸಂಬೋಧನೆ, ನಿತ್ಯಾನಿತ್ಯವಿಚಾರ, ಶಿವಾರ್ಚನೆ, ಅವಧೂತ ಚರ್ಯೆ ಎಂದು ಹತ್ತು ಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ.

ಭೋಗಗಳು, ಆಸೆಗಳು ಮನುಷ್ಯನನ್ನು ಎಡೆಬಿಡದೆ ಸೆಳೆಯುತ್ತಿರುತ್ತವೆ. ಅವುಗಳ ಸೆಳೆತ ಎಷ್ಟು ಬಲಯುತವಾದುದು ಎಂದರೆ ನಾವು ಅವನ್ನು ಅನುಭವಿಸುವುದಲ್ಲ; ಅವೇ ನಮ್ಮನ್ನು ಅನುಭವಿಸುತ್ತಿವೆ, ಎಂಬ ಭಾವದ ಪದ್ಯವಿದು

ಭೋಗಾನ ಭುಕ್ತಾ ವಯಮೇವ ಭುಕ್ತಾ–
ಸ್ತವೋ ನ ತಪ್ತಂ ವಯಮೇವ ತಪ್ತಾಃ ।
ಕಾಲೋನ ಯಾತೋ ವಯಮೇವ ಯಾತಾ–
ಸ್ತೃಷ್ಣಾ ನ ಜೀರ್ಣಾ ವಯ ಮೇವ ಜೀರ್ಣಾಃ

ಇದನ್ನು ಅಷ್ಟೇ ಸೊಗಸಾಗಿ, ಅತ್ಯಂತ ಯುಕ್ತ ಶಬ್ದಗಳನ್ನು ಬಳಸಿ ಎಸ್.ವಿ.ಪಿ. ಕನ್ನಡಿಸಿದ್ದಾರೆ.

ಭೋಗಗಳನು ಭುಜಿಸಲಿಲ್ಲ, ನಾವೆ ಭುಕ್ತರಾದೆವು
ತಪವ ನಾವು ಗೈದುದಿಲ್ಲ ನಾವೆ ತಪ್ತರಾದೆವು
ಕಾಲ ಕಳೆದು ಹೋಗಲಿಲ್ಲ ನಾವೆ ಸಾಗಿ ಹೋದೆವು
ಆಶೆ ಶಾಂತವಾಗಲಿಲ್ಲ ನಾವೆ ಜೀರ್ಣವಾದೆವು

ಪ್ರಾಪಂಚಿಕ ಸುಖಭೋಗಗಳು ಶಾಶ್ವತವೆನ್ನುವ ಭ್ರಮೆಯಿಂದ ಅದರಲ್ಲೇ ಮುಳುಗಿ ಬಿಟ್ಟಿರುತ್ತಾನೆ. ಆದರೆ ಆ ಸಂಸಾರ, ನಿಜವಾಗಿ 'ಕಾರಾಗೃಹ' ಎಂದು, ಎಲ್ಲವೂ ಒಂದೇ ಒಂದು ಕ್ಷಣದಲ್ಲಿ ನಾಶವಾಗಿ ಬಿಡುತ್ತದೆ ಎಂದು ತಿಳಿದವನೇ ಧನ್ಯನೆಂಬುದು ಈ ಕೆಳಗಿನ ಗೀತದ ಸಾರ;

ತುಂಗಂ ವೇಶ್ಮ ಸುತಾಃ ಸತಾಮಭಿಮತಾಃ ಸಂಖ್ಯಾತಿಗಾಃ ಸಂಪದಃ
ಕಲ್ಯಾಣೀ ದಯಿತಾ ವಯಶ್ಚ ನವಮಿತ್ಯಜ್ಞಾನ ಮೂಢೋ ಜನಃ ।

ಮತ್ವಾ ವಿಶ್ವಮನಶ್ವರಂ ನಿವಿಶತೇ ಸಂಸಾರಕಾರಾಗೃಹೇ
ಸಂದೃಶ್ಯ ಕ್ಷಣಭಂಗುರಂ ತದಖಿಲಂ ಧನಸ್ತು ಸಂನ್ಯಸ್ಯತಿ ॥

ಎಸ್.ವಿ.ಪಿ ಅವರ ಅನುವಾದ ಸರಳ ಕನ್ನಡ ಮಾತುಗಳಲ್ಲಿ ಇದನ್ನು ಎಲ್ಲರ ಮನ ಮುಟ್ಟಿಸಿದೆ.

ದೊಡ್ಡ ಮನೆಯಿದೆ ಸಭ್ಯರೊಪ್ಪುವ ಮಕ್ಕಳಿರುವರು ಅಮಿತಮಿಹುದರ್ಥವು
ಸುಗುಣಿ ಹೆಂಡತಿ ಹರೆಯ ಹೊಸತಿಹುದೆನ್ನುವರಿಯಮೆಯಿಂದಲೆಗ್ಗರು ಜಗದೊಳು
ವಿಶ್ವ ಶಾಶ್ವತವೆಂದು ಪುಗುವರು ಭರದೆ ಅಹ ಸಂಸಾರ ಕಾರಾಗೃಹವನು
ಸರ್ವ ಸಂಗವ ತೊರೆವನೆಲ್ಲವು ಚಣದೊಳಳಿವುದು ಎಂದು ತಿಳಿದಿಹ ಧನ್ಯನು

ಜಗತ್ತಿನ ನಶ್ವರತೆಯನ್ನು ಎಷ್ಟು ಬಗೆಯಲ್ಲಿ ಹಾಡಿದರೂ ಕವಿಗೆ ತೃಪ್ತಿಯಿಲ್ಲ. ಕಾಲನಿಗೆ ಎಂಥ ಭೋಗ ವಿಲಾಸಗಳನ್ನೂ ಹೇಳಹೆಸರಿಲ್ಲದಂತೆ ಅಳಿಸಿಹಾಕುವ ಶಕ್ತಿಯಿದೆ. ಆ ಕಾಲನ ಎದುರಿನಲ್ಲಿ ಯಾವ ವೈಭವ ವಿಲಾಸಗಳು ಏನೂ ಅಲ್ಲ ಎಂದು ಕಾಲದ ಮಹಿಮೆಯನ್ನು ಕೀರ್ತಿಸುವ ಈ ಪ್ರಸಿದ್ಧ ಪದ್ಯ.

ಸಾ ರಮ್ಯನಗರೀ ಮಹಾನ್ಸ ನೃಪತೀ ಸಾಮಂತ ಚಕ್ರಂ ಚ
ತತ್ಪಾರ್ಶ್ವೇ ತಸ್ಯ ಸಾ ವಿದಗ್ಧಪರಿಷತ್ತಾಶ್ಚಂದ್ರ ಬಿಂಬಾನನಾಃ
ಉದ್ವೃತಃ ಸ ರಾಜಪುತ್ರ ನಿವಹಸ್ತೇ ಬಂಧಿನಸ್ತಾಃ ಕಥಾಃ
ಸರ್ವಂ ಯಸ್ಯ ವಶಾದಗಾತ್ಸ್ಮೃತಿ ಪಥಂ ಕಾಲಾಯ ತಸ್ಮೈ ನಮಃ

ಎಸ್.ವಿ.ಪಿ. ಅವರಲ್ಲಿ ಅದು ತಾಳಿರುವ ಕನ್ನಡ ರೂಪ ಹೀಗಿದೆ:

ಆ ಮನೋಹರ ನಗರ ಮತ್ತಾ ನೃಪತಿ ಶೇಖರ ಮತ್ತೆ ಆ ಮಾಂಡಲಿಕರು
ಅವರ ಪಾರ್ಶ್ವದೊಳಿಹ ಆ ಪರಿಷತ್ತು ಮತ್ತಾ ಚಂದ್ರ ಬಿಂಬಾನನೆಯರು
ಆ ಬಲಿಷ್ಠರು ಅರಸು ಮಕ್ಕಳು ಹೊಗಳು ಭಟ್ಟರು ಮತ್ತೆ ಅಂದಿನ ಕಥೆಗಳು
ಆರ ಕತದೊಳು ನೆನಪು ಬಟ್ಟೆಯ ಹಿಡಿದವೋ ಆ ಕಾಲಗಿದೊ ಕೈಮುಗಿವೆನು.

ಜಗದ ಭೋಗ ವಿಲಾಸಗಳ ನಶ್ವರತೆಯನ್ನು ಕುರಿತು ಹೇಳುವಷ್ಟೇ ಶಕ್ತಿಯುತವಾದ ಮಾತುಗಳಲ್ಲಿ ವೈರಾಗ್ಯದ ಮಹತ್ವವನ್ನು ಹಾಡಿ ಹೊಗಳುತ್ತಾನೆ.

ಕರವೆ ನಿರ್ಮಲ ಪಾತ್ರೆ ಸಂಚರಿಪಂದು ದೊರೆಯುವ ಭಿಕ್ಷೆಯಕ್ಷಯದನ್ನವು
ನೆಲವೆ ಹಾಸಿಗೆ ಹೊಳೆವ ದಶದಿಗ್ವಲಯವೇ ನಮಗಿಂದು ನಿರ್ಮಲ ವಸ್ತ್ರವು
ಮತ್ತೆ ನಿಸ್ಸಂಗತೆಯನೊಲಿವುದೆ ನಮಗೆ ಪರಿಣತಿಯೆನ್ನುವಾತ್ಮಾನಂದರು
ತ್ಯಜಿಸಿ ದೈವ ವ್ಯತಿಕರಂಗಳನಿವರು ಕರ್ಮದ ಬೇರನುಗಿವರು ಧನ್ಯರು

17. ಕನ್ನಡ ಕವಿಕೌಮುದಿ

ಸಂಸ್ಕೃತದಲ್ಲಿ ಅಪಾರವಾಗಿರುವ ಮುಕ್ತಕ ಸಾಹಿತ್ಯ ಭಂಡಾರದಲ್ಲಿ ಕವಿ ಕೌಮುದಿ ತನ್ನದೇ ಆದ ವಿಶಿಷ್ಟತೆಯಿಂದ ಕೂಡಿದೆ. ಆ ವಿಶಿಷ್ಟತೆ ಎಂದರೆ ಇದರಲ್ಲಿ ಬರುವ ಮುಕ್ತಕಗಳೆಲ್ಲವೂ ಅನ್ಯೋಕ್ತಿಗಳು ಅಥವಾ ಅನ್ಯಾಪದೇಶಗಳು. 146 ಮುಕ್ತಕಗಳಿಂದ ಕೂಡಿರುವ ಇದನ್ನು ರಚಿಸಿದ ಕವಿ 17–18ನೇ ಶತಮಾನದಲ್ಲಿ ಬಾಳಿ ಬದುಕಿದ ಕಲ್ಯ ಲಕ್ಷ್ಮೀನರಸಿಂಹನೆಂಬುವನು. ಅನ್ಯೋಕ್ತಿ ಅಥವಾ ಅನ್ಯಾಪದೇಶಗಳೆಂದರೆ ಗಿಡ, ಮರ, ಪಶು, ಪಕ್ಷಿ, ಪ್ರಾಣಿಗಳನ್ನು ನೆಪ ಮಾಡಿಕೊಂಡು ಅವುಗಳನ್ನು ಉದ್ದೇಶಿಸಿ ರಚಿಸಿದ ಪದ್ಯಗಳ ಮೂಲಕ ಮನುಷ್ಯ ಸ್ವಭಾವವನ್ನು, ಸಮಾಜ ಜೀವನವನ್ನು ಧ್ವನಿಸುವುದು.

ವ್ಯಂಗ್ಯ ಅಥವಾ ವಿಡಂಬನೆಯೇ ಇವುಗಳ ರೀತಿ. ಕೆಲವು ಉದಾಹರಣೆಗಳನ್ನು ನೋಡಬಹುದು.

ತಮ್ಮ ದರ್ಪ, ಶಕ್ತಿ, ಹಿಂಸ್ರ ಸ್ವಭಾವಗಳಿಂದ, ಅಸಹಾಯಕರಾದ ಪ್ರಜೆಗಳ ಪಾಲಿಗೆ ಪೀಡಕರಾಗಿರುವ, ಗೋಳಾಡಿಸುವ ರಾಜರು ಮತ್ತು ಅಧಿಕಾರಿಗಳನ್ನು ಸಿಂಹದ ವ್ಯಾಜದಿಂದ ಹೀಗೆ ವಿಡಂಬಿಸಿದ್ದಾನೆ. ಕಾಡು ಪ್ರಾಣಿಗಳು ಮತ್ತು ಸಿಂಹದ ಸಂಭಾಷಣೆಯ ರೂಪದ ಪದ್ಯ.

'ಮೃಗಗಳೆ ಅಳಲೇಕೆ?' 'ಮರಿಗಳ ನೀ ಕೊಂಡಿ'
'ನನಗಾಗಿ ಹೀಗೆ ರೋದಿಪುದೆ?
'ದೇವರು ನಿನ್ನನೆ ದೊರೆ ಮಾಡಿ ಕಳಹಿದು–
ದೇಕೆಂದು ಅಳುತಿಹೆವಿಂದು.

ನಿಜವಾದ ಗುಣವಂತರಾಗಿರುವವರು, ಅರ್ಹತೆಯಿರುವವರನ್ನು ಏನೆಲ್ಲ ಕಷ್ಟ, ಅಪಮಾನಗಳಿಗೆ ಗುರಿಮಾಡಿದರೂ. ಅಂತಿಮವಾಗಿ ಅವರು ಉನ್ನತ ಸ್ಥಾನದಲ್ಲೇ ಶೋಭಿಸುತ್ತಾರೆ ಎಂಬುದನ್ನು ಚಿನ್ನದ ನೆಪದಲ್ಲಿ ಹೀಗೆ ಹೇಳಲಾಗಿದೆ.

ಗಣಿಯಿಂದೆ ತೆಗೆದು ಶಾಣದೆ ಕೊರೆದರು
ತ್ರಾಸಿನೊಳಿಟ್ಟು ತೂಗಿದರು
ಪರಿಹಾರವೀಯೆಲ್ಲ ಅಪಮಾನಕೆನುವೊಲು
ಮೆರೆವೆ ನೀ ನೃಪನ ನೆತ್ತಿಯೊಳು

ಕೋಗಿಲೆಗೆ 'ಅನುಕಂಪ' ಕೋರುವ ನೆಪದಲ್ಲಿ, ತಮ್ಮ ಪಾಡಿಗೆ ತಾವು ಐಶ್ವರ್ಯ ಸಂಪಾದನೆ ಮಾಡಿ ಸುಖವಾಗಿರುವ, ಆದರೆ ಸಮಾಜಕ್ಕೇನೂ ಉಪಯೋಗವಿಲ್ಲದಿರುವವರನ್ನು ಕುರಿತು

ಪರಪುಟ್ಟನಾದೆನೆಂದೇತಕೆ ಕೊರಗುವೆ
ಕೋಗಿಲೆ ಕಲರವದೋರು
ತಮ್ಮನ್ನವನು ತಾವು ಗಳಿಪುದೆ ಭಾಗ್ಯವೆ
ನಿನ್ನಂತೆ ದನಿಗೈವರಾರು

ಕ್ಷುದ್ರ ಪ್ರಾಣಿಗಳು, ಜಂತುಗಳಿರುವ ಕಡೆ ಮಾತ್ರ ತನ್ನ ಪರಾಕ್ರಮ ತೋರಬಹುದೇ ಹೊರತು ಬಲಶಾಲಿಯಾದ ಮೃಗರಾಜನಿರುವ ಕಾಡಿನಲ್ಲಿ ಅದರಾಟವೇನೂ ಸಾಗುವುದಿಲ್ಲ ಎಂದು ಹೇಳುವ ಮೂಲಕ ಅರ್ಹತೆ ಸಾಮರ್ಥ್ಯಗಳಿಲ್ಲದ ಯಃಕಶ್ಚಿತ್ ಜನರ ಮುಂದೆ ಅಲ್ಪ ವ್ಯಕ್ತಿ ತನ್ನನ್ನು ತಾನು ಮೆರೆಸಿಕೊಳ್ಳಬಹುದೇ ಹೊರತು, ಪ್ರತಿಭೆ, ಪಾಂಡಿತ್ಯ ಸಾಮರ್ಥ್ಯಶಾಲಿ ಇರುವ ಕಡೆ ಅಂಥ ಅಲ್ಪ ವ್ಯಕ್ತಿ ಸುಳಿಯುವಂತೆಯೇ ಇಲ್ಲ. ಅಷ್ಟೇ ಅಲ್ಲ ಕನಸಿನಲ್ಲೂ ಪಡೆಯಲಾಗುವುದಿಲ್ಲ ಎಂದು ಹೇಳುವ ರೀತಿ.

ಹೀನ ಜಂತುಗಳಿರುವೆಡೆ ಹೋಗಿ ಹೋರಾಡು
ನಿನ್ನ ಶೌರ್ಯವ ತೋರು ಶುನಕ
ಕನಸೊಳು ಸಹ ಲಭ್ಯವಲ್ಲವೋ ಈ ಕಾಡು
ಮೃಗರಾಜ ತಾನಿರುವನಕ

ನೀರಿನ ಅಪಾರವಾದ ನಿಧಿಗೆ ಆಗರವಾಗಿ ನೀರಧಿ ಎನಿಸಿದ್ದರೂ, ಬಾಯಾರಿದವರ ಬಾಯಾರಿಕೆಯನ್ನು ತಣಿಸುವ ಯೋಗ್ಯತೆ ಇಲ್ಲದ ಸಾಗರವನ್ನು ನಿಂದಿಸುವ ನೆಪದಲ್ಲಿ, ಎಷ್ಟೆಲ್ಲ ಅತುಳೈಶ್ವರ್ಯ ತುಂಬಿತುಳುಕುತ್ತಿದ್ದರೂ ಅಗತ್ಯವಿರುವವರಿಗೆ ಏನನ್ನೂ ನೀಡಲು ಸಾಧ್ಯವಿಲ್ಲದ, ಬಡಿವಾರದ, ಶ್ರೀಮಂತರನ್ನು ವಿಡಂಬಿಸಲಾಗಿರುವ ಈ ಕವಿತೆ.

ನೀರಧಿಯಿಹುದೆಂದು ನಿನ್ನೆಡೆ ಬರುವರು
ಸರಸರ ಬಾಯಾರಿದವರು
ನೀರು ಉಪ್ಪೆಂದಾಗ ಗಕ್ಕನೆ ನಿಲುವರು
ಅಬ್ಧಿ ಘೋಷಕ್ಕೆ ಬೆದರುವರು

ಅದೇ ರೀತಿ ಕಡಲನ್ನು ಬೇರೊಂದು ರೀತಿಯಲ್ಲಿ ವರ್ಣಿಸುವ ಮೂಲಕ ಲೋಕ ಸ್ವಭಾವವನ್ನು ವರ್ಣಿಸುವ ಈ ಪದ್ಯ

ಹಸನಾದ ನಗೆಯಿಂದೆ ಮಿದುವಾದ ಉಲಿಯಿಂದೆ
ಕಡಲು ಸೊಂಪಾಗಿದೆ ಹೊರಗೆ
ಒಂದನೊಂದುರೆ ನುಂಗುವಂಥ ಜಲಚರದಿಂದೆ
ಒಡಲು ಬಿಸುಪೇರಿದೆ ಒಳಗೆ.

ಹೊರಗಡೆಯಿಂದ ತುಂಬ ನಯವಾಗಿರುವ ಮೃದುವಾದ ಮಾತುಗಳನ್ನು ಆಡುತ್ತಿದ್ದರೂ ಅಂತರಂಗದಲ್ಲಿ ಕ್ರೌರ್ಯ, ಅಸೂಯೆಗಳಿಂದ ಕೂಡಿರುವ ಮನುಷ್ಯರಿಗೆ ಅನ್ವಯಿಸುವ ಪದ್ಯವಾಗಿದೆ. ನಾನಾ ಬಗೆಯ ಪ್ರಾಣಿ, ಪ್ರಕೃತಿ ದೃಷ್ಟಾಂತಗಳನ್ನು ನೀಡುತ್ತ ಲೋಕ ಸ್ವಭಾವಗಳನ್ನು, ರೀತಿಗಳನ್ನು ವರ್ಣಿಸುವ ವಿಡಂಬಿಸುವ ಇವುಗಳು ಹಾಸ್ಯದ ತೆಳು ಲೇಪದಿಂದ ಕೂಡಿರುವುದು ಕೂಡ ಇವುಗಳ ರೀತಿಯಾಗಿದೆ. ಇಲ್ಲಿ ಕಾಗೆ, ಗೂಬೆ, ಕೋಗಿಲೆ, ನವಿಲು, ನಾಯಿ, ನರಿ, ಹಂಸ, ಸಿಂಹವೇ ಮೊದಲಾದ ಹೆಚ್ಚು ಕಡಮೆ ಎಲ್ಲ ಪ್ರಾಣಿಗಳು, ಬೆಟ್ಟ, ಹೊಳೆ, ಗಾಳಿ, ಕಾಡು, ಮರ, ಗಿಡ ಇತ್ಯಾದಿ ಪ್ರಕೃತಿ ವಸ್ತುಗಳನ್ನು ಸಂಬೋಧಿಸಿದಂತೆ ಇರುತ್ತವೆ.

ಭಟ್ಟರು ಇವನ್ನು ಅಂಶಗಣಾನ್ವಿತವಾದ ಸಾಂಗತ್ಯದಲ್ಲಿ ದೇಸಿ ಸಮನ್ವಿತವಾದ ಕನ್ನಡದಲ್ಲಿ ಅನುವಾದಿಸಿರುವುದು ಅದಕ್ಕೆ ಹೆಚ್ಚಿನ ಮೆರುಗು ತಂದಿದೆ.

ಮೂಲ ಸಂಸ್ಕೃತದ ಸಮವೃತ್ತಗಳನ್ನು ಸಾಂಗತ್ಯವಾಗಿಸುವಾಗ ಮೂಲದ ಸಕಲ ವಿವರಗಳನ್ನು ಅನುವಾದದಲ್ಲಿ ಅಳವಡಿಸುವುದು ಕಷ್ಟ ಸಾಧ್ಯ. ಭಟ್ಟರು ಇದರಲ್ಲಿ ಹೆಚ್ಚು ಯಶಸ್ವಿಯಾಗಿದ್ದಾರೆ.

18. ಅನುವಾದದಲ್ಲಿ ಪರಮೇಶ್ವರ ಭಟ್ಟರು ತೋರಿರುವ ಛಂದೋ ವೈವಿಧ್ಯ

ಈ ಪುಸ್ತಕದಲ್ಲಿ ಈಗಾಗಲೇ ಪ್ರಸ್ತಾಪಿಸಿರುವಂತೆ ಸಂಸ್ಕೃತ ಕಾವ್ಯಗಳ ಅನುವಾದ ಕನ್ನಡ ಸಾಹಿತ್ಯದ ಪ್ರಾರಂಭದಿಂದಲೂ ನಡೆಯುತ್ತಲೇ ಬಂದಿದ್ದರೂ, ಭಾವಕ್ಕೆ ತಕ್ಕ ಭಾಷೆ, ಛಂದಸ್ಸುಗಳನ್ನು ಅಳವಡಿಸಿಕೊಂಡು ವಿಪುಲವಾಗಿ ಛಂದೋ ವೈವಿಧ್ಯತೆಗಳನ್ನು ತೋರಿದವರಲ್ಲಿ ಪರಮೇಶ್ವರಭಟ್ಟರೇ ಮೊದಲಿಗರೆನ್ನಬಹುದು. ಅದರಲ್ಲೂ ಹಳೆಯ ಕಂದ, ವೃತ್ತಗಳ ಧಾಟಿಯನ್ನು ಬಿಟ್ಟು, ಹೊಸಗನ್ನಡದ ವಿವಿಧ ಮಾತ್ರಾಲಯಗಳು ಮತ್ತು ಅಂಶಲಯಗಳನ್ನು ಅಳವಡಿಸಿಕೊಂಡು ಅನುವಾದಿಸಿರುವುದು ಭಟ್ಟರ ವೈಶಿಷ್ಟ್ಯ. ಹಾಗೆ ನೋಡಿದರೆ ಮೊದಲಿನಿಂದಲೂ ಅವರಿಗೆ ಕನ್ನಡದ ದೇಸೀ ಛಂದಸ್ಸುಗಳ ಬಗ್ಗೆ ಎಲ್ಲಿಲ್ಲದ ಒಲವು. ಅಂಶಛಂದಸ್ಸಿನ ಸಾಂಗತ್ಯ, ತ್ರಿಪದಿ ಮತ್ತು ಏಳೆ ಛಂದಸ್ಸುಗಳನ್ನು ಬಳಸಿಕೊಂಡು ಹತ್ತಿರಹತ್ತಿರ ಐದು ಸಾವಿರದಷ್ಟು ಮುಕ್ತಕಗಳನ್ನು ರಚಿಸಿದವರು ಅವರು. ಒಂದು ರೀತಿಯಲ್ಲಿ ಅವುಗಳನ್ನು ಈ ಕಾಲದಲ್ಲಿ ಜೀರ್ಣೋದ್ಧಾರ ಮಾಡಿದವರು. ಗಾಥಾಸಪ್ತಶತಿಯ ಅನುವಾದಕ್ಕೆ ಸಾಂಗತ್ಯಛಂದಸ್ಸನ್ನು ಅಳವಡಿಸಿಕೊಳ್ಳುವ ಮೂಲಕ ಅದೊಂದು

ಪುನಃಸೃಷ್ಟಿಯೆಂಬಂತೆ ರೂಪಿಸಿರುವದು ಅವರ ಮಹತ್ಸಾಧನೆ. ಅದೇ ರೀತಿಯಲ್ಲಿ ಕಾಳಿದಾಸ, ಭಾಸ, ಭವಭೂತಿ, ಹರ್ಷ, ಜಯದೇವರ ಕೃತಿಗಳ ಕಾವ್ಯ ನಾಟಕಗಳ ಅನುವಾದದಲ್ಲಿ ಅವರು ಹೊಸಗನ್ನಡದ ಪ್ರಮುಖವಾದ ಲಯಗಳನ್ನು ಬಳಸಿಕೊಂಡಿದ್ದಾರೆ. ಅವುಗಳು ಈಗಾಗಲೇ ನಮಗೆ ತಿಳಿದಿರುವ 3 ಮಾತ್ರೆಗಳ ಉತ್ಸಾಹ, 4 ಮಾತ್ರೆಗಳ ಮಂದಾನಿಲ, 5 ಮಾತ್ರೆಗಳ ಲಲಿತ, 3–4 ಮಾತ್ರೆಗಳ ಭಾಮಿನಿಯ ಮಿಶ್ರಲಯಗಳು 3–5 ಮಾತ್ರೆಗಳ ಲಯ ಹಾಗೂ 6 ಮಾತ್ರೆಗಳ ಲಯಗಳು ಮತ್ತು ಇವುಗಳ ವಿವಿಧ ರೀತಿಯ ಜೋಡಣೆಗಳಿಂದ ಹೊರಹೊಮ್ಮುವ ನಾನಾ ಬಗೆಯ ಲಯ ವಿನ್ಯಾಸಗಳೇ ಆಗಿವೆ. ಇದರಿಂದ ಅವು ಅನುವಾದಗಳಾದರೂ ಕನ್ನಡ ಕಾವ್ಯಗಳಾಗಿವೆ.

ಮೇಘದೂತವಂತೂ ಇಡಿಯಾಗಿ 'ಸೀಸ'ದ ಲಯದಲ್ಲಿದೆ. ಇವುಗಳ ಜೊತೆಗೆ ಕಾಳಿದಾಸ ಸಂಪುಟದಲ್ಲಿ ವಿರಳವಾಗಿ ಕಾಣಿಸಿಕೊಂಡ ಸಾಂಗತ್ಯ ಛಂದಸ್ಸನ್ನು ಬುದ್ಧ ಚರಿತೆಯ ಎರಡು ಸರ್ಗಗಳ ಅನುವಾದಕ್ಕೆ ಬಳಸಿಕೊಂಡಿದ್ದಾರೆ. (ಸ್ತ್ರೀವಿಘಾತನ–ಆರಾಡದರ್ಶನ). ಎಂದಿನಂತೆ ಇವು ಆದಿಪ್ರಾಸವನ್ನು ಕೈಬಿಟ್ಟ ಅಂತ್ಯಪ್ರಾಸವನ್ನು ನಿಯತವಾಗಿ ಅಳವಡಿಸಿಕೊಂಡ ಸಲ್ಲಕ್ಷಣದ ಸಾಂಗತ್ಯಗಳು. ಹೀಗಾಗಿ ಅವರ ಅನುವಾದ ಸಂಪುಟಗಳು ಛಂದಸ್ಸಿನಲ್ಲಿಯ ಅವರ ಪ್ರಯೋಗ ಶೀಲತೆ, ಪ್ರಯೋಗ ವೈವಿಧ್ಯ ಮತ್ತು ಪ್ರಯೋಗ ನಾವೀನ್ಯಗಳ ರಂಗಸ್ಥಳವಾಗಿವೆಯೆನ್ನಬಹುದು.

19. ಒಟ್ಟಾರೆ ಎಸ್.ವಿ.ಪಿ. ಅವರ ಸಂಸ್ಕೃತ ಅನುವಾದಗಳನ್ನು ಕುರಿತು

"ಒಂದು ಭಾಷೆಯ ಕವಿತೆಯಲ್ಲಿನ ಕವಿಯ ಭಾವ ಅನುಭವಗಳನ್ನು ಬೆಸಗು ಬೆಡಗುಗಳನ್ನು ಸಮಗ್ರವಾಗಿ ಊಹಿಸಿ, ಗ್ರಹಿಸಿ ಮತ್ತೆ ಅವುಗಳನ್ನು ತನ್ನ ಮನಃಪಟಲದಲ್ಲಿ ಆವಾಹಿಸಿ, ಅನುಗೊಳಿಸಿ, ಆ ಬಳಿಕ ಇನ್ನೊಂದು ಭಾಷೆಯಲ್ಲಿ ತನ್ನದೇ ಆದ ಶೈಲಿಯಲ್ಲಿ ಸಾನುಕ್ರಮವಾಗಿ ಪ್ರವಹಿಸಿ ಛಂದೋಬದ್ಧವಾಗಿ ಅನುವಾದಿಸುವುದು ಸ್ವತಃ ಕಾವ್ಯವನ್ನು ರಚಿಸುವುದಕ್ಕಿಂತ ಸುಲಭತರವಾದ ಕೆಲಸವೇನೂ ಅಲ್ಲ. ಇದಕ್ಕಾಗಿ ಕವಿಯೊಂದಿಗೆ ಭಾವ ತಾದಾತ್ಮ್ಯವನ್ನು ತಾಳುವಂತಹ, ಅನುಭವ ತದೇಕತೆಯನ್ನು ಹೊಂದುವಂತಹ ಸಹೃದಯತೆ ಹಾಗೂ ಸುಹೃದಯತೆ ಇರುವುದು ಅವಶ್ಯಕ. ಕವಿಯಷ್ಟೇ ಭಾವ ವೈಶಾಲ್ಯ ಹಾಗೂ ಅನುಭವ ವೈಶಾಲ್ಯ ಅನುವಾದಕನಿಗೂ ಇರಬೇಕಾದ್ದುಅಗತ್ಯ."[39ಐ]

ಪ್ರೊ. ಎಸ್.ವಿ.ಪಿ. ಯವರು ಸಂಸ್ಕೃತ ಕನ್ನಡ ಎರಡೂ ಭಾಷೆಗಳಲಿ ನುರಿತವರಾಗಿದ್ದು ಸ್ವತಃ ಕವಿಯೂ ಆದ ಕಾರಣ, ಅವರ ಅನುವಾದ ಮೇಲಿನ ಉಲ್ಲೇಖದಲ್ಲಿನ ಅನೇಕ ನಿರೀಕ್ಷೆಗಳನ್ನು ಪೂರೈಸಿದೆ ಎನ್ನಬಹುದು. ಈ ಅನುವಾದಗಳಲ್ಲಿ ಭಟ್ಟರ ಮೊದಲ ಆದ್ಯತೆ ಎಲ್ಲ ಆದರ್ಶ ಅನುವಾದಕಾರರಿಗಿರುವಂತೆ ಸಾಧ್ಯವಾದಷ್ಟು ಮೂಲಕ್ಕೆ ನಿಷ್ಠವಾಗಿರುವುದು. ಈ "ಮೂಲನಿಷ್ಠೆ" ಕೆಲವೊಮ್ಮೆ ಒಂದು ಅತಿಗೆ ಹೋಗಿ ಇಲ್ಲವೆ ಬೇರಾವುದೋ ಅನಿವಾರ್ಯದಿಂದ ಮೂಲದ ಸಂಸ್ಕೃತ ಭೂಯಿಷ್ಠ ಸಮಾಸ ಪದಗಳನ್ನು ಹಾಗೆ ಹಾಗೆಯೇ ಉಳಿಸಿಬಿಟ್ಟಿದ್ದಾರೆ. ಇಲ್ಲವೆ ಹೊಸ ಸಮಾಸ ಪದಗಳನ್ನು ಹಾಕಿಬಿಟ್ಟಿದ್ದಾರೆ. ಇದು ಕುಮಾರಸಂಭವ ಮತ್ತು ರಘುವಂಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಉದಾಹರಣೆಗೆ:

ಕುಮಾರಸಂಭವ

1) **ನೀಲ ಲೋಹಿತ ವೀರ್ಯಸಂಭೂತನಲ್ಲದಿರಲಿಂದು**
ಅಭಿಭವಿಸಲಿರ್ಪನಾ.... [1–57]

2) ಬಳಿಕಲಾಖಂಡನನು ಉತ್ಸಂಗದಿಂದಿಳಿಸಿ
ದಡಿಯಿರಿಸಿ [3–11]

3) ಚೂತಾಂಕುರಾಸ್ವಾದದಾರಕ್ತಗಳ [3–45]

4) ಋಜ್ವಾಯತಾಸೇನನಾಕಂಸದ್ವಯನು [3–45]

5) ಕರ್ಣಾವಸಕ್ತವಾದಕ್ಷಸೂತ್ರದ್ವಯನು
ಸರ್ಪಬಂಧೋದ್ಧೃತಜಟಾಜೂಟನು [3–46]

6) ಸ್ನಾತರಾತೀರ ಮಂದಾರಕುಸುಮೋತ್ಕರ
ಮಹೋರ್ಮಿಯುತಮಾದಾ ವ್ಯೋಮ [6–1]

7) ಸಂಸ್ತುತಿಸುತೀಪ್ಸಿತಾರ್ಥಕ್ರಿಯೋದಾರನಾದಾಗಿರಿಯ [6–90]

8) ಅಭಿವಂದನಾಯೋಪಗತ ದಿವ್ಯಮುನಿಗಳನು [ರಘುವಂಶ 14ನೆಯ ಸರ್ಗ]

9) ವರ್ಣಾಂತರಾಕ್ರಾಂತ ವೇನಸ್ತನಾಗೆ [ರಘುವಂಶ 14ನೆಯ ಸರ್ಗ]

10) ಋದ್ಧಾಪಣಂಗಳಿಂದೆಸೆವ [ರಘುವಂಶ 14ನೆಯ ಸರ್ಗ]

11) ಅಂಭಿಷಂಗ ಜಂಝಾನಲಾಭಿಹತೆ [ರಘುವಂಶ 14ನೆಯ ಸರ್ಗ]

12) ವ್ಯಾಧ ವಿದ್ಧಾಂಡಜ [ರಘುವಂಶ 14ನೆಯ ಸರ್ಗ]

13) ತುಂಗಹರವೃಷಶೃಂಗ ಭಂಗಿತ ತರು [ಶತಕತ್ರಯ]

14) ಕುವಲಯಾಕ್ಷಿರರುಣರತ್ನಗ್ರಂಥಿ ಕಾಂಚೀದಾಮ [ಶತಕತ್ರಯ]

15) ಸುರತಶ್ರಾಂತ ಕಾಂತಾಶಿಥಿಲಬಾಹಾ ಮುಕ್ತಕರ್ಕರಿ [ಶತಕತ್ರಯ]

16) ಹೇಲಾಕರಾಕೃಷ್ಟ ಜಲರಿಕ್ತಸಾಗರ [ಗಾಥಾಸಪ್ತಶತಿ]

17) ಅವಿಹತಬಡಬಾಗ್ನಿಭರಿತ ಮಾದಂಬರ [ಗಾಥಾಸಪ್ತಶತಿ]

18) ತಾನನುಮರಣಘನಾಲಿಂಗನ ಪ್ರಿಯತಮ ಸುಖಸ್ವೇದ ಶೀತಾಂಗಿ [ಗಾಥಾಸಪ್ತಶತಿ]

ಈ 'ಮಿಸುಕದ ಸಕ್ಕದ' ಕನ್ನಡಕ್ಕೆ ಎಷ್ಟು ಮಾತ್ರಕ್ಕೂ ಒಗ್ಗುವುದಿಲ್ಲ. ಅರಗುವುದೂ ಇಲ್ಲ. ಅಷ್ಟರಮಟ್ಟಿಗೆ ಅದು ಅನುವಾದದ ಸೋಲು. ಆದರೆ 32 ಸಂಸ್ಕೃತ ಕೃತಿಗಳ ಸಾವಿರಾರು ಅನುವಾದಿತ ಪದ್ಯಗಳಲ್ಲಿ ಇಂಥವುಗಳ ಸಂಖ್ಯೆ ನಗಣ್ಯವೆಂದೇ ಹೇಳಬೇಕು. ಕನ್ನಡದ ದೇಸಿ ಮಾತುಗಳ ಮೆರವಣಿಗೆಯೇ ಮಿಗಿಲಾಗಿದೆ.

ಅವರ ಎರಡನೇ ಆದ್ಯತೆ, ಮೂಲದಲ್ಲಿ ಎಷ್ಟು ಸಾಲುಗಳಿರುತ್ತವೆಯೋ ಅನುವಾದದಲ್ಲಿಯೂ ಸಾಧ್ಯವಾದಷ್ಟೂ ಅಷ್ಟೇ ಸಾಲುಗಳನ್ನು ಅಳವಡಿಸುವುದು. ಇದು ಕೂಡ ಬಹುಮಟ್ಟಿಗೆ ಈಡೇರಿದೆ. ಇದಕ್ಕಾಗಿ ಅವರು ಹೊಸಗನ್ನಡದ ವಿವಿಧ ಛಂದೋಲಯಗಳನ್ನು ಅರ್ಥಪೂರ್ಣವಾಗಿ ಅಳವಡಿಸಿಕೊಂಡಿದ್ದಾರೆ. ಮೇಘದೂತವನ್ನು 'ಸೀಸ' ಪದ್ಯಗಳಲ್ಲಿ ಚೆಲುವಾಗಿ ಅನುವಾದಿಸಿದ್ದಾರೆ.

ಮೂರನೆಯ ಆದರೆ ಇದರಷ್ಟೇ ಪ್ರಮುಖವಾದ ಅವರ ಆದ್ಯತೆ, ಲಲಿತವಹ ಕನ್ನಡದಲ್ಲಿ, ಕನ್ನಡದ ಜಾಯಮಾನಕ್ಕೆ ಅಂಟಿಬಂದಿರುವ ಪ್ರಾಸ ಮತ್ತು ಅನುಪ್ರಾಸಗಳನ್ನು ಸಾರ್ಥಕವಾಗಿ ಅಳವಡಿಸಿಕೊಳ್ಳುವುದು. ಇದರಲ್ಲಂತೂ ಗರಿಷ್ಠ ಯಶಸ್ಸನ್ನು ಸಾಧಿಸಿದ್ದಾರೆ. ಇದರ ಜೊತೆಗೆ ಕನ್ನಡಕ್ಕೆ ಸಹಜವಾದ ಅರ್ಥಯತಿಯನ್ನು ಅಳವಡಿಸಿಕೊಂಡು ಪದ್ಯಕ್ಕೆ ಚೆಲುವು ತಂದುಕೊಡುವುದರಲ್ಲೂ ಹೆಚ್ಚಿನ ಯಶಸ್ಸು ಸಾಧಿಸಿದ್ದಾರೆ. ಅಕ್ಕರ ಛಂದಸ್ಸನ್ನು ಕುರಿತಂತೆ ಜಯಕೀರ್ತಿ ಹೇಳಿದ- "ಪಾದೇ ಪಾದೇऽತ್ರ ಪ್ರತಿಗಣಮಪಿಯುತಿರ್ಲಕ್ಷ್ಯತೇ

ಸರ್ವೇಷಾಮಕ್ಷರಾಣಾಂ" ಎಂಬ ಮಾತು ಭಟ್ಟರ ಈ ಅನುವಾದಗಳಿಗೂ ಅನ್ವಯಿಸುತ್ತದೆನ್ನಬಹುದು. ಸಾಮಾನ್ಯವಾಗಿ ಪದದೊಂದಿಗೆ ಗಣವೂ ಮುಗಿಯುವುದೇ ಅವರ ರೀತಿ. ಇದೆಲ್ಲಕ್ಕೆ ಈಗಾಗಲೇ ಹಲವಾರು ಉದಾಹರಣೆಗಳನ್ನು ಆಯಾ ಕೃತಿಗಳ ಸಂದರ್ಭದಲ್ಲಿ ನೀಡಲಾಗಿದೆ.

ಹೀಗೆ ಈ ಕವಿ-ವಿದ್ವಾಂಸರ ಅನುವಾದ ಮಹಾವಾಹಿನಿ ಕನ್ನಡ ಕಾವ್ಯಸಾಗರದ ಅವಿಭಾಜ್ಯ ಅಂಗವೆನಿಸಿ ಅದರ ಸಂಪತ್ತನ್ನು ಹಿಗ್ಗಿಸಿದೆ, ಅದರ ಚೆಲುವನ್ನು ಹೆಚ್ಚಿಸಿದೆ.

5. ಅನುವಾದ – ಇಂಗ್ಲಿಷಿನಿಂದ

20. ಭೂಮಿ ಮತ್ತು ಧೂಮಕೇತು

ಎಸ್.ವಿ.ಪಿ. ಅವರಿಗೆ ಅನುವಾದದ ಬಗ್ಗೆ ಅಭಿರುಚಿ ಮತ್ತು ಆಸಕ್ತಿ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದ ಕಾಲದಲ್ಲೇ ಅಂಕುರಿಸಿತ್ತು. ಅದಕ್ಕೆ ಪುರಾವೆಯೆಂದರೆ ಆ ಕಾಲದಲ್ಲೇ ಕಾರ್ಲ್ ಎವಾಲ್ಡ್‌ನ Earth and the comet ಹಾಗೂ ಶ್ರೀಮತಿ ಮಾರ್ಗರೇಟ್ ಗೇಟ್ಟಿ ಅವರ Light of truth ಇವೆರಡೂ ಇಂಗ್ಲಿಷ್ ಕಥೆಗಳ ಅನುವಾದವನ್ನು ಮಾಡಿದ್ದು. ಆದರೆ ಪ್ರಕಟವಾದ್ದು ಮಾತ್ರ ಎಷ್ಟೋ ವರ್ಷಗಳ ನಂತರ. ಮೊದಲನೆಯದನ್ನು ಲೇಖಕನ The old post and other nature stories ಎಂಬ ಸಂಕಲನದಿಂದ ಆರಿಸಿದ್ದರೆ ಎರಡನೆಯದು ಶ್ರೀಮತಿ ಗೇಟ್ಟಿ ಅವರ Parables from nature ಎಂಬ ಕಥಾಸಂಕಲನದಿಂದ ಆರಿಸಿದ್ದು. ವೈಜ್ಞಾನಿಕ ಸಂಗತಿಗಳನ್ನು ಮಕ್ಕಳಿಗೆ ಕುತೂಹಲ ಹುಟ್ಟಿಸುವ ಮತ್ತು ಅವರ ಆಸಕ್ತಿಯನ್ನು ಕೆರಳಿಸುವ ರೀತಿಯಲ್ಲಿ ಕಥೆಯ ರೂಪದಲ್ಲಿ ಹೇಳಿದರೆ ಅದನ್ನು ಮಕ್ಕಳು ಇಷ್ಟ ಪಡುತ್ತಾರೆ ಎಂಬುದು ಇವುಗಳ ಹಿಂದಿರುವ ತರ್ಕ. ಅದು ನಿಜ ಕೂಡ. ಭೂಮಿಯ ಹುಟ್ಟು, ಭೂಮಿ, ಸೂರ್ಯ, ಚಂದ್ರ ಮತ್ತು ಧೂಮಕೇತುಗಳ ಹುಟ್ಟು ಮತ್ತು ಸಂಬಂಧಗಳು ಯಾವ ತೆರನವು ಎಂಬೆಲ್ಲ ಸಂಗತಿಗಳನ್ನು ಸರಳ ಕಥೆಗಳ ರೂಪದಲ್ಲಿ ನಿರೂಪಿಸಿರುವುದೇ ಈ ಕತೆಗಳ ವೈಶಿಷ್ಟ್ಯ. ಮಕ್ಕಳ ಮನಸ್ಸು ಯಾವಾಗಲೂ ಅದ್ಭುತರಮ್ಯ ಪ್ರಪಂಚದ್ದು. ಪಂಚತಂತ್ರದ ಕಥೆಗಳಲ್ಲಿ ಪ್ರಾಣಿ ಪಕ್ಷಿಗಳೂ ಮನುಷ್ಯರಂತೆ ಮಾತನಾಡುವುದನ್ನು ನಾವು ಕಾಣುವ ಹಾಗೆ ಈ ಎರಡೂ ಕಥೆಗಳಲ್ಲಿ ಬರುವ ಭೂಮಿ, ಧೂಮಕೇತು ಮತ್ತು ಕೊಳ್ಳಿದೆವ್ವ ಎಂದು ನಂಬಲಾದ ರಂಜಕದ ಜ್ವಾಲೆ ಇವು ಮಾತನಾಡುತ್ತವೆ. ಅದೇ ಒಂದು ಬೆರಗಿನ ಲೋಕ. 'ಸತ್ಯದ ಬೆಳಕು' ಕಥೆಯಲ್ಲಿ ಜನ, ದೂರದಲ್ಲಿ ಹೊಳೆಯುವ ಜ್ವಾಲೆಯಂಥದನ್ನು ನೋಡಿ ಕೊಳ್ಳಿದೆವ್ವ ಎಂದು ಕರೆದು ಹೆದರುತ್ತಿದ್ದುದು ವಾಸ್ತವವಾಗಿ ರಂಜಕದ ಜ್ವಾಲೆ ಎಂಬ (ವೈಜ್ಞಾನಿಕ) ವಸ್ತು ಸಂಗತಿಯನ್ನು ತಿಳಿಸುವ ಕಥಾರೂಪ. ಇದರಲ್ಲಿ ಸಂವಾದವನ್ನು ಕೂಡ ಅಳವಡಿಸಿ ಕೊಳ್ಳಲಾಗಿದೆ.

ಈ ಎರಡೂ ಕಥೆಗಳ ಭಾಷೆ ಮೂಲದಲ್ಲೇ ತುಂಬ ಸರಳವಾಗಿದೆ. ಭಟ್ಟರು ಈ ಸರಳ ಭಾಷೆಯನ್ನು ಕನ್ನಡದ ಜಾಯಮಾನಕ್ಕೆ ಹೊಂದುವ ಹಾಗೆ, ಸಹಜವಾಗಿ ಅನುವಾದಿಸಿರುವುದರಿಂದ, ವಿಷಯಗಳನ್ನು ಗ್ರಹಿಸಲು ಮಕ್ಕಳಿಗೆ ತುಂಬ ಸಹಾಯಕವಾಗಿದೆ. ಉದಾಹರಣೆಗೆ **'ಭೂಮಿ ಮತ್ತು ಧೂಮಕೇತು'**ವಿನಲ್ಲಿ ಬರುವ ಈ ವಾಕ್ಯಗಳ ಮೂಲ ಮತ್ತು ಅನುವಾದ ನೋಡಿದರೆ, ಭಟ್ಟರ ಅನುವಾದದ ಸ್ವಾರಸ್ಯ ತಿಳಿಯುತ್ತದೆ.

The earth pushed its cap of ice to one side so that half the Atlantic ocean was filled with ice bergs and the new forest did not burst in to leaf till white suntide.

ಕನ್ನಡ ಅನುವಾದ:

"ಭೂಮಿ ತನ್ನ ಮಂಜಿನ ಟೋಪಿಯನ್ನು ಒಂದು ಕಡೆಗೆ ನೂಕಿಕೊಂಡಿತು. ಅಟ್ಲಾಂಟಿಕ್ ಸಾಗರದ ಅರ್ಧ ಭಾಗವೆಲ್ಲ ಮಂಜುಗಡ್ಡೆಗಳಿಂದ ತುಂಬಿಹೋಯಿತು. ವೈಟ್‌ಸನ್ ಟೈಡ್ ಎಂಬ ಕ್ರಿಶ್ಚಿಯನ್ನರ ಹಬ್ಬ ಬರುವವರೆಗೂ ದಕ್ಷಿಣ ಇಂಗ್ಲೆಂಡಿನ ಮರಗಿಡಗಳು ಚಿಗುರಲೇ ಇಲ್ಲ."

ಮೂಲದ ಒಂದೇ ಇಂಗ್ಲಿಷ್ ಸಂಕೀರ್ಣ ವಾಕ್ಯವನ್ನು ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಮೂರು ಸರಳ ವಾಕ್ಯಗಳಾಗಿ ಒಡೆದಿರುವುದರಿಂದ ವಿಷಯವನ್ನು ಸುಲಭವಾಗಿ ಗ್ರಹಿಸಬಹುದು.

"Hold your tongue and mind your own business" said the earth who was furious" ಎಂಬ ವಾಕ್ಯ – "ಬಾಯಿ ಮುಚ್ಚಿಕೊಂಡು ನಿನ್ನ ಕೆಲಸ ನೀನು ಮಾಡು" ಸಿಟ್ಟಿನಿಂದ ಭೂಮಿ ಉರಿದು ಹೇಳಿತು – ಎಂದು ಅತ್ಯಂತ ಸಹಜವಾದ ರೀತಿಯಲ್ಲಿ ಅನುವಾದಿಸಿರುವುದು ಅದರ ಗುಣವನ್ನು ಹೆಚ್ಚಿಸಿದೆ.

ಹೀಗೆ ಈ ಸಣ್ಣ ಪುಸ್ತಕ ಮಕ್ಕಳ ಕುತೂಹಲವನ್ನು ಕೆರಳಿಸುತ್ತಲೇ ಅವರ ಜ್ಞಾನದ ಹಸಿವನ್ನು ತಣಿಸುವ ಕೆಲಸವನ್ನೂ ಮಾಡುತ್ತದೆಂಬುದು ನಿಜಕ್ಕೂ ಸಂತಸದ ಸಂಗತಿ. ಅಲ್ಲದೆ, ಕವಿ ಮತ್ತು ವಿದ್ವಾಂಸರಾದ ಎಸ್.ವಿ.ಪಿ. ವೈಜ್ಞಾನಿಕ ಕಥೆಗಳನ್ನು ಅನುವಾದಿಸುವುದರ ಕುರಿತು ಅಷ್ಟು ಹಿಂದೆಯೇ ಆಸಕ್ತಿ ತಾಳಿದ್ದರೆಂಬುದು ಕೂಡ ಮಹತ್ವದ ಸಂಗತಿ.

21. ಕೆಲವು ಇಂಗ್ಲಿಷ್ ಪ್ರಬಂಧಗಳು

ಇಪ್ಪತ್ತನೇ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದ ಸಂಪರ್ಕದ ಫಲವಾಗಿ ಕನ್ನಡದಲ್ಲಿ ನೂತನ ಸಾಹಿತ್ಯ ಪ್ರಕಾರಗಳು ತಲೆದೋರಿದ್ದು ಸರಿಯಷ್ಟೆ. ಹಾಗೆ ಕನ್ನಡದಲ್ಲಿ ಕಾಣಿಸಿಕೊಂಡ ಭಾವಗೀತೆ, ಸಣ್ಣಕತೆ, ಕಾದಂಬರಿ ಮುಂತಾದ ಹೊಸ ಸಾಹಿತ್ಯ ಪ್ರಕಾರಗಳಲ್ಲಿ ವಿಶೇಷವಾಗಿ ಪರಿಗಣಿಸಬೇಕಾದ್ದು ಪ್ರಬಂಧ ಸಾಹಿತ್ಯ ಪ್ರಕಾರ. ಉಳಿದ ಸಾಹಿತ್ಯ ಪ್ರಕಾರಗಳನ್ನು ಸ್ಥೂಲವಾಗಿ ಹೋಲುವಂಥ ರಚನೆಗಳು ನಮ್ಮ ಹಿಂದಿನ ಸಾಹಿತ್ಯದಲ್ಲಿ ಇದ್ದೇ ಇದ್ದುವು ಎಂದು ತೋರಿಸಬಹುದಾದರೂ ಪ್ರಬಂಧ ಸಾಹಿತ್ಯವಂತೂ ಕನ್ನಡಕ್ಕೆ ಹೊಚ್ಚ ಹೊಸತು. ಪೂರ್ತಿಯಾಗಿ ಆಂಗ್ಲ ಸಾಹಿತ್ಯದ ಕೊಡುಗೆ. ಮನಸ್ಸನ್ನು ಸ್ವಚ್ಛಂದವಾಗಿ ಹರಿಯಬಿಟ್ಟು ಓದುಗನೊಂದಿಗೆ ಆತ್ಮೀಯ ಸಂವಾದ ನಡೆಸುತ್ತ ಸಾಗುವ ಪ್ರಬಂಧಕಾರನ ಅನುಭವಗಳು, ಲೋಕದ ವಿಷಯಕ್ಕೆ ಅವನ ಪ್ರತಿಕ್ರಿಯೆಗಳು, ಪ್ರಬಂಧದಲ್ಲಿ ಅಭಿವ್ಯಕ್ತಿ ಪಡೆದುಕೊಳ್ಳುತ್ತ ಹೋಗುತ್ತವೆ. ಫ್ರಾನ್ಸಿಸ್ ಬೇಕನ್, ಸ್ಟೀಲ್, ಜೋಸೆಫ್ ಅಡಿಸನ್, ಆಲಿವರ್ ಗೋಲ್ಡ್‌ಸ್ಮಿತ್, ಚಾರ್ಲ್ಸ್ ಲ್ಯಾಂಬ್, ಎ.ಜಿ. ಗಾರ್ಡಿನರ್ ಇವರೆಲ್ಲ ಆಂಗ್ಲ ಪ್ರಬಂಧ ಸಾಹಿತ್ಯದಲ್ಲಿ ವಿಪುಲವಾಗಿ ಕೃಷಿ ಮಾಡಿದ ಪಥ ಪ್ರದರ್ಶಕ ಪ್ರಬಂಧಕಾರರು. ಕನ್ನಡದ ಪ್ರಮುಖ ಲೇಖಕರೆಲ್ಲರೂ ಪ್ರಬಂಧಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿ ಈ ಪ್ರಬಂಧ ಸಾಹಿತ್ಯ ಪ್ರಕಾರ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಎಸ್.ವಿ.ಪಿ. ಅವರು ಆಂಗ್ಲ ಸಾಹಿತ್ಯದ, ಮೇಲೆ ಹೆಸರಿಸಲಾದ (ಹದಿನಾರರಿಂದ ಹತ್ತೊಂಬತ್ತನೇ ಶತಮಾನದ ಕಾಲಾವಧಿಯ) ಕೆಲವು ಪ್ರಮುಖ ಪ್ರಬಂಧಕಾರರ ಹತ್ತು

ಪ್ರಸಿದ್ಧ ಪ್ರಬಂಧಗಳನ್ನು ಕನ್ನಡಕ್ಕೆ ಅನುವಾದಿಸುವ ಮೂಲಕ ಕನ್ನಡದಲ್ಲಿ ಪ್ರಬಂಧದ ಬರವಣಿಗೆಗೆ ಪ್ರೇರಕವಾಗುವ ಕಾರ್ಯ ಮಾಡಿದ್ದಾರೆನ್ನಬಹುದು.

ಭಟ್ಟರು ಸಂಸ್ಕೃತದಿಂದ ಅನುವಾದ ಮಾಡುವುದರಲ್ಲಿ ಸಿದ್ಧಹಸ್ತರೆಂಬುದೇನೋ ಸರಿಯೆ. ಆದರೆ ಅವರು ಇಂಗ್ಲಿಷಿನಿಂದ ಅನುವಾದ ಮಾಡುವುದರಲ್ಲೂ ಏನೂ ಕಡಿಮೆಯಿಲ್ಲ, ಅಷ್ಟೇ ಗಟ್ಟಿಗರು ಎಂಬುದು ಇಂಗ್ಲಿಷಿನಿಂದ ಮಾಡಿದ ಈ ಕೆಲವು ಪ್ರಬಂಧಗಳ ಹಾಗೂ ಮಕ್ಕಳ ಕಥೆಗಳ ಅನುವಾದದಿಂದ ಸಾಧಿತವಾಗಿದೆ. ಇಂಗ್ಲಿಷಿನಿಂದ ಅನುವಾದ ಮಾಡಲಿ, ಸಂಸ್ಕೃತದಿಂದ ಅನುವಾದ ಮಾಡಲಿ, ಮೂಲಕ್ಕೆ ನಿಷ್ಠರಾಗಿ ಅನುವಾದಿಸುವುದು ಅವರ ಜಾಯಮಾನವೇ ಆಗಿ ಬಿಟ್ಟಿದೆ. ಅದೊಂದು ಯಾಂತ್ರಿಕ ಕೃಷಿಯಲ್ಲ, ಅದೂ ಕಲೆಯಾಗಬಲ್ಲುದು ಎಂಬುದಕ್ಕೆ ಈ ಪ್ರಬಂಧಗಳ ಅನುವಾದ ಕೂಡ ನಿದರ್ಶನವಾಗಬಲ್ಲುದು.

ಫ್ರಾನ್ಸಿಸ್ ಬೇಕನ್ ಇಂಗ್ಲಿಷ್ ಪ್ರಬಂಧದ ಪಿತಾಮಹ. ಬಹು ಬಿಕ್ಕಟ್ಟಾದ ಭಾಷಾ ಶೈಲಿಯ, ಹಾಸ್ಯ ಕುಚೋದ್ಯಗಳಿಗೆ ಎಡೆಯಿಲ್ಲದ ಇವನ ಎರಡು ಪ್ರಸಿದ್ಧ ಪ್ರಬಂಧಗಳನ್ನು ಎಸ್.ವಿ.ಪಿ. ಅಷ್ಟೇ ಬಿಗಿಯಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. 'Of travel' ಮತ್ತು 'Of studies' ಪ್ರಬಂಧಗಳನ್ನು 'ಪ್ರವಾಸ' ಮತ್ತು 'ಅಧ್ಯಯನ' ಎಂಬ ಶೀರ್ಷಿಕೆಗಳಲ್ಲಿ ಅನುವಾದಿಸಿದ್ದಾರೆ.

> For quarrels, they are with care and discretion to be avoided. They are commonly for mistresses, healths, place and words. And let a man beware, how he keepeth company with choleric and quarrelsome persons; for they will engage him into their quarrels.

ಭಟ್ಟರ ಅನುವಾದ:

> "ಊರ ವ್ಯಾಜ್ಯಕ್ಕೆ ಹೋಗದಂತೆ ಎಚ್ಚರಿಕೆಯಿಂದಲೂ ವಿವೇಕದಿಂದಲೂ ಹೊರಚ್ಚಾಗಿರಲಿ. ಸಾಮಾನ್ಯವಾಗಿ ಜಗಳವೆಲ್ಲ ಸೂಳೆಗಾಗಿ, ಕುಡಿತಕ್ಕಾಗಿ, ಬೈಗಳಿಗಾಗಿ, ಮೊದಲ ಮರ್ಯಾದೆಗಾಗಿ. ಜಗಳಗಂಟಿಗರೊಡನೆಯೂ ಮುಂಗೋಪಿಗಳೊಡನೆಯೂ ವ್ಯವಹರಿಸದ ಹಾಗೆ ಎಚ್ಚರಿಕೆಯಿಂದಿರಲಿ. ಇಲ್ಲದಿದ್ದರೆ ತಮ್ಮ ಜಗಳಕ್ಕೆ ನಮ್ಮನ್ನು ಎಳೆದುಕೊಳ್ಳುತ್ತಾರೆ."

ಮುಂದಿನದೂ ಅಷ್ಟೇ ಸುಟಿಯಾಗಿ, ಅಕ್ಷರಶಃ ಅನುವಾದವಾಗದೆ ಅರ್ಥಪೂರ್ಣ ಅನುವಾದವೆನಿಸಿದೆ.

> When a traveller returneth home... And let his travel appear rather in his discourse, than his apparel or gesture; and his discourse, let him be rather advised in his answers, than forward to tell stories, and let it appear that he doth not change his country manners, for those of foreign parts, but only prick in some flowers, of that he hath learned abroad in to the customs of his own country.

> "ಪ್ರವಾಸಿಯು ಊರಿಗೆ ಬಂದ ಮೇಲೆ ತನ್ನ ಪ್ರವಾಸದ ಅನುಭವ, ಉಡಿಗೆ ತೊಡಿಗೆಗಳಲ್ಲಿ ಅಂಗಚೇಷ್ಟೆಗಳಲ್ಲಿ ಕಾಣಿಸಿಕೊಳ್ಳುವ ಬದಲು ಮಾತುಕತೆಗಳಲ್ಲಿ ತೋರಿ ಬರಲಿ. ಮಾತುಕತೆಗಳಲ್ಲಿ ಕೂಡ ತಲೆ ಹರಟೆಗಿಂತ ತೂಕದ ಮಾತುಗಳನ್ನು

ಆಡಲಿ. ತನ್ನ ದೇಶದ ಆಚಾರ ವಿಚಾರಗಳನ್ನು ಬಿಟ್ಟು ಪರದೇಶದ ಆಚಾರ ವಿಚಾರಗಳನ್ನು ಅನುಸರಿಸದಿರಲಿ. ಆದರೆ ಪ್ರವಾಸಾನುಭವ ಮಂಜರಿಯ ಒಂದೋ ಎರಡೋ ಹೂವುಗಳನ್ನು ತನ್ನ ದೇಶಪದ್ಧತಿಗೆ ಅಲಂಕಾರವಾಗುವಂತೆ ಸೇರಿಸಿಕೊಳ್ಳಲಿ."

'Of studies' ಕುರಿತು 'ಅಧ್ಯಯನ' ಎಂದು ಅನುವಾದಿಸಿರುವುದೂ ಸರಿಯಾಗಿಯೇ ಇದೆ. ಮೊದಲ ವಾಕ್ಯವೇ ತುಂಬ ಚುರುಕಾದ ಪ್ರವೇಶ ಒದಗಿಸುತ್ತದೆ.

Studies serve for delight, for ornament and ability ಇದನ್ನು ಎಸ್.ವಿ.ಪಿ. "ಅಧ್ಯಯನದಿಂದ ಆನಂದ, ಅಲಂಕಾರ, ಅರ್ಹತೆ ಸಿದ್ಧಿಸುತ್ತದೆ" ಎಂದು ಮಾಡಿದ್ದಾರೆ. ಅಧ್ಯಯನ ಏತಕ್ಕಾಗಿ ಮತ್ತು ಎಂಥ ಪುಸ್ತಕಗಳಿರುತ್ತವೆ ಎಂಬುದನ್ನು ಹೇಳಿರುವ ರೀತಿ ತುಂಬ ಸೊಗಸಾಗಿದೆ:

> Read not to contradict and confute; nor to believe and take for granted; nor to find talk and discourse; but to weigh and consider. Some books are to be tasted, others to be swallowed and some few to be chewed and digested; that is, some books are to be read only in parts; others to be read, but not coriously and some few to be read wholly and with diligence and attention.

ಎಸ್.ವಿ.ಪಿ. ಅವರ ಅನುವಾದ

> "ಪ್ರತಿಷೇಧಕ್ಕಾಗಿ, ಖಂಡನೆಗಾಗಿ ಓದಬೇಡ. ಅಂಧಶ್ರದ್ಧೆ, ಗ್ರಂಥ ದಾಕ್ಷಿಣ್ಯಗಳಿಗಾಗಿಯೂ ಓದಬೇಡ. ಚರ್ಚೆಗಾಗಿ ವಾದಕ್ಕಾಗಿ ಕೂಡ ಓದಬೇಡ. ಆದರೆ ವಿಮರ್ಶಾತ್ಮಕ ವಿಚಾರ ಮಥನಕ್ಕಾಗಿ ಮಾತ್ರ ಓದು. ಕೆಲವು ಪುಸ್ತಕಗಳು ರುಚಿ ನೋಡಬೇಕಾದವು; ಕೆಲವು ಕಬಳಿಸಬೇಕಾದವು. ಕೆಲವು ಮಾತ್ರ ಅಗಿದು ಅರಗಿಸಿಕೊಳ್ಳಬೇಕಾದವು. ಎಂದರೆ ಕೆಲವು ಪುಸ್ತಕಗಳು ಭಾಗಶಃ ಓದಬೇಕಾದವು; ಕೆಲವು ಪೂರ್ಣವಾಗಿ ಓದಬೇಕಾದವು. ಆದರೆ ಹೆಚ್ಚಿನ ಆಸೆಯಿಂದಲ್ಲ. ಕೆಲವು ಮಾತ್ರ ಶ್ರದ್ಧೆ ಅವಧಾನಗಳಿಂದ ಕೂಲಂಕಷವಾಗಿ ಓದಬೇಕಾದವು. to weigh and consider ಗೆ 'ವಿಮರ್ಶಾತ್ಮಕ ವಿಚಾರ ಮಂಥನಕ್ಕಾಗಿ ಮಾತ್ರ ಓದು' ಎಂಬುದು ಅಷ್ಟು ಸರಿಯಾದ ಅನುವಾದವಾಗಲಾರದು. ಆದರೆ ಉಳಿದಂತೆ ಇದು ಸುಂದರವಾದ ಅನುವಾದ.

19ನೇ ಶತಮಾನದ ಹೆಸರಾಂತ ಕವಿ, ಪ್ರಬಂಧಕಾರ ಮತ್ತು ನಾಟಕಕಾರ ಆಲಿವರ್ ಗೋಲ್ಡ್‌ಸ್ಮಿತ್ ತನ್ನ ಸ್ಪಷ್ಟ ಆಲೋಚನೆ, ಸರಾಗ ಶೈಲಿ ಮತ್ತು ಸರಳ ಭಾಷೆಗೆ ಹೆಸರಾದ ಆಂಗ್ಲ ಪ್ರಬಂಧಕಾರ. ಅವನ 'A City Night - Piece' ಪ್ರಬಂಧವನ್ನು ಎಸ್.ವಿ.ಪಿ. "ನಡುರಾತ್ರಿ ನಗರಸಂಚಾರ" ಎಂದು ಅನುವಾದಿಸಿದ್ದಾರೆ. ಈ ಪ್ರಬಂಧದ ಪ್ರಾರಂಭವೇ ಬಹಳ ಕುತೂಹಲ ಪೂರ್ಣವಾಗಿದೆ:

> The clock has just struck two, the expiring taper rises and sinks in the socket, the watchman forgets the hour in slumber, the laborious and the happy are at rest, and nothing wakes but meditation, guilt, revelry, and despair.

ಎಸ್.ವಿ.ಪಿ. ಹೀಗೆ ಅನುವಾದಿಸಿದ್ದಾರೆ

> "ಗಡಿಯಾರ ಈಗ ತಾನೆ ಎರಡು ಗಂಟೆ ಹೊಡೆಯಿತು. ನಂದಿ ಹೋಗುವ ಮುಂಬತ್ತಿಯ ಕಳಿಕೆ ಪಕಪಕನೆ ಹೊಯ್ದಾಡುತ್ತಿದೆ. ಕಾವಲುಗಾರ ಹೊತ್ತು ಮರೆತು ಮಲಗಿದ್ದಾನೆ. ಶ್ರಮಜೀವರೂ ಸಂತುಷ್ಟರೂ ವಿಶ್ರಾಂತರಾಗಿದ್ದಾರೆ. ಧ್ಯಾನಶೀಲರೂ, ಅಪರಾಧಿಗಳೂ, ಪಾನ ವಿಲಾಸಿಗಳೂ, ಭಗ್ನ ಹೃದಯರೂ ಹೊರತಾಗಿ ಉಳಿದೆಲ್ಲರೂ ನಿದ್ರೆಯಲ್ಲಿ ವಿಲೀನವಾಗಿದ್ದಾರೆ."

ಗೋಲ್ಡ್‌ಸ್ಮಿತ್‌ನಷ್ಟೇ ಹೆಸರಾಂತ ಇನ್ನೊಬ್ಬ ಪ್ರಬಂಧಕಾರ ಚಾರ್ಲ್ಸ್ ಲ್ಯಾಂಬ್. ಈತನ ವ್ಯಕ್ತಿತ್ವವೇ ಇವನ ಪ್ರಬಂಧದಲ್ಲಿ ಕಾಣಿಸಿಕೊಳ್ಳುತ್ತದೆ. "ಜೀವನದ ಯಾವ ಅನುಭವವನ್ನಾದರೂ ಕುರಿತು ಸ್ವಾರಸ್ಯವಾಗಿ ಬರೆಯಬಲ್ಲ ಮಹಾಶಕ್ತಿ – ಇವನ ಲೇಖನಿಯ ಸಾಮರ್ಥ್ಯ" (ಮುನ್ನುಡಿ–ಶಾಮರಾವ್).[40] ಕಾಯಿಲೆಯಿಂದ ಹಾಸಿಗೆ ಹಿಡಿದು ಮಲಗಿರುವ ರೋಗಿಯ ಸ್ಥಿತಿ ಕೂಡ ಪ್ರಬಂಧಕ್ಕೆ ವಸ್ತುವಾಗಬಲ್ಲುದೆಂದು ತೋರಿಸುವ ಬರಹ Convalescent. ಇದರ ಮೂಲ ವಾಕ್ಯಗಳು ಹೀಗಿವೆ. To be sick is to enjoy monorchal prerogatives. compare the silent tread and quiet ministry, almost by the eye only, with which he is served with the careless, demeanours. the inceremonious goings in and out clapping of doors, or leaving them open) of the very same attendants when he is getting a little better and you will confess from the bed of sickness (throne let me rather call it) to the elbo chair of convalescence is a fall of dignity, amounting to a deposition.

ಎಸ್.ವಿ.ಪಿ ಇದನ್ನು ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಹೀಗೆ ಕನ್ನಡಿಸಿದ್ದಾರೆ:

> "ಕಾಯಿಲೆ ಮಲಗುವುದು ಸಾರ್ವಭೌಮ ಸದೃಶವಾದ ವಿಶೇಷಾಧಿಕಾರಗಳನ್ನು ಉಪಭೋಗಿಸುವುದಕ್ಕಾಗಿಯೇ. ಮನೆಯವರೂ ಸೇವಕರೂ ಸದ್ದು ಮಾಡದೆ ಓಡಾಡುವುದೇನು! ಗದ್ದಲವಿಲ್ಲದೆ ಓಲೈಸುವುದೇನು, ಕಣ್ಣರಿವಿನಿಂದಲೇ ಸೇವೆಗೈಯಲು ಹವಣಿಸುವುದೇನು! ಆ ಮೇಲೆ ಕಾಯಿಲೆ ಹಿಮ್ಮೆಟ್ಟಿದಂತೆ, ಇವರುಗಳು ಅಜಾಗರೂಕರಾಗಿ ನಡೆದುಕೊಳ್ಳುವುದೇನು! ನಿಸ್ಸಂಕೋಚವಾಗಿ ಬೇಕು ಬೇಕಾದ ಹಾಗೆ ಒಳಕ್ಕೂ ಹೊರಕ್ಕೂ ಓಡಾಡುವುದೇನು! ದಢಾರನೆ ಬಾಗಿಲು ತೆಗೆಯುವುದೇನು! ತೆಗೆದ ಬಾಗಿಲು ಹಾಕಿಕೊಳ್ಳದೆ ಹೋಗುವುದೇನು! ಇದನ್ನೆಲ್ಲ ನೋಡಿದರೆ, ರೋಗಿಯ ಹಾಸಿಗೆಯಿಂದ ನಿರೋಗಿಯ ಆರಾಮ ಕುರ್ಚಿಗೆ ಅದೆಂತಹ ಅಧಃಪತನ! ಅದೆಂತಹ ಪದಚ್ಯುತಿಗೆ ಸದೃಶವಾದ ಸ್ಥಾನಪಲ್ಲಟ!"

ಹದಿನೆಂಟನೆಯ ಶತಮಾನದ ಪ್ರಮುಖ ಪ್ರಬಂಧಕಾರನಾದ ರಿಚರ್ಡ್ ಸ್ಟೀಲ್‌ನ Shame and fear of property ಮತ್ತು The art of conversation ಪ್ರಬಂಧಗಳನ್ನು 'ದುಂದುಗಾರಿಕೆ, ಮಿತವ್ಯಯ' ಮತ್ತು 'ಮಾತುಗಾರಿಕೆ' ಎಂಬ ಹೆಸರಿನಿಂದ ಸೊಗಸಾಗಿ ಕನ್ನಡಿಸಿದ್ದಾರೆ. ಈ ಪ್ರಬಂಧದಲ್ಲಿ ಬರುವ ವ್ಯಕ್ತಿನಾಮಗಳನ್ನು ಮಾತ್ರ ಶ್ರೀಕಾಂತ, ಸುಧಾಮ, ಮೂರ್ತಿ ಎಂದು ನಮ್ಮ ವಾತಾವರಣಕ್ಕೆ ಹೊಂದುವ ಹಾಗೆ ಭಾರತೀಕರಣಗೊಳಿಸಿದ್ದಾರೆ. ಆದರೆ ಅವರಿರುವುದು ಬ್ರಿಟನ್‌ನಲ್ಲಿ ಮತ್ತು ಅವರ ಆದಾಯ ಪೌಂಡುಗಳಲ್ಲಿ. ಅಂದಾಗ ಹೀಗೆ ಭಾರತೀಯ ಹೆಸರುಗಳನ್ನು ಇಡುವುದು ಬೇಕಿರಲಿಲ್ಲವೇನೋ. ಆದರೆ ಅನುವಾದ ಮಾತ್ರ ಮೂಲ ಲೇಖಕನ ಆಲೋಚನಾ ಪ್ರವಾಹಕ್ಕೆ ಅಪೋಹ ಬರದಂತೆ ಮೂಲ

ಪ್ರಬಂಧದ ಸೊಗಸು, ಸ್ವಾರಸ್ಯ ಉಳಿದು ಬರುವಂತೆ ಅನುವಾದಿಸಿದ್ದಾರೆನಲು ಈ ವಾಕ್ಯಗಳು ನಿದರ್ಶನವಾಗಿವೆ.

"ನೀವು ಆತನ ಮನೆಗೆ ಹೋದರೆ ಅದ್ದೂರಿಯ ಊಟ ಉಪಚಾರ ನಡೆಯುತ್ತದೆ. ಆದರೆ ಒಪ್ಪವಿಲ್ಲ, ಓರಣವಿಲ್ಲ. ಯಜಮಾನನ ಮನಸ್ಸೇ ಮನೆಯಲ್ಲಿರುವುದಿಲ್ಲ. ಎಲ್ಲವೂ ಕೃತಕವಾಗಿ ಪ್ರತಿಯೊಂದರಲ್ಲೂ ಒಂದು ತೆರನಾದ ದುಂದೂ ಅಸಡ್ಡೆಯೂ ಕಾಣಬರುತ್ತದೆ".

ಒಟ್ಟಾರೆ, ಭಾಷಾಂತರ ಭಟ್ಟರಿಗೆ ತುಂಬ ಸಲೀಸು. ಅವರ ನಿಷ್ಣಾತಿಗೆ ಇವು ನಿದರ್ಶನವೆನ್ನಬಹುದು. ಮತ್ತು ಅನುವಾದವೆಂದರೆ, ಮೂಲದಲ್ಲಿ ಇರುವ ಒಂದು ಪದಕ್ಕೆ ಯಾಂತ್ರಿಕವಾಗಿ ಇನ್ನೊಂದು ಭಾಷೆಯ ಪದವನ್ನಿಡುವುದು ಅಲ್ಲವೇ ಅಲ್ಲ; ಆ ಭಾಷೆಯ ಜಾಯಮಾನಕ್ಕೆ ಹೊಂದುವ ಹಾಗೆ ಆ ಭಾಷೆಯ ಬನಿ, ಸೊಗಡುಗಳು ಅನುವಾದದಲ್ಲಿ ಉಳಿದು ಬರುವ ಹಾಗೆ ಮಾಡುವುದೇ ಅನುವಾದವೆಂಬುದಕ್ಕೆ ಭಟ್ಟರ ಇಂಗ್ಲಿಷ್ ಅನುವಾದಗಳೂ ನಿದರ್ಶನವಾಗಬಲ್ಲವು. ದೇಜಗೌ ಅವರ ಮಾತಿನಲ್ಲಿ ಹೇಳುವುದಾದರೆ – "ಮೂಲದ ಸೊಗಸು ಸೊಗಡುಗಳು ಆವಿಯಾಗಿ ತೇಲಿಹೋಗದಂತೆ ತರ್ಕ ಸರಣಿಗೆ ಭಂಗ ಬರದಂತೆ; ಆಲೋಚನಾ ಪ್ರವಾಹಕ್ಕೆ ಪ್ರತಿಬಂಧಕವೊದಗದಂತೆ, ವಿಚಾರ ಗಾಂಭೀರ್ಯಕ್ಕೆ ಬಾಧೆಯುಂಟಾಗದಂತೆ, ಶೈಲಿಯ ಮೋಹಕತೆ ಕೆಡದಂತೆ ಈ ಕಾರ್ಯವನ್ನು ಸಾಂಗಗೊಳಿಸಿ ಸಫಲರಾಗಿದ್ದಾರೆ".[41]

ಉಪಸಂಹಾರ

ಪ್ರೊ. ಪರಮೇಶ್ವರ ಭಟ್ಟರ ಹೃದಯ ಕವಿ, ಬುದ್ಧಿ ಒಬ್ಬ ಆಲೋಚಕನದು, ಬದುಕು ಒಬ್ಬ ಅಧ್ಯಾಪಕನದು. ಅದಕ್ಕೆ ತಕ್ಕಂತೆ ಅವರ ಕಾರ್ಯರಂಗ ಕಾವ್ಯ, ವಿಮರ್ಶೆ, ಅನುವಾದ ಮತ್ತು ಅಧ್ಯಾಪನದ್ದು. ಇದುವರೆಗೆ ನೋಡಿದಂತೆ ತೀರ ಸಾಮಾನ್ಯವಾದೊಂದು ಬಡಕುಟುಂಬದಲ್ಲಿ ಹುಟ್ಟಿಬಂದ ಭಟ್ಟರು ಕನ್ನಡ ನವೋದಯದ ಅಧ್ವರ್ಯುಗಳೆನಿಸಿದ ಬಿ.ಎಂ.ಶ್ರೀ., ಟಿ.ಎಸ್.ವೆಂ., ಎ.ಆರ್.ಕೃ. ಅವರುಗಳಿಂದ ಕನ್ನಡದ ದೀಕ್ಷೆ ಪಡೆದು ಕನ್ನಡವೆಂದರೆ, ಅಷ್ಟೇನೂ ಆದರವಿಲ್ಲದಿದ್ದ ಕಾಲದಲ್ಲಿ ಕನ್ನಡದ ಕೈಂಕರ್ಯವನ್ನು ಅವರು ಮಾಡಿದ್ದು ಬಹು ಮುಖವಾಗಿ. ಒಬ್ಬ ಅಪೂರ್ವ ಆಚಾರ್ಯರಾಗಿ, ನಾಲ್ಕು ದಶಕಗಳ ಕಾಲ ಮೈಸೂರು ತುಮಕೂರು, ಶಿವಮೊಗ್ಗ, ಮಂಗಳೂರುಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಹಂತದ ಸಹಸ್ರಾರು ವಿದ್ಯಾರ್ಥಿಗಳ ಜ್ಞಾನದ ಹಸಿವನ್ನು ತಣಿಸಿದ್ದೇ ಅಲ್ಲದೆ ಮಂಗಳೂರು ವಿಶ್ವವಿದ್ಯಾನಿಲಯದ ಸುಭದ್ರ ಅಸ್ತಿವಾರ ಹಾಕುವ ಕಾರ್ಯವನ್ನು ಮಾಡಿದರು. ಇದಕ್ಕೆ ಸರಿಸಮನಾಗಿ ಮಹಾ ವಾಗ್ಮಿಯಾದ ಅವರು ತಮ್ಮ ಭಾಷಣಗಳ ಮೂಲಕ ಎಲ್ಲೆಡೆ ಪ್ರಾಚೀನ ಅರ್ವಾಚೀನ ಕನ್ನಡ ಸಾಹಿತ್ಯ, ಸಂಸ್ಕೃತಿಗಳನ್ನು ಸಾರೋದ್ಧಾರವಾಗಿ ಬಿತ್ತರಿಸುವಂಥ ಕನ್ನಡವನ್ನು ಕಟ್ಟುವ ಕಾಯಕಕ್ಕೂ ಟೊಂಕ ಕಟ್ಟಿ ನಿಂತರು.

ಇವೆರಡಕ್ಕಿಂತ ಮಿಗಿಲಾಗಿ, ಸದ್ದಿಲ್ಲದೆ ಅವರು ನಡೆಸಿದ ಸಾಹಿತ್ಯಕೃಷಿ ವಿಶೇಷವಾಗಿ ಉಲ್ಲೇಖಾರ್ಹವಾದ್ದು. ಕನ್ನಡ ಸಂಸ್ಕೃತಗಳಲ್ಲಿ ಅಪಾರ ಪರಿಶ್ರಮವಿದ್ದ ಈ ಕವಿ ವಿದ್ವಾಂಸರು ಸ್ವತಂತ್ರವಾದ ಕಾವ್ಯ, ವಿಮರ್ಶೆಗಳ ನಿರ್ಮಿತಿಯ ಜೊತೆಜೊತೆಗೆ ಕಷ್ಟದಾಯಕವಾದ ಅನುವಾದ ಕಾರ್ಯವನ್ನೂ ಕೈಗೆತ್ತಿಕೊಂಡು ಅದರಲ್ಲಿ ಒಂದು ಜಲಚಿಹ್ನೆಯನ್ನೇ ಸ್ಥಾಪಿಸಿಬಿಟ್ಟರು. ಈ ಗ್ರಂಥದ ಪುಟಗಳಲ್ಲಿ ಈಗಾಗಲೇ ದಾಖಲಿಸಿರುವಂತೆ ಭಟ್ಟರ ಈ ಅನುವಾದ ಸಾಹಸ ಅದರ ನಿಜವಾದ ಅರ್ಥದಲ್ಲಿ ಅತ್ಯಪೂರ್ವವಾದದ್ದು.

ಭಟ್ಟರು ಕಾವ್ಯಕೃಷಿಗೆ ಪ್ರಾರಂಭಿಸಿದ್ದು ಇಪ್ಪತ್ತನೇ ಶತಮಾನದ ನಲವತ್ತರ ದಶಕದಲ್ಲಿ. ಎರಡನೇ ಕವನ ಸಂಕಲನ ಪ್ರಕಟವಾದ ಕೆಲವೇ ವರ್ಷಗಳಲ್ಲಿ ಕನ್ನಡ ಕಾವ್ಯ ನವೋದಯದ ಭಾವಗೀತ ಕಾವ್ಯಮಾರ್ಗವನ್ನು ಬಿಟ್ಟುಕೊಟ್ಟು ನವ್ಯದ ಹಾದಿ ಹಿಡಿಯಿತು. ನವೋದಯದ ಸುಕುಮಾರವಾದ ಭಾವಗೀತ ಮಾರ್ಗಕ್ಕೆ ಒಗ್ಗಿಹೋಗಿದ್ದ ಭಟ್ಟರು, ನವ್ಯಮಾರ್ಗ ತನ್ನ ರುಚಿ ಅಭಿರುಚಿಗಳಿಗೆ ಒಗ್ಗದ್ದು ಎಂಬುದನ್ನು ಕಂಡುಕೊಂಡು ಸಾಹಿತ್ಯದಲ್ಲಿ ಏನಾದರೂ ಮಹತ್ತಾದ್ದನ್ನು ಸಾಧಿಸಲೇಬೇಕೆಂಬ ಸಂಕಲ್ಪ ಮಾಡಿದ್ದರೋ ಎಂಬಂತೆ ಅನುವಾದಗಳು,

ಮುಕ್ತಕಗಳು ಮತ್ತು ವಿಮರ್ಶೆಯತ್ತ ತಿರುಗಿ ಅವುಗಳ ಕೃಷಿಯಲ್ಲಿ ತೊಡಗಿಸಿಕೊಂಡರು. ಹಾಗಾಗಿ 1965ರಲ್ಲಿ ಅವರ ಮೂರನೇ ಕವನಸಂಕಲನ ಪ್ರಕಟವಾಗುವ ಹೊತ್ತಿಗಾಗಲೇ ಅವರ ಸ್ವತಂತ್ರ ಮುಕ್ತಕ ಕಾವ್ಯವಾದ ಇಂದ್ರಚಾಪ, ಕನ್ನಡ ಕಾಳಿದಾಸ ಮಹಾಸಂಪುಟ, ಸೀಳುನೋಟ (ವಿಮರ್ಶೆ), ಅಮರು ಶತಕಗಳು ಪ್ರಕಟವಾಗಿದ್ದುವು. ಗಾಥಾ ಸಪ್ತಶತಿ ಕೂಡ ಪ್ರಕಟಣೆಯ ಹಂತಕ್ಕೆ ಬಂದಿತ್ತು. ಮುಂದೆ ಕೂಡ ಸ್ವತಂತ್ರ ಕಾವ್ಯ ರಚನೆಯನ್ನು ವಿರಳವಾಗಿ ನಡೆಸಿದರಾದರೂ ತಮ್ಮೆಲ್ಲ ಸಮಯ, ಆಸಕ್ತಿ ಮತ್ತು ಪರಿಶ್ರಮಗಳನ್ನು ಅನುವಾದ ಮತ್ತು ಮುಕ್ತಕಗಳಿಗೆ ಮೀಸಲಿಟ್ಟರು. ಇಲ್ಲಿಯೂ ಅವರದು ಅತ್ಯಂತ ಪ್ರಯೋಗಶೀಲವಾದ ಮನಸ್ಸು. ನವೋದಯದ ಕಾಲದಲ್ಲಿ ಹೊಸ ಛಂದಸ್ಸಿನ ಲಯಗಳಲ್ಲಿ ಕಾವ್ಯರಚನೆ ಮಾಡುವುದರಲ್ಲಿ, ಕವಿಗಳು ನಿರತರಾಗಿದ್ದಾಗ ಭಟ್ಟರು, ಹಳೆಯ ದೇಶೀ ಛಂದಸ್ಸುಗಳಾದ ಸಾಂಗತ್ಯ, ತ್ರಿಪದಿ, ಏಳೆಗಳಲ್ಲಿ ವಿಪುಲವಾಗಿ ಕಾವ್ಯರಚನೆಗೆ ತೊಡಗುವ ಮೂಲಕ ಅವುಗಳನ್ನು ಪುನರುಜ್ಜೀವನಗೊಳಿಸುವ ಕಾರ್ಯ ಮಾಡಿದ್ದು ಒಂದು ಬಗೆಯಾದರೆ, ಸಂಸ್ಕೃತ ಕಾವ್ಯ, ನಾಟಕಗಳ ಅನುವಾದಕ್ಕೆ ಹಿಂದಿನವರೆಲ್ಲ ವೃತ್ತ ಕಂದಗಳತ್ತ ಮುಖಮಾಡಿದ್ದ ಸಂದರ್ಭದಲ್ಲಿ ಅದನ್ನು ಬಿಟ್ಟುಕೊಟ್ಟು ಹೊಸ ಛಂದಸ್ಸಿನ ವಿವಿಧ ಲಯಗಳನ್ನು ಬಳಸಿಕೊಂಡದ್ದು ಇನ್ನೊಂದು ಬಗೆ. ಕಾಳಿದಾಸ, ಭಾಸ, ಭವಭೂತಿ, ಹರ್ಷ, ಹಾಲ, ಅಮರು, ಭರ್ತೃಹರಿ, ಜಯದೇವ ಮೊದಲಾದ ಕವಿಶ್ರೇಷ್ಠರ ಸಮಗ್ರ ಕೃತಿಗಳನ್ನು ಹೊಸ ಛಂದಸ್ಸಿನ ಲಯಗಳಲ್ಲಿ ಹೀಗೆ ಒಬ್ಬರೇ ಅನುವಾದಿಸಿದ ಇನ್ನೊಂದು ಉದಾಹರಣೆ ಇಲ್ಲ. ಈ ದೃಷ್ಟಿಯಿಂದ ಅವರ ಈ ಅನುವಾದ ಕಾರ್ಯ ಭಾರತೀಯ ಸಾಹಿತ್ಯದಲ್ಲೇ ಒಂದು ಸಾರ್ವಕಾಲಿಕ ದಾಖಲೆ ಎನ್ನಬಹುದು. ಇದರ ಜೊತೆಗೆ ಇಂಗ್ಲಿಷಿನಿಂದಲೂ ಕೆಲವು ಹೆಸರಾಂತ ಪ್ರಬಂಧಕಾರರ ಪ್ರಬಂಧಗಳನ್ನು ಕನ್ನಡ ಪ್ರಬಂಧ ಸಾಹಿತ್ಯದ ಆರಂಭ ಕಾಲದಲ್ಲೇ ಅನುವಾದಿಸಿದ್ದು ಕೂಡ ಮುಖ್ಯ ಸಂಗತಿಯೇ. ಹೊಸಗನ್ನಡದಲ್ಲಿ ಸುಮಾರು ಎರಡು ಸಾವಿರದಷ್ಟು ವಚನಗಳನ್ನು ರಚಿಸುವ ಮೂಲಕ ಹೊಸಕಾಲದ ವಸ್ತು ವಿಚಾರಗಳಿಗೆ ಆ ಮಾಧ್ಯಮದ ಮೂಲಕ ಅಭಿವ್ಯಕ್ತಿ ನೀಡಿದರು.

ಅವರು ಮಾಡಿದ ಇನ್ನೊಂದು ವಿನೂತನ ಪ್ರಯೋಗವೆಂದರೆ, ಸಾಮಾನ್ಯವಾಗಿ ಸಮೂಹಸೃಷ್ಟಿಯೆಂದೇ ನಂಬಲಾದ ಗಾದೆ ಮತ್ತು ಒಗಟುಗಳ ರಚನೆಗೂ ಕೈ ಹಾಕಿ ತುಂಬ ಸ್ವಾರಸ್ಯಕರವೂ, ಅರ್ಥಪೂರ್ಣವೂ ಆದ ಗಾದೆಗಳ ಮತ್ತು ಒಗಟುಗಳ ಸಂಕಲನವನ್ನು ಹೊರತಂದದ್ದು.

ಭಟ್ಟರು ಕೇವಲ ಲೇಖಕರಷ್ಟೇ ಅಲ್ಲ; ಪ್ರಕಾಶಕರೂ ಹೌದು. ಐವತ್ತರ ದಶಕದ ಕೊನೆಯಲ್ಲಿ 'ಸರಸ ಸಾಹಿತ್ಯ ಪ್ರಕಾಶನ' ಎಂಬ ಪ್ರಕಾಶನ ಸಂಸ್ಥೆ ಸ್ಥಾಪಿಸಿ, ತಮ್ಮದೇ ಕೃತಿಗಳ ಜೊತೆಗೆ ತಮ್ಮ ವಿದ್ಯಾರ್ಥಿಗಳ ಪ್ರಾರಂಭದ ಬರಹಗಳನ್ನು ಪ್ರಕಟಿಸಿದರು. ಹೀಗೆ ಪ್ರಕಟವಾದ ಬರಹಗಳಲ್ಲಿ ಡಾ. ಚಿದಾನಂದಮೂರ್ತಿ, ಡಾ. ಸಾ.ಶಿ. ಮರುಳಯ್ಯ, ಪ್ರೊ. ಸುಜನಾ ಅಂಥವರ ಕೃತಿಗಳೂ ಸೇರಿವೆ. ಮುಂದೆಯೂ ಮಂಗಳೂರಿನಲ್ಲಿದ್ದಾಗ 'ಮನೋರಮಾ ಪ್ರಕಾಶನ', 'ಪಲಚಂವಿ ಪ್ರಕಾಶನ' ಎಂಬೆಲ್ಲ ಪ್ರಕಾಶನಗಳನ್ನು ಸ್ಥಾಪಿಸಿ ಪುಸ್ತಕಗಳನ್ನು ನಿರಂತರವಾಗಿ ಪ್ರಕಟಿಸುತ್ತ ಹೋದರು. ಅವರು ಯಾವಾಗಲೂ ಹೇಳುತ್ತಿದ್ದ ಮಾತೆಂದರೆ, "ಇಂಗ್ಲಿಷಿನಲ್ಲಿ publish or perish ಎಂಬ ಮಾತಿದೆ. ಆದರೆ ನಾನು ಅದನ್ನು publish and perish ಎಂದು ತಿದ್ದುತ್ತೇನೆ." ಎಂದು. ಆ ಮಾತಿಗೆ ತಕ್ಕಂತೆ ಎಷ್ಟೇ ಕಷ್ಟವಾದರೂ, ಗ್ರಂಥಗಳನ್ನು ಪ್ರಕಟಿಸುವ ಸಾಹಸವನ್ನು ಬದುಕಿನ ಕೊನೆಯವರೆಗೂ ಒಂದು ವ್ರತದಂತೆ ನಡೆಸಿ, ಕಾಳಿದಾಸ, ಭಾಸ, ಭವಭೂತಿ, ಹರ್ಷರ ಸಮಗ್ರ ಕೃತಿಗಳ

ಅನುವಾದ ಸಂಪುಟಗಳನ್ನು ಭಟ್ಟರು ಕನ್ನಡ ಲಿಪಿಯಲ್ಲಿ ಮೂಲ ಸಂಸ್ಕೃತ ಪಾಠದೊಂದಿಗೆ ಪ್ರಕಟಿಸಿದರು. ವ್ಯವಹಾರ ಕುಶಲಿ ಅಲ್ಲವಾದ್ದರಿಂದ ಈ ಸಾಹಸದಲ್ಲಿ ಸಾಲವನ್ನು ಮೈಮೇಲೆಳೆದುಕೊಂಡು ಸಂಕಷ್ಟಗಳಿಗೆ ತಮ್ಮನ್ನು ಒಡ್ಡಿಕೊಳ್ಳಲು ಕೂಡ ಹಿಂಜರಿಯಲಿಲ್ಲವೆಂಬುದು ಅವರ ವ್ಯಕ್ತಿತ್ವದ ಇನ್ನೊಂದು ಮುಖದ ದ್ಯೋತಕ.

ಪ್ರೊ. ಪರಮೇಶ್ವರ ಭಟ್ಟರಿಗೆ ಅವರ ಸಾಧನೆಗೆ ತಕ್ಕ ಮನ್ನಣೆಗಳು ಅವರ ಜೀವಿತಕಾಲದಲ್ಲಿ ದೊರಕಲಿಲ್ಲವೆಂದೇ ಹೇಳಬೇಕು. ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ, ಸಾಹಿತ್ಯ ಪರಿಷತ್ತಿನ ಚಾವುಂಡರಾಯ ಪ್ರಶಸ್ತಿ, ಶ್ರವಣಬೆಳಗೊಳದ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆಗಳಷ್ಟೇ ಹೆಸರಿಸಬಹುದಾದ ಪ್ರಮುಖ ಮನ್ನಣೆಗಳು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಅವರ ಹೆಸರಿನ ಪ್ರಸ್ತಾಪ ಹಲವು ಸಲ ಆದರೂ ಅಂತಿಮವಾಗಿ ಅದು ಅವರಿಗೆ ತಪ್ಪಿಯೇ ಹೋಯಿತು. ಪಂಪ ಪ್ರಶಸ್ತಿ ಕೂಡ ಬರಬಹುದಾಗಿತ್ತಾದರೂ ಬರಲಿಲ್ಲ. ಆದರೆ ಸ್ಥಾನಮಾನಗಳ ವಿಷಯಕ್ಕೆ ಎಂದಿನಿಂದಲೂ ನಿರ್ಲಿಪ್ತರೆಂಬಂತಿದ್ದುಕೊಂಡು, ತಮ್ಮ ಪಾಡಿಗೆ ತಾವು ಮೌನ ಸಾಧನೆ ಮಾಡುತ್ತ ಹೋದ ಇಂಥ ಕವಿ ವಿದ್ವಾಂಸ, ಅನುವಾದಕ ಪ್ರಾಧ್ಯಾಪಕರನ್ನು ನಾಡು ಮರೆಯುವಂತೆಯೇ ಇಲ್ಲ.

ಏನೇ ಆದರೂ ಮೊದಲನೇ ಮಹಾಯುದ್ಧದ ಪರ್ವಕಾಲದಲ್ಲಿ ಹುಟ್ಟಿದ ಪರಮೇಶ್ವರ ಭಟ್ಟರು ಜೀವನದುದ್ದಕ್ಕೂ ಸಮಸ್ಯೆಗಳೊಂದಿಗೆ ಹೋರಾಡುತ್ತಲೇ ಇದ್ದರೂ ಎಂದೂ ಮನಸ್ಸಿನ ಶಾಂತಿ ನೆಮ್ಮದಿಗಳನ್ನು ಕಳೆದುಕೊಳ್ಳದೆ, ಸಾಹಿತ್ಯ ರಚನೆಯಲ್ಲಿ ತಮ್ಮನ್ನು ಗಾಢವಾಗಿ ತೊಡಗಿಸಿಕೊಂಡು, ವಿಪುಲವೂ, ವೈವಿಧ್ಯಪೂರ್ಣವೂ ಆದ ಗ್ರಂಥಗಳ ಕೊಡುಗೆ ನೀಡುವ ಮೂಲಕ ಕನ್ನಡ ಸಾಹಿತ್ಯ ಸಂಪತ್ತಿನ ಹೆಚ್ಚಳಕ್ಕೆ ವಿಶಿಷ್ಟ ರೀತಿಯಲ್ಲಿ ಕಾರಣರಾದರೆಂಬುದು ಸಾಮಾನ್ಯ ಸಂಗತಿಯೇನಲ್ಲ.

ಟಿಪ್ಪಣಿಗಳು

1. ಎಸ್.ಪಿ. ರಾಮಚಂದ್ರ: 'ಪಿತೃದೇವೋಭವ': ಪರಮೇಶ್ವರ ಪ್ರಶಸ್ತಿ, ಪು.234
1ಎ. ಎಚ್.ಜೆ. ಲಕ್ಕಪ್ಪಗೌಡ: 'ನೋವುಂಡು ನಗೆಚೆಲ್ಲುವ ಅಜಾತ ಶತ್ರು', ಪೂರ್ಣಕುಂಭ, ಪು.13
2. ಎಸ್.ಪಿ. ನಾಗರತ್ನ: 'ನಾನು ಕಂಡಂತೆ ನನ್ನ ತಂದೆ', ಪರಮೇಶ್ವರ ಪ್ರಶಸ್ತಿ, ಪು.243
2ಎ. ಎಚ್.ಕೆ. ರಂಗನಾಥ್: "ಅಗ್ನಿದಿವ್ಯ" – ಪರಮೇಶ್ವರ ಪ್ರಶಸ್ತಿ: ಪು.125
2ಬಿ. ಎಸ್.ಪಿ. ನಾಗರತ್ನ: 'ನಾನು ಕಂಡಂತೆ ನನ್ನ ತಂದೆ', ಪರಮೇಶ್ವರ ಪ್ರಶಸ್ತಿ, ಪು.244
3. ಎಸ್.ವಿ. ಪರಮೇಶ್ವರಭಟ್ಟ: "ಆತ್ಮಕಥೆ", ಪರಮೇಶ್ವರ ಪ್ರಶಸ್ತಿ, ಪು.30
4. ಎಸ್.ಪಿ. ನಾಗರತ್ನ: "ನಾನು ಕಂಡಂತೆ ನನ್ನ ತಂದೆ", ಪರಮೇಶ್ವರ ಪ್ರಶಸ್ತಿ, ಪು.243
5. ಅ.ರಾ. ಮಿತ್ರ: "ಎಸ್.ವಿ.ಪಿ. – ನಮ್ಮ ಗುರುಗಳು" ಪರಮೇಶ್ವರ ಪ್ರಶಸ್ತಿ, ಪು.213
6. ಎಚ್.ವಿ. ಶ್ರೀನಿವಾಸಶರ್ಮ: "ಕಾರ್ಮೋಡದಲ್ಲಿ ನಗೆಮಿಂಚು", ಪರಮೇಶ್ವರ ಪ್ರಶಸ್ತಿ, ಪು.197
7. ಚಂದ್ರಕಲಾ ನಂದಾವರ: 'ಸೌಜನ್ಯ, ವಿನಯ, ಪ್ರೀತಿಗಳ ಸಾಕಾರಮೂರ್ತಿ', ಪರಮೇಶ್ವರ ಪ್ರಶಸ್ತಿ, ಪು.161
8. ಅ.ರಾ. ಮಿತ್ರ: "ಎಸ್.ವಿ.ಪಿ. – ನಮ್ಮ ಗುರುಗಳು" ಪರಮೇಶ್ವರ ಪ್ರಶಸ್ತಿ, ಪು.209
8ಎ. ಅ.ರಾ. ಮಿತ್ರ: "ಎಸ್.ವಿ.ಪಿ. – ನಮ್ಮ ಗುರುಗಳು" ಪರಮೇಶ್ವರ ಪ್ರಶಸ್ತಿ, ಪು.209
9. ಎಚ್.ಜೆ. ಲಕ್ಕಪ್ಪಗೌಡ: 'ನೋವುಂಡು ನಗೆಚೆಲ್ಲುವ ಅಜಾತ ಶತ್ರು', ಪೂರ್ಣಕುಂಭ, ಪು.21
10. ಜಿ.ಎಸ್. ಸಿದ್ಧಲಿಂಗಯ್ಯ: 'ಗುರುವಂದನೆ' ಪರಮೇಶ್ವರ ಪ್ರಶಸ್ತಿ, ಪು.226
11. ಎಚ್. ಶಾಂತಾರಾಮ್, 'ಕರುಣಾಳು ರಾಘವನಲ್ಲಿ ತಪ್ಪಿಲ್ಲ', ಪರಮೇಶ್ವರ ಪ್ರಶಸ್ತಿ, ಪು.183
12. ಆರ್. ಲಕ್ಷ್ಮೀನಾರಾಯಣ: 'ಸರಸ ಸಜ್ಜನಿಕೆಗಳ ಧೀಮಂತ' ಪರಮೇಶ್ವರ ಪ್ರಶಸ್ತಿ, ಪು.177–179
13. ಜೆ.ಕೆ. ರಮೇಶ್: 'ಎಸ್.ವಿ.ಪರಮೇಶ್ವರಭಟ್ಟರ ಕಾವ್ಯ ಸಂಗ್ರಹ', ಪ್ರಸ್ತಾವನೆ, ಪು.VIII
14. ಎಚ್.ಜೆ. ಲಕ್ಕಪ್ಪಗೌಡ: 'ಶ್ರೀ ಪರಮೇಶ್ವರಭಟ್ಟರು ಮತ್ತು ಅವರ ಕೃತಿಗಳು', ಬಹುಮುಖ ಚಿಂತನೆ, ಪು. 418
14ಎ. ಎಚ್.ಜೆ. ಲಕ್ಕಪ್ಪಗೌಡ: 'ಶ್ರೀ ಪರಮೇಶ್ವರಭಟ್ಟರು ಮತ್ತು ಅವರ ಕೃತಿಗಳು', ಬಹುಮುಖ ಚಿಂತನೆ, ಪು.

15. ಜೆ.ಕೆ. ರಮೇಶ್: 'ಎಸ್.ವಿ.ಪರಮೇಶ್ವರಭಟ್ಟರ ಕಾವ್ಯ ಸಂಗ್ರಹ', ಪ್ರಸ್ತಾವನೆ, ಪು.X
16. ಜೆ.ಕೆ. ರಮೇಶ್: 'ಎಸ್.ವಿ.ಪರಮೇಶ್ವರಭಟ್ಟರ ಕಾವ್ಯ ಸಂಗ್ರಹ', ಪ್ರಸ್ತಾವನೆ, ಪು.XII
17. ಎಂ.ಪಿ ಮಂಜಪ್ಪಶೆಟ್ಟಿ: 'ಕನ್ನಡದಲ್ಲಿ ಮುಕ್ತಕ ಸಾಹಿತ್ಯ', ಪು.
18. ಕೆ.ಎಸ್. ಕೆದ್ಲಾಯ ಮತ್ತು ಹರಿನಾರಾಯಣಭಟ್ಟ ಮಾಡಾವು: 'ಪ್ರೊ. ಭಟ್ಟರ ಅಂತರಂಗ ದರ್ಶನ' ಪೂರ್ಣಕುಂಭ, ಪು.30
19. ಎಚ್.ಜೆ. ಲಕ್ಕಪ್ಪಗೌಡ: 'ಶ್ರೀ ಪರಮೇಶ್ವರಭಟ್ಟರು ಮತ್ತು ಅವರ ಕೃತಿಗಳು', ಬಹುಮುಖ ಚಿಂತನೆ, ಪು.422

19ಎ. ಸ.ಸ. ಮಾಳವಾಡ – ಭಟ್ಟರಿಗೆ ಬರೆದ ಪತ್ರದಿಂದ.

20. ಎಚ್.ಜೆ. ಲಕ್ಕಪ್ಪಗೌಡ: 'ಶ್ರೀ ಪರಮೇಶ್ವರಭಟ್ಟರು ಮತ್ತು ಅವರ ಕೃತಿಗಳು', ಬಹುಮುಖ ಚಿಂತನೆ, ಪು.422
21. ಎಸ್.ವಿ. ಪರಮೇಶ್ವರಭಟ್ಟ: 'ಚಂದ್ರವೀಧಿಯ ಮುನ್ನುಡಿ',
22. ಎಸ್.ವಿ. ಪರಮೇಶ್ವರಭಟ್ಟ: 'ಚಂದ್ರವೀಧಿಯ ಮುನ್ನುಡಿ',
23. ಜೆ.ಕೆ. ರಮೇಶ್: 'ಎಸ್.ವಿ.ಪರಮೇಶ್ವರಭಟ್ಟರ ಕಾವ್ಯ ಸಂಗ್ರಹ', ಪ್ರಸ್ತಾವನೆ, ಪು.XVI
24. ಜೆ.ಕೆ. ರಮೇಶ್: 'ಎಸ್.ವಿ.ಪರಮೇಶ್ವರಭಟ್ಟರ ಕಾವ್ಯ ಸಂಗ್ರಹ', ಪ್ರಸ್ತಾವನೆ, ಪು.IX
25. ಎಚ್.ಜೆ. ಲಕ್ಕಪ್ಪಗೌಡ: 'ಶ್ರೀ ಪರಮೇಶ್ವರಭಟ್ಟರು ಮತ್ತು ಅವರ ಕೃತಿಗಳು', ಬಹುಮುಖ ಚಿಂತನೆ, ಪು.428
26. ಜೆ.ಕೆ. ರಮೇಶ್: 'ಎಸ್.ವಿ.ಪರಮೇಶ್ವರಭಟ್ಟರ ಕಾವ್ಯ ಸಂಗ್ರಹ', ಪ್ರಸ್ತಾವನೆ, ಪು.IX
27. ಎಚ್.ಜೆ. ಲಕ್ಕಪ್ಪಗೌಡ: 'ಶ್ರೀ ಪರಮೇಶ್ವರಭಟ್ಟರು ಮತ್ತು ಅವರ ಕೃತಿಗಳು', ಬಹುಮುಖ ಚಿಂತನೆ, ಪು.429
28. ಹಾ.ಮಾ. ನಾಯಕ: 'ಉಪ್ಪು ಕಡಲು ಮುನ್ನುಡಿ', ಪು.XIX

28ಎ. ಹಾ.ಮಾ. ನಾಯಕ: 'ಉಪ್ಪು ಕಡಲು ಮುನ್ನುಡಿ', ಪು.

29. ಜೆ.ಕೆ. ರಮೇಶ್: 'ಎಸ್.ವಿ.ಪರಮೇಶ್ವರಭಟ್ಟರ ಕಾವ್ಯ ಸಂಗ್ರಹ', ಪ್ರಸ್ತಾವನೆ, ಪು.XX

29ಎ. ಎಚ್.ಜೆ. ಲಕ್ಕಪ್ಪಗೌಡ; ಶ್ರೀ ಪರಮೇಶ್ವರ ಭಟ್ಟರು ಮತ್ತು ಅವರ ಕೃತಿಗಳು; ಬಹುಮುಖ ಚಿಂತನೆ, ಪು.43.

29ಬಿ. ಎಸ್.ವಿ. ಪರಮೇಶ್ವರಭಟ್ಟ: 'ಮಂಥಾನದ ಮುನ್ನುಡಿ', ಪು. 208

30. ಕೆ. ಕೃಷ್ಣಮೂರ್ತಿ: 'ಸಂಸ್ಕೃತ ಕಾವ್ಯ', ಪು.

30ಎ. ಶ್ರೀನಿವಾಸ ಅಯ್ಯಂಗಾರ್: 'ಸಂಸ್ಕೃತ ಸಾಹಿತ್ಯ ಇತಿಹಾಸ', ಪು. 50

31. ಎಸ್.ವಿ. ಪರಮೇಶ್ವರಭಟ್ಟ: 'ಗಾಥಾ ಸಪ್ತಶತಿಯ ಕೃತಜ್ಞತೆ', ಪು.III
32. ಎಸ್.ವಿ. ಪರಮೇಶ್ವರಭಟ್ಟ: 'ಗಾಥಾ ಸಪ್ತಶತಿಯ ಕೃತಜ್ಞತೆ', ಪು.III
33. ಎಸ್.ವಿ. ಪರಮೇಶ್ವರಭಟ್ಟ: 'ಪ್ರೇಮಾರಾಧನ'ದ ಪ್ರಸ್ತಾವನೆ, ಪು.III
34. ಕೆ. ಕೃಷ್ಣಮೂರ್ತಿ: 'ಸಂಸ್ಕೃತ ಕಾವ್ಯ', ಪು.336
35. ಕೆ. ಕೃಷ್ಣಮೂರ್ತಿ: 'ಸಂಸ್ಕೃತ ಕಾವ್ಯ', ಪು.339
36. ಬಿ.ಎಸ್. ರಾಮಪ್ರಸಾದ್: 'ಎ.ಕೆ. ಪುಟ್ಟರಾಮು ಅವರ ಭರ್ತೃಹರಿಯ ವೈರಾಗ್ಯ ಶತಕದ ಮುನ್ನುಡಿ, ಪು.17

37. ಶ್ರೀನಿವಾಸ ಅಯ್ಯಂಗಾರ್: 'ಸಂಸ್ಕೃತ ಸಾಹಿತ್ಯ ಇತಿಹಾಸ', ಪು.497
38. ಕೆ. ಕೃಷ್ಣಮೂರ್ತಿ: 'ಸಂಸ್ಕೃತ ಕಾವ್ಯ', ಪು.362
39. ಬಿ.ಎಸ್. ರಾಮಪ್ರಸಾದ್: 'ಪೂರ್ವೋಕ್ತ ಪುಸ್ತಕ', ಪು.
39ಎ. ಎಂ. ಮಂಜುನಾಥಭಟ್ಟ: 'ಭರ್ತೃಹರಿಯ ಶತಕತ್ರಯ–ಕನ್ನಡ ಪದ್ಯಾನುವಾದ, ಪೂರ್ಣಕುಂಭ, ಪು.184
40. ಶಾಮರಾವ್ ಬಿ.ಎನ್.: 'ಕೆಲವು ಇಂಗ್ಲಿಷ್ ಪ್ರಬಂಧಗಳು' ಗ್ರಂಥದ ಮುನ್ನುಡಿ, ಪು.XXIV
41. ದೇಜಗೌ : 'ಪೂರ್ಣಕುಂಭ'ದ ಬಿ.ಎಂ. ಶ್ರೀನಿವಾಸ್ ಅವರ ಲೇಖನದಿಂದ ಉದ್ಧೃತ, ಪು.241

ಗ್ರಂಥಋಣ

1. ಪೂರ್ಣಕುಂಭ
2. ಪರಮೇಶ್ವರ ಪ್ರಶಸ್ತಿ
3. ಎಸ್.ವಿ.ಪರಮೇಶ್ವರ ಭಟ್ಟರ ಕಾವ್ಯ ಸಂಗ್ರಹ. ಸಂ: ಡಾ.ಜೆ.ಕೆ. ರಮೇಶ್
4. ಕನ್ನಡದಲ್ಲಿ ಮುಕ್ತಕ ಸಾಹಿತ್ಯ" ಡಾ.ಎಂ.ಪಿ. ಮಂಜಪ್ಪಶೆಟ್ಟಿ
5. ಬಹುಮುಖ ಚಿಂತನೆ: ಡಾ.ಎಚ್.ಜೆ. ಲಕ್ಕಪ್ಪಗೌಡ
6. ಸಂಸ್ಕೃತ ಸಾಹಿತ್ಯದ ಇತಿಹಾಸ: ಶ್ರೀನಿವಾಸ ಅಯ್ಯಂಗಾರ್
7. ಸಂಸ್ಕೃತ ಕಾವ್ಯ: ಡಾ.ಕೆ. ಕೃಷ್ಣಮೂರ್ತಿ
8. ಎ.ಕೆ. ಪುಟ್ಟರಾಮು ಅವರ ಭರ್ತೃಹರಿಯ ವೈರಾಗ್ಯ ಶತಕ: (ಸಂ.) ಬಿ.ಎಸ್. ರಾಮಪ್ರಸಾದ್
9. ಸಂಸ್ಕೃತ ನಾಟಕ: ಎ.ಆರ್.ಕೃಷ್ಣಶಾಸ್ತ್ರಿ
10. ಕಾಳಿದಾಸ: ಲಕ್ಷ್ಮೀನರಸಿಂಹಯ್ಯ, ಮೈಸೂರು ವಿಶ್ವವಿದ್ಯಾನಿಲಯ
11. ಕಾಳಿದಾಸ: ಶ್ರೀರಂಗ
12. ಕನ್ನಡ ಉತ್ತರರಾಮಚರಿತೆ: ಡಾ.ಕೆ. ಕೃಷ್ಣಮೂರ್ತಿ
13. ಕನ್ನಡ ಪಂಚರಾತ್ರ: ಡಾ.ಕೆ. ಕೃಷ್ಣಮೂರ್ತಿ
14. ಕನ್ನಡ ಉತ್ತರರಾಮಚರಿತೆ: ಡಾ.ಸಿ.ಪಿ.ಕೆ.
15. ಕನ್ನಡ ನಾಗಾನಂದ: ಡಾ.ಸಿ.ಪಿ.ಕೆ.
16. ಕನ್ನಡ ಪ್ರಿಯದರ್ಶಿಕೆ: ಡಾ.ಸಿ.ಪಿ.ಕೆ.
17. ಕರ್ನಾಟಕ ಶಾಕುಂತಲ ನಾಟಕಂ: ಬಸವಪ್ಪಶಾಸ್ತ್ರೀ

ಮತ್ತು ಅನುಬಂಧ (1)ರಲ್ಲಿ ಹೆಸರಿಸಿರುವ ಎಸ್.ವಿ.ಪಿ. ಅವರ ಕೃತಿಗಳು.

ಅನುಬಂಧ – 1

ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ ಕೃತಿಗಳು

ಕಾವ್ಯ : ಭಾವಗೀತೆ

1. ರಾಗಿಣಿ (1940)
2. ಗಗನಚುಕ್ಕಿ (1946)
3. ಅಂಚೆಯ ಪೆಟ್ಟಿಗೆ (1965)
4. ಇದ್ರಗೋಪ (1970)
5. ಕೃಷ್ಣಮೇಘ (1970)
6. ಸಂಜೆಮಲ್ಲಿಗೆ (1990)

ಕಥನ ಕವನಗಳು

7. ಜಹನಾರಾ (1943)
8. ಮಾಚಯ್ಯ (1938 : ರಚನೆ : 1937)

ಮುಕ್ತಕಗಳು

9. ಇಂದ್ರಚಾಪ (1965)
10. ಚಂದ್ರವೀಧಿ (1966)
11. ಚಿತ್ರಪಥೆ (1972)
12. ಸುರಗಿ – ಸುರಹೊನ್ನೆ (1967)
13. ತುಂಬೆಹೂವು (1968)
14. ಮಳೆಬಿಲ್ಲು (1995)
15. ಕೇದಗೆ (1990)

ವಚನಗಳು

16. ಉಪ್ಪು ಕಡಲು (1970)
17. ಪಾಮರ (1974)

18. ಉಂಬರ (1980)
19. ಮಂಥಾನ (ಸ್ವತಂತ್ರ ಗಾದೆಗಳು) (1970)
20. ನೆನಪಿಗೆ ಬಂದ ಗಾದೆಗಳು (ಸಂಕಲನ) (1970)
21. ಕಣ್ಣು ಮುಚ್ಚಾಲೆ (ಸ್ವತಂತ್ರ ಒಗಟುಗಳು) (1970)

ವಿಮರ್ಶೆ

22. ಅಕ್ಕಮಹಾದೇವಿ (1938)
23. ಭಾವಗೀತೆ (1956)
24. ಸೀಳುನೋಟ (1963)
25. ಲೇಖನಗಳು (1971)
26. ಪ್ರಬಂಧಗಳು (1970)
27. ಭಾಷಣಗಳು (1970)
28. ರಸಋಷಿ (ಭಾಗಗಳು 1–5)
29. ಮುನ್ನುಡಿಗಳು

ಸಂಸ್ಕೃತದಿಂದ ಅನುವಾದ

30. ಗಾಥಾಸಪ್ತಶತಿ (1966)
31. ಅಮರುಶತಕ (1953)
32. ಕವಿಕೌಮುದಿ
33. ಭರ್ತೃಹರಿಯ ಶತಕತ್ರಯ (1961)
34. ಗೀತಗೋವಿಂದ (1961)
35. ಋತುಸಂಹಾರ
36. ಮೇಘದೂತ
37. ರಘುವಂಶ
38. ಕುಮಾರಸಂಭವ
39. ಮಾಳವಿಕಾಗ್ನಿಮಿತ್ರ
40. ವಿಕ್ರಮೋರ್ವಶೀಯ
41. ಅಭಿಜ್ಞಾನ ಶಾಕುಂತಲ
42. ಕನ್ನಡ ಕಾಳಿದಾಸ ಮಹಾಸಂಪುಟ (1963)
43. **ಕನ್ನಡ ಕಾಳಿದಾಸ ಮಹಾಸಂಪುಟ** (ಕಾಳಿದಾಸನ 4 ಕಾವ್ಯಗಳು ಮತ್ತು ಮೂರು ನಾಟಕಗಳ ಅನುವಾದ ಮತ್ತು ಕನ್ನಡ ಲಿಪಿಯಲ್ಲಿ ಸಂಸ್ಕೃತ ಮೂಲ ಸಹಿತ) (1972)
44. ಪ್ರತಿಮಾ ನಾಟಕ
45. ಅಭಿಷೇಕ ನಾಟಕ
46. ಪ್ರತಿಜ್ಞಾಯೌಗಂಧರಾಯಣ

47. ಸ್ವಪ್ನವಾಸವದತ್ತ
48. ಮಧ್ಯಮವ್ಯಾಯೋಗ
49. ಪಂಚರಾತ್ರ
50. ದೂತವಾಕ್ಯ
51. ದೂತಘಟೋತ್ಕಚ
52. ಕರ್ಣಭಾರ
53. ಊರುಭಂಗ
54. ಅವಿಮಾರಕ
55. ಚಾರುದತ್ತ
56. ಯಜ್ಞಫಲ
57. **ಕನ್ನಡ ಭಾಸ ಮಹಾಸಂಪುಟ** (ಭಾಸನ 14 ನಾಟಕಗಳ ಅನುವಾದ ಮತ್ತು ಕನ್ನಡ ಲಿಪಿಯಲ್ಲಿ ಸಂಸ್ಕೃತ ಮೂಲ ಸಹಿತ) (1975)
58. ಕನ್ನಡ ಬುದ್ಧಚರಿತೆ (1975)
59. ಕನ್ನಡ ರತ್ನಾವಳಿ
60. ಕನ್ನಡ ಪ್ರಿಯದರ್ಶಿಕಾ
61. ಕನ್ನಡ ನಾಗಾನಂದ
62. **ಕನ್ನಡ ಹರ್ಷ ಮಹಾಸಂಪುಟ** (ಹರ್ಷನ 3 ನಾಟಕಗಳ ಅನುವಾದ ಮತ್ತು ಕನ್ನಡ ಲಿಪಿಯಲ್ಲಿ ಸಂಸ್ಕೃತ ಮೂಲ ಸಹಿತ) (1987)
63. ಕನ್ನಡ ಮಹಾವೀರಚರಿತ
64. ಕನ್ನಡ ಉತ್ತರರಾಮಚರಿತೆ
65. ಕನ್ನಡ ಮಾಲತೀಮಾಧವ
66. **ಕನ್ನಡ ಭವಭೂತಿಮಹಾಸಂಪುಟ** (ಭವಭೂತಿಯ 3 ನಾಟಕಗಳ ಅನುವಾದ ಮತ್ತು ಕನ್ನಡ ಲಿಪಿಯಲ್ಲಿ ಸಂಸ್ಕೃತ ಮೂಲ ಸಹಿತ) (1992)

ಇಂಗ್ಲಿಷ್‌ನಿಂದ ಅನುವಾದ

67. ಕೆಲವು ಇಂಗ್ಲಿಷ್ ಪ್ರಬಂಧಗಳು (1947)
68. ಸ್ವರಾಜ್ಯದೆಡೆಗೆ
69. ಭೂಮಿ ಮತ್ತು ಧೂಮಕೇತು

ಇತರೆ

70. ಕನ್ನಡ ಮತ್ತು ನಾನು
71 ಮಂಗಳಗಂಗೋತ್ರಿ

ಸಂಪಾದಿತ

72 ಮುದ್ದಣಕವಿಯ ಶ್ರೀರಾಮ ಪಟ್ಟಾಭಿಷೇಕಂ
73. ಮುದ್ದಣಕವಿಯ ಅದ್ಭುತ ರಾಮಾಯಣ (1960)

ಅನುಬಂಧ – 2

ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ ಜೀವನದ ಕೆಲವು ಮುಖ್ಯ ವರ್ಷಗಳು

–	ಜನನ	8ನೆಯ ಫೆಬ್ರವರಿ 1914
–	ಬಿ.ಎ., (ಆನರ್ಸ್) ಪದವಿ	1937
–	ಶ್ರೀ ಬಿ.ಎಂ.ಶ್ರೀ. ಯವರ ಬಂಗಾರದ ಪದಕ ಪಡೆದದ್ದು	1937
–	ಎಂ.ಎ., ಪದವಿ	1938
–	ಶ್ರೀ ಕೇಣಿ ಸಿದ್ದಪ್ಪನವರ ಬಂಗಾರದ ಪದಕ ಪಡೆದದ್ದು	1938
–	ಮೈಸೂರು ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕ	1939
–	ಮದುವೆ	1940
–	ತುಮಕೂರು ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರು	1940
–	ಮೊತ್ತಮೊದಲ ಕೃತಿ 'ರಾಗಿಣಿ'ಯ ಪ್ರಕಟಣೆ	1940
–	ಶಿವಮೊಗ್ಗ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರು	1943
–	ಮೊದಲ ಮಗಳ ಜನನ	1946
–	ಮೊದಲ ಮಗನ ಜನನ	1949
–	ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು	1950
–	ಎರಡನೇ ಮಗಳ ಜನನ	1951
–	ಎರಡನೇ ಮಗನ ಜನನ	1956
–	ಮಾನಸ ಗಂಗೋತ್ರಿಯಲ್ಲಿ ಕನ್ನಡ ಅಧ್ಯಾಪಕರು	1960
–	ಸರಸ ಸಾಹಿತ್ಯ ಪ್ರಕಾಶನದ ಸ್ಥಾಪನೆ	1961
–	ಕನ್ನಡ ಕಾಳಿದಾಸ ಮಹಾಸಂಪುಟದ ಪ್ರಕಟಣೆ	1963
–	ಮಾನಸ ಗಂಗೋತ್ರಿಯಲ್ಲಿ ಕನ್ನಡ ರೀಡರ್	1964
–	ಹಾಸನದ ಮಿತ್ರವೃಂದದವರು ಸಲ್ಲಿಸಿದ ಸನ್ಮಾನ	1967

- ಶ್ರವಣಬೆಳುಗೊಳದಲ್ಲಿ ನಡೆದ 46ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ 1967
- ಮಂಗಳಗಂಗೋತ್ರಿಯ ಕನ್ನಡ ಪ್ರಾಧ್ಯಾಪಕರು ಹಾಗೂ ಅದರ ನಿರ್ದೇಶಕರು 1968
- ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಹಬ್ಬದ ಅಂಗವಾಗಿ ನಡೆದ ಕವಿಗೋಷ್ಠಿಯ ಅಧ್ಯಕ್ಷತೆ 1968
- ಕೋಟೆಕಾರು ಸಾಹಿತ್ಯ ಸಂಘದವರು ಸಲ್ಲಿಸಿದ ಸನ್ಮಾನ 1968
- ರಾಜ್ಯ ಸಾಹಿತ್ಯ ಅಕಾಡೆಮಿಯಿಂದ 'ಚಂದ್ರವೀಧಿ' ಕೃತಿಗೆ ಪ್ರಥಮ ಬಹುಮಾನ 1969
- ಕನ್ನಡ ಸಾಹಿತ್ಯ ಪರಿಷತ್ತಿನ ಚಿನ್ನದ ಹಬ್ಬದ ಅಂಗವಾಗಿ ನಡೆದ ಸಾಹಿತ್ಯ ಸನ್ಮಾನ 1970
- ಮೈಸೂರಿನ ಎಲ್ಲ ಕನ್ನಡ ಸಂಘಗಳ ಕನ್ನಡ ರಾಜ್ಯೋತ್ಸವ ಸನ್ಮಾನ 1970
- ಹೊಸನಗರ ತಾಲ್ಲೂಕಿನ 'ಕನ್ನಡ ಸಂಘದ ಸದಸ್ಯರು ಸಲ್ಲಿಸಿದ ಸನ್ಮಾನ 1970
- 'ಮಂಗಳ ಗಂಗೆ'ಯ ಅರ್ಪಣೆ 1970
- ಪಲಚಂವಿ ಪ್ರಕಾಶನದ ಸ್ಥಾಪನೆ 1970
- ಮಂಗಳಗಂಗೋತ್ರಿಯ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಲ್ಲಿಸಿದ ಸನ್ಮಾನ 1971
- ದಕ್ಷಿಣ ಕನ್ನಡ ಜಿಲ್ಲೆಯ ಮಹಾಜನರಿಂದ ಮಂಗಳೂರಿನಲ್ಲಿ ನಡದ ಸನ್ಮಾನ 1971
- ಮೂಡಬಿದಿರೆಯ 'ಸಮಾಜಮಂದಿರ ಸಭಾ' ಇವರು ಸಲ್ಲಿಸಿದ ಸನ್ಮಾನ 1971
- Academy of General Education, Manipal ಅವರು ಸಲ್ಲಿಸಿದ "Honorary Fellowship" 1971
- ಕಾಸರಗೋಡಿನ ಎಣ್ಮಕಜೆ ಪಂಚಾಯತಿನ ಸಹೃದಯ ಸಾರ್ವಜನಿಕರು ಸಲ್ಲಿಸಿದ ಸನ್ಮಾನ 1971
- ಶಿವಮೊಗ್ಗಾ ಜಿಲ್ಲಾ ಸಾಹಿತ್ಯ ಪರಿಷತ್ತಿನಲ್ಲಿ ಸಲ್ಲಿಸಿದ ಸನ್ಮಾನ 1971
- ಮುಂಡಾಜೆಯ ಶತಾಬ್ದಿ ವಿದ್ಯಾಲಯ ಸಮಿತಿಯವರು ಸಲ್ಲಿಸಿದ ಸನ್ಮಾನ 1971
- ಭಾರತೀಯ ವಿದ್ಯಾಭವನ, ಮಂಗಳೂರು ಶಾಖೆ ಸಲ್ಲಿಸಿದ ಸನ್ಮಾನ 1971
- ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಸನ್ಮಾನಿತರಾದುದು 1971
- 'ಪೂರ್ಣಕುಂಭ' ಸಂಭಾವನಾ ಗ್ರಂಥದ ಸಮರ್ಪಣೆ 1972
- ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ 1974
- ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ 1990
- ಪರಮೇಶ್ವರ ಪ್ರಶಸ್ತಿ ಅಭಿನಂದನ ಗ್ರಂಥ ಸಮರ್ಪಣೆ 1992
- ಗೌರವ ಡಿ.ಲಿಟ್. ಮೈಸೂರು ವಿಶ್ವವಿದ್ಯಾನಿಲಯದಿಂದ 1995
- ಗೌರವ ಡಿ.ಲಿಟ್. ಕುವೆಂಪು ವಿಶ್ವವಿದ್ಯಾನಿಲಯದಿಂದ 1995
- ಕನ್ನಡ ಸಾಹಿತ್ಯ ಪರಿಷತ್ತಿನ ಚಾವುಂಡರಾಯ ಪ್ರಶಸ್ತಿ 1997
- ನಿಧನರಾದುದು 2000

27ನೇ ಅಕ್ಟೋಬರ್ 2000

ಆಧುನಿಕ ಕನ್ನಡದ ದೀಪ ಹೊತ್ತಿಸಿದ ಹಿರಿಯರಲ್ಲಿ ಒಬ್ಬರಾದ ಡಾ. ಎಸ್.ವಿ. ಪರಮೇಶ್ವರ ಭಟ್ಟರು ಹುಟ್ಟಿ ಒಂದು ನೂರು ವರ್ಷಗಳು ತುಂಬಿವೆ. (ಜನನ:8–2–1914). ಕವಿ, ವಿದ್ವಾಂಸ, ವಾಗ್ಮಿ ಪ್ರಾಧ್ಯಾಪಕ, ಅನುವಾದಕ ಎಂದೆಲ್ಲ ಖ್ಯಾತರಾದ ಅವರು ಎಲ್ಲಕ್ಕಿಂತ ಹೆಚ್ಚಾಗಿ ಸರಸ ಸಜ್ಜನಿಕೆ ವಿನಯಗಳ ಗಣಿಯಾಗಿ ತಮ್ಮ ಸಹಜಸ್ಫೂರ್ತವಾದ ಹಾಸ್ಯ ಮತ್ತು ವಾಕ್‌ಚಾತುರ್ಯದಿಂದ ಅಪಾರವಾದ ಜನಪ್ರಿಯತೆಯನ್ನು ಗಳಿಸಿದ ವ್ಯಕ್ತಿಯಾಗಿದ್ದವರು. ಸ್ವತಂತ್ರ ಕೃತಿಗಳು ಮತ್ತು ಅನುವಾದ ಕೃತಿಗಳು ಎಲ್ಲ ಸೇರಿ ಹತ್ತಿರ ಹತ್ತಿರ 70 ಕೃತಿಗಳನ್ನು ನೀಡಿದ ಭಟ್ಟರು ಕಾಳಿದಾಸನ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ತರುವ ಮೂಲಕ "ಕನ್ನಡದ ಕಾಳಿದಾಸ" ಎಂದೇ ಖ್ಯಾತರಾದರು. ಇದಲ್ಲದೆ ಭಾಸ, ಭವಭೂತಿ, ಹರ್ಷ ಮೊದಲಾದವರ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ತಂದಿರುವುದು ಅವರ ಹೆಚ್ಚುಗಾರಿಕೆ. ಇದಿಷ್ಟೇ ಸಾಲದೆಂಬಂತೆ ಹಾಲ, ಅಮರುಕ ಭರ್ತೃಹರಿ, ಜಯದೇವ ಮತ್ತು ಅಶ್ವಘೋಷನೇ ಮೊದಲಾದವರ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಅನುವಾದದಲ್ಲಿ ಒಂದು ಜಲಚಿಹ್ನೆಯನ್ನೇ ಸ್ಥಾಪಿಸಿದವರು. ಇಂಥ ಹಿರಿಯ ಸಾಹಿತಿಯ ಬದುಕು ಮತ್ತು ಬರಹವನ್ನು ಪ್ರೊ. ಆರ್. ಲಕ್ಷ್ಮೀನಾರಾಯಣ ಅವರು ಇಲ್ಲಿ ಸಮಗ್ರವಾಗಿ ವಿಶ್ಲೇಶಿಸಿ ದಾಖಲಿಸಿದ್ದಾರೆ.

ಮೂಲತಃ ತುಮಕೂರಿನವರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು(1949) ಕಾಲೇಜು ಶಿಕಣ ಇಲಾಖೆಯ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕ, ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲ್ ಆಗಿ ಕೊನೆಯಲ್ಲಿ ಜಂಟಿ ನಿರ್ದೇಶಕರಾಗಿ 37 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಮಾಸ್ತಿ, ಆಹ್ಲಾದ, ಇವರ ವಿಮರ್ಶೆಯ ಕೃತಿಗಳು. ಮೂರು ದಶಕಗಳಿಂದಲೂ ಅನುವಾದ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಇಂಗ್ಲಿಷ್ ಮತ್ತು ಹಿಂದಿಯಿಂದ ಅನೇಕ ಕೃತಿಗಳನ್ನು ಅನುವಾದಿಸಿದ್ದಾರೆ. ಇವರು ಸಂಸ್ಕೃತದಿಂದ ಅನುವಾದಿಸಿದ 'ಕನ್ನಡ ವಕ್ರೋಕ್ತಿ ಜೀವಿತ' ಕೃತಿಗೆ ಕೇಂದ್ರ ಸಾಹಿತ್ಯ ಅಕಾದೆಮಿಯ ಅನುವಾದ ಪುರಸ್ಕಾರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನಗಳು ದೊರೆತಿವೆ. 'ಅಮೃತಾಪ್ರೀತಂ ಅವರ ಆಯ್ದ ಕಥೆಗಳು' ಮತ್ತು ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಕಟಿಸಿರುವ ಕಿರಣ್ ನಗರ್‌ಕರ್ ಅವರ ಪ್ರಶಸ್ತಿ ಪುರಸ್ಕೃತ ಇಂಗ್ಲಿಷ್ ಕಾದಂಬರಿ 'ಕಕೋಲ್ಡ್' ನ ಕನ್ನಡ ರೂಪ 'ಬೇಗುದಿ' ಇವರ ಇತ್ತೀಚಿನ ಕೃತಿಗಳು.

ISBN 81-260-4665-1

9788126046652

S.V. Parameshwara Bhatta (Kannada) ₹50